ಶಿವಾನುಭವ ಗ್ರಂಥಮಾಲಾ ನಂ ೧

BL|461

ಬಸವೇಶ್ವರನ

ವಚನಗಳು.

ಒಕ್ಕುಂದದ ಪ್ರಿಂಟಿಂಗ ಪ್ರೆಸ್,
ವಿಜಾಪುರ

೧೯೩೪

931
5123

ಬೆಲೆ ೧೩ ಆಣೆ



ಬಾಗೇನಾಡಿಯ
ಶ್ರೀ ಬಸವೇಶ್ವರ ದೇವಾಲಯದ ದಕ್ಷಿಣ ಭಾಗ.

ಆನಂದಕಂದ-

ಶಿವಾನುಭವ ಗ್ರಂಥಮಾಲಾ ನಂ॥ ೧

ಬಸವೇಶ್ವರನ ವಚನಗಳು.

ಸಂಪಾದಕರು.

ರಾ॥ ಸಾ॥ ಫ. ಗು. ಹಳಕಟ್ಟಿ.

ಬಿ. ಎ. ಎಲ್. ಎಲ್. ಬಿ.

ವಿಜಾಪುರ.

೧೯೩೪

ಬೆಲೆ ೧। ರೂಪಾಯಿ.

೩ ನೇ ಆವೃತ್ತಿ.

ಇದನ್ನು ವಿಜಾಪುರದಲ್ಲಿ
ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ತಮ್ಮ ೧೬೨೦ (ಜ) ನೇ
ಮನೆಯಲ್ಲಿ ಪ್ರಸಿದ್ಧಿಸಿದರು.

933
5123

ಪ್ರಸ್ತಾವನೆ.

(೧ನೇ ಆವೃತ್ತಿ.)

ಶ್ರೀ ಬಸವೇಶ್ವರನ ವಚನಗಳು ಅಚ್ಚುಕಟ್ಟಾಗಿ ಎಲ್ಲಿಯೂ ಮುದ್ರಣಗೊಳಿಸಲ್ಪಟ್ಟಿರುವದಿಲ್ಲ. ಈಗ ಕೆಲವು ಪ್ರಸಿದ್ಧವಾಗಿದ್ದರೂ, ಅವುಗಳಲ್ಲಿ ಅಸಂಖ್ಯ ತಪ್ಪುಗಳು ಇದ್ದದರಿಂದ, ಅವು ದುರ್ಬೋಧವಾಗಿರುತ್ತವೆ. ಇದಲ್ಲದೆ ಇತ್ತಿತ್ತ ಶ್ರೀ ಬಸವೇಶ್ವರನ ವಿಚಾರಗಳನ್ನು ಅರಿಯಬೇಕೆಂಬ ಅಭಿಲಾಷೆಯುಳ್ಳ ಜನರ ಸಂಖ್ಯೆಯೂ ಹೆಚ್ಚುತ್ತಲಿದೆ. ಆದ್ದರಿಂದ ನಾವು ಈಗ ಶ್ರೀ ಬಸವೇಶ್ವರನ ವಚನಗಳನ್ನು ಅದಷ್ಟವಟ್ಟಿಗೆ ತಿದ್ದಿ ಅಂದವಾದ ರೀತಿಯಿಂದ ಅಚ್ಚುಗೊಳಿಸಿದ್ದೇವೆ. ಈ ಪ್ರತಿಯು ಜನರಲ್ಲಿರುವ ಓದುವ ಕುತೂಹಲವನ್ನು ಕೆಲಮಟ್ಟಿಗಾದರೂ ಪೂರೈಸುವದೆಂದು ಕೋರಿದ್ದೇವೆ.

ವಿಜಾಪುರ.
ತಾ॥ ೧-೪-೨೬

ಪ್ರಕಾಶಕ
ಶಿವಾನುಭವ ಗ್ರಂಥಮಾಲಾ.

ಪ್ರಸ್ತಾವನೆ.

(೨ನೇ ಆವೃತ್ತಿ.)

ಬಸವೇಶ್ವರನ ವಚನಗಳ ಎರಡನೇ ಆವೃತ್ತಿಯನ್ನು ನಾವು ಈಗ ವಾಚಕರೆದುರಿಗೆ ಇಡುವ ಪ್ರಸಂಗವು ಬಂದದ್ದಕ್ಕೆ ನಾವು ದಯಾನ್ವಿತನಾದ ಪರಮಾತ್ಮನನ್ನು ಸಹೃದಯತೆಯಿಂದ ಸ್ಮರಿಸುತ್ತೇವೆ. ನಾವು ಆರಂಭಿಸಿದ ಶಿವಾನುಭವ ಗ್ರಂಥಮಾಲೆಯ ಪ್ರಥಮ ಪುಸ್ತಕವು ಇದಾಗಿದ್ದಿತು. ಅದನ್ನು ಅಚ್ಚುಹಾಕಿ ಇಂದಿಗೆ ನಾಲ್ಕುವರೆ ವರ್ಷಗಳಾದವು. ನಾವು ಅದನ್ನು ಒಂದೇ ಒಂದು ಕೈಬರಹದ ಪ್ರತಿಯಿಂದ ಸಿದ್ಧಗೊಳಿಸಿದೆವು. ಪುರಾತನ ಗ್ರಂಥಗಳನ್ನು ಹೀಗೆ ಒಂದೇ ಒಂದು ಪ್ರತಿಯ ಸಹಾಯದಿಂದ ಶುದ್ಧವಾಗಿ ಪ್ರಕಟಿಸುವದು ಎಷ್ಟು ಅಶಕ್ಯವೆಂಬುದು ಯಾರಿಗಾದರೂ ತಿಳಿಯುವಂತೆ ಇದೆ. ಆದರೆ ಶುದ್ಧಮಾಡಿಯೇ ಪ್ರಕಟಮಾಡಬೇಕೆಂದು ನಾವು ಹಾಗೆಯೇ ಕುಳಿತಿದ್ದಾದರೆ ಈ ಮಹತ್ಕಾರ್ಯವು ಅನಿಶ್ಚಯಾತ್ಮಕವಾಗಿ ಬಹು ದಿವಸ ಉಳಿಯಬಹುದೆಂದೆ

ಣಿಸಿ ನಾವು ಸಾಹಸದಿಂದ ಈ ಕಾರ್ಯವನ್ನು ಆರಂಭಿಸಿ
ಹೀಗೆ ಮಾಡಿದ್ದರಿಂದ ಪರಿಣಾಮದಲ್ಲಿ ಕಡೆಗೆ ಉಚಿತವಾಯ
ನಮಗೆ ಎನಿಸುತ್ತದೆ. ಯಾಕೆಂದರೆ ಅನೇಕರು ಈ ಮಹಾತ್ಮನ ವಚನ
ಗಳನ್ನು ನೋಡಲು ಅನುಕೂಲವಾಯಿತು. ಮತ್ತು ಇದು ಮೈಸೂರು
ವಿಶ್ವವಿದ್ಯಾಲಯದ ಎಮ್. ಏ. ಪರೀಕ್ಷೆಗೆ ಪಠ್ಯ ಪುಸ್ತಕವಾಗಿ ಉಪಯೋ
ಗಿಸಲ್ಪಟ್ಟಿತು. ಅನೇಕ ವಿದ್ಯಾವಂತರು ಅದನ್ನು ವಿಮರ್ಶಕ ಬುದ್ಧಿಯಿಂ
ದಲೂ ಐತಿಹಾಸಿಕ ಸಂಶೋಧಕ ವೃತ್ತಿಯಿಂದಲೂ ಅಭ್ಯಾಸಮಾಡಲಿಕ್ಕೆ
ಪ್ರಾರಂಭಿಸಿದರು. ಮತ್ತು ಅವರು ಈ ಬಗೆಯಾಗಿ ಬರೆದ ಲೇಖಗಳು
ಪ್ರಬುದ್ಧಕರ್ನಾಟಕ ಮೊದಲಾದ ಮಾಸ ಮತ್ತು ವಾರಪತ್ರಿಕೆಗಳಲ್ಲಿ
ಬರಲಿಕ್ಕೆ ಹತ್ತಿದವು. ಇಷ್ಟೇ ಅಲ್ಲ, ಮಹಾರಾಷ್ಟ್ರ ಪ್ರಾಂತದಲ್ಲಿದ್ದ ವೀರ
ಶೈವರು ಅವುಗಳೊಳಗಿನ ಸುಂದರ ಉಕ್ತಿಗಳನ್ನು ಆರಿಸಿ ತೆಗೆದು ಬಾಲ
ಬೋಧ ಲಿಪಿಯಿಂದ ಅವುಗಳನ್ನು ಅಚ್ಚುಹಾಕಿಸಿ ಚಿಕ್ಕ ಪುಸ್ತಕಗಳನ್ನು
ರಚಿಸಿ ಅವುಗಳನ್ನು ತಮ್ಮ ಪ್ರಾಂತದಲ್ಲೆಲ್ಲ ಪ್ರಸಾರಪಡಿಸಿದರು. ಮತ್ತು
ಅನೇಕರು ಅದರಲ್ಲಿಯ ಉಕ್ತಿಗಳನ್ನು ಎತ್ತಿ ತಮ್ಮ ಪ್ರಕಟನೆಗಳಲ್ಲಿಯೂ
ಭಾಷಣಗಳಲ್ಲಿಯೂ ಆಗಿಂದಾಗ್ಗೆ ಉಪಯೋಗಿಸುತ್ತಲಿರುವದು ಕಂಡುಬ
ರುತ್ತಿದೆ. ಅನೇಕ ಮಠಾಧಿಕಾರಿಗಳು ತಮ್ಮ ಶಿವಾನುಭವ ಸದ್ಗೋಷ್ಠಿಯ
ಕಾಲಕ್ಕೆ ಇವುಗಳ ಉಪಯೋಗವನ್ನು ಮಾಡುತ್ತಲಿರುವರು. ಹೀಗೆ ಈ
೧ ನೇ ಆವೃತ್ತಿಯ ಸುಪರಿಣಾಮಗಳು ಎಲ್ಲ ಕಡೆಗೂ ಉಂಟಾದದ್ದು
ತೋರಿಬರುತ್ತದೆ. ಆದ್ದರಿಂದ ಈ ಪ್ರತಿಯನ್ನು ಹೊರಪಡಿಸುವ ಸಾಹಸ
ಮಾಡಿದ್ದಕ್ಕೆ ಅದರ ಅಂತ್ಯ ಪರಿಣಾಮಗಳು ಶುಭದಾಯಕವಾಗಿಯೇ
ಆದವೆಂದು ನಮಗೆ ತೋರುತ್ತದೆ. ಆದರೆ ನಾವು ಈಗ ವಿಶೇಷ ಸವಾ
ಧಾನ ಪಡತಕ್ಕದ್ದೇನೆಂದರೆ, ಈ ೧ ನೇ ಆವೃತ್ತಿಯನ್ನು ಹೊರಡಿಸಿದ್ದರ
ಮೂಲಕ ಇದಕ್ಕೂ ಹೆಚ್ಚಿಗೆ ಶುದ್ಧ ಪ್ರತಿಯನ್ನು ಈಗ ನಾವು ಕರ್ನಾ
ಟಕಸ್ಥರ ಮುಂದಿಡಲಿಕ್ಕೆ ಬಹಳ ಅನುಕೂಲವಾಯಿತು. ಇದು ಎಲ್ಲಕ್ಕೂ
ಹೆಚ್ಚಿನ ಲಾಭವಾಗಿದೆ.

ಈ ಎರಡನೇ ಆವೃತ್ತಿಯು ಮೂರು ಕೈಬರಹದ ಗ್ರಂಥಗಳ ಸಹಾ
ಯದಿಂದ ಸಿದ್ಧಗೊಳಿಸಲ್ಪಟ್ಟಿದೆ. ಇವುಗಳಲ್ಲಿ ಎರಡು ಗ್ರಂಥಗಳು ಶ್ರೀ
ಶಿವಯೋಗಮಂದಿರದಿಂದ ದೊರಕಿದವುಗಳು. ೩ ನೆಯ ಪ್ರತಿಯು ಶ್ರೀ ಶಿವ
ಬಸವ ಸ್ವಾಮಿಗಳು ಹುಕ್ಕೇರಿಮಠ ಮುಕ್ಕಾಮ ಹಾವೇರಿ ಇವರದು ಇರು
ತ್ತದೆ. ಈ ಪ್ರತಿಯು ಟೀಕೆಯುಳ್ಳದ್ದಿದ್ದು, ಇದರಿಂದ ಶುದ್ಧ ಪಾಠಗಳನ್ನು

ಕೆಲಸ ಹಿಡಿಯಲು ನನಗೆ ಬಹಳ ಅನುಕೂಲವಾಯಿತು. ಈ ಮೂರು ಹಸ್ತಲಿಖಿತ ಗ್ರಂಥಗಳ ಸಹಾಯದಿಂದ ಈ ಎರಡನೇ ಆವೃತ್ತಿಯು ಈಗ ಸಿದ್ಧಗೊಳಿಸಲ್ಪಟ್ಟಿರುವದರಿಂದ, ಈ ಪ್ರತಿಯು ಬಹುಮಟ್ಟಿಗೆ ಶುದ್ಧವಾಗಿದೆಂದು ಹೇಳಬಹುದಾಗಿದೆ. ಆದರೆ ಇದು ಸಂಪೂರ್ಣ ಶುದ್ಧವಾಗಿದೆಂದು ನಾವು ಇನ್ನೂ ಹೇಳಲು ಧೈರ್ಯವಾಡಲಾರೆವು. ಯಾಕಂದರೆ ಅನೇಕ ವಚನಗಳು ವಿಶೇಷಾರ್ಥವುಳ್ಳವಾಗಿ ಬೆಡಗಿನಿಂದ ತುಂಬಿಕೊಂಡಿರುವದರಿಂದಲೂ ಅನೇಕ ಕಡೆಗೆ ಶಬ್ದ ರೂಪಗಳು ಈ ಕಾಲಕ್ಕೆ ಅಪರಿಚಿತವಾದವುಗಳಿರುವದರಿಂದಲೂ ಅವುಗಳ ನಿಜವಾದ ಪಾಠಗಳನ್ನು ಕಂಡು ಹಿಡಿಯುವದು ಇನ್ನೂ ದುಸ್ತರವಾಗಿರುತ್ತದೆ. ಈ ಕಾರ್ಯವನ್ನು ಇನ್ನು ಮೇಲೆ ಕನ್ನಡ ಭಾಷಾಶಾಸ್ತ್ರಜ್ಞರೂ ಶಿವಾನುಭವ ವಿದ್ಯಾಸಂಪನ್ನರೂ ಕೈಕೊಂಡು ಶುದ್ಧ ಪಾಠಗಳಾವವೆಂಬದನ್ನ ನಮಗೆ ತಿಳಿಸಿದಲ್ಲಿ ನಾವು ಅವರಿಗೆ ಉಪಕೃತರಾಗುವೆವು. ಮತ್ತು ಅವುಗಳನ್ನು ಮುಂದಿನ ಆವೃತ್ತಿಯಲ್ಲಿ ಸೇರಿಸುವೆವು.

ಅನೇಕರು ಈ ಆವೃತ್ತಿಗೆ ಸಂಪೂರ್ಣ ಟೀಕೆಯನ್ನು ನಾವು ಬರೆಯಬೇಕೆಂದು ನಮಗೆ ಸೂಚಿಸಿದರು. ಮತ್ತೆ ಕೆಲವರು ಬಸವೇಶ್ವರನ ವಚನಗಳಿಗೆ ಈಗ ಉಪಲಬ್ಧವಿರುವ ಹಳೇ ಟೀಕೆಯನ್ನೇ ಇದ್ದಕ್ಕಿದ್ದಹಾಗೆ ಇದರಲ್ಲಿ ಅಚ್ಚುಹಾಕಬೇಕೆಂತಲೂ ಹೇಳಿದರು. ಆದರೆ ಈ ಎರಡನೇ ಸೂಚನೆಯು ಅಸಾಧ್ಯವೂ ಅಷ್ಟ ಪ್ರಯೋಜನ ಕರವೂ ಎಂದು ನಮಗೆ ತೋರಿದ್ದರಿಂದ ಈ ಸಮಗ್ರ ಟೀಕೆಯನ್ನು ನಾವು ಅಚ್ಚುಹಾಕಲಿಲ್ಲ. ಯಾಕಂದರೆ ಅದನ್ನು ಇದ್ದಕ್ಕಿದ್ದ ಹಾಗೆ ಅಚ್ಚುಹಾಕಿದ್ದರೆ ಈ ಗ್ರಂಥವು ೧೦೦೦ ೧೫೦೦ ಪುಟಗಳುಳ್ಳದಾಗಿ ಅದರ ಬೆಲೆಯು ಜನ ಸಾಮಾನ್ಯಕ್ಕೆ ಗ್ರಹಿಸಲು ಅಶಕ್ಯವಾಗುತ್ತಿತ್ತು. ಇದಲ್ಲದೆ ಆ ಟೀಕೆಯಲ್ಲಿ ಪುನರುಕ್ತಿಗಳು ಮಿತಿಮೀರಿ ಇರುವದರಿಂದ ವಾಚಕರಿಗೆ ಬೇಸರಿಕೆಯನ್ನುಂಟು ಮಾಡುವಂತೆ ಇದೆ. ಆದ್ದರಿಂದ ಹಾಗೆ ಮಾಡದೆ ಕಠಿಣ ಭಾಗಗಳ ಅರ್ಥವನ್ನು ಬರೆದರೆ ಮಾತ್ರ ಸಾಕೆಂಬ ಅಭಿಪ್ರಾಯಕ್ಕೆ ಶ್ರೀ ಮನ್ನಿರಂಜನ ಜಗದ್ಗುರು ಮುರುಘಾರಾಜೇಂದ್ರ ಮಹಾಸ್ವಾಮಿಗಳೂ, ಹಾವೇರಿ ಶ್ರೀ ಶಿವಬಸವ ಸ್ವಾಮಿಗಳೂ ಅಪ್ಪಣೆ ಕೊಟ್ಟದ್ದರಿಂದ ಈ ಟೀಕೆಯನ್ನೆಲ್ಲ ಅಚ್ಚು ಪಡಿಸುವದನ್ನು ನಾವು ಬಿಟ್ಟೆವು. ಆದರೆ ಅವರ ಅಪ್ಪಣೆಯ ಪ್ರಕಾರ ವಚನಗಳಲ್ಲಿಯ ಕಠಿಣ ಶಬ್ದಗಳ ಅರ್ಥಗಳು ಕೋಶರೂಪವಾಗಿ ಈ ಆವೃ

ತ್ತಿಯಲ್ಲಿ ಅಂತ್ಯಕ್ಕೆ ಜೋಡಿಸಲ್ಪಟ್ಟಿವೆ. ಇದಲ್ಲದೆ ಎಲ್ಲೆಲ್ಲಿ ವಚನಗಳ ನುಡಿಗಳೂ ವಾಕ್ಯಗಳೂ ಕಠಿಣವಾಗಿ ತೋರುತ್ತವೋ ಅಲ್ಲಲ್ಲಿ ಅವುಗಳ ವಿವರಣೆಗಳು ಕೊಡಿಲ್ಪಟ್ಟಿವೆ. ವಿಚಾರ ಮಾಡಿದರೆ ಗ್ರಂಥಗಳ ಟೀಕೆಟಿಪ್ಪಣಿಗಳು ಓದುಗರ ವಿಚಾರಗಳಿಗೆ ಚಾಲನ ಕೊಡುವಂಥವಿರಬೇಕಲ್ಲದೆ ಅವರು ವಿಚಾರ ಮಾಡುವ ಸಾತಂತ್ರ್ಯವನ್ನು ಕಸಿದುಕೊಳ್ಳುವಂಥವಿರಬಾರದು. ಇದೇ ಈಗಿನ ಕಾಲಕ್ಕೆ ಶ್ರೇಷ್ಠವೆಂದು ಕಂಡು ಬಂದ ಪದ್ಧತಿಯಾಗಿದೆ. ಇದನ್ನೇ ಇಲ್ಲಿ ಅನುಸರಿಸಿದೆ. ಈ ಪದ್ಧತಿಯಿಂದ ಮೂಲ ವಚನಕಾರನ ಅರ್ಥಸ್ವಾರಸ್ಯವು ಚನ್ನಾಗಿ ಮನಸ್ಸಿಗೆ ಬಿಂಬಿಸುತ್ತದೆ. ಪಾಶ್ಚಿಮಾತ್ಯ ಟೀಕಾಕಾರರ ತರಹವು ಹೀಗೆಯೇ ಇರುತ್ತದೆ. ಆದ್ದರಿಂದ ಈ ರೀತಿಯನ್ನು ಅನುಸರಿಸಿ ಟೀಕೆ ಟಿಪ್ಪಣಿಗಳು ಇದರಲ್ಲಿ ಬರೆಯಲ್ಪಟ್ಟಿವೆ.

ಈ ಟೀಕೆಟಿಪ್ಪಣಿಗಳು ನಮ್ಮಹತ್ತಿರವಿದ್ದ ೩ ನೇ ಕೈಬರಹದ ಗ್ರಂಥದ ಸಹಾಯದಿಂದ ಬರೆಯಲ್ಪಟ್ಟಿವೆ. ಈ ಟಿಪ್ಪಣಿಗಳಲ್ಲಿಯ ವಿಚಾರಗಳು ನಮ್ಮವಿರದೆ ಸಾಂಪ್ರದಾಯಾನುಸಾರವಾಗಿ ಅವುಗಳಿಗಿದ್ದ ಅರ್ಥವನ್ನು ಅವು ಬೋಧಿಸುತ್ತವೆ. ಈ ಅರ್ಥಗಳು ಓದುಗರಿಗೆ ಸರಿ ಎನಿಸದಿದ್ದರೆ, ಅದರ ಜವಾಬದಾರಿಯು ನಮ್ಮದಲ್ಲ. ಮತ್ತು ಅದಕ್ಕೋಸ್ಕರ ಅವರು ನಮ್ಮನ್ನು ದೂಷಿಸಬಾರದೆಂತಲೂ ನಮ್ಮ ಸೂಚನೆ ಇದೆ.

ಈ ಬಸವೇಶ್ವರನ ವಚನ ಗ್ರಂಥದ ಎರಡನೇ ಆವೃತ್ತಿಯನ್ನು ಹೊರಪಡಿಸಲು ಕೈ. ವಾ. ಮಹಗಿ ಮರಿಶಾಂತಪ್ಪನವರ ಮೃತ್ಯು ಪತ್ರವು ನಮಗೆ ಸಕಾಲಕ್ಕೆ ಬಹಳ ಸಹಾಯ ಮಾಡಿತು. ಈ ಸಹಾಯವು ಇಂತಿಷ್ಟೇ ಎಂದು ಹೇಳಲು ಶಕ್ಯವಿಲ್ಲ. ಈ ಸಹಾಯವು ನಮಗಿರದಿದ್ದರೆ, ಬಹು ದಿವಸ ಈ ಆವೃತ್ತಿಯನ್ನು ಹೊರಪಡಿಸಲು ನಮಗೆ ಶಕ್ಯವಾಗುತ್ತಿರಿಲಿಲ್ಲ. ಇದಕ್ಕೋಸ್ಕರ ನಾವು ಅವರಿಗೆ ಚಿರ ಋಣಿಯಾಗಿದ್ದೇವೆ. ಈ ಮಹಾನುಭಾವರ ಚರಿತ್ರೆಯನ್ನು ನಾವು ಮುಂದೆ ಕೊಟ್ಟಿದ್ದೇವೆ.

ಈ ಕಾರ್ಯದಲ್ಲಿ ನಮಗೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟವರೆಂದರೆ ಚಿತ್ರಕಲ್‌ದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳೇ ಇದ್ದಾರೆ. ಶ್ರೀ ಮಹಾಸ್ವಾಮಿಗಳವರು ನಾವು ಕೈಕೊಂಡ ಈ ಕಾರ್ಯಕ್ಕೆ ಯಾವಾಗಲೂ ಸಹಾನುಭೂತಿಪರರಾಗಿ ಕಾಲಕಾಲಕ್ಕೆ ತಕ್ಕ ಸಲಹೆಗಳನ್ನು ಕೊಡುತ್ತ ಬಂದದ್ದಕ್ಕೆ ನಾವು ಅವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ. ಅದೇ

ಮೇರೆಗೆ ಅಜ್ಜಂಪುರದ ರಾ॥ ರಾ॥ ಸಿದ್ದಪ್ಪ ಶೆಟ್ಟರಿಗೂ ನಾವು ಬಹಳ ಆಭಾರಿಯಾಗಿದ್ದೇವೆ. ಅವರು ತಮ್ಮ ಮಾವಂದಿರಾದ ಕೈ. ವಾ. ಮಸಗಿ ಮರಿಶಾಂತಪ್ಪನವರ ಚರಿತ್ರೆಯ ವಿಷಯಗಳನ್ನು ಸಂಶೋಧಿಸಿ ಕೊಟ್ಟ ದ್ದಲ್ಲದೆ, ಈ ಕಾರ್ಯದಲ್ಲಿ ನಮಗೆ ಎಲ್ಲ ವಿಧವಾಗಿಯೂ ಸಹಾಯ ಮಾಡಿ ದರು. ಅದರಂತೆಯೇ ಮ ರಾ. ರಾ. ಬಳ್ಳಾರಿ ವಡ್ಡಿನಶಟ್ರು ಗುರುಲಿಂಗಯ್ಯ ವರೂ ಮ. ರಾ ಮುಂಡಾಸದ ವೀರಪ್ಪನವರೂ ಬಹಳ ಪ್ರೋತ್ಸಾಹ ಕರಾಗಿ ವರ್ತಿಸಿದರು. ಇವರೆಲ್ಲರಿಗೆ ನನ್ನ ಸಪ್ರೇಮವಂದನೆಗಳವೆ.

ನನ್ನ ಕೆಲವಿತ್ರರು ವಚನಗಳ ಭಾವವನ್ನು ತಿಳಿಯಲಿಕ್ಕೆ ಅನುಕೂ ಲವಾಗುವಂತೆ ಪಟ್ಸ್ಥಲದ ಸಾಮಾನ್ಯ ತತ್ವಗಳನ್ನು ಕೆಲವುಟ್ಟಿಗೆ ಇದರಲ್ಲಿ ವಿವೇಚಿಸಬೇಕೆಂತಲೂ ನನಗೆ ಸೂಚಿಸಿದರು. ಮತ್ತು ಅದರಂತೆಯೇ ಬಸವಣ್ಣ ನವರ ಸವಿಸ್ತಾರ ಚರಿತ್ರೆಯನ್ನು ಇದರಲ್ಲಿ ಸೇರಿಸಬೇಕೆಂತಲೂ ನನಗೆ ತಿಳಿಸಿ ದರು. ಆದರೆ ಈ ಎರಡೂ ವಿಷಯಗಳು ವಿಸ್ತೀರ್ಣವಾದವುಗಳೂ ತೊಡಕು ಳವೂ ಇದ್ದದರಿಂದ ಇವುಗಳನ್ನು ಇಲ್ಲಿ ಜೋಡಿಸಿಲ್ಲ. ಇದಲ್ಲದೆ ಈ ವಿಷಯ ಗಳು ಇನ್ನೂ ಸಂಶೋಧನ ಸ್ಥಿತಿಯಲ್ಲಿವೆ. ಅವನ್ನೆಲ್ಲ ಸಂಪೂರ್ಣ ತಿಳಿ ಯಲು ಕೆಲವು ಕಾಲಬೇಕು. ಆದ್ದರಿಂದ ಅವುಗಳನ್ನು ನಾವು ಇಲ್ಲಿ ಹಾಕಿಲ್ಲ. ಆದರೆ ಬೆಳಗಾವ ಜಿಲ್ಲಾ ಹುಕ್ಕೇರಿ ತಾಲೂಕು ಅಜ್ಜನ ವಾಡ ಗ್ರಾಮದ ಹತ್ತಿರ ಒಂದು ಶಿಲಾಲೇಖವಿದ್ದು ಇದರಲ್ಲಿ ಬಸವಣ್ಣನ ಸಂಬಂಧವಾಗಿ ಕೆಲವು ಮಹತ್ವದ ಉಲ್ಲೇಖಗಳಿರುತ್ತವೆ ಆದ್ದರಿಂದ ಅದನ್ನು ಮಾತ್ರ ನಾವು ಎತ್ತಿ ಇದರಲ್ಲಿ ಅರ್ಥ ಸಹಿತ ಕೊಟ್ಟಿದ್ದೇವೆ.

ಪುರಾತನ ಗ್ರಂಥ ಸಂಶೋಧನ ಕಾರ್ಯವು ಇಂಥಲ್ಲಿಗೆ ಪೂರ್ಣ ವಾಯಿತೆಂದು ಹೇಳುವದು ದುಸ್ತರವು. ಅದು ಯಾವಾಗಲೂ ಅಪೂರ್ಣ ಸ್ಥಿತಿಯಲ್ಲಿರುವದು ಸಹಜವು. ಆದ್ದರಿಂದ ಈಗಿನ ಅವೃತ್ತಿಯಲ್ಲಿಯೂ ಕೂಡ ವಾಚಕರು ಇನ್ನೂ ಅನೇಕ ದೋಷಗಳನ್ನು ಕಾಣಬಹುದು. ಆದರೂ ಅವರು ಅವುಗಳಿಗೋಸ್ಕರ ನಮ್ಮನ್ನು ಕ್ಷಮಿಸಿ ಆ ದೋಷಗ ಳನ್ನು ನಮಗೆ ತಿಳಿಸಿದಲ್ಲಿ ಅವರಿಂದ ನಾವು ಬಹಳ ಉಪಕೃತರಾಗು ವೆವು. ಮತ್ತು ಅವುಗಳನ್ನು ನಾವು ಗ್ರಹಿಸಿ ಮುಂದಿನ ಅವೃತ್ತಿಯಲ್ಲಿ ಸೇರಿಸುವೆವು. ಅವರು ಹೀಗೆ ಮಾಡಿದ್ದಾದರೆ ಈ ಮಹತ್ವದ ಕಾರ್ಯ ದಲ್ಲಿ ನಮಗೆ ಬಹಳ ಸಹಾಯ ಮಾಡಿದಂತೆ ಆಗುವದು.

ಕೈ. ವಾ. ಮುಸಗಿ ಮುರಿಶಾಂತಪ್ಪನವರ ಚರಿತ್ರೆಯು.

ಈ ೨೨ನೇ ಅವೃತ್ತಿಯು ಡಾವಣಗೆರೆಯ ಕೈ. ವಾ. ಮುಸಗಿ ಮುರಿ ಶಾಂತಪ್ಪನವರ ಸಹಾಯದಿಂದ ಪ್ರಚುರಪಡಿಸಲ್ಪಟ್ಟಿದೆ. ಇದಕ್ಕೋಸ್ಕರ ಈ ಮಹನೀಯರನ್ನು ನಾವು ಎಷ್ಟು ಮನ್ನಿಸಿದರೂ ಅಲ್ಪವೇ ಸರಿ. ಕೈ. ವಾ. ಮುಸಗಿ ಮುರಿಶಾಂತಪ್ಪನವರು ಪ್ರಮಥ ವಿಚಾರಪ್ರೇಮಿಗಳಾಗಿ ದ್ದರು. ಮತ್ತು ಅವರು ವಾಙ್ಮಯ ಪ್ರೋತ್ಸಾಹಕರೂ ಆಗಿದ್ದರು. ಅವರು ಲಿಂಗೈಕ್ಯರಾಗಿ ಇಂದಿಗೆ ೫ ವರುಷಗಳಾದವು. ಅವರು ತಮ್ಮ ಮರಣದ ಪೂರ್ವದಲ್ಲಿ ತಾ॥ ೨೯ ನೇ ಸಪ್ಟೆಂಬರ್ ೧೯೩೪ ನೇ ದಿವಸ ಒಂದು ವೃತ್ಯ ಪತ್ರವನ್ನು ಮಾಡಿಟ್ಟಿದ್ದರು. ಇದರಲ್ಲಿ ಅವರು ತಮ್ಮ ಆಸ್ತಿಯಲ್ಲಿ ಒಂದು ವರೆ ಸಹಸ್ರ ರೂಪಾಯಿಗಳನ್ನು ಶ್ರೀ ಬಸವೇಶ್ವರನ ವಚನಶಾಸ್ತ್ರ ಪ್ರಿಂಟು ಪಡಿಸಿ ಪ್ರಚರಪಡಿಸಲಿಕ್ಕೆ ವಿನಿಯೋಗಿಸಬೇಕೆಂದು ಲಿಖಿಸಿದ್ದರು. ಆ ಮೇರೆಗೆ ಅವರಿಂದ ಸಹಾಯವನ್ನು ಹೊಂದಿ ಈ ಗ್ರಂಥವು ಪ್ರಕಟಿಸ ಲ್ಪಟ್ಟಿರುತ್ತದೆ. ಇಂಥ ಮಹನೀಯರ ಚರಿತ್ರೆಯನ್ನು ಇದರಲ್ಲಿ ಕೊಡು ವದು ಅತ್ಯಂತ ಅವಶ್ಯವಿದ್ದು ಅದನ್ನು ನಾವು ಇಲ್ಲಿ ವಿವರಿಸುತ್ತೇವೆ.

ಕೈ. ವಾ. ಮುಸಗಿ ಮುರಿಶಾಂತಪ್ಪನವರು ಮೊದಲು ಬಳ್ಳಾರಿ ಪಟ್ಟ ಣಸ್ಥರು. ಅವರ ತಂದೆಯವರ ಹೆಸರು ಮುಸಗಿ ನಾಗಪ್ಪನವರು ತಾಯಂ ದಿರ ಹೆಸರು ಪಾರ್ವತೆಮ್ಮನವರು. ಉಭಯ ದಂಪತಿಗಳು ಸಾಮಾನ್ಯ ಸ್ಥಿತಿಯಲ್ಲಿದ್ದುಕೊಂಡು ಬಳ್ಳಾರಿಯಲ್ಲಿಯೇ ವ್ಯವಹಾರ ಮಾಡುತ್ತ ಚರಿ ತಾರ್ಥ ಸಾಗಿಸುತ್ತಿದ್ದರು. ಆದರೆ ಕೈ ವಾ. ಮುರಿಶಾಂತಪ್ಪನವರು ಚಿಕ್ಕ ವಯಸ್ಸಿನವರಿರುವಾಗಲೇ ಅವರ ತಂದೆಯವರು ತೀರಿಕೊಂಡರು. ಆಗ ಕುಟುಂಬದ ಸಂರಕ್ಷಣೆಯ ಭಾರವೆಲ್ಲ ಕೈ. ವಾ. ಮುರಿಶಾಂತಪ್ಪನವರ ತಾಯಂದಿರು ಮತ್ತು ಅವರ ಅಣ್ಣಂದಿರಾದ ಶಾಂತವೀರಪ್ಪನವರ ಮೇಲೆ ಬಂದು ಬಿದ್ದಿತು. ಈ ಶಾಂತವೀರಪ್ಪನವರು ಬಳ್ಳಾರಿಯಲ್ಲಿ ಒಬ್ಬರಲ್ಲಿ ಗುಮಾಸ್ತರಾಗಿದ್ದುಕೊಂಡು ತಮ್ಮ ಪ್ರಪಂಚವನ್ನು ನಡಿಸಿಕೊಳ್ಳುತ್ತ ಬಂದರು.

ಕೈ. ವಾ. ಮುರಿಶಾಂತಪ್ಪನವರು ತಮ್ಮ ಕುಟುಂಬದ ಉದ್ಯೋಗ ವಾದ ವ್ಯಾಪಾರವನ್ನೇ ತಮ್ಮ ಸಹೋದರರ ನಿರೀಕ್ಷಣೆಯಲ್ಲಿ ಸಾಗಿಸಿದರು.

ಕೈ. ವಾ. ಮಸಗಿ ಮುರಿಶಾಂತಪ್ಪನವರು.

ಅವರು ಇದರಲ್ಲಿ ತೀವ್ರವಾಗಿ ಚತುರತೆಯನ್ನು ಹೊಂದಿದರು. ಬಳ್ಳಾರಿಯಲ್ಲಿ ಮಲೆನಾಡ ಪ್ರಾಂತದಲ್ಲಿಯ ಸಾಗರ ತೀರ್ಥಹಳ್ಳಿಗ್ರಾಮಗಳ ಕಡೆಗಿನ ಅಡಿಕೆಯ ವ್ಯಾಪಾರವು ಬಹಳವಿದ್ದು ಇದರಲ್ಲಿ ಅವರು ಮನಸ್ಸು ಹಾಕಿ ಅದರಲ್ಲಿ ವಿಶೇಷ ಲಾಭಹೊಂದಿ ಪಟ್ಟಣದಲ್ಲಿ ಪ್ರಮುಖ ಸ್ಥಾನವನ್ನು ಹೊಂದಹತ್ತಿದರು.

ಕೈ. ವಾ ಮರಿಶಾಂತಪ್ಪನವರು ಸ್ವಭಾವತಃ ಅತ್ಯಂತ ಗುಣಾಢ್ಯರೂ ಭಕ್ತಿವಂತರೂ ಆಗಿದ್ದರು. ಈ ಗುಣಗಳವರಲ್ಲಿರಲು ಅವರ ತಂದೆಗಳಾದ ನಾಗಪ್ಪನವರ ಸ್ವಭಾವ ಸುವೃತ್ತಿಗಳೇ ಕಾರಣಗಳು. ನಾಗಪ್ಪನವರು ಆಗ ಬಳ್ಳಾರಿಯಲ್ಲಿದ್ದ ಶ್ರೀ ಶಾಂತವೀರ ಸ್ವಾಮಿಗಳೆಂಬ ಶ್ರೇಷ್ಠ ಶಿವಾನುಭಾವಿಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು. ಇವರ ಸಂಸ್ಕಾರದಿಂದ ಅವರು ಶಿವಶರಣ ಸಾಂಪ್ರದಾಯಕರೂ ಷಟ್‌ಸ್ಥಲ ಪ್ರೇಮಿಗಳೂ ಆಗಿದ್ದರು. ತಾತಂದಿರ ಈ ವೃತ್ತಿಯು ಅವರ ಪುತ್ರರ ಮನಸ್ಸಿನಲ್ಲಿಯೂ ಒಡಮೂಡಿ ಅವರೂ ಇದೇ ಮಾರ್ಗವನ್ನೇ ಅವಲಂಬಿಸಿದರು. ಅವರು ದಿನಾಲು ಮುಂಜಾವಿನಲ್ಲಿ ಬಳ್ಳಾರಿಯಲ್ಲಿ ಪ್ರಸಿದ್ಧ ಶಿವಶರಣರೆನ್ನಿಸಿಕೊಂಡ ಕೈ. ವಾ. ಸಕ್ಕರೆ ಕರಡೆಪ್ಪನವರು ಕಟ್ಟಿಸಿದ ಪಾಠಶಾಲೆಯ ಚೌಕಿಗೆ ಹೋಗುತ್ತಿದ್ದರು. ಮತ್ತು ಈ ಸ್ಥಳಕ್ಕೆ ಮೇಲಿಂದ ಮೇಲೆ ಜಂಗಮರೂ ಪಂಡಿತರೂ ಬರುವ ಸಾಂಪ್ರದಾಯವಿದ್ದು ಅಲ್ಲಿ ನಡೆಯುತ್ತಿದ್ದ ಶಿವಾನುಭವ ಪ್ರಸಂಗಗಳ ಲಾಭವನ್ನು ಅವರು ಪಡೆಯುತ್ತಲಿದ್ದರು. ಈ ಪ್ರಕಾರ ಅವರು ಅತ್ಯಂತ ಸದ್ವರ್ತನೆ ಸದಾಚಾರಗಳಿಂದ ಕೂಡಿಕೊಂಡವರಾಗಿ ೧೯೧೪ ನೇ ಇಸ್ವಿಯ ವರೆಗೆ ಬಳ್ಳಾರಿಯಲ್ಲಿ ಕಾಲ ಕಳೆದರು. ಇವರ ತರುವಾಯ ಅವರು ಬಳ್ಳಾರಿಯನ್ನು ಬಿಟ್ಟು ವ್ಯಾಪಾರೋದ್ಯೋಗಗಳಲ್ಲಿ ಮಹತ್ವದ ಸ್ಥಾನವಾಗಿರುವ ಡಾವಣಗೆರೆಯಲ್ಲಿ ಇರಬೇಕೆಂದು ಅಪೇಕ್ಷಿಸಿ ತಮ್ಮ ತಾಯಿ, ಹೆಂಡತಿ ಮತ್ತು ಮೂವರು ಹೆಣ್ಣುಮಕ್ಕಳೊಡನೆ ಇಲ್ಲಿಗೆ ಬಂದು ವ್ಯಾಪಾರದಲ್ಲಿ ತೊಡಗಿದರು. ಈ ಕಾಲಕ್ಕೆ ಅಲ್ಲಿಯ ರಾ॥ ರಾ॥ ಮಾಗಾನಹಳ್ಳಿ ಸಂಗಪ್ಪನವರೂ ರಾ॥ ರಾ॥ ಮುಂಡಾಸದ ವೀರಪ್ಪನವರೂ ಅವರಿಗೆ ವಿಶೇಷ ಸಹಾಯ ಮಾಡಿದರು. ಕೈ. ವಾ. ಮರಿಶಾಂತಪ್ಪನವರು ಡಾವಣಗೆರೆಗೆ ಬಂದ ಬಳಿಕ ತಮ್ಮ ವ್ಯಾಪಾರ ಚಾತುರ್ಯದ ಮೂಲಕ ಅಲ್ಲಿ ಸ್ವಲ್ಪ ಕಾಲದಲ್ಲಿಯೇ ಅವರು ವಿಶೇಷ ಅಭಿವೃದ್ಧಿ ಸ್ಥಿತಿಯನ್ನು ಹೊಂದಿದರು. ಮತ್ತು ಅಲ್ಲಿಯ ವರ್ತಕ ಮಂಡಲಿಯಲ್ಲಿ ಗಣ್ಯರೆನಿಸಿಕೊಳ್ಳಹತ್ತಿದರು.

ಕೈ. ವಾ. ಮರಿಶಾಂತಪ್ಪನವರು ಡಾವಣಗೆರೆಗೆ ಬಂದ ಮರು ವರುಷವೇ ಅವರ ಹೆಂಡತಿಯು ತೀರಿಕೊಂಡಳು. ಅವರಿಗೆ ಆಗ ಪುತ್ರ ಸಂತಾನವಿರಲಿಲ್ಲ. ಕೇವಲ ಮೂವರು ಹೆಣ್ಣುಮಕ್ಕಳು ಮಾತ್ರ ಉಳಿದಿದ್ದರು. ಆದರೂ ಅವರು ಪುನಃ ಲಗ್ನವಾಗುವದನ್ನು ಅಪೇಕ್ಷಿಸದೆ ಮರಣಾಂತ್ಯದ ವರೆಗೂ ಅವಿವಾಹಿತರಾಗಿಯೇ ಉಳಿದರು. ಮುಂದೆ ೧೯೧೯ ನೇ ಇಸ್ವಿಯಲ್ಲಿ ಅವರ ತಾಯಂದಿರೂ ಸಹ ತೀರಿಕೊಂಡರು.

ಈ ಕಾಲಕ್ಕೆ ಬಸವಾದಿ ಪ್ರಮಥರ ಮಾರ್ಗವನ್ನು ನಿಂದಿಸುವುದೊಂದು ಪಂಗಡವು ದೇಶ ಮಧ್ಯದಲ್ಲಿ ಉತ್ಪನ್ನವಾಗಿತ್ತು. ಆದರೆ ಕೈ. ವಾ. ಮಸಗಿ ಮರಿಶಾಂತಪ್ಪನವರು ಪ್ರಮಥರ ಉದಾತ್ತ ವಿಚಾರಗಳನ್ನು ಚಿಕ್ಕಂದಿನಿಂದಲೂ ಅಭ್ಯಾಸ ಮಾಡಿದವರಾದ್ದರಿಂದ ಅವರಲ್ಲಿ ಅತ್ಯಂತ ಭಕ್ತಿ ವಿಶ್ವಾಸಗಳಿಂದೊಡಗೂಡಿ ವರ್ತಿಸುತ್ತಿದ್ದರು. ಆದ್ದರಿಂದ ಈ ನಿಂದೆಗಳು ಅವರಿಗೆ ಅಸಹ್ಯಕರವಾದವು ಆದರೆ ಅವರು ಇಂಥವುಗಳನ್ನು ಕೇಳಿ ಕೊಂಡು ಉಪೇಕ್ಷಾಭಾವದಿಂದ ವರ್ತಿಸುವದು ಅವರಿಗೆ ಸೈರಿಸುವದಾಗುತ್ತಿರಲಿಲ್ಲ. ಪ್ರಮಥನಿಂದಕರು ಹೊಂಡಿಸುತ್ತಿದ್ದ ಅವಾಚ್ಯ ಮತ್ತು ಅಪ್ರಶಸ್ತ ಪ್ರಕಟನೆಗಳನ್ನು ಇವರು ಆಗಿಂದಾಗ್ಗೆ ಖಂಡಿಸಿ ಇದಿರುತ್ತರಗಳನ್ನು ಬರೆಯಿಸುವದರಲ್ಲಿಯೂ ಪ್ರಮಥರ ಕೀರ್ತನೆ ಭಜನೆಗಳನ್ನು ಏರ್ಪಡಿಸುವದರಲ್ಲಿಯೂ ಹೆಚ್ಚಾಗಿ ಮನಸ್ಸುಹಾಕಿದರು. ಆಗ ಅವರ ಮನಸ್ಸಿನಲ್ಲಿ ಪ್ರಮಥ ಸೇವಾ ಕಾರ್ಯವೇ ಹೆಚ್ಚಿನದಾಗಿ ಭಾಸವಾಗುತ್ತಿತ್ತು. ಮತ್ತು ಇದರಲ್ಲಯೇ ಅವರು ಶ್ರೇಷ್ಠತೆಯು ಇದೆ ಎಂದು ತಿಳಿಯುತ್ತಿದ್ದರು. ಒಂದು ಕಾಲಕ್ಕೆ ಅವರು ಚಿತ್ರಕಲ್‌ದುರ್ಗದ ಶ್ರೀಮನ್ಮಹಾರಾಜ ಸಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳನ್ನು ಕಂಡಾಗ್ಗೆ ಮಹಾಸ್ವಾಮಿಗಳವರು ಈ ಬಗೆಯ ಪ್ರಕಟನಾ ಕಾರ್ಯಗಳಿಂದ ಯಾವ ಫಲ ಸ್ಯಯೋಜನಗಳಿಲ್ಲವು. ಆದರೆ ದೇಶ ಮಧ್ಯದಲ್ಲಿ ಹರಡಿರುವ ಈ ಬಗೆಯ ಕುಹಕ ವಿಚಾರಗಳನ್ನು ಹಿಂದಕ್ಕೊತ್ತಲು ಪ್ರಮಥರ ಶ್ರೇಷ್ಠ ಮಾರ್ಗವನ್ನು ವ್ಯಕ್ತಗೊಳಿಸುವ ಅವರ ಮಹತ್ವದ ನಾಜ್ಞೆಯವನ್ನು ಪ್ರಕಟನೆಗೊಳಿಸುವದೊಂದೇ ಮುಖ್ಯ ಸಾಧನವೆಂದು ತಿಳಿಹೇಳಲು ಅವರು ಈ ಆಜ್ಞೆಯನ್ನು ಶಿರಸಾ ವಹಿಸಿ ಆ ಮಾರ್ಗದಿಂದಲೇ ಪ್ರಯತ್ನಿಸಲು ಪ್ರವೃತ್ತರಾದರು. ಆದರೆ ಈ ಸಂಗತಿಯು ವರ್ತಿಸಿದ ತರುವಾಯ ಅವರು ಬಹಳ ದಿವಸ ಬಾಳುವ ಪ್ರಸಂಗವು ದೈವೇಚ್ಛೆಯಿಂದ ಬರಲಿಲ್ಲ. ಅವರು ವಿಷಮಶೀತಜ್ವರದಿಂದ ಪೀಡಿತರಾದರು. ಆಗ ಅವರು

ತಮ್ಮ ಅವಸಾನ ಕಾಲವು ಪ್ರಾಪ್ತವಾಯಿತೆಂದು ತಿಳಿದು ತಾ॥ ೭೯-೭೪ನೆಯ ದಿವಸ ತಮ್ಮ ಆಸ್ತಿಯ ಬಗ್ಗೆ ಒಂದು ಮೃತ್ಯುಪತ್ರವನ್ನು ಮಾಡಿದರು. ಅದರಲ್ಲಿ ಅವರು "ನನ್ನ ಮರಣಾನಂತರ ಸದ್ರಿ ಲಿಖ್ಖಿದ ಪ್ರಕಾರ ಉಳಿಯುವ ಆಸ್ತಿಯಲ್ಲಿ ಒಂದುವರೆ ಸಾವಿರ ರೂಪಾಯಿಗಳನ್ನು ಶ್ರೀ ಬಸವೇಶ್ವರ ವಚನಶಾಸ್ತ್ರ ಪ್ರಿಂಟು ಮಾಡಿಸಿ ಪ್ರಚುರಪಡಿಸತಕ್ಕ ಕಾರ್ಯಕ್ಕೆ ವಿನಿಯೋಗಿಸತಕ್ಕದ್ದು. ಉಳಿದ ಯಾವತ್ತು ಆಸ್ತಿಗೂ ಮೇಲ್ಕಂಡ ನನ್ನ ಕೆಣ್ಣಮಕ್ಕಳು ಮರಿಶಾಂತಮ್ಮ ಒಂದು ಗಂಗಮ್ಮ ಒಂದು ಈ ಉಭಯ ತರೇ ಸಮಭಾಗವಾಗಿ ಬಾಧ್ಯಸ್ತರಾಗಿದ್ದಾರೆ ಹೊರ್ತು ಮತ್ಯಾರಿಗೂ ನನ್ನ ಆಸ್ತಿಯ ಮೇಲೆ ಹಕ್ಕು ಇರುವದಿಲ್ಲ." ಎಂದು ವ್ಯವಸ್ಥೆ ಮಾಡಿದರು. ಈ ಮೃತ್ಯುಪತ್ರವನ್ನು ನಡೆಯಿಸಲಿಕ್ಕೆ ಅವರು ಡಾವಣಗೆರೆಯ ಆಜ್ಜಂಪುರ ಶೆಟ್ರು ರಾ॥ ರಾ॥ ಶಿವನಾಗಪ್ಪನವರ ಮಕ್ಕಳು ಶಿದ್ರಾಮಣ್ಣನವರನ್ನೂ ಡಾವಣಗೆರೆಯಲ್ಲಿರುವ ರಾ॥ ರಾ॥ ಪಟ್ಟಣಶೆಟ್ಟಿ ಮುರಿಗೆಪ್ಪನವರ ಮಕ್ಕಳು ಮುಪ್ಪಣ್ಣನವರನ್ನೂ ಟ್ರಸ್ಟಿಗಳಾಗಿ ನೇಮಿಸಿದರು. ಈ ಪ್ರಕಾರ ನೇಮಿಸಿ ಅವರು ಲಿಂಗೈಕ್ಯರಾದರು.

ಕೈ ವಾ. ಮರಿಶಾಂತಪ್ಪನವರಿಗೆ ಇಬ್ಬರು ಮಾತ್ರ ಪುತ್ರಿಯರಿದ್ದು ಅವರಲ್ಲಿ ಶ್ರೀಮತಿ ಮರಿಶಾಂತಮ್ಮನವರು ಟ್ರಸ್ಟಿಗಳಲ್ಲಿ ಒಬ್ಬರಾದ ರಾ॥ ರಾ॥ ಶಿದ್ರಾಮಣ್ಣನವರ ತಮ್ಮಂದಿರಾದ ರಾ॥ ರಾ॥ ಸಿದ್ದಪ್ಪನವರ ಭಾರ್ಯೆಯಾಗಿದ್ದಾರೆ. ಇನ್ನೊಬ್ಬ ಪುತ್ರಿಯರಾದ ಶ್ರೀಮತಿ ಗಂಗಮ್ಮನವರು ಜನ್ನಗಿರಿ ತಾಲೂಕು ಹೊದಿಗೆರೆಯ ರಾ॥ ರಾ॥ ಲಕ್ಷ್ಮೀಶ್ವರ ಮುರಿಗೇಂದ್ರಪ್ಪನವರ ಭಾರ್ಯೆಯಾಗಿದ್ದಾರೆ.

ಕೈ. ವಾ. ವ ರಿಶಾಂತಪ್ಪನವರ ಈ ಚರಿತ್ರೆಯಿಂದ ಮತಗೌರವವನ್ನು ಕಾಯಲಿಕ್ಕೆ ಅತ್ಯಾವಶ್ಯಕ ಸಾಧನಗಳಾದ ಮತಗ್ರಂಥಗಳನ್ನು ಪ್ರಸಾರಪಡಿಸಲಿಕ್ಕೆ ಉತ್ತೇಜನ ಕೊಡುವದರಿಂದ ನಿಜವಾದ ಧರ್ಮಾಭಿವೃದ್ಧಿಗೂ ಶಾಶ್ವತ ಕೀರ್ತಿಗೂ ಹೇಗೆ ಭಾಜನರಾಗಿ ಉಳಿಯಲು ಅಪ್ಪ ದವಾಗುತ್ತದೆಂಬದು ಎಲ್ಲರಿಗೂ ದೃಗ್ಗೋಚರವಾಗದೆ ಇರದು. ಈ ವಿಷಯದಲ್ಲಿ ಕೈ. ವಾ. ಮರಿಶಾಂತಪ್ಪನವರು ಎಲ್ಲರಿಗೂ ಅನುಕರಣೀಯರಾಗಿದ್ದಾರೆ. ಇವರಂತೆಯೇ ಸಮಾಜದಲ್ಲಿಯ ಹಣವಂತರು ವರ್ತಿಸಿದ್ದಾದರೆ ಕ್ಷೀಣತೆಗೆ ಬಂದ ವೀರಶೈವ ಧಾರ್ಮಿಕ ವಾಙ್ಮಯವು ತನ್ನ ಮೊದಲಿನ ಅತ್ಯುಚ್ಚ ವಿಚಾರಪ್ರವಾಹವನ್ನು ದಿಗಂತರವೂ ಪಸರಿಸುವದರಲ್ಲಿ ಯಾವ ಸಂದೇಹವೂ ಇರಲಾರದು.

ಪ್ರಸ್ತಾವನೆ.

(೩ನೇ ಆವೃತ್ತಿ)

ಇದು ಶ್ರೀ ಬಸವೇಶ್ವರ ವಚನಗಳ ೩ನೇ ಆವೃತ್ತಿಯಾಗಿದೆ. ೨ನೇ ಆವೃತ್ತಿಯನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಶುದ್ಧಪಡಿಸಿ ಪ್ರಸಿದ್ಧಿಸಿದ್ದು ಅದರ ಪ್ರತಿಗಳು ಈಗ ತೀರಿದ್ದರಿಂದ ಈ ೩ನೇ ಆವೃತ್ತಿಯನ್ನು ಈಗ ಹೊರಡಿಸುವ ಸಮಯ ಬಂದದ್ದಕ್ಕೆ ನಾವು ಆನಂದಿಸುತ್ತೇನೆ. ಇದು ಸಂಪೂರ್ಣ ೨ನೇ ಆವೃತ್ತಿಯನ್ನೇ ಅನುಸರಿಸಿದೆ.

ವಿಜಾಪುರ.

೧೩-೧೦-೧೯೩೪

ಪಿ. ಜಿ. ಹಳಕಟ್ಟಿ.

ಸಂಪಾದಕ.



ಬಾಗೇವಾಡಿಯ
ಶ್ರೀ ಬಸವೇಶ್ವರ ದೇವಾಲಯದ ವಾಯವ್ಯ ಭಾಗ.

ಬಸವೇಶ್ವರನ ವಚನಗಳು.

ಪಿಂಡಸ್ಥ೦.

೧. ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು. ಶಶಿಯೊಳಗಣ ರಸದ ರುಚಿಯಂತೆ ಇದ್ದಿತ್ತು. ನನೆಯೊಳಗಣ ಪರಿಮಳದಂತೆ ಇದ್ದಿತ್ತು. ಕೂಡಲಸಂಗಮದೇವರ ನಿಲವು ಕನ್ನೆಯ ಸ್ನೇಹದಂತಿದ್ದಿತ್ತು.

ಪಿಂಡಜ್ಞಾನಸ್ಥ೦.

೧. ಕಾಳಿಯ ಕಂಕಾಳದಿಂದ ಮುನ್ನ, ತ್ರಿಪುರ ಸಂಹಾರದಿಂದ ಮುನ್ನ, ಹರಿವಿರಿಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ, ಮುನ್ನ, ಮುನ್ನ, ಆದಿಂಗೆಳೆಯ ನೀನು ಹಳೆಯ ನಾನು, ಮಹಾದಾನಿ ಕೂಡಲಸಂಗಮದೇವಾ.

೨. ಅಯ್ಯಾ, ನೀನು ನಿರಾಕಾರವಾಗಿದ್ದಲ್ಲಿ, ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ! ಅಯ್ಯಾ, ನೀನು ನಾಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ! ಅಯ್ಯಾ, ನೀನು ಆಕಾರವಾಗಿರ್ದಲ್ಲಿ, ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ! ಅಯ್ಯಾ, ನೀನೆನ್ನ ಭವವ ಕೊಂದಿಹೆನೆಂದು ಜಂಗಮ ಲಾಂಛನವಾಗಿ ಬಂದರೆ, ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ, ಕೂಡಲಸಂಗಮದೇವಾ.

೩. ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರಿಸಿದ್ದರೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ನಿಮ್ಮ ಪ್ರಸಾದಕ್ಕಲ್ಲದೆ, ಬಾಯ್ದೆರೆಯೆನಯ್ಯಾ. ಪ್ರಥಮ ಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು, ನಿಮ್ಮ ಭೃತ್ಯನ ಮಾಡಿ, ಎನ್ನನಿರಿಸಿಕೊಂಡಿದ್ದಿರಯ್ಯಾ! ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ ಗಣೇಶ್ವರನ

ಮಾಡಿ, ಹೆಸರಿಟ್ಟು ಕರೆದು, ನಿಮ್ಮ ಕಾರುಣ್ಯವ ಮಾಡಿಕೊಂಡಿದ್ದಿರಯ್ಯಾ! ಮೂರನೆಯ ಭವಾಂತರದಲ್ಲಿ ನೀಲಲೋಹಿತನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು, ನಿಮ್ಮ ಲೀಲಾ ವಿನೋದದಿಂದಿರಿಸಿಕೊಂಡಿದ್ದಿರಯ್ಯಾ! ನಾಲ್ಕನೆಯ ಭವಾಂತರದಲ್ಲಿ ಮನೋಹರನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು, ನಿಮ್ಮ ಮನಃಪ್ರೇರಕನಾಗಲೆಂದು ಇರಿಸಿಕೊಂಡಿದ್ದಿರಯ್ಯಾ! ಐದನೆಯ ಭವಾಂತರದಲ್ಲಿ ಕಾಲಲೋಚನನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು, ಸರ್ವಕಾಲ ಸಂಹಾರವ ಮಾಡಿಸುತ್ತಿದ್ದಿರಯ್ಯಾ. ಆರನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿದ್ದಿರಯ್ಯಾ! ಏಳನೆಯ ಭವಾಂತರದಲ್ಲಿ ಬಸವನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದು ಇರಿಸಿಕೊಂಡಿದ್ದಿರಯ್ಯಾ! ಇದು ಕಾರಣ ಕೂಡಲಸಂಗಮದೇವಾ ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ.

೪. ಅಯ್ಯಾ, ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ, ನೆನೆ ನೆನೆದು ಸುಖಿಯಾಗಿ, ಆನು ಬದುಕಿದೆನಯ್ಯಾ! ಆದೇನು ಕಾರಣ ತಂದೆ ಎಂದರಿದೆನಯ್ಯಾ? ಎನ್ನ ಕಾರಣ ತಂದೆ ಎಂದರಿದೆನಯ್ಯಾ. ಆರಿದರಿದು ನಿಮ್ಮ ಶರಣನು ಆಚರಿಸುವಾಚರಣೆಯ ಕಂಡು ಕಣ್ಣೆರೆದೆನಯ್ಯಾ ಕೂಡಲ ಸಂಗಮದೇವಾ.

೫. ಕರಿ ಘನ, ಅಂಕುಶ ಕಿರಿದೆನ್ನಬಹುದೆ? ಬಾರದಯ್ಯಾ. ಗಿರಿ ಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯಾ! ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯಾ! ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ? ಬಾರದಯ್ಯಾ ಕೂಡಲಸಂಗಮದೇವಾ.

ಸಂಸಾರಹ್ಯೇಯಸ್ಥಲ.

೧. ಭವಬಂಧನ ಭವಪಾಶವಾದ ಕಾರಣವೇನಯ್ಯಾ? ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ, ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ, ಆರಿದಡೀ ಸಂಸಾರವ ಹೊದ್ದಲೀಸೆನೆ ಕೂಡಲಸಂಗಮದೇವಾ?

೨. ಸಂಸಾರ ಸಾಗರದ ತೆರೆ ಕೊಬ್ಬಿ, ಮುಖದ ಮೇಲೆ ಅಲೆವು ತಿದ್ದುದೇ? ಸಂಸಾರ ಸಾಗರ ಉರದುದ್ದವೇ ಹೇಳಾ? ಸಂಸಾರ ಸಾಗರ ಕೊರಳುದ್ದವೇ ಹೇಳಾ? ಸಂಸಾರ ಸಾಗರ ಸಿರದುದ್ದವಾವ ಬಳಿಕ, ಏನು ಹೇಳುವೆನಯ್ಯಾ? ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ. ಕೂಡಲಸಂಗಮದೇವಾ ನಾನೇವೆನೇವೆನಯ್ಯಾ?

೩. ಚಂದ್ರಮನಂತೆ ಕಳೆ ಸವಸಿಸಿತ್ತೆನಗೆ. ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ. ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು. ಇನ್ನೆಂದಿಂಗೆ ಮೋಕ್ಷವಹುದೋ ಕೂಡಲಸಂಗಮದೇವಾ?

೪. ಇಲಿಗಡಹನೊಡ್ಡಿದಲ್ಲಿ ಇರ್ಪಂತೆ, ಎನ್ನ ಸಂಸಾರ ಕೆಡುವನ್ನಕ್ಕ ಮಾಣದು. ಹೆರರ ಬಾಧಿಸುವದನು ತನು ಕೆಡುವನ್ನಕ್ಕ ಮಾಣದು. ಹೆರರ ಛಿದ್ರಿಸುವದನು ತನು ಕೆಡುವನ್ನಕ್ಕ ಮಾಣದು. ಅಕಟಕಟ, ಸಂಸಾರಕ್ಕೆ ಅಸತ್ತೆ, ಕೂಡಲಸಂಗಮದೇವಾ.

೫. ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ! ಅಕಟಕಟ, ಸಂಸಾರ ವೃಥಾ ಹೋಯಿತ್ತಲ್ಲಾ! ಕರ್ತುವೇ ಕೂಡಲಸಂಗಮದೇವಾ, ಇವ ತಪ್ಪಿಸಿ, ಎನ್ನುವ ರಕ್ಷಿಸಯ್ಯಾ.

೬. ಶೂಲದ ಮೇಲಣ ವಿಭೋಗವೇನಾದರೇನೋ? ನಾನಾ ವರ್ಣದ ಸಂಸಾರ ಹಾವಹಾವಡಿಗನ ಸ್ನೇಹದಂತೆ. ತನ್ನಾತ್ಮ ತನಗೆ ಹಗೆಯಾದ ಬಳಿಕ, ಬಿನ್ನಾಣ ಉಂಟೇ, ಮಹಾದಾನಿ ಕೂಡಲಸಂಗಮದೇವಾ?

೭. ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ! ಎನ್ನವನು ಕಾಯಯ್ಯಾ. ಕಾಯುಯ್ಯಾ. ಹುರುಳಿಲ್ಲ, ಹುರುಳಿಲ್ಲ. ಕೂಡಲಸಂಗಮದೇವಾ, ಶಿವಧೋ ಶಿವಧೋ.

೮. ನಾನೊಂದ ನೆನೆದರೆ, ತಾನೊಂದ ನೆನೆವುದು. ನಾನಿತ್ತ ಲೆಳೆದರೆ, ತಾನತ್ತಲೆಳೆವುದು. ತಾ ಬೇರೆ ಎನ್ನನಳಲಿಸಿ ಕಾಡಿತ್ತು. ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು. ಕೂಡಲಸಂಗನ ಕೂಡಿಹೆನೆಂದರೆ ತಾನೆನ್ನ ಮುಂದುಗೆಡಿಸಿತ್ತು ಮಾಯೆ.

೯. ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ. ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ. ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು.

ಮಾಯೆ. ಇದಾವ ಪರಿಯಲ್ಲಿ ಕಾಡಿಹಿತು ಮಾಯೆ. ಈ ಮಾಯೆಯ ಕಳೆವರೆ ಎನ್ನಳವಲ್ಲ. ನೀನೇ ಬಲ್ಲೆ, ಕೂಡಲಸಂಗಮದೇವಾ.

೧೦. ಕೊಡೆವಿಡಿಯೆ ಕುದುರೆಯ ದೃಢವುಳ್ಳ ರಾವುತನೇರಿ, ಕೊಡೆ ಕೋಟಿ ಶೂರರು ಹನ್ನಿಬ್ಬರಯ್ಯಾ! ಚಂದ್ರಕಾಂತದ ಗಿರಿಯು ಬಂದು ಗಜ ಮೂಡಲಿಸಿ, ಅರಿದು ಕೊಲ್ಲುವರೆ, ರಿಪುಗಳ ಕಲಿತನವ ನೋಡಾ. ಆವಿಗೆಯಲೊದವಿದ ಪುಥ್ವಳಿಯ ರೂಹಿನಂತೆ ಆಯಿತ್ತು ಕೂಡಲಸಂಗಮದೇವಾ ನಿಮ್ಮ ಹೆಸರಿಲ್ಲದ ಹೆಸರು.

೧೧. ಇಂದಿಂಗೆಂತು, ನಾಳಿಂಗೆಂತು ಎಂದು ಬೆಂದೊಡಲ ಹೊರೆಯ ಹೋಯಿತ್ತೆನ್ನ ಸಂಸಾರ. ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹ್ಯೇಯವಿಲ್ಲ. ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿ ಇಲ್ಲ. ಎಂದೆಂದು ಸದಾಶಿವನ ಕುಂದದೆ ನೆನೆಯಲೀಯ್ಯದೆ ಕೊಂದುದಯ್ಯಾ ಈ ಮಾಯೆ ಕೂಡಲಸಂಗಮದೇವಾ.

೧೨. ದಿಟ ಪುಟ ಭಕುತಿ ಸಂಪುಟ ನೆಲೆಗೊಳ್ಳದಾಗಿ, ಟೆಂಬ ಕನನಾಡಿಸುತ್ತಿದ್ದಿತಯ್ಯಾ ನಿನ್ನ ಮಾಯೆ! ಟೇವಕ ಟೆಂಬಕನ ನಾಡಿಸುತ್ತಿದ್ದಿತಯ್ಯಾ ನಿನ್ನ ಮಾಯೆ ಕೂಡಲಸಂಗಮದೇವಯ್ಯಾ, ಹೊನ್ನು, ಹೆಣ್ಣು, ಮಣ್ಣು, ತೋರಿ.

೧೩. ಆಸತ್ತೆನಲಿಸಿದೆನೆಂದರೆ ಮಾಣದು. ಬೇಸತ್ತೆ ಬೆಂಬಿದ್ದೆನೆಂದರೆ ಮಾಣದು. ಏನೆನೇವೆನೆಂದರೆ ಮಾಣದು ಕಾಯದ ಕರ್ಮದ ಫಲಭೋಗವು. ಕೂಡಲಸಂಗನ ಶರಣರು ಬಂದು, ಹೋ, ಹೋ, ಅಂಜದಿರೆಂದಡಾನು ಬದುಕುವೆನು.

೧೪. ಸಂಸಾರವೆಂಬ ಸರ್ಪ ಮುಟ್ಟಲು, ಪಂಚೇಂದ್ರಿಯ ವಿಷಯವೆಂಬ ವಿಷದಿಂದ ಆನು ಮುಂದುಗೆಟ್ಟೆನಯ್ಯಾ! ಆನು ಹೊರಳಿ ಬೀಳುತ್ತಿದ್ದೆನಯ್ಯಾ! "ಓಂ ನಮಃ ಶಿವಾಯ" ಎಂಬ ಮಂತ್ರವ ಜಪಿಸುತ್ತಿದ್ದೆನಯ್ಯಾ ಕೂಡಲಸಂಗಮದೇವಾ.

೧೫. ಅರಿಯದೆ ಜನನಿಯ ಜಠರದಲ್ಲಿ ಬಾರದ ಭವಂಗಳಲ್ಲಿ ಬರಿಸಿದೆ ತಂದೆ. ಹುಟ್ಟಿತ್ತೆ ತಪ್ಪಾಯಿತ್ತೆ ಎಲೆ ಲಿಂಗವೇ. ಮುನ್ನ ಹುಟ್ಟಿದುದಕ್ಕೆ ಕೃಪೆಯ ಮಾಡು ಎಲೆ ಲಿಂಗವೇ. ಇನ್ನು ಹುಟ್ಟಿಂದರೆ, ಕೂಡಲಸಂಗಮದೇವ ನಿಮ್ಮಾಣೆ.

೧೬. ಎಂದೋ ಸಂಸಾರದ ದಂದುಗ ಹಿಂಗುವದು. ಎಂದೋ ಮನದಲ್ಲಿ ಪರಿಣಾಮವಹುದೆನಗೆಂದೋ, ಎಂದೋ, ಕೂಡಲಸಂಗಮದೇವಾ ಇನ್ನೆಂದೋ, ಪರಮ ಸಂತೋಷದಲ್ಲಿಹುದೆನಗೆಂದೋ.

೧೭. ಲೇಸ ಕಂಡು, ಮನ ಬಯಸಿ ಬಯಸಿ, ಆಸೆ ಮಾಡಿದ ಡಿಲ್ಲ ಕಂಡಯ್ಯಾ. ತಾಳ ಮರಕ್ಕೆ ಕೈಯ್ಯ ನೀಡಿ, ಮೇಲೆ ನೋಡಿ ಗೋಣು ನೊಂದುದಯ್ಯ. ಕೂಡಲಸಂಗಮದೇವ ಕೇಳಯ್ಯಾ, ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ.

೧೮. ಮುನ್ನ ಮಾಡಿದ ಪಾಪ ಬೆನ್ನ ಬಿಡದನ್ನಕ್ಕ, ಇನ್ನು ಬಯಸಿದರುಂಟೆ? ಭಕ್ತಿಯುಳ್ಳವರ ನೋಡಿ ನೋಡಿ ಬಯಸಿದರುಂಟೆ, ಕೂಡಲಸಂಗಮದೇವರಲ್ಲಿ ಮುನ್ನ ವರವ ಹಡೆಯದನ್ನಕ್ಕ?

೧೯. ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವದಯ್ಯಾ! ಚಂದ್ರ ಕುಂದೆ, ಕುಂದುವುದಯ್ಯಾ! ಚಂದ್ರಂಗೆ ರಾಹು ಆಡ್ಡ ಬಂದಲ್ಲಿ, ಅಂಬುಧಿ ಬೊಬ್ಬಿಟ್ಟಿತ್ತೆ? ಅಂಬುಧಿಯ ಮುನಿ ಆಪೋಷಣವ ಕೊಂಬಲ್ಲಿ ಚಂದ್ರಮನಡ್ಡಬಂದನೆ? ಅರಿಗಾರು ಇಲ್ಲ, ಕೆಟ್ಟವಂಗೆ ಕೆಳೆ ಇಲ್ಲ. ಜಗದ ನಂಟ ನೀನೇ ಅಯ್ಯಾ ಕೂಡಲಸಂಗಮದೇವಾ.

೨೦. ಒಲೆ ಹತ್ತಿ ಉರಿದಡೆ, ನಿಲ್ಲಬಹುದಲ್ಲದೆ, ಧರೆ ಹತ್ತಿ ಉರಿದಡೆ ನಿಲ್ಲಬಹುದೇ? ಏರಿ ನೀರುಂಬಡೆ, ಬೇಲಿ ಕೆಯಿ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳೆವಡೆ, ತಾಯಿ ಮೊಲೆವಾಲು ನಂಜಾಗಿ ಕೊಲುವಡೆ, ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ?

೨೧. ಎನ್ನ ಗುಣ ಅವಗುಣವ ಸಂಪಾದಿಸುವೆ ಅಯ್ಯಾ! ಪ್ರತಿಯೇ ಅಪ್ರತಿಮ ಮಹಿಮ, ನಿಮಗಾನು ಪ್ರತಿಯೇ? ಕೂಡಲಸಂಗಮದೇವಾ ನೀವು ಮಾಡಲಾನಾದೆನು.

೨೨. ಬೆದಕದಿರು, ಬೆದಕದಿರು. ಬೆದಕಿದಡೆ ಹುರುಳಿಲ್ಲ. ಚಿತ್ತರ ಟ್ಟಿಯ ಕಾಯಲ್ಲಿ ಮತ್ತೇನನರಸುವಿರಯ್ಯಾ? ನಿಮ್ಮ ಉತ್ಪಮಿಕೆಯ ಪೂರೈಸುವುದು ಕೂಡಲಸಂಗಮದೇವಾ.

೨೩. ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ! ವಿಚಾರಿಸಿದಡೆ ಏನು ಹುರುಳಿಲ್ಲವಯ್ಯಾ! ಪ್ರಪಂಚಿನ ಡಂಭಿನಲ್ಲಿ ಎನ್ನನೊಂದು ರೂಪು ಮಾಡಿ, ನೀವಿರಿಸಿದಿರಯ್ಯಾ ಕೂಡಲಸಂಗಮದೇವಾ.

೨೪. ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ. ಎನ್ನೊಳಗೇನು ಶುದ್ಧವಿಲ್ಲ ನೋಡಯ್ಯಾ! ನುಡಿಗೆ ತಕ್ಕ ನಡೆಯ ಕಂಡರೆ, ಕೂಡಲಸಂಗಮದೇವನೊಳಗಿಪ್ಪ ನೋಡಯ್ಯಾ.

೨೫. ಮುಂಗಯ್ಯ ಕಂಕಣಕೆ ಕನ್ನಡಿಯ ತೋರುವಂತೆ, ಎನ್ನ ಮನವು ನಿಧಾನವನೊಲ್ಲದೆ ಜಲಗರವ ಮಚ್ಚಿತ್ತು ನೋಡಾ. ನಾಯಿಗೆ ನಾರಿವಾಣವಕ್ಕುದೇ ಕೂಡಲಸಂಗಮದೇವಾ?

೨೬. ಕೊಂಬೆಯ ಮೇಲಣ ಮರ್ಕಟನಂತೆ, ಲಂಘಿಸುವುದೆನ್ನ ಮನವು. ನಿಂದಲ್ಲಿ ನಿಲ್ಲಲೀಯದೆನ್ನ ಮನವು. ಹೊಂದಿದಲ್ಲಿ ಹೊಂದಲೀಯದೆನ್ನ ಮನವು. ಕೂಡಲಸಂಗಮದೇವಾ ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ.

೨೭. ಮರನನೇರಿದ ಮರ್ಕಟನಂತೆ ಹಲವು ಕೊಂಬಿಂಗೆ ಹಾಯ್ದು ತ್ತಲಿದ್ದೇನೆ. ಬೆಂದ ಮನವ ನಾನೆಂತು ನಂಬುವೆನಯ್ಯಾ! ಎಂತು ನೆಚ್ಚುವೆನಯ್ಯಾ! ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ.

೨೮. ಆಂದಣವನೇರಿದ ಸೊಣಗನಂತೆ, ಕಾಡಡೆ ಬಿಡದು ಮುನ್ನಿನ ಸ್ವಭಾವವನು. ಸುಡು ಸುಡು, ಮನವಿದು ವಿಷಯಕ್ಕೆ ಹರಿವುದು. ನ್ಯಾಡ, ನಿಮ್ಮನನುದಿನ ನೆನೆಯಲೀಯದು. ಎನ್ನೊಡೆಯ ಕೂಡಲಸಂಗಮದೇವಾ, ನಿಮ್ಮ ಚರಣವ ನೆನೆವಂತೆ ಕರುಣಿಸು. ಸೆರೆಗೊಡ್ಡಿ ಬೇಡುವೆ ನಿಮ್ಮ ಧರ್ಮ.

೨೯. ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ. ಸಂಸಾರಸಂಗವ ಬಿಡದು ನೋಡೆನ್ನ ಮನವು. ಈ ನಾಯಿ ತನವ ಮಾಣಿಸು ಕೂಡಲಸಂಗಮದೇವ ನಿಮ್ಮ ಧರ್ಮ.

೩೦. ಒಂದು ಮೊಲಕ್ಕೆ ನಾಯನೊಂಬತ್ತ ಬಟ್ಟಂತೆ, ಎನ್ನ ಬಿಡು ತನ್ನ ಬಿಡೆಂಬುದು ಕಾಯವಿಕಾರ. ಎನ್ನ ಬಿಡು, ತನ್ನ ಬಿಡೆಂಬುದು ಮನವಿಕಾರ. ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ, ಮುನ ನಿಮ್ಮನ್ನೈದುಗೆ ಕೂಡಲಸಂಗಮದೇವಾ.

೩೧. ದಂದುಗ ಬಿಡದು, ಮನದ ಸಂದೇಹ ಹಿಂಗದಾಗಿ. ಮುನ್ನ ಲಿಂಗವ ಕಂಡೆನೆಂಬುದು ಹುಸಿ ನೋಡಾ! ಬೆಂದ ಕರಣಾದಿಗಳು

ಒಂದು ಪಥವನರಿದುವು. ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ! ಎನ್ನ ತಂದೆ ಕೂಡಲಸಂಗಮದೇವಾ, ನಿಮ್ಮ ಶರಣರ ಬಳಿವಿಡಿದರೆ, ಎನ್ನ ದಂದುಗ ಹಿಂಗುನದು.

೩೨. ತನ್ನ ವಿಚಾರಿಸಲೊಲ್ಲದು, ಇದಿರ ವಿಚಾರಿಸ ಹೋದುದೀ ಮನವು. ಏನ ಮಾಡುವೆನೀ ಮನವನು, ಎಂತು ಮಾಡುವೆನೀ ಮನವನು, ಕೂಡಲಸಂಗಮದೇವನ ಶರಣರ ನಚ್ಚದ ಮಚ್ಚದ ಬೆಂದ ಮನವನು?

೩೩. ತನ್ನಿಚ್ಛೆಯ ನುಡಿದರೆ ಮೆಚ್ಚುವುದೀ ಮನವು. ಇತರೆಚ್ಛೆಯ ನುಡಿದರೆ, ಮೆಚ್ಚದೀ ಮನವು. ಕೂಡಲಸಂಗನ ಶರಣರ ನೆಚ್ಚದ ಮನವ ಕೆಚ್ಚಿನೊಳಗಿಕ್ಕು.

೩೪. ಸುಡಲೀ ಮನವೆನ್ನನುಡುಹನ ಮಾಡಿತ್ತು. ನಡೆವಲ್ಲಿ ನುಡಿವಲ್ಲಿ ಅಧಿಕನೆಂದೆನಿಸಿತ್ತು. ಬೆಡಗಿನ ಕೀಲ ಕಳೆದು ಕೆಡೆದ ಬಳಿಕ, ಕಡುಗೂಪ ಮಡದಿ ತಾ ಮುಟ್ಟಲಮ್ಮಳು. ಒಡಲನುರಿ ಕೊಂಬುದು. ಒಡವೆಯನರಸು ಕೊಂಬ. ಕಡುಗೂಪ ಮಡದಿಯ ಮತ್ತೊಬ್ಬ ಚನ್ನಿಗ ಕೊಂಬ. ಮುನ್ನ ಮಾಡಿದುದು ತನ್ನ ಬೆನ್ನ ಬಿಡದನ್ನಕ್ಕ ಇನ್ನು ಮಾಡಿದರೊಳವೆ ಕೂಡಲಸಂಗಮದೇವಾ?

೩೫. ವಚನದ ಹುಸಿ ನುಸುಳೆಂತು ಮಾಬುದೆನ್ನ? ಮನದ ಮರ್ಕಟತನವೆಂತು ಮಾಬುದೆನ್ನ? ಹೃದಯ ಕಲ್ಮಷವೆಂತು ಮಾಬುದೆನ್ನ? ಕಾಯವಿಕಾರಕ್ಕೆ ತರಸಲುವೋದೆನು. ಎನಗಿದು ವಿಧಿಯೇ ಕೂಡಲಸಂಗಮದೇವಾ ?

೩೬. ಅಂಗದ ನೋಟವು ಸಿಂಗರದ ಗಾತ್ರವು ಹಿಂಗದು ಮನದಲ್ಲಿ. ನಾನಾ ವಿಕಾರದಿ ಬೆಂದಿಹೆನೆಂದರಿಯಲಿಕ್ಕಿಲ್ಲಾಗಿ, ಸಂದೇಹ ಬಿಡದು. ಮುಂದುಗಾಣದು ಲೋಕ. ಬೆಂದ ಮಾಯಕ್ಕಂಜಿ ನಿಮ್ಮ ಮರೆವೊಕ್ಕೆ ಕೂಡಲಸಂಗಮದೇವಾ.

೩೭. ವಿಕಳನಾದೆನು ಪಂಚೇಂದ್ರಿಯ ಧಾತುವಿಂದ. ಮತಿಗೆಟ್ಟೆನು ಮನದ ವಿಕಾರದಿಂದ. ಧೃತಿಗೆಟ್ಟೆನು ಕಾಯವಿಕಾರದಿಂದ. ಶರಣು ವೊಕ್ಕೆನು ಕೂಡಲಸಂಗಮದೇವಯ್ಯ.

೩೮. ಆನು ಒಬ್ಬನು, ಸುಡುವರೈವರು. ಮೇಲೆ ಕಿಚ್ಚು ಘನ. ನಿಲ್ಲಲು ಬಾರದು. ಕಾಡ ಬಸವನ ಹುಲಿ ಕೊಂಡೊಯ್ಯರೆ, ಆರೈಯ್ಯಲಾಗದೇ ಕೂಡಲಸಂಗಮದೇವಾ?

೩೯. ಮುನಿದೆಯಾದೊಡೆ ಒಮ್ಮೆ ಜರಿದಡೆ ಸಾಲದೆ? ಅಕಟ ಕಟ, ಮದನಂಗೆ ಮಾರುಗುಡುವರೆ? ಹಗೆಗೆ ಮಾರುಗೊಟ್ಟು, ನಿನ್ನವರನೊಪ್ಪಿಸುವರೆ ಕೂಡಲಸಂಗಮದೇವ?

೪೦. ಆಸೆಯಾಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ. ಅದೆಂತೆಂದೊಡೆ, ನಿಮ್ಮತ್ತಲೆನ್ನ ಬರಲೀಯವು. ಇದು ಕಾರಣ ಇವೆಲ್ಲವ ಕಳೆದು, ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವಾ

೪೧. ಎಂತು ಶಿವಭಕ್ತಿಯ ನಾನುಪವಿಸುವೆನಯ್ಯ! ಎಂತು ಶಿವಾಚಾರವೆನಗೆ ಸಾಧ್ಯವಪ್ಪುದಯ್ಯ! ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳಿಂದ ಕಟ್ಟುವಡೆದೆನು. ಹಸಿವು, ತೃಷೆ ವ್ಯಸನಗಳಿಂದ ಕುದಿವುತಿದ್ದೇನೆ. ಪಂಚೇಂದ್ರಿಯ ಸಪ್ತಧಾತು ಹಂಚು ಹುರಿ ಮಾಡಿ ಕಾಡಿಹವಯ್ಯ. ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯ. ಕೂಡಲಸಂಗನುದೇವಾ ನಾನೇನೆನೇನೆನಯ್ಯ?

೪೨. ಕಾಯ ವಿಕಾರ ಕಾಡಿಹುದಯ್ಯಾ! ಮನ ವಿಕಾರ ಕೂಡಿಹುದಯ್ಯಾ! ಇಂದ್ರಿಯ ವಿಕಾರ ಸುಳಿವುದಯ್ಯಾ! ಸುಳಿವಿನೊಳಗೆ ಸುಳಿವುತ್ತಲಿದ್ದೇನೆ. ಸಿಲುಕಿಸದಿರಯ್ಯಾ. ಅನ್ಯ ಚಿತ್ತ ವಿರಿಸದಿರಯ್ಯಾ. ನಿಮ್ಮ ಚಿತ್ತ ವಿರಿಸಯ್ಯ. ಅನುಪಮ ಸುಖ ಸಾರಾಯ ಶರಣರಲ್ಲಿ ಕೂಡಲಸಂಗಮದೇವಯ್ಯ ಇವನೆ ಬೇಡುವೆನಯ್ಯಾ.

೪೩. ಬಂದ ಯೋನಿಯನರಿಮ ಸಲಹೆನ್ನ ತಂದೆ. ಬೆಂದ ಮನವೆನ್ನ ಗತಿಗೆಡಿಸಿ ಕಾಡಿತ್ತು. ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು. ಏನ್ನ ತಂದೆ ಕೂಡಲಸಂಗಮದೇವ ಮಾಣಿಸು ನಿಮ್ಮ ಧರ್ಮ.

೪೪. ಬೆಳೆ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ, ತಿಳಿಯಲೀಯ್ಯದು, ಎಚ್ಚರಲೀಯ್ಯದು. ಎನ್ನವಗುಣವೆಂಬ ಕಸವ ಕಿತ್ತು, ಸಲಹಯ್ಯ ಲಿಂಗತಂದೆ. ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ.

೪೫. ವಿಷಯವೆಂಬ ಹಸರನೆನ್ನ ಮುಂದೆ ತಂದು ಪಸರಿಸಿದೆಯಯ್ಯ! ಪಶುವೇನ ಬಲ್ಲದು, ಹಸುರೆಂದೆಳಸುವುದು. ವಿಷಯ ರಹಿತನ ಮಾಡಿ, ಭಕ್ತಿರಸವ ದಣಿಯು ಸೇಯಿಸಿ, ಸುಬುದ್ಧಿ ಎಂಬ ಉದಕವನೆರೆದು, ನೋಡಿ ಸಲಹಯ್ಯ, ಕೂಡಲಸಂಗಮದೇವಾ.

೪೬. ಕೆಸರಲ್ಲಿ ಬಿದ್ದ ಪಶುವಿನಂತೆ, ಆನು ದೆಸೆದೆಸೆಗೆ ಬಾಯ ಬಿಡುತಿವ್ವೆನಯ್ಯಾ! ಅಯ್ಯಾ ಆರೈವರಿಲ್ಲ, ಅಕಟಕಟಾ, ಪಶುವೆಂದೆನ್ನ ಕೂಡಲಸಂಗಮದೇವ ಕೊಂಬ ಪಿಡಿದತ್ತುವನ್ನಕ್ಕ.

೪೭. ಬಡ ಪಶು ಪಂಕದಲ್ಲಿ ಬಿದ್ದರೆ, ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೇ? ಶಿವ, ಶಿವಾ! ಹೋದೆಹೆ ಹೋದೆಹೆನಯ್ಯಾ! ನಿಮ್ಮ ಮನದತ್ತಲೆನ್ನ ತೆಗೆಯಯ್ಯ. ಪಶುವಾನು, ಪಶುಪತಿ ನೀನು. ತುಡುಗುಣಿ ಎಂದು ಎನ್ನ ಹಿಡಿದು ಒಡಿಯದ ಮುನ್ನ, ಒಡೆಯ, ನಿಮ್ಮ ಬಯ್ಯದಂತೆ ಮಾಡು, ಕೂಡಲಸಂಗಮದೇವಾ.

೪೮. ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ, ಅಂಬಾ, ಅಂಬಾ, ಎಂದು ಕರೆವುತ್ತಲಿದ್ದೇನೆ. ಅಂಬಾ, ಅಂಬಾ ಎಂದು ಒರಲುತ್ತಲಿದ್ದೇನೆ. ಕೂಡಲಸಂಗಮದೇವಾ, ಬಾಳು ಬಾಳೆಂಬನ್ನಕ್ಕರ.

೪೯. ಸಮುದ್ರದೊಳಗಣ ಸಿಂಪಿನಂತೆ, ಬಾಯ ಬಿಡುತ್ತಿದ್ದೆನಯ್ಯಾ. ನೀವಲ್ಲದೆ ಮತ್ತಾರೂ ಎನ್ನನರಿವರಿಲ್ಲ ನೋಡಯ್ಯ. ಕೂಡಲಸಂಗಮದೇವಾ, ನೀನಲ್ಲದೊಳಕೊಂಬುವರಿಲ್ಲ ನೋಡಯ್ಯ.

೫೦. ಅಯ್ಯಾ! ಅಯ್ಯಾ! ಎಂದು ಕರೆವುತ್ತಲಿದ್ದೇನೆ. ಅಯ್ಯಾ. ಅಯ್ಯಾ ಎಂದು ಒರಲುತ್ತಲಿದ್ದೇನೆ. ಓ ಎನ್ನಲಾಗದೆ ಅಯ್ಯಾ. ಅವಾಗಳೂ ನಿಮ್ಮುವ ಕರೆವುತ್ತಲಿದ್ದೇನೆ. ಓ ಎನ್ನದೆ ಮೌನವೇ ಕೂಡಲಸಂಗಮದೇವಾ?

೫೧. ನೀವು ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯದೆ, ಎನ್ನ ವಶವೇ ಅಯ್ಯ? ನೀವಿರಿಸಿದಲ್ಲಿ ಇರದೆ, ಎನ್ನ ವಶವೇ ಅಯ್ಯಾ? ಅಕಟಕಟಾ, ಎನ್ನವನೆನ್ನವನೆನ್ನಯ್ಯಾ ಕೂಡಲಸಂಗಮದೇವಯ್ಯ.

೫೨. ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲುಹುತ್ತ, ಶಿವ ಶಿವಾ ಎಂದೋದಿಸಯ್ಯ. ಭಕ್ತಿ ಎಂಬ ಪಂಜರದೊಳಗಿಕ್ಕಿ ಸಲುಹು ಕೂಡಲಸಂಗಮದೇವಾ.

೫೩. ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ. ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ. ಮತ್ತೊಂದ ಕೇಳದಂತೆ, ಕಿವುಡನ ಮಾಡಯ್ಯಾ ತಂದೆ. ನಿಮ್ಮ ಶರಣರ ಪಾದವ ಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ.

೫೪. ಎನ್ನ ವಾಮ ಕ್ಷೇಮ ನಿಮ್ಮದಯ್ಯಾ! ಎನ್ನ ಹಾನಿ ವೃದ್ಧಿ ನಿಮ್ಮದಯ್ಯಾ! ಎನ್ನ ಮಾನಾಪಮಾನವು ನಿಮ್ಮದಯ್ಯಾ! ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವಾ?

೫೫. ಸಟೆ ಇಲ್ಲದಂತೆ, ಪ್ರಪಂಚವಿಲ್ಲದಂತೆ, ವೈಶಿಕವಿಲ್ಲದಂತೆ, ನಡಿಸಯ್ಯಾ, ಲಿಂಗ ತಂದೆ. ಒಂದು ನಿಮಿಷವಾದರೆಯು, ನಿಮ್ಮ ಶರ ಣರ ಸಂಗದಲ್ಲಿರಿಸಯ್ಯಾ ಬೇರೆ ಮತ್ತೆ ಅನ್ಯವ ತೋರದಿರಯ್ಯಾ. ಹೊಲಬುಗೆಟ್ಟಿನಯ್ಯಾ ಕೂಡಲಸಂಗನಮದೇವಾ.

೫೬. ಇವನಾರವನಿವನಾರವ ಇವನಾರವನೆಂದೆನಿಸದಿರಯ್ಯಾ! ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ! ಕೂಡಲಸಂಗಮದೇವ ನಿಮ್ಮ ಮನೆಯ ಮಗನೆಂದೆನಿಸಯ್ಯಾ.

೫೭. ಹುಟ್ಟಿಂದು ಲೋಕದಲ್ಲಿ ಹುಟ್ಟಿಸಿ ಇಳಿಯ ಬಿಟ್ಟರೆ, ನಿಮ್ಮ ನಗುವರಯ್ಯಾ. ಶಿವಬಟ್ಟಿಯಲೆನ್ನನು ಇರಿಸಯ್ಯಾ. ಹರನೇ, ಹೊಲಬು ಗೆಟ್ಟಿನು. ಬಟ್ಟೆಯ ತೋರಯ್ಯ ಹುಯ್ಯಲಿಟ್ಟಿನು. ಗಣಂಗಳು ಕೇಳಿ ರಯ್ಯ. ಕೂಡಲಸಂಗಮದೇವಯ್ಯ ಎನ್ನ ಕಾಡಿಹನಯ್ಯ.

೫೮. ಅಕಟಕಟ, ಶಿವ ನಿನಗಿನಿತು ಕರುಣವಿಲ್ಲ. ಅಕಟಕಟ, ಶಿವ ನಿನಗಿನಿತು ಕೃಪೆ ಇಲ್ಲ. ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ ಪರಲೋಕ ದೂರನೆ? ಏಕೆ ಹುಟ್ಟಿಸಿದೆ ಕೂಡಲಸಂಗಮದೇವ ಕೇಳಯ್ಯಾ, ಎನಗಾಗಿ ಮತ್ತೊಂದು ತರುಮರಾದಿಗಳಿಲ್ಲವೇ?

೫೯. ನರ ಕೂರಂಬಿನಲ್ಲಿ ಎಚ್ಚವಂಗೊಲಿದೆಯಯ್ಯ. ಅರಳಂಬಿನ ಪ್ಲೆಚ್ಚ ಕಾಮನನುರುಹಿದೆ. ಇರುಳು ಹಗಲೆನ್ನದೆ ಪ್ರಾಣಘಾತಕವ ಮಾಡಿದ ಬೇಡನ ಕೈಲಾಸಕೊಯ್ದೆಯಯ್ಯಾ. ಎನ್ನನೇತಕ್ಕೊಲ್ಲೆ ಕೂಡ ಲಸಂಗಮದೇವಾ?

೬೦. ನೀನೊಲಿದರೆ, ಕೊರಡು ಕೊನರುವದಯ್ಯಾ! ನೀನೊಲಿ ದರೆ ಬರಡು ಹಯನಹುದಯ್ಯಾ! ನೀನೊಲಿದರೆ ವಿಷವೆಲ್ಲ ಅಮೃತವ

ಹುದಯ್ಯ! ನೀನೊಲಿದರೆ, ಸಕಲ ಪಡಿ ಪದಾರ್ಥ ಇದಿರಲ್ಲಿಪ್ಪುವು, ಕೂಡಲಸಂಗಮದೇವಾ.

೬೧. ಮೇರು ಗುಣವನರಸುವುದೇ ಕಾಗೆಯಲ್ಲಿ? ಪರುಷ ಗುಣವನರಸುವುದೆ ಕಬ್ಬುನದಲ್ಲಿ? ಸಾಧು ಗುಣವನರಸುವುದೇ ಅವಗುಣಿಯಲ್ಲಿ? ಚಂದನ ಗುಣವನಂಸುವದೆ ತರುಗಳಲ್ಲಿ? ಸರ್ವ ಗುಣ ಸಂಪನ್ನ ಲಿಂಗವೇ, ನೀನೆನ್ನಲ್ಲಿ ಅವಗುಣವನರಸುವುದೇ ಕೂಡಲಸಂಗಮದೇವಾ?

೬೨. ಭವಭವದಲ್ಲಿ ಎನ್ನ ಮನವು ನೀವಲ್ಲದೆ, ಭವಭವದಲೆನ್ನ ಮನವು ಸಿಲುಕದೆ ಭವಂಟಣದೊಳು ತುಂಬದೆ ಕೆಡಹದೆ, ಭವರೋಗ ವೈದ್ಯ ನೀನು, ಭವ ರಹಿತ ನೀನು, ಅವಧಾರು ಕರುಣಿಸುವುದು ಕೂಡಲಸಂಗಮದೇವಾ.

೬೩. ಆಶೆ ಎಂಬ ಪಾಶದಲ್ಲಿ ಭವ ಬಂಧನವಾಗಿರ್ದಿನಯ್ಯಾ! ಸಕೃತು ನಿಮ್ಮ ನೆನೆಯಲು, ಎನಗೆ ತೆರಹಿಲ್ಲವಯ್ಯ! ಕರುಣಾಕರ ಅಭಯಾಕರ ವರದಾನಿ ಕರುಣಿಸಯ್ಯ! ಸಂಸಾರ ಬಂಧನವನು ಮಾಣಿಸಿ ಎನಗೆ ಕೃಪೆ ಮಾಡಿ, ನಿಮ್ಮ ಶ್ರೀಪಾದ ಪದ್ಮದಲ್ಲಿ ಭ್ರಮರನಾಗಿರಿಸು, ಭಕ್ತಜನ ಮನೋವಲ್ಲಭ ಕೂಡಲಸಂಗಮದೇವಾ.

ಗುರುಕರುಣಸ್ಥಲ.

೧. ಮಡಕೆಯ ಮಾಡುವರೆ ಮಣ್ಣೇ ಮೊದಲು. ತೊಡಿಗೆಯ ಮಾಡುವರೆ, ಹೊನ್ನೇ ಮೊದಲು. ಶಿವಪಥವನರಿವಡೆ ಗುರುಪಥವೇ ಮೊದಲು. ಕೂಡಲಸಂಗಮದೇವರನರಿವಡೆ, ಶರಣರ ಸಂಗವೇ ಮೊದಲು.

೨. ನೋಡಿ, ನೋಡಿ, ಮಾಡುವ ನೇಮ ಸಲ್ಲವು ಸಲ್ಲವು. ತನು ಉದ್ದೇಶ ಮನ ಉದ್ದೇಶವಾಗಿ ಮಾತುವ ನೇಮ ಸಲ್ಲವು ಸಲ್ಲವು. ಗುರು ಪಥವ ಮೀರಿ ಮಾಡುವ ನೇಮ ಸಲ್ಲವು, ಸಲ್ಲವು. ಕೂಡಲಸಂಗಮದೇವ, ಇವು ನಿಮ್ಮ ನಿಜದೊಳಗೆ ನಿಲ್ಲವು, ನಿಲ್ಲವು.

೩. ಗುರುವಚನವಲ್ಲದೆ ಲಿಂಗವೆಂದೆನಿಸದು. ಗುರುವಚನವಲ್ಲದೆ ನಿತ್ಯವೆಂದೆನಿಸದು. ಗುರುವಚನವಲ್ಲದೆ ನೇಮವೆಂದೆನಿಸದು. ತಲೆ ಇಲ್ಲದಟ್ಟೆಗೆ ಪಟ್ಟವ ಕಟ್ಟುವ ಉಭಯಭ್ರಷ್ಟರ ಮೆಚ್ಚುವನೇ ನಮ್ಮ ಕೂಡಲಸಂಗಮದೇವಾ?

ವಿಭೂತಿಯಸ್ಥಲ.

೧ ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ. ಕಪಿಸೋರೆಯ ಕಾಯ ತಂದು, ವಿಭೂತಿಯ ತುಂಬಿದರೆ ಸಿಹಿಯಾಗದೇ ಮೂರು ದಿವಸಕ್ಕಯ್ಯ? ಹಲವು ಕಾಲ ಕೊಂದ ಸೂನೆಗಾರನ ಕತ್ತಿಯಾದ ರೇನು? ಪರುಷ ಮುಟ್ಟಲಿಕ್ಕೆ ಹೊನ್ನಾಗದೇ ಅಯ್ಯಾ? ಲಲಾಟದಲ್ಲಿ ವಿಭೂತಿಯ ಬರೆಯಲಿಕ್ಕೆ, ಪಾಪ ಪಲ್ಲಟವಾಗದೆ ಕೂಡಲಸಂಗಮದೇವಾ?

೨. ನೀರಿಂಗೆ ನೈದಿಲೆ ಶೃಂಗಾರ, ಸಮುದ್ರಕ್ಕೆ ತೆರೆಯೇ ಶೃಂಗಾರ. ನಾರಿಗೆ ಗುಣವೇ ಶೃಂಗಾರ. ಗಗನಕ್ಕೆ ಚಂದ್ರಮನೇ ಶೃಂಗಾರ. ನಮ್ಮ ಕೂಡಲಂಗನ ಶರಣರಿಗೆ ನೊಸಲ ವಿಭೂತಿಯೇ ಶೃಂಗಾರ.

ಪಂಚಾಕ್ಷರಿಯ ಸ್ಥಲ.

೧. ಕರಿಯಂಜುವುದು ಅಂಕುಶಕಯ್ಯ. ಗಿರಿಯಂಜುವುದು ಕುಲಿಶಕ್ಕಯ್ಯಾ. ತಮಂಧವಂಜುವದು ಜ್ಯೋತಿಗಯ್ಯ. ಕಾನನವಂಜುವುದು ಬೇಗಗಯ್ಯಾ. ಪಂಚಮಹಾ ಪಾತಕವಂಜುವದು ಕೂಡಲಸಂಗನ ನಾಮ ಕ್ಕಯ್ಯಾ.

೨. ಜಪ ತಪ ನಿತ್ಯ ನೇಮವೆನಗುಪದೇಶ. ನಿಮ್ಮ ನಾಮವೆನಗೆ ಮಂತ್ರ. ಶಿವನ ನಾಮವೆನಗೆ ತಂತ್ರ. ಕೂಡಲಸಂಗಮದೇವಯ್ಯ ನಿಮ್ಮ ನಾಮ ಕಾಮಧೇನು ಎನಗೆ.

೩. ಆಕಟಕಟಾ! ಬೆಡಗು ಬಿನ್ನಾಣವೆಂಬುದೇನೋ? ಓಂ ನಮಃ ಶಿವಾಯ ವೆಂಬುದೇ ಮಂತ್ರ, ಓಂ ನಮಃ ಶಿವಾಯ ವೆಂಬುದೇ ತಂತ್ರ, ನಮ್ಮ ಕೂಡಲಸಂಗಮದೇವರ ನೆನೆವುದೇ ಮಂತ್ರ.

೪. ವಶ್ಯವ ಬಲ್ಲೆವೆಂದೆಂಬಿರಯ್ಯಾ. ಬುದ್ಧಿಯನರಿಯದ ಮನುಜರು ಕೇಳಿರಯ್ಯ. ವಶ್ಯವಾವುದೆಂದರಿಯದೆ, ಮರುಳುಗೊಂಬಿರಿಲೆ ನಾವಿಲ ಮನುಜರಿರಾ. ಓಂ ನಮಃ ಶಿವಾಯ ಎಂಬುದೇ ಮಂತ್ರ, ಸರ್ವಜನ ವಶ್ಯ, ಕೂಡಲಸಂಗಮದೇವಾ.

೫. ಭವಬಂಧನ ದುರಿತಂಗಳ ಗೆಲುವಡೆ, ಓಂ ನಮಶ್ಶಿವಾಯ ಶರಣೆಂದಡೆ ಸಾಲದೆ? ಹರಹರ ಶಂಕರ, ಶಿವಶಿವ ಶಂಕರ, ಜಯಜಯ

ಶಂಕರ, ಶರಣೆನ್ನುತಿದ್ದೇನೆ. ಎನ್ನ ಪಾತಕ ಪರಿಹರ ಕೂಡಲಸಂಗಮ ದೇವ ಶರಣೆನ್ನುತಿದ್ದೇನೆ.

೬. ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯಾ. "ಓಂ ನಮಃ ಶಿವಾಯ" "ಓಂ ನಮಃ ಶಿವಾಯ" ಎನುತಿದ್ದೆನಯ್ಯಾ. ಎನಗಿದೇ ಮಂತ್ರ, ಎನಗಿದೇ ತಂತ್ರ, ಎನಗಿದೇ ಜಪ. ಕೂಡಲಸಂಗಮದೇವ, ನೀನೆ ಬಲ್ಲೆ, ಎಲೇ ಲಿಂಗವೇ.

೭. ಓಂ ನಮಃ ಶಿವಾಯ ಎಂಬ ಮಂತ್ರವ ವೀರಲಮ್ಮದೆ, ನಿಂದುವು ವೇದ. ಓಂ ನಮಃ ಶಿವಾಯ ಎಂಬ ಮಂತ್ರವ ವಿಸಾರಲಮ್ಮದೆ, ನಿಂದುವು ಶಾಸ್ತ್ರ. ಓಂ ನಮಃ ಶಿವಾಯ ಎಂಬ ಮಂತ್ರವ ವಿಸಾರಲಮ್ಮದೆ, ನಿಂದುವು ತರ್ಕ. ಭಯಂಕರ ಭ್ರಮೆಗೊಂಡಿತ್ತು ಮಂತ್ರ ತಂತ್ರ. ಶಿವ ನಂತುವನರಿಯದೆ ಚಿಂತಿಸುತ್ತಿದ್ದಿತ್ತು ಲೋಕ. ಕೂಡಲಸಂಗಮದೇವ, ಶ್ವಪಚ ಮೆರೆದರೆ, ಜಾತಿಭೇದವ ಮಾಡಲಮ್ಮವು.

೮. ಬಿಳಿಯ ಕರಿಕೆಯ ಕಣಿಗಿಲೆಲೆಯು, ತೊರೆಯ ತಡಿಯ ಮುಳಲ ತಂದು, ಗೌರಿಯ ನೋನುವ ಬನ್ನಿರೆ. ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು, ಅನುಸವುದಾನಿ ಕೂಡಲಸಂಗಮದೇವ ಗಂಡನಾಗಬೇಕೆಂದು.

೯. ಎಮ್ಮವರು ಬೆಸಗೊಂಡರೆ, ಶುಭ ಲಗ್ನವೆನ್ನಿರಯ್ಯ. ರಾಶಿ ಕೂಟ ರುಣ ಸಂಬಂಧ ಉಂಟೆಂದು ಹೇಳಿರಯ್ಯ. ಚಂದ್ರ ಬಲ, ತಾರಾ ಬಲ ಉಂಟೆಂದು ಹೇಳಿರಯ್ಯಾ. ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ. ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ.

ಲಿಂಗಧಾರಣ ಸ್ಥಲ.

೧. ಪಾತಕ ಕೋಟಿಯನೊರಿಸಲು, ಸಾಲದೆ ಒಂದು ಶಿವನ ನಾಮ? ಸಾಲದೆ ಒಂದು ಹರನ ನಾಮ? ಕೂಡಲಸಂಗನುದೇವ ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ.

೨. ಲಿಂಗದ ಉಂಡಿಗೆಯ ಪಶುವಾನಯ್ಯ. ವೇಷಧಾರಿಯಾನು ಉದರ ಪೋಷಕ ನಾನಯ್ಯ. ಕೂಡಲಸಂಗನ ಶರಣರ ಧರ್ಮದ ಕವಿಲೆಯಾನು.

೩. ನಮಃ ಶಿವಾಯ, ನಮಃ ಶಿವಾಯ, ನಮಃ ಶಿವಾಯ ಶರಣೆಂದಿತ್ತು. ಲಲಾಟ ಲಿಖಿತ ಬರೆದ ಬಳಿಕ ಪಲ್ಲಟವ ಮಾಡಬಾಂದು. ಎನ್ನ ಉರದಲುಂಡಿಗೆ ಶಿರದಲಕ್ಷರ ಕೂಡಲಸಂಗಯ್ಯ ಶರಣೆಂದಿತ್ತು.

೪. ಅಡ್ಡ ವಿಭೂತಿ ಇಲ್ಲದವರ ಮುಖ ಹೊಲ್ಲ. ನೋಡಲಾಗದು. ಲಿಂಗ ದೇವನಿಲ್ಲದ ಠಾವು ನರವಿಂಧ್ಯ. ಹೋಗಲಾಗದು. ದೇವ ಭಕ್ತನಿಲ್ಲದೂರು ಸಿನೆ ಹಾಳು ಕೂಡಲಸಂಗಮದೇವ.

೫. ಅಡ್ಡ ತ್ರಿಪುಂಡ್ರ ಮಣಿ ಮಕುಟದ ವೇಷದ ಶರಣರ ಕಂಡಡೆ ನಂಬುವುದೆನ್ನ ಮನವು. ನಚ್ಚುವುದೆನ್ನ ಮನವು. ಸಂದೇಹವಿಲ್ಲದೆ ಇವಿಲ್ಲದವರ ಕಂಡಡೆ ನಂಬೆ ಕೂಡಲಸಂಗಮದೇವಾ.

ತಾಮಸ ನಿರಸನ ಸ್ಥಲ.

೧. ಆರಾಧ್ಯ ಪ್ರಾಣಲಿಂಗವೆಂದರಿದು, ಪೂರ್ವ ಗುಣವಳಿದು, ಪುನರ್ಜಾತನಾದ ಬಳಿಕ, ಸಂಸಾರ ಬಂಧುಗಳೆನ್ನವರೆಂದರೆ, ನಂಟಭಕ್ತಿ ನಾಯಕ ನರಕ ಇಂತೆಂದುದು ಕೂಡಲಸಂಗನ ವಚನ.

೨. ತಾಳ ಮರದ ಕೆಳಗೆ ಒಂದು ಹಾಲ ಹರಿವೆ ಇದ್ದರೆ, ಅದ ಹಾಲ ಹರಿವೆ ಎನ್ನರು ಸುರೆಯ ಹರಿವೆ ಎಂಬರು. ಈ ಭಾವ ನಿಂದೆಯ ಮಾಣಿಸಾ ಕೂಡಲಸಂಗಮದೇವಾ.

೩. ಸುಪಥ ಮಂತ್ರದುಪದೇಶವ ಕಲಿತು, ಯುಕ್ತಿಗೆಟ್ಟು ನಡೆವಿರಯ್ಯಾ. ತತ್ವಮಸಿ ಎಂಬುದನರಿದು ಕತ್ತಲೆದೊಡಹಿರಯ್ಯಾ. ವೇದ ವಿಪ್ರ ವಿಚಾರಿಸಿ ನೋಡಲು, ಉಪದೇಶ ಪರೀಕ್ಷೆ ನಾಯಕ ನರಕವೆಂದುದು ಕೂಡಲಸಂಗನ ವಚನದ ಸೂಚನೆ.

೪. ಕುಂಬಳದ ಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ ಕೊಳೆವುದಲ್ಲದೆ, ಬಲುಹಾಗ ಬಲ್ಲುದೆ? ಅಳಿಮನವವಂಗೆ ಶಿವದೀಕ್ಷೆಯ ಕೊಟ್ಟರೆ, ಭಕ್ತಿ ಎಂತಹುದೋ? ಮುನ್ನಿನಂತೆ. ಕೂಡಲಸಂಗಯ್ಯ ಮನಹೀನನ ವಿಶಾಸಲ ಕಾಯ್ದಿರಿಸಿದಂತೆ.

೫. ಸಗಣಿಯ ಬೆನಕಂಗೆ ಸಂಪಿಗೆಯರಳಿನಲ್ಲಿ ಪೂಜಿಸಿದರೆ, ರಂಜಿಸುವುದೆ ಅದರ ಗಂಜಳ ಬಿಡದಣ. ಮಣ ಪುಥ ಳೆಯ ಮಾಣದೆ

ಜಲದಲ್ಲಿ ತೊಳೆದರೆ, ನಿಚ್ಚ ಕೆಸರಲ್ಲದೆ, ಆದರಚ್ಚುಗ ಬಿಡದಣ್ಣ. ಲೋಕದ ಮಾನವಂಗೆ ಶಿವದೀಕ್ಷೆಯು ಕೊಟ್ಟರೆ, ಕೆಟ್ಟವನೇಕೆ ಸದ್ಭಕ್ತನ ಹನು ಕೂಡಲಸಂಗಮದೇವಾ?

೬. ಕಬ್ಬುನದ ಕೋಡಗವ ಪರುಷ ಮುಟ್ಟಲು, ಹೊನ್ನಾದರೇನು, ಮತ್ತೇನಾದರೇನು, ತನ್ನ ಮುನ್ನಿನ ರೂಹ ಬಿಡದನ್ನಕ್ಕ ಕೂಡಲಸಂಗಮದೇವ ನಿಮ್ಮ ನಂಬಿಯೂ ನಂಬದ ಡಂಭಕರಿಗಯ್ಯಾ?

೭. ತನುವಿನಲೊಂದಿಟ್ಟು ಮನದಲಿರಡಿಟ್ಟಡೆ, ಬಲ್ಲನೊಲ್ಲನಯ್ಯ ಲಿಂಗವು. ಬಲ್ಲನೊಲ್ಲನಯ್ಯಾ. ಪರಚಿಂತೆಯನೊಲ್ಲ ಕೂಡಲಸಂಗಮದೇವಾ.

೮. ಒಳಗೆ ಕಟ್ಟಿಲ, ಹೊರಗೆ ವಿನಯವಾಗಿ, ಭಕ್ತರೆನಿಸಿಕೊಂಬವರ ಬಲ್ಲನೊಲ್ಲನಯ್ಯಾ ಲಿಂಗವು. ಅವರು ಪಥಕ್ಕೆ ಸಲ್ಲರು, ಸಲ್ಲರಯ್ಯ. ಒಳಹೊರಗೊಂದಾಗದವರಿಗೆ, ಅಳಿಯಾಸೆದೋರಿ, ಬೀಸಾಡುವನವರ ಕೂಡಲಸಂಗಮದೇವ.

೯. ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೊ? ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೋ? ತನುವಿನಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವಾ.

೧೦. ಓಡೆತ್ತ ಬಲ್ಲುದು ಆವಲಕ್ಕಿಯ ಸವಿಯ? ಕೋಡಗವೆತ್ತ ಬಲ್ಲುದು ಸೆಳೆಮಂಚದ ಸುಖವ? ಕಾಗೆ ನಂದನವನದೊಳಗಿದ್ದರೇನೋ? ಕೋಗಿಲೆಯಾಗಬಲ್ಲುದೆ ಹೇಳಾ? ಕೊಳನ ತಡೆಯಲೊಂದು ಬಕ ಕುಳಿತಿದ್ದರೇನು? ಕಳಹಂಸನಾಗಬಲ್ಲುದೆ ಕೂಡಲಸಂಗಮದೇವಾ?

೧೧. ಎನಿಸು ಕಾಲ ಕಲ್ಲು ನೀರೊಳಗಿದ್ದರೇನು? ನೆನೆದು ಮೃದುವಾಗಬಲ್ಲುದೆ? ಎನಿಸು ಕಾಲ ನಿಮ್ಮ ಪೂಜಿಸಿ ಏನೆನಯ್ಯಾ, ಮನದಲ್ಲಿ ದೃಢವಿಲ್ಲವನ್ನಕ್ಕ? ನಿಧಾನವ ಕಾಯ್ದಿದ್ದ ಬೆಂತರನಂತೆ, ಅದರ ವಿಧಿ ಎನಗಾಯಿತ್ತು ಕೂಡಲಸಂಗಮದೇವಾ.

೧೨. ಸಂತವಿದ್ದ ಮನೆಗೆ ಕೊಂತವ ತಂದಂತೆ, ಇದನೆಂತು ಸಂತೈಸುವೆನು? ಸಂತೆಯ ಗುಡಿಸಲ ಸೂಳೆಗೆ ಕೊಂತವಳವಡುವುದೆ? ಕೂಡಲಸಂಗಮದೇವರ ಮಹತ್ವ ಆರಿಗೆಯು ಅಳವಡದು.

೧೩. ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡರೆ, ಕೂಸಿಂಗಲ್ಲ, ಬೊಜ್ಜಗಂಗಲ್ಲ. ಕೂಸಿನೊಮ್ಮೆ ಸಂತವಿಸುವಳು, ಬೊಜ್ಜಗನ ನೊಮ್ಮೆ ನೆರೆವಳು. ಧನದಾಸೆ ಬಿಡದು ಕೂಡಲಸಂಗಮದೇವ.

೧೪. ಎರೆದೆಲೆಯಂತೆ ಒಳಗೊಂದು ಹೊರಗೊಂದಾದರೆ, ಮೆಚ್ಚುವನೆ? ಬಾರದ ಭವಂಗಳ ಬರಿಸುವನಲ್ಲದೆ ಮೆಚ್ಚುವನೆ? ಅಘೋರ ನರಕವನುಣಿಸುವನಲ್ಲದೆ ಮೆಚ್ಚುವನೆ? ಉಡುವಿನ ನಾಲಿಗೆಯಂತೆ ಎರಡಾದರೆ, ಕೂಡಲಸಂಗಯ್ಯ ಮೆಚ್ಚುವನೆ?

೧೫. ಭಕ್ತರ ಕಂಡರೆ ಬೋಳಪ್ಪಿರಯ್ಯ! ಸವಣರ ಕಂಡರೆ, ಒತ್ತಲೆಯಪ್ಪಿರಯ್ಯ! ಹಾರುವರ ಕಂಡರೆ, ಹರಿ ನಾಮವೆಂಬಿರಯ್ಯ! ಅವರವರ ಕಂಡರೆ, ಅವರವರಂತೆ. ಸೂಳೆಗೆ ಹುಟ್ಟಿದವರ ತೋರದಿರಯ್ಯ! ಕೂಡಲಸಂಗಮದೇವರ ಸೂಜಿಸಿ ಅನ್ಯದೈವಂಗಳಿಗೆರಗಿ ಭಕ್ತರೆನಿಸಿಕೊಂಬ ಅಜ್ಞಾನಿಗಳನೇನೆಂಬೆನಯ್ಯ?

೧೬. ಗಂಡ ಶಿವಲಿಂಗದೇವರ ಭಕ್ತ. ಹೆಂಡಿತಿ ಮಾರಿ ಮಸಣಿಯ ಭಕ್ತೆ. ಗಂಡ ಕೊಂಬುದು ಪಾದೋದಕ ಪ್ರಸಾದ. ಹೆಂಡಿತಿ ಕೊಂಬುದು ಸುರೆ ಮಾಂಸ. ಭಾಂಡ ಭಾಜನ ಶುದ್ಧಿ ಇಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ, ಕೂಡಲಸಂಗಮದೇವಾ.

೧೭. ಹಾವಡಿಗನು ಮೂಕೊರಿತೆಯು ತನ್ನ ಮಗನ ಮದುವೆಗೆ ಶಕುನವ ನೋಡ ಹೋಹಾಗ, ಇದಿರಿಲೊಬ್ಬ ಮೂಕೊರಿತೆಯ ಹಾವಡಿಗನ ಕಂಡು ಶಕುನ ಹೊಲ್ಲೆಂಬ ಚದುರನ ನೋಡಾ. ತನ್ನ ಸತಿಯು ಮೂಕೊರತೆ, ತನ್ನ ಕೈಯ್ಯಲು ಹಾವು, ತನ್ನ ಭಿನ್ನವನರಿಯದೆ ಅನ್ಯರ ನೆಂಬ ಕಾಣ್ಮಿಯನೇನೆಂಬೆ ಕೂಡಲಸಂಗಮದೇವಾ?

೧೮. ಅಂಗದಿಚ್ಛೆಗೆ ಮದ್ಯಮಾಂಸವ ತಿಂಬರು. ಕಂಗಳಿಚ್ಛೆಗೆ ಪರವಧುವ ನೆರೆವರು. ಲಿಂಗ ಲಾಂಛನ ಧಾರಿಯಾದಲ್ಲಿ ಪಲನೇನು? ಲಿಂಗ ಪಥವ ತಪ್ಪಿ ನಡೆವರು ಜಂಗಮ ಮುಖದಿಂದ ನಿಂದೆಯು ಬಂದರೆ ಕೊಂಡ ಮಾರಿಂಗೆ ಹೋಹುದು ತಪ್ಪದು ಕೂಡಲಸಂಗಮದೇವಾ.

೧೯. ಶಿವಜನ್ಮದಲ್ಲಿ ಹುಟ್ಟಿ ಲಿಂಗೈಕ್ಯರಾಗಿ, ತಮ್ಮಂಗದ ಮೇಲೆ ಲಿಂಗವಿರಲು, ಅನ್ಯರನೆ ಹಾಡಿ, ಅನ್ಯರನೆ ಹೊಗಳಿ, ಅನ್ಯರ ವಚನವ ಕೊಂಡಾಡಲು ಕರ್ಮ ಬಿಡದು ಭವಬಂಧನ ಶ್ವಾನಯೋನಿಯಲ್ಲಿ

ಒಪ್ಪದು ತಪ್ಪದು. ಇದು ಕಾರಣ, ಕೂಡಲಸಂಗಮದೇವ, ನಿಮ್ಮ ನಂಬಿಯೂ ನಂಬದ ಡಂಭಕರಿಗಯ್ಯ ಮಳಲ ಗೋಡೆಯನಿಕ್ಕಿ ನೀರಲ್ಲಿ ತೊಳೆದಂತಾಯಿತ್ತಯ್ಯಾ.

೨೦. ಅರ್ಥರೇಖೆ ಇದ್ದಲ್ಲಿ ಫಲವೇನೋ ಆಯುಷ್ಯರೇಖೆ ಇಲ್ಲದ ನ್ನಕ್ಕ? ಹಂದಿಯ ಕೈಯ್ಯಲ್ಲಿ ಚಂದ್ರಾಯುಧವಿದ್ದು ಫಲವೇನು? ಅಂಧಕನ ಕೈಯ್ಯಲ್ಲಿ ದರ್ಪಣವಿದ್ದು ಫಲವೇನು? ಮರ್ಕಟನ ಕೈಯ್ಯಲ್ಲಿ ಮಾಣಿಕವಿದ್ದು ಫಲವೇನು? ನಮ್ಮ ಕೂಡಲಸಂಗನ ಶರಣರನರಿಯದವರ ಕೈಯ್ಯಲ್ಲಿ ಲಿಂಗವಿದ್ದು ಫಲವೇನು, ಶಿವಸ್ತ್ಥವನರಿಯದನ್ನಕ್ಕರ?

೨೧. ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ, ಲಿಂಗದ ಮೇಲೆ ನಿಷ್ಠೆ ಇಲ್ಲದ ಭಕ್ತ ಇದ್ದರೇನೊ ಶಿವಶಿವಾ? ಹೋದರೇನೋ ಶಿವಶಿವ? ಕೂಡಲಸಂಗಮದೇವಯ್ಯ, ಊಡದ ಅವಿಂಗೆ ಉಣ್ಣಾದ ಕರುವ ಬಿಟ್ಟಂತೆ.

೨೨. ಅವಳ ವಚನ ಬೆಲ್ಲದಂತೆ. ಹೃದಯದಲ್ಲಿಪ್ಪದು ನಂಜು ಕಂಡಯ್ಯ! ಕಂಗಳಲೊಬ್ಬನ ಕರೆವಳು. ಮನದಲೊಬ್ಬನ ನೆನೆವಳು. ಕೂಡಲಸಂಗಮದೇವ ಕೇಳಯ್ಯ ಮಾನಿಸಗಳ್ಳಿಯ ನಂಬದಿರಯ್ಯ.

೨೩. ಹಾದರಕ್ಕೆ ಹೋದರೆ, ಕಳ್ಳ ದಮ್ಮಯ್ಯಾಯಿತ್ತು. ಹಾಳು ಗೋಡೆಗೆ ಹೋದರೆ ಜೇಳೂರಿತ್ತು. ಆಬ್ಬರವ ಕೇಳಿ ತಳವಾರನುಟ್ಟಿ ಸೀರೆಯ ಸುಲಿದ. ನಾಚಿ ಹೋದರೆ, ಮನೆಯ ಗಂಡ ಬೆನ್ನಬಾರನೆತ್ತಿದ. ಅರಸು ಕೂಡಲಸಂಗಮದೇವ ದಂಡವ ಕೊಂಡ.

೨೪. ಗರಿದೋರಿ ಗಂಡರೆಂಬವರ ಕಾಣೆ. ನೂರಿ ಸೋಂಕಲು, ಮುನಿ ಇಲ್ಲ, ನೋಡಯ್ಯ! ನಂಟುತನವೇನವನ ಬಂಟತನವೇನವನ? ಹುಲ್ಲು ಗಿಚ್ಚು ಹೊಲೆಯನ ಮೇಳಾಪ. ಅಲ್ಲಿ ಹುರುಳಿಲ್ಲ, ಕೂಡಲಸಂಗಮದೇವಾ.

೨೫. ಆಳವುತ್ತಳವುತ್ತ ಬಳಲುವರಲ್ಲದೆ, ಕೊಳಗ ಬಳಲುವದೆ? ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವದೆ? ಶ್ರಮವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವದೆ? ನಿಜವ ನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವದೆ? ಕೂಡಲಸಂಗಮದೇವ ಅರಸರಿಯದ ಬಿಟ್ಟಯೋ.

ಭಕ್ತಜ್ಞಾನಿ.

೧. ಒಲೆಯ ಬೂದಿಯ ಬರೆಯಲು ಬೇಡ. ಒಲಿದಂತೆ ಹೊಸಿ ಕೊಂಡಿಸ್ಪುದು ಹುಸಿ. ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ? ಒಂದ ನಾಡಹೋಗಿ ಒಂಬತ್ತನಾಡುವ ಡಂಭಕರ ನೆಚ್ಚನು ಕೂಡಲಸಂಗಮದೇವ.

೨. ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ, ಹರದ ಕುಳ್ಳಿರ್ದ ನವ್ಮ ಮಹಾದೇವಿಸೆಟ್ಟಿ. ಒವ್ಮನವಾದಡೆ, ಒಡನೆ ನುಡಿವನು. ಇವ್ಮನವಾದಡ್ಡೆ ನುಡಿಯನು. ಕಾಣಿಯ ಸೋಲ. ಅರ್ಧಗಾಣಿಯ ಗೆಲ್ಲ. ಜಾಣ ನೋಡವ್ವಾ, ನವ್ಮ ಕೂಡಲಸಂಗಮದೇವಾ.

೩. ನಂಬರು, ನೆಚ್ಚರು, ಬರಿದೆ ಕರೆವರು, ನಂಬಲರಿಯದೆ ಲೋಕದ ಮನುಜರು. ನಂಬಿ ಕರೆದಡೆ ಓ ಎನ್ನನೆ ಶಿವನು? ನಂಬದೆ ನೆಚ್ಚದೆ, ಬರಿದೆ ಕರೆವರ ಕೊಂಬೆ ಮೆಟ್ಟಿ ಕೂಗೆಂದ ಕೂಡಲಸಂಗಮದೇವಾ.

೪. ಹುತ್ತವ ಬಡಿದಡೆ, ಹಾವು ಸಾಯಬಲ್ಲುದೆ ಅಯ್ಯ? ಅಘೋರ ತಪವ ಮಾಡಿದಡೇನು? ಅಂತರಂಗ ಆತ್ಮಶುದ್ಧವಿಲ್ಲದವರನೆಂತು ನಂಬುವನಯ್ಯ ಕೂಡಲಸಂಗಮದೇವಾ?

೫. ಕಾಮವೇಕೊ ಲಿಂಗಪ್ರೇಮಿ ಎನಿಸುವಂಗೆ? ಕ್ರೋಧವೇಕೊ ಶರಣವೇದ್ಯನೆನಿಸುವಂಗೆ? ಲೋಭವೇಕೊ ಭಕ್ತಿಯ ಲಾಭವ ಬಯಸುವಂಗೆ? ಮೋಹನೇಕೊ ಪ್ರಸಾದ ವೇದ್ಯನೆನಿಸುವಂಗೆ? ಮದ ಮತ್ಸರವುಳ್ಳವಂಗೆ ಹೃದಯ ಶುದ್ಧವೆಲ್ಲಿಯದೊ? ಹದುಳಿಗರಾದವರಲ್ಲಿಪ್ಪ ಕೂಡಲಸಂಗಮದೇವಾ.

೬. ಸಾರ ಸಜ್ಜನರ ಸಂಗವ ಮಾಡುವದು. ದೂರ ದುರ್ಜನರ ಸಂಗ ಬೇಡವಯ್ಯ. ಅವ ಹಾವಾದಡೇನು, ವಿಷ ಒಂದೆ. ಅಂತವರ ಸಂಗ ಬೇಡವಯ್ಯ. ಅಂತರಂಗದ ಶುದ್ಧವಿಲ್ಲದವರ ಸಂಗ ಸಿಂಗಿಕಾಳ ಕೂಟ ವಿಷವು, ಕೂಡಲಸಂಗಮದೇವಾ.

೭. ಹಸಿದು ಎಕ್ಕೆಯ ಕಾಯ ಮೆಲಬಹುದೆ? ನೀರಡಿಸಿ ವಿಷವ ಕುಡಿಯಬಹುದೆ? ಸುಣ್ಣ ತುಯ್ಯಲ ಬಣ್ಣ ಒಂದೆಂದರೆ ನಂಟುತನಕ್ಕೆ

ಋಣಬಹುದೆ? ಲಿಂಗಸಾಕ್ಷಾಯ ಸಜ್ಜನರಲ್ಲದವರ ಕೂಡಲಸಂಗಮ ದೇವರೆಂತೊಲಿವ?

೮. ಯೆಲವದ ಮರ ಹೂತು ಫಲವಾದ ತೆರನಂತೆ, ಸಿರಿಯಾದಥೇನು, ಶಿವಭಕ್ತಿ ಇಲ್ಲದನ್ನಕ್ಕ? ಫಲವಾದರೇನು ಹಾವು ಮೆಕ್ಕೆಯ ಕಾಯಿ? ಕುಲವಿಲ್ಲದ ರೂಹು ಎಲ್ಲಿದ್ದರೇನು? ಬಚ್ಚಲ ನೀರು ತಿಳದಲ್ಲಿ ಫಲವೇನು? ಅವಗುಣಿಗಳನು ಮೆಚ್ಚ ಕೂಡಲಸಂಗಮದೇವಾ.

೯. ಬಚ್ಚಲ ನೀರು ತಿಳಿದಿದ್ದರೇನು? ಸಲ್ಲದ ಹೊನ್ನು ಮತ್ತೆಲ್ಲಿದ್ದರೇನು? ಆಕಾಶದ ಮಾವಿನ ಫಲವೆಂದರೇನು? ಕೊಯ್ಯಲಿಲ್ಲ, ಮೆಲ್ಲಲಿಲ್ಲ. ಕೂಡಲಸಂಗನ ಶರಣರ ಅನುಭಾವವಿಲ್ಲದವರೆಲ್ಲಿದ್ದರೇನು, ಎಂತಾದರೇನು?

೧೦. ಗಿಳಿಯೋದಿ ಫಲವೇನು? ಬೆಕ್ಕು ಬಹುದ ಹೇಳಲರಿಯದು. ಜಗವೆಲ್ಲ ಕಾಂಬ ಕಣ್ಣು ತನ್ನ ಕೊಂಬ ಕೊಯಿಲೆಯ ಕಾಣಲರಿಯದು. ಇದಿರ ಗುಣವ ಬಲ್ಲೆವೆಂಬರು. ತಮ್ಮ ಗುಣವ ತಾವರಿಯರು, ಕೂಡಲ ಸಂಗಮದೇವಾ.

೧೧. ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆ ಮನೆಯ ದುಃಖಕ್ಕೆ ಅಳುವರ ಮೆಚ್ಚ ಕೂಡಲಸಂಗಮದೇವ.

೧೨. ಏತ ತಲೆವಾಗಿದರೇನು, ಗುರುಭಕ್ತನಾಗಬಲ್ಲುದೆ? ಇಕ್ಕಳಕ್ಕೆ ಮುಗಿದರೇನು, ಭೃತ್ಯಾಚಾರಿಯಾಗಬಲ್ಲುದೇ? ಗಿಳಿಯೋದಿದರೇನು, ಲಿಂಗವೇದಿಯಾಗಬಲ್ಲುದೆ? ಕೂಡಲಸಂಗನ ಶರಣರು ಬಂದ ಬರವ ನಿಂದ ನಿಲವ ಅಂಗಸಂಗಿಗಳೆತ್ತ ಬಲ್ಲರು?

೧೩. ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ, ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ. ಚಿತ್ರದ ರಬ್ಬು ಕಾಣಿರಣ್ಣಾ. ಅಪ್ಪಿದರೆ ಸುಖವಿಲ್ಲ. ಮೆಲಿದರೆ ಸವಿ ಇಲ್ಲ ಕೂಡಲ ಸಂಗಮದೇವ ನಿಜವಿಲ್ಲದವನ ಭಕ್ತಿ.

೧೪. ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನರಸುವರೇ ಅಯ್ಯ? ಹೂ ಬಾಡಿದಲ್ಲಿ ಪರಿಮಳವನರಸುವರೆ ಅಯ್ಯಾ? ಎನ್ನ ತಂದೆ ಕೂಡಲ ಸಂಗಮದೇವ, ತೊರೆ ಇಳಿದರೆ ಅಂಬಿಗಂಗೇನುಂಟು?

೧೫. ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ ಕಲಿತು, ಪುಣ್ಯ ಪದವಿಯ ಬಯಸಿದರೆ, ಭವಮಾಲೆಯ ಬರವು ತಪ್ಪದು. ಬೇಡಲು ಹುಟ್ಟಿದ ಪ್ರಾಣಿಗೆ ಬೇಡಲು ವಿಧಿಯೆ? ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನಗುಣವಪ್ಪುವದೇ? ಲಿಂಗ ಉದಯ ಶರಣ ವಿಸ್ತಾರವು ಬಯಸಿದ ರೊಳವೆ ಕೂಡಲ ಸಂಗಮದೇವಾ, ನಿಮ್ಮಲ್ಲಿ?

೧೬. ಹಬ್ಬಕ್ಕೆ ತಂದ ಹರಿಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು. ಕೊಂದಿಹರೆಂಬುದನರಿಯದೆ. ಬೆಂದೊಡಲ ಹೊರೆವುತ್ತಲಿದೆ. ಅದಂದೆ ಹುಟ್ಟಿತ್ತು, ಅದಂದೆ ಹೊಂದಿತ್ತು, ಕೊಂದವರುಳಿದರೆ ಕೂಡಲ ಸಂಗಮದೇವಾ?

೧೭. ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮಾಡುವಂತೆ, ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು ಮೇಲೇಸು ಕಾಲ ಬದುಕುವನೇನೋ? ಕೆಡೆ ಒಡಲ ನೆಚ್ಚಿ, ಕಡು ಹುಸಿಯನೆ ಹುಸಿದು, ಒಡಲ ಹೊರೆವವರ ಕೂಡಲಸಂಗಮದೇವಯ್ಯನವರ ನೊಲ್ಲ ಕಾಣಿರಣ್ಣ.

೧೮. ಆರ್ಥವಡಗದು. ಕ್ರೋಧ ತೊಲಗದು. ಕ್ರೂರ ಕುಭಾಷೆ ಕುಹಕ ಬಡದನ್ನಕ್ಕ ನೀನೆತ್ತಲು ಶಿವನೆತ್ತಲು, ಹೋಗತ್ತ ಮರುಳೆ. ಭವರೋಗವೆಂಬ ತಿಮಿರ ತಿಳಿಯದನ್ನಕ್ಕ, ಕೂಡಲಸಂಗಯ್ಯನೆತ್ತ ನೀನೆತ್ತ ಮರುಳೇ?

೧೯. ಹಾವ ತಿಂದವರ ನುಡಿಸಬಹುದು. ಗರ ಹೊಡೆದವರ ನುಡಿಸಲುಬಹುದು. ಸಿರಿ ಗರ ಹೊಡೆದವರ ನುಡಿಸಲುಬಾರದು, ನೋಡಯ್ಯ! ಬಡತನವೆಂಬ ಮಂತ್ರವಾದಿ ಹೋಗಲು, ಒಡನೆ ನುಡಿವರಯ್ಯಾ, ಕೂಡಲ ಸಂಗಮದೇವಾ.

೨೦. ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ, ದಾರಿಸಂಗಡ ಬೇಡ, ದೂರ ನುಡಿಯಲು ಬೇಡ. ಕೂಡಲಸಂಗನ ಶರಣರಲ್ಲಿ ಅಚ್ಚ ಲಿಂಗೈಕ್ಯಂಗೆ ತೊತ್ತಾಗಿಹುದಯ್ಯ.

೨೧. ಸಾರ ಸಜ್ಜನರ ಸಂಗ ಲೇಸು ಕಂಡಯ್ಯ! ದೂರ ದುರ್ಜನರ ಸಂಗವದು ಭಂಗವಯ್ಯ! ಸಂಗನೆರಡುಂಟು. ಒಂದ ಬಿಟ್ಟು ಒಂದ ಹಿಡಿ ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ.

೨೨. ಹೊಲೆಯ ಹೊಲಬಿಗನಾದೊಡೆ, ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯ. ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯ! ಹೊಲಬುಗೆಡಬೇಡ. ಶಿವಶರಣೆನ್ನಿರಯ್ಯಾ! ನಮ್ಮ ಕೂಡಲಸಂಗನ ಮಹಾಮನೆಯಲು ಮಾದಾರ ಚನ್ನಯ್ಯ ಹೊಲಬಿಗನಯ್ಯಾ.

೨೩. ದೂಷಕನವನೊಬ್ಬ ದೇಶವ ಕೊಟ್ಟಡೆ, ಆಸೆಮಾಡಿ ಅವನ ಹೊರೆಯಲ್ಲಿರಬೇಡ. ಮಾದರ ಶಿವಭಕ್ತನಾದಡೆ, ಅತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರ ಲೇಸಯ್ಯಾ! ಕಾಡಿಸೊಪ್ಪ ತಂದು, ಓಡಿನಲ್ಲಿ ಹುರಿದಿಟ್ಟು ಕೂಡಿಕೊಂಡಿಪ್ಪುದೀಗ ನಮ್ಮ ಕೂಡಲಸಂಗನ ಶರಣರ.

೨೪. ಪರುಷ ಮುಟ್ಟಿದ ಬಳಿಕ, ಕಬ್ಬುನವಾಗದು ನೋಡಾ! ಲಿಂಗ ಮುಟ್ಟಿದ ಬಳಿಕ, ಕುಚಿತಾಚಾರವಾಗದು. ಕೂಡಲಸಂಗನ ಶರಣರು ಅನ್ಯವನರಿಯರವಾಗಿ.

೨೫ ಪಟ್ಟದ ಕಟ್ಟದ ಬಳಿಕ, ಲಕ್ಷಣವನರಸುವರೆ? ಲಿಂಗ ದೇವನ ಪೂಜಿಸಿ ಕುಲವನರಸುವರೆ, ಅಯ್ಯಾ? ಕೂಡಲಸಂಗಮದೇವ ಭಕ್ತಕಾಯ ಮನುಕಾಯವೆಂದುದಾಗಿ.

೨೬. ದೇವಲೋಕ ಮರ್ತ್ಯಲೋಕವೆಂಬದು ಬೇರೆ ಮತ್ತುಂಟೆ? ಈ ಲೋಕದೊಳಗೆ ಮತ್ತನಂತಲೋಕ. ಶಿವಲೋಕ ಶಿವಾಚಾರವಯ್ಯಾ. ಶಿವಭಕ್ತನಿದ್ದ ಠಾವೇ ದೇವಲೋಕ. ಭಕ್ತನಂಗಣವೇ ವಾರಣಾಸಿ. ಕಾಯವೇ ಕೈಲಾಸ. ಇದು ಸತ್ಯ ಕೂಡಲಸಂಗಮದೇವಾ.

೨೭. ಕಟ್ಟಿದಿರಲ್ಲಿ ಶಿವಭಕ್ತನ ಕಂಡು, ದೃಷ್ಟಿಯಾರೆ ಶರಣೆಂದೊಡೆ, ಹುಟ್ಟಿದೇಳು ಜನ್ಮದ ಪಾಪ ಬಿಟ್ಟು ಹಿಂಗುವುದು ನೋಡಾ! ಮುಟ್ಟಿ ಚರಣಕ್ಕೆರಗಿದೊಡೆ, ತನು ಒಪ್ಪಿದಂಹುದು, ಪರುಷ ಮುಟ್ಟಿದಂತೆ. ಕರ್ತು ಕೂಡಲಸಂಗನ ಶರಣರ ಸಂಗವು ಮತ್ತೆ ಭವಮಾಲೆಯ ಹೊದ್ದಲೀಯದು ನೋಡಾ.

೨೮. ಆರಾರ ಸಂಗವೇನೇನ ಮಾಡದೈಯ್ಯ? ಕೇಡಿ ಕುಂಡ ಲಿಗನಾಗದೇನಯ್ಯ? ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ ಬೇವು ಬೊಬ್ಬಲಿ ತರಿಯು ಗಂಧಂಗಳಾಗವೆ? ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ ಕರ್ಮ ನಿರ್ಮಳವಾಗದಿಹುದೇ ಅಯ್ಯಾ?

೨೯. ಎಂತವನಾದೊಡೇನು? ಲಿಂಗ ಮುಟ್ಟದವನೇ ಕೀಳು ಜಾತಿ. ಕುಲವಹುದು ತಪ್ಪದು. ಲಿಂಗವ ಮುಟ್ಟಲೊಡನೆ. ಶಿವಕುಲ ವಹುದು ತಪ್ಪದು. ಪರುಷ ಮುಟ್ಟಲೊಡನೆ ಕಬ್ಬುನ ಹೊನ್ನಹುದು ತಪ್ಪದು. ಕೂಡಲಸಂಗಮದೇವನೊಲ್ಲ ಸರ್ವ ಸಂದೇಹಿಗಳ.

೩೦. ಓದಿದರೇನು, ಕೇಳಿದರೇನು, ಶಿವಪಥವನರಿಯದನ್ನಕ್ಕರ? ಓದಿತ್ತು ಕಾಣಿರೋ ಶುಕನು. ಶಿವಜ್ಞಾನವನರಿಯದನ್ನಕ್ಕ, ಓದಿದ ಫಲವು ಮಾದಾರ ಚನ್ನಯ್ಯಂಗಾಯಿತ್ತು ಕೂಡಲಸಂಗಮದೇವಾ.

೩೧. ಹಾವಿನ ಡೊಂಕು ಹುತ್ತಕ್ಕೆ ಸಸಿನ. ನದಿಯ ಡೊಂಕು ಸಮುದ್ರಕ್ಕೆ ಸಸಿನ. ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ.

೩೨. ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು. ಭಕ್ತ ದೇಹಿಕದೇವ ಅನುಮಿಷನಾಗಿ ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು.

೩೩. ಭಕ್ತಿ ಎಂತಹದಯ್ಯ? ದಾಸಯ್ಯ ಮಾಡಿದಂತಹದಯ್ಯ! ಭಕ್ತಿ ಎಂತಹದಯ್ಯ? ಸಿರಿಯಾಳ ಮಾಡಿದಂತಹದಯ್ಯ! ಭಕ್ತಿ ಎಂತ ಹದಯ್ಯ? ಸಿಂಧು ಬಲ್ಲಾಳ ಮಾಡಿದಂತಹದಯ್ಯ! ಭಕ್ತಿ ಎಂತಹ ದಯ್ಯ? ಕೂಡಲಸಂಗಮದೇವಾ, ನೀ ಬಾಣನ ಬಾಗಿಲ ಕಾಯ್ದಂತ ಹದಯ್ಯ.

೩೪. ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ. ಬಲ್ಲಾಳನ ವಧುವಿನೊಡನೆ ಸರಸನಾಡಿದಂದಿಂದ ಭಯ ಕಾಣಿರಣ್ಣಾ. ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ. ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ. ಅಘಟಿತ ಘಟಿತರು ವಿಪರೀತ ಚರಿತರು ಕೂಡಲಸಂಗನ ಶರಣರು ಹೋದ ದಾರಿ ಭಯ ಕಾಣಿರಣ್ಣಾ.

೩೫. ದೇವನೊಳ್ಳಿದನೆಂದು ಮುಯ್ಯೆನಲು ಬೇಡ. ತರಕಟ ಕಾಡಿ ಹನೊಳ್ಳಿದನೆ? ಅಳಿಸುವ ನಗಿಸುವನೊಳ್ಳಿದನೆ? ಬೆಚ್ಚದೆ ಬೆದರದೆ ತೊತ್ತುತನವ ಮಾಡಲು, ತನ್ನನೀವ ಕೂಡಲಸಂಗಮದೇವ.

೩೬. ನೆರೆ ನಂಬೋ, ನೆರೆ ನಂಬೋ, ದರದುರವಿಲ್ಲದೆ ಸಾಮವೇದಿಗಳಂತೆ. ನೆರೆ ನಂಬೋ, ನೆರೆ ನಂಬೋ, ದಾಸದುಗ್ಗಳೆಯಂತೆ. ನೆರೆ

ನಂಬೋ, ನೆರೆ ನಂಬೋ, ಸಿರಿಯಾಳ ಚಂಗಳೆಯಂತೆ. ನೆರೆ ನಂಬೋ, ನೆರೆನಂಬೋ, ಸಿಂಧು ಬಲ್ಲಾಳನಂತೆ. ನಂಬಿದೆಯಾದರೆ, ತನ್ನನೀವ ಕೂಡಲಸಂಗಮದೇವ.

೩೭ ಬಲ್ಲಿದರೊಡನೆ ಬವರವಾದೊಡೆ ಗೆಲ್ಲಲುಂಟು. ಸೋಲಲುಂಟು. ಕಳ್ಳನೊಡನೆ ಭಾಷೆ ಪೂರಾಯವಯ್ಯ! ನಮ್ಮ ಕೂಡಲಸಂಗನ ಶರಣರಿಗೆ ಮಾಡಿ ಮಾಡಿ, ಧನ ಸವೆದು ಬಡವಾದರೆ ಆ ಭಕ್ತನಾ ಲಿಂಗಕ್ಕೆ ಪೂಜೆಯುಹನು.

೩೮. ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು, ಶ್ರೀಗಂಧದ ಸನ್ನಿಧಿಯಲು ಪರಿಮಳವಾಗವೆ? ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು. ಕೂಡಲಸಂಗಮದೇವಯ್ಯ, ಸಿರಿಯಾಳನ ಸಾರಿದ ನರರೆಲ್ಲ ಸುರರಾಗರೇ ?

೩೯. ಪರುಷದ ಹೊರೆಯಲ್ಲಿ ಕಬ್ಬುನವಿದ್ದು ಹೊನ್ನಾಯಿತ್ತು ನೋಡಿರೇ. ಅವ್ವೆ ಚಂಗಳೆ, ನೀನಿದ್ದೇಳು ಕೇರಿಯವರು ಲಿಂಗವ ನೋಂಪಿಯ ನೋಂತರೇ ಹೇಳಾ? ಕೂಡಲಸಂಗಮದೇವಂಗೆ ಚಿಲ್ಲಾಳನೆಂಬ ಬಾಯಿನವನಿಕ್ಕಿದರೇ ಹೇಳಾ ?

೪೦. ಗೀತವ ಬಲ್ಲಾತ ಜಾಣನಲ್ಲ. ಮಾತ ಬಲ್ಲಾತ ಜಾಣನಲ್ಲ. ಜಾಣನು ಜಾಣ, ಆತ ಜಾಣನು. ಲಿಂಗವ ನೆರೆ ನಂಬಿದಾತ ಜಾಣನು. ಜಂಗಮಕ್ಕೆ ಸವಿಸುವಾತ ಆತ ಜಾಣನು. ಜವನ ಬಾಯಲು ಬಾಲವ ಕೊಯ್ದು ಹೋದಾತ ಜಾಣನು ನಮ್ಮ ಕೂಡಲಸಂಗನ ಶರಣನು.

೪೧. ಲೇಸೆನಿಸಿಕೊಂಡು ಐದು ದಿನ ಬದುಕಿದರೇನು? ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದರೇನು? ಲೇಸೆನಿಸಿಕೊಂಡು ಮೂರು ದಿನ ಬದುಕಿದರೇನು? ಲೇಸೆನಿಸಿಕೊಂಡು ಎರಡು ದಿನ ಬದುಕಿದರೇನು?

ಶ್ಲೋಕ॥ ಜೀವಿತಂ ಶಿವಭಕ್ತಾನಾಂ । ವರಂ ಪಂಚ ದಿನಾನಿ ಚ।
ಅಜಕಲ್ಪ ಸಹಸ್ರೇಭ್ಯೋ । ಭಕ್ತಿಹೀನಂತು ಶಾಂಕರೀ॥

ಎಂದುದಾಗಿ ಕೂಡಲಸಂಗನ ಶರಣರ ವಚನದಲ್ಲಿ ಲೇಸೆನಿಸಿಕೊಂಡು, ಒಂದು ದಿನ ಬದುಕಿದರೇನೋ ?

೪೨. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ ಕೂಡಲಸಂಗಮದೇವಾ.

೪೩. ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು, ಪಗಣಕ್ಕೆ ಸಾಸಿರ ಹುಳು ಹುಟ್ಟವೇ ಅಯ್ಯಾ? ಕಾಡಮೃಗ ಒಂದಾಗಿರಲಾಗದೇ ದೇವಾ? ಊರ ಮೃಗ ಒಂದಾಗಿರಲಾಗದೇ ಹರನೇ? ನಮ್ಮ ಕೂಡಲಸಂಗನ ಶರಣರಿಲ್ಲದ ಊರು ನರವಿಂಧ್ಯ ಕಾಣಿರಣ್ಣಾ.

೪೪. ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ, ಸಂಸಾರವೇನವನ, ಬಾಳುವೇನವನ, ಬೀಳುವೇನವನ, ಸಂಸಾರವೇನವನ, ನಡೆಯೇನವನ, ನುಡಿಯೇನವನ, ಸಂಸಾರವೇನವನ, ಕರ್ತು ಕೂಡಲಸಂಗಮದೇವ, ನಿಮ್ಮತೊತ್ತುಗೆಲಸವ ಮಾಡದವನ ಸಂಸಾರವೇನವನ?

೪೫. ವ್ಯಾಧನೊಂದು ಮೊಲನ ತಂದರೆ, ಸಲುವ ಹಾಗಕ್ಕೆ ಬೆಲೆ ವರಯ್ಯ! ನೆಲನಾಳ್ವನ ಹೆಣನೆಂದರೆ, ಒಂದಡಿಕೆಗೆ ಕೊಂಬುವರಿಲ್ಲ ನೋಡಯ್ಯ! ಮೊಲನಿಂದ ಕರಕಷ್ಟ ನರನ ಬಾಳುವೆ. ಸಲೆ ನಂಬು ನಮ್ಮ ಕೂಡಲಸಂಗಮದೇವನ.

೪೬. ಉತ್ಪತ್ತಿ ಶುಕ್ಲ ಶೋಣಿತದಿಂದಾದ ಲಜ್ಜೆ ಸಾಲದೆ? ಮತ್ತೆ ದುರಿತಂಗಳ ಹೊರೆವ ಎಗ್ಗತನವೇಕಯ್ಯಾ! ಮೃತ್ಯುವಿನ ಬಾಯಿಗೆ ಒಳಗಾಗಲೇಕೆ? ಒತ್ತೊತ್ತೆಯ ಜನನವ ಗೆಲುವರೆ, ಕರ್ತನ ಪೂಜಿಸು ನಮ್ಮ ಕೂಡಲಸಂಗಮದೇವನ.

೪೭. ಮನವೇ ಸರ್ಪ ತನುವೇ ಹೇಳಿಗೆ. ಹಾವಿನೊಡತಣ ಹುದುವಾಳಿಗೆ. ಇನ್ನಾವಾಗ ಕೊಂದಿಹುದೆಂದರಿಯೆ. ಇನ್ನಾವಾಗ ತಿಂದಿಹುದೆಂದರಿಯೆ. ನಿಜಕ್ಕೆ ನಿಮ್ಮ ಪೂಜಿಸಬಲ್ಲರೆ, ಅದೇ ಗಾರುಡ ಕೂಡಲಸಂಗಮದೇವಾ.

೪೮. ನೆರೆ ಕೆನ್ನೆಗೆ, ತೆರೆ ಗಲ್ಲಕ್ಕೆ, ಶರೀರ ಗೂಡುವೋಗದಮುನ್ನ, ಹೆಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯ್ಯನೂರಿ, ಕೋಲ ಹಿಡಿಯದಮುನ್ನ, ಮುಪ್ಪಿಂದೊಪ್ಪವಳಿ

ಯದ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸು ಕೂಡಲಸಂಗ ಮದೇವನ.

೪೯. ನೀರ ಬೊಬ್ಬುಳಿಕೆ ಕಬ್ಬುನದ ಕಟ್ಟ ಕೊಟ್ಟು ಸುರಕ್ಷಿತವ ಮಾಡುವ ಭರವ ನೋಡಾ! ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ ಒದುಕೋ ಕಾಯವ ನಿಶ್ಚಯಿಸದೇ.

೫೦. ಹೆಂಜರ ಬಲ್ಲೆತ್ತೆಂದು ಅಂಜದೆ ಓದುವ ಗಿಳಿಯೇ, ಎಂದೆಂದು ಅಳಿಯೆನೆಂದು ಗಡಿಗಟ್ಟಿದೆಯಲ್ಲಾ! ನಿನ್ನ ಮನದಲ್ಲಿ ಮಾಯಾ ಮಂಜರ ಕೊಲುವರೆ, ನಿನ್ನ ಹಂಜರ ಕಾವುದೆ ಕೂಡಲ ಸಂಗಮದೇವನಲ್ಲದೆ?

೫೧. ಸಂಸಾರವೆಂಬುದೊಂದು ಗಾಳಿಯ ಸೊಡರು. ಸಿರಿಯೆಂ ಬುದೊಂದು ಸಂತೆಯ ಮಂದಿ ಕಂಡೈಯ್ಯ. ಇದ ನೆಚ್ಚಿ ಕೆಡಬೇಡ, ಸಿರಿ ಎಂಬುದ. ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

೫೨. ಎಲೆ ಎಲೆ ಮಾನವ, ಅಳಿಯಾಸೆ ಬೇಡವೋ. ಕಾಳ ಬೆಳದಿಂ ಗಳ ಸಿರಿ ಸ್ಥಿರವಲ್ಲ. ಕೇಡಿಲ್ಲದ ಪದವಿ. ಕೂಡಲಸಂಗಮದೇವನ ಮರೆಯದೆ ಪೂಜಿಸು.

೫೩. ಎಂತಕ್ಕೆ? ಎಂತಕ್ಕೆ? ಹಡೆದ ಕಾಯ ಬೀಯವಾಗದ ಮುನ್ನ, ಆಟ್ಟುಣ್ಣೋ. ಬೆರಣಿಯುಳ್ಳಲ್ಲಿ, ಹೊತ್ತು ಹೋಗದ ಮುನ್ನ, ಆಟ್ಟುಣ್ಣೋ. ಮರಳಿ ಭವಕ್ಕೆ ಬಾಹೆ, ಬಾರದಿಹೆ. ಕರ್ತು ಕೂಡಲಸಂಗಂಗೆ ಶರಣೆನ್ನಿ ಭೋ.

೫೪. ಶಕುನವೆಂದೆಂಬೆ, ಅವಶಕುನವೆಂದೆಂಬೆ. ನಿಮ್ಮವರು ಅಳ ಲಿಕೆ ಅಂದೇಕೆ ಬಂದೆ? ನಿಮ್ಮವರು ಅಳಲಿಕೆ ಇಂದೇಕೆ ಹೋದೆ? ನೀ ಹೋಹಾಗಳಕ್ಕೆ, ಬಾಹಾಗಳಕ್ಕೆ. ಅಕ್ಕೆ ಬಾರದ ಮುನ್ನ ಪೂಜಿಸು ಕೂಡಲಸಂಗಮದೇವನ.

೫೫. ನಿಮಿಷದ ನಿಮಿಷವೆಂಬೋ. ಕ್ಷಣದೊಳಗರ್ಧಂಭೋ. ಕಣ್ಣ ಮುಚ್ಚಿ ಬಿಚ್ಚುವೈಸು ಬೇಗೆಂಬೋ. ಸಂಸಾರದಾಗೆಂಬೋ. ಸಂಸಾರದ ಹೋಗೆಂಬೋ. ಸಂಸಾರದೊಪ್ಪಂಬೋ. ಕೂಡಲಸಂಗಮದೇವ ನೀ ಮಾಡಿದ ಮಾಯೆಂಬೋ. ಅಭ್ರಚ್ಛಾಯೆಂಬೋ.

 431/5122

೫೬. ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು. ಹರಿದ ಹೆಪ್ಪೊರೆಯ ಕೆರೆ ತುಂಬಿದಂತಯ್ಯಾ. ನೆರೆಯದ ವಸ್ತು ನೆರೆವುದ ನೋಡಯ್ಯ. ಆರಸು ಪರಿವಾರ ಕೈವಾರ ನೋಡಯ್ಯ. ಪರಮ ನಿರಂಜನ ಮರೆವ ಕಾಲಕ್ಕೆ ತುಂಬಿದ ಹರವಿಯ ಕಲ್ಲು ಕೊಂಡಂತೆ ಕೂಡಲಸಂಗಮದೇವಾ.

೫೭. ಹೊಯ್ದರೆ ಹೊಯ್ಗಳು ಕೈ ಮೇಲೆ. ಬಯ್ದರೆ ಬಯ್ಗಳ ಕೈ ಮೇಲೆ. ಹಿಂದಣ ಜನನವೇನಾದಡಾಗಲಿ. ಇಂದಿನ ಭೋಗವು ಕೈ ಮೇಲೆ. ಕೂಡಲಸಂಗಮದೇವಯ್ಯ, ನಿಮ್ಮ ಪೂಜಿಸಿದ ಫಲವು ಕೈ ಮೇಲೆ.

೫೮. ಆದ್ಯರ ವಚನ ಪರುಷ ಕಂಡಯ್ಯ! ಸದಾಶಿವನೆಂಬ ಲಿಂಗವ ನಂಬುವುದು. ನಂಬಲೊಡನೆ ನೀ ವಿಜಯ ಕಂಡಯ್ಯ! ಅರಕ್ಕೆ ಕಹಿ, ಉದರಕ್ಕೆ ಸಿಹಿ. ಕೂಡಲಸಂಗನ ಶರಣರ ವಚನ ಬೇವಸವಿದಂತೆ.

೫೯. ಹೊತ್ತಾರೆ ಎದ್ದು ಅಗ್ಗವಣಿ ಪತ್ತರೆಯ ತಂದು, ಹೊತ್ತು ಹೋಗದ ಮುನ್ನ, ಪೂಜಿಸು ಲಿಂಗವ. ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು? ಹೊತ್ತು ಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ ತೊತ್ತುಗೆಲಸವ ಮಾಡು ಕೂಡಲಸಂಗಮದೇವನ.

೬೦. ಅಚ್ಚುಗವೇಕಯ್ಯ ಸಂಸಾರದೊಳಗೆ? ನಿಚ್ಚ ನಿಚ್ಚ ಶಿವರಾತ್ರಿಯ ಮಾತುವುದು ಬೇಗ ಬೇಗ ಅರ್ಚನೆ ಪೂಜೆಯ ಮಾಡವುದು ಕೂಡಲಸಂಗನ ಕೂಡುವುದು.

೬೧. ಅಂದು, ಇಂದು, ಮತ್ತೊಂದೆನಬೇಡ. ದಿನ ಒಂದೇ ಶಿವ ಶರಣೆಂಬುವಂಗೆ. ದಿನ ಒಂದೇ ಹರ ಶರಣೆಂಬುವಂಗೆ. ದಿನ ಒಂದೆನ್ನ ಕೂಡಲಸಂಗನ ಮಾಣದೆ ನೆನೆವಂಗೆ.

೬೨. ಅಷ್ಟ ವಿಧಾರ್ಚನೆ ಷೋಡಶೋಪಚಾರವ ಮಾಡುವುದು, ಮಾಡಿದ ಪೂಜೆಯ ನೋಡುವುದಯ್ಯ, ಶಿವತತ್ವಗೀತವ ಪಾಡುವುದು, ಶಿವನ ಮುಂದೆ ನಲಿದಾಡುವುದಯ್ಯ, ಭಕ್ತಿ ಸಂಭಾಷಣೆಯ ಮಾಡುವುದು ನಮ್ಮ ಸಂಗಯ್ಯನ ಕೂಡುವುದು.

೬೩. ಜಳಗೊಂಡಿಹರೆಂದು ಅಂಜಲದೇಕೆ? ನಾಸ್ತಿಕವಾಡಿಹರೆಂದು, ನಾಚಲದೇಕೆ? ಆರಾಡಾಗಲಿ, ಶ್ರೀ ಮಹಾದೇವಂಗೆ ಶರಣೆನ್ನಿ. ಏನೂ ಅರಿಯನೆಂದು ಮೌನಗೊಂಡಿರಬೇಡ. ಕೂಡಲಸಂಗಮದೇವರ ಮುಂದೆ ದಂದಣ, ದತ್ತಣ ಎನ್ನಿ.

೬೪. ಸುಪ್ರಭಾತ ಸಮಯದಲ್ಲಿ ಅರ್ಥಿಯಲ್ಲಿ ಲಿಂಗವ ನೆನೆದರೆ ತಪ್ಪುವುದು ಅಪಮೃತ್ಯು, ಕಾಲಕರ್ಮಂಗಳಯ್ಯ! ದೇವ ಪೂಜೆಯು ಮಾಟ, ದುರಿತ ಬಂಧನದೋಟ. ಶಂಭು ನಿಮ್ಮಯ ನೋಟ ಹೆರೆಹಿಂಗದ ಕಣ್ಣೆಟ. ಸದಾ ಸನ್ನಿಹಿತನಾಗಿ ಶರಣೆಂಬುವುದು, ನಂಬುವುದು. ಜಂಗಮಾರ್ಚನೆಯು ಮಾಟ ಕೂಡಲಸಂಗನ ಕೂಟ.

೬೫. ಅಂಕ ಕಳನೇರಿ ಕೈಮರೆದಿರ್ದಡೆ, ಮಾರಾಂಕ ಒಂದಿರಿವುದ ಮಾಬನೇ? ನಿಮ್ಮ ನೆನೆವ ಮತಿ ಮರೆದಿರ್ದರೆ, ಪಾಪ ಶನುವ ನಂಡಲೆಯದೆ ಮಾಬುದೇ? ಕೂಡಲಸಂಗಯ್ಯನ ನೆನೆದರೆ, ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯ.

೬೬. ಅಡಿಹರಯ್ಯ, ಹಾಡಿಹರಯ್ಯ, ಮನ ಬಂದ ಪರಿಯಲಿ. ಶಿವಶರಣರ ಮುಂದೆ, ಅಡಿಹರಯ್ಯ, ಹಾಡಿಹರಯ್ಯ! ಕೋಡಂಗಿಯಾಟವನಾಡಿದ ಭಕ್ತಂಗೆ ಬೇಡಿದ್ದನೀವ ನಮ್ಮ ಕೂಡಲಸಂಗಮದೇವ.

೬೭. ಹೊಲಬುಗೊಂಡರಸಬೇಡ. ಬಲಿತು ತರಬೇಡ. ಒಲಿದೊಮ್ಮೆ ಶಿವಶರಣೆನ್ನಿರಯ್ಯಾ. ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ, ಕೂಡಲಸಂಗಮದೇವ ಭಕ್ತಿಲಂಸಟನಾಗಿ.

೬೮. ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯ. ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯ. ನಾದವ ಮಾಡಿದ ರಾವಣಂಗೆ ಆರಿಯಾಯುಷ್ಯವಾಯಿತ್ತು. ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು. ನಾದಪ್ರಿಯನು ಅಲ್ಲ. ವೇದಪ್ರಿಯನು ಅಲ್ಲ ಭಕ್ತಿ ಪ್ರಿಯ ನಮ್ಮ ಕೂಡಲಸಂಗಮದೇವ.

೬೯. ಹಸಿವಾದಡುಂಬುದನು, ಸತಿಯ ಸಂಭೋಗವನು, ಅನಾಗಿ ನೀ ಮಾಡೆಂಬುವರುಂಟೇ? ಮಾಡುವುದು, ಮಾಡುವುದು ಮನಮುಟ್ಟಿ. ಮಾಡುವುದು, ಮಾಡುವುದು ತನುಮುಟ್ಟಿ. ತನುಮುಟ್ಟಿ, ಮನಮುಟ್ಟಿದಿರ್ದರೆ, ಕೂಡಲಸಂಗಮದೇವನೇತರಲ್ಲಿಯೂ ವೇಚ್ಚ.

೭೦. ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು, ಬೇರೆ ಮತ್ತೊಬ್ಬರ ಕೈಯ್ಯಲು ಮಾಡಿಸಬಹುದೆ? ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ, ಬೇರೆ ಮತ್ತೊಬ್ಬರ ಕೈಯ್ಯಲು ಮಾಡಿಸಬಹುದೆ? ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ?

೭೧. ಬಂಡಿ ತುಂಬಿದ ಪತ್ರೆಯ ತಂದು, ಕಂಡಕಂಡಲ್ಲಿ ಮಜ್ಜನ ಕ್ಕೆರೆವಿರಯ್ಯ. ತಾಪತ್ರಯವ ಕಳೆದು ಪೂಜಿಸಿ. ತಾಪತ್ರಯವ ಲಿಂಗ ನೊಲ್ಲ. ಕೂಡಲಸಂಗಮದೇವ ಬರಿಯುದಕದಲ್ಲಿ ನೆನೆವನೆ?

೭೨. ಭಕ್ತನಾಗಿ ಲಿಂಗಜಂಗವನು ಪೂಜಿಸಬೇಕಲ್ಲದೆ ಭಕ್ತನಾಗಿ ತನ್ನ ತಾ ಪೂಜಿಸಿಕೊಂಬುದು ಎಂತಯ್ಯ? ಸ್ವಾಮಿ ಭೃತ್ಯ ಸಂಬಂಧವು ಎಂತಯ್ಯ ಪೂರೈಸುವುದು? ಕೂಡಲಸಂಗಮದೇವಾ, ಕಣ್ಣಿ ಕಟ್ಟಿ ಕನ್ನ ಡಿಯ ತೋರುವಂತೆ.

೭೩. ಭೂಮಿಯೊಳಗೆ ನಿಧಾನವಿದ್ದುದ ಅಂಜನವುಳ್ಳವರು ತೋರಿ ರಯ್ಯ. ಅಜಲು ಬೇಡ ಕಂಡಯ್ಯ. ಮನದಲ್ಲಿ ಸಂದೇಹವ ಮಾಡ ದಿರಾ! ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬಿಗೆಯುಳ್ಳರೆ, ತೋರುವ ಕೂಡಲಸಂಗಯ್ಯ.

೭೪. ಕನ್ನಡಿಯ ನೋಡುವ ಕಣ್ಣಿಗಳಿರಾ, ಜಂಗಮವ ನೋಡಿರೇ. ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ. ಸ್ಥಾವರ ಜಂಗಮ ಒಂದೇ ಎಂದುದು ಕೂಡಲಸಂಗನ ವಚನ.

೭೫. ಗೀತವ ಹಾಡಿದಡೇನು, ಶಾಸ್ತ್ರ ಪುರಾಣಗಳ ಕೇಳಿದಡೇನು, ವೇದ ವೇದಾಂತವ ನೋಡಿದಡೇನು, ಮನ ಒಲಿದು ಲಿಂಗಜಂಗಮವ ಪೂಜಿಸಲರಿಯದವರು? ಎಲ್ಲರಲ್ಲಿ ಅನುಭಾವಿಯಾದಡೇನು? ಭಕ್ತಿ ಇಲ್ಲ ದವರನೊಲ್ಲ ಕೂಡಲಸಂಗಮದೇವ.

೭೬. ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೆ ಬೇಕು. ದಕ್ಷ ನುಂಗಿದಂತೆ ಬೆರೆತುಕೊಂಡಿರಬೇಡ. ಬೀಗಿ ಬೆಳೆದ ಕೊನೆವಾಳೆಯಂತೆ ಬಾಗಿಕೊಂಡಿದ್ದರೆ, ಬೇಡಿದ ಪದವಿಯನೀವ ಕೂಡಲಸಂಗಮದೇವ.

೨೭. ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು. ವರ್ಮವನರಿಯದ ಮಾಟ ಸುಯಿಧಾನದ ಕೇಡು. ಬಂದ ಸಮಯೋಚಿತವನರಿಯದಿದ್ದರೆ, ನಿಂದಿರಲೊಲ್ಲ ಕೂಡಲಸಂಗಮದೇವ.

೨೮. ದ್ವೈತಾದ್ವೈತವನೋದಿ ಏನು ಮಾಡುವಿರಯ್ಯಾ, ನಮ್ಮ ಶರಣರಿಗುರಿಗರಗಾಗಿ ಕರಗದನ್ನಕ್ಕ? ಸ್ಥಾವರ ಜಂಗಮ ಒಂದೇ ಎಂದು ನಂಬದನ್ನಕ್ಕ, ಕೂಡಲಸಂಗಮದೇವ ಬರಿಯ ಮಾತಿನ ಮಾಲೆಯ ಲೇನಹುದು ?

೨೯. ಲಾಂಛನ ಹೊರಗೆ ಬಂದಿರಲು ಒಳಗೆ ಲಿಂಗಾರ್ಚನೆ ಎಂತಯ್ಯ? ಮುಖದಲ್ಲಿ ಕಟ್ಟಿದ ಕನ್ನಡಿ ಮೂಗಿನ ಮೇಲಣ ಕತ್ತಿ ಸಮಯಾಚಾರವೆಂತುಟಯ್ಯ? ಕೂಡಲಸಂಗಮದೇವ ಮೂಗ ಕೊಯ್ಯದೆ ಮಾಬನೇ ಹೇಳಯ್ಯ ?

೩೦. ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ. ಆದು ಬೇಡದು ಬೆಸಗೊಳ್ಳದು. ತಂದೊಮ್ಮೆ ನೀಡಬಹುದು. ಕಾಡುವ ಬೇಡುವ ಜಂಗಮ ಬಂದರೆ ನೀಡಲು ಬಾರದು ಕೂಡಲಸಂಗಮ ದೇವಾ.

೩೧. ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು. ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ. ಉಂಬ ಜಂಗಮ ಬಂದರೆ ನಡೆ ಎಂಬರು. ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯಾ! ನಮ್ಮ ಕೂಡಲ ಸಂಗನ ಶರಣರ ಕಂಡು, ಉದಾಸೀನವ ಮಾಡಿದರೆ, ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

೩೨. ನಾಗಂಗೆ ಹೊಸತನಿಕ್ಕಿದೆನೆಂಬರು. ನಾಗ ಬಂದರೆ ಕೋಲ ಕಳೆದುಕೊಂಬರಯ್ಯ. ಆಗದಯ್ಯ. ಜಂಗಮಲಿಂಗವೆಂಬ ಶಬ್ದವ್ಯಾಗದಯ್ಯ. ಕೂಡಲಸಂಗಮದೇವರಲ್ಲಿ ಸಿಂಧುಬಲ್ಲಾಳಂಗಲ್ಲದಾಗದಯ್ಯ.

೩೩. ಎರೆದರೆ ನೆನೆಯದು, ಮರೆದರೆ ಬಾಡದು. ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ. ಕೂಡಲಸಂಗಮದೇವ, ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು.

೩೪. ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯ. ಭೂಮಿ ಯಾಧಾರದಲ್ಲಿ ವೃಕ್ಷ ನೀರುಂಬುದಯ್ಯ. ಜಂಗಮವಾಪ್ಯಾಯನವಾದರೆ,

ಲಿಂಗ ಸಂತುಷ್ಟಿಯಹುದಯ್ಯ. ಜಂಗಮ ॥ ಶ್ಲೋ. ॥ ವೃಕ್ಷಸ್ಯ ವದನಂ ಭೂಮಿಃ । ಸ್ಥಾವರಸ್ಯ ತು ಜಂಗಮಂ । ಅಹಂ ತುಷ್ಟಿರುಮಾದೇವಿ ಉಭಯೋರ್ಲಿಂಗ ಜಂಗಮಂ ॥ ಇದು ಕಾರಣ ಕೂಡಲಸಂಗಮದೇವರಲ್ಲಿ ಜಂಗಮವಾಪ್ಯಾಯನವಾದರೆ ಲಿಂಗ ಸಂತುಷ್ಟಿ.

೪೫. ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು. ಕಳ್ಳನಾಣ್ಯ ಸಲುಗೆಗೆ ಸಲ್ಲದು. ಕಳ್ಳನಾಣ್ಯನ ಸಲ್ಲ ಲೀಯ್ಯರಯ್ಯ. ಭಕ್ತಿ ಎಂಬ ಭಾಂಡಕ್ಕೆ ಜಂಗಮವೇ ಸುಂಕಿಗ ಕೂಡಲಸಂಗಮದೇವಾ.

೪೬. ಮಾಡಿ ನೀಡಿ ಲಿಂಗವ ಪೂಜಿಸಿಹೆವೆಂಬವರು ನೀವೆಲ್ಲ ಕೇಳಿರಣ್ಣಾ! ಹಾಗದ ಕೆರಹೆ ಹೊರಗೆ ಕಳೆದು ದೇಗುಲಕ್ಕೆ ಹೋಗಿ ನಮಸ್ಕಾರವ ಮಾಡುವನಂತೆ, ತನ್ನ ಕೆರಹಿನ ಧ್ಯಾನವಿಲ್ಲದೆ, ದೇವರ ಧ್ಯಾನವಿಲ್ಲ. ಧನವನಿರಿಸದಿರಾ. ಇರಿಸಿದರೆ ಭವ ಬಸ್ಸದು ತಪ್ಪದು. ಕೂಡಲಸಂಗನ ಶರಣರಿಗೆ ಸವಿಸಲೇಬೇಕು.

೪೭. ಉಂಡುದು ಬಂದಿತ್ತೆಂಬ ಸಂದೇಹಿ ಮಾನವ ನೀ ಕೇಳಾ. ಉಂಡುದೇನಾಯಿತ್ತೆಂಬುದ ನಿನ್ನ ನೀ ತಿಳಿದು ನೋಡಾ. ಉಂಡುದು ಅಗಳೇ ಅಪ್ಯಾಯನವಾಯಿತ್ತು. ಆ ಉಂಡುದನುಣಬಂದ ಹಂದೆಯ ಬಾಳುವೆಯವರ ಕಂಡು ಆನು ಮರುಗುವೆನಯ್ಯ ಕೂಡಲಸಂಗಮದೇವಾ.

೪೮. ಆಯುಷ್ಯ ಉಂಟು ಪ್ರಳಯವಿಲ್ಲೆಂದು, ಅರ್ಥವ ಮಾಡುಗುವಿರಿ. ಆಯುಷ್ಯ ತೀರಿ, ಪ್ರಳಯ ಬಂದರೆ, ಆ ಅರ್ಥವನುಂಬುವವಿಲ್ಲ. ನೆಲನನಗಿದು ಮಾಡುಗದಿರಾ! ನೆಲ ನುಂಗಿದಡುಗುಳುವುದೆ? ಕಣ್ಣಿನಲ್ಲಿ ನೋಡಿ ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ. ನಿನ್ನ ಮಡದಿಗಿರಲೆಂದರೆ, ನಿನ್ನ ಮಡದಿಯ ಕೃತಕ ಬೇರೆ. ನಿನ್ನ ಒಡಲು ಕೆಡೆಯಲು, ಮತ್ತೊಬ್ಬನಲ್ಲಿಗೆ ಅಡಕದೆ ಮಾಬಳೆ? ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ. ಕೂಡಲಸಂಗನ ಶರಣರಿಗೆ ಒಡನೆ ಸವಿಸುವುದು.

೪೯. ತನು, ಮನ, ಧನವ ಹಿಂದಿಕ್ಕಿಕೊಂಡು, ಮಾತಿನ ಬಣಬೆಯ ಮಳಲೊಟ್ಟೆಯ ನುಡಿವರು ನೀವೆಲ್ಲ ಕೇಳಿರಿ. ತಲೆ ಇಲ್ಲದ

ಕೋಲು ಹೊಳ್ಳ ಹಾರುವದಲ್ಲದೆ, ಗುರಿಯ ತಾಕಬಲ್ಲುದೆ? ಮಾಯಾ ಪಾಶವ ಹಿಂಗಿ ಮನದ ಗಂಟು ಬಿಡದನ್ನಕ್ಕ ಕೂಡಲಸಂಗಮದೇವ ನೆಂತೊಲಿವನಯ್ಯ?

೯೦. ಸರ್ವ ಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದು. ತನುಮನ ಧನವ ಸವಿಸಲೇಬೇಕು. ನಮ್ಮ ಕೂಡಲಸಂಗನ ಶರಣರಿಗೆ ಅಂಜಲೇಬೇಕು.

೯೧. ಹಲವು ಮಣಿಯ ಕಟ್ಟಿ ಕುಣಿ ಕುಣಿದಾಡಿ, ಹಲವು ಪರಿಯಲಿ ವಿಭೂತಿಯ ಧರಿಸಿ, ಗಣಾಡಂಬರದ ನಡುವೆ ನಲಿನಲಿದಾಡಿ, ಉಂಡು ತಂಬುಲಗೊಂಡು ಹೋಹುದಲ್ಲ! ತನು ಮನ ಧನವ ಸಮರ್ಪಿಸಿದವರ ಕೂಡಲಸಂಗಮದೇವನೆಂತೊಲಿವ?

೯೨. ತನುವ ಕೊಟ್ಟು ಗುರುವನೊಲಿಸಲೇಬೇಕು. ಮನವ ಕೊಟ್ಟು ಲಿಂಗವನೊಲಿಸಲೇಬೇಕು. ಧನವ ಕೊಟ್ಟು ಜಂಗಮವನೊಲಿಸಲೇಬೇಕು. ಈ ತ್ರಿವಿಧವ ಹೊರಗು ಮಾಡಿ, ಹರೆಯ ಹೊಯಿಸಿ ಕುರುಹ ಪೂಜಿಸುವವರ ಮೆಚ್ಚೆ ಕೂಡಲಸಂಗಮದೇವ.

೯೩. ಆಡಿದರೇನು, ಹಾಡಿದರೇನು, ಓದಿದರೇನು, ತ್ರಿವಿಧ ದಾಸೋಹವಿಲ್ಲದನ್ನಕ್ಕ? ಆಡದೇ ನವಿಲು, ಹಾಡದೇ ತಂತಿ, ಓದದೇ ಗಿಣಿ? ಭಕ್ತಿ ಇಲ್ಲದವರನೊಲ್ಲ ಕೂಡಲಸಂಗಮದೇವ.

೯೪. ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ. ವೇದ ಘನವೆಂಬೆನೆ? ಪ್ರಾಣ ವಧೆಯ ಹೇಳುತ್ತಿದೆ. ಸ್ಮೃತಿ ಘನವೆಂಬೆನೆ? ಮುಂದಿಟ್ಟು ಅರಸುತ್ತಿದೆ. ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧ ದಾಸೋಹದಲಲ್ಲದೆ ಕಾಣಬಾರದು ಕೂಡಲಸಂಗಮದೇವ.

೯೫. ವೇದದಂತುಟಲ್ಲ. ಶಾಸ್ತ್ರದಂತುಟಲ್ಲ. ಗೀತಮಾತಿನಂತುಟಲ್ಲ. ಕೇಳಯ್ಯ ಮಾತಿನ ಮಾತಿನ ಕೌಳುಗೋಲ ಶ್ರವದಲ್ಲಿ ಸತ್ತವರೊಳರೆ? ಅಯ್ಯಾ, ದಿಟದಲಗಿನ ಕಾಳಗವಿತ್ತದಲಿದ್ದುದೆ ಕೂಡಲಸಂಗನ ಶರಣರು ಬಂದಲ್ಲಿ.

೯೬. ಮಾತಿನ ಮಾತಿನಲ್ಲಿಪ್ಪುದೆ ಭಕ್ತಿ? ಮಾಡಿ ತನು ಸವೆಯದನ್ನಕ್ಕ, ಮನ ಸವೆಯದನ್ನಕ್ಕ, ಧನ ಸವೆಯದನ್ನಕ್ಕ, ಅಪ್ಪುದೆ ಭಕ್ತಿ?

ಕೂಡಲಸಂಗಮದೇವನೆಲುದೋರಿ ಸರಸವಾಡುವನು. ಸೈರಿಸದನ್ನಕ ಅಪ್ಪುದೆ ಭಕ್ತಿ ?

೯೭. ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತ ಮುಟ್ಟಬಾರದಯ್ಯ ನುಡಿದಂತೆ ನಡೆಯಲು ಬಾರದಯ್ಯ! ಕೂಡಲಸಂಗನ ಶರಣರ ಭಕ್ತಿ ಬಾಳ ಬಾಯಿಧಾರೆ.

೯೮. ಭಕ್ತಿ ಎಂಬುದ ಮಾಡಬಾರದು. ಕರಗಸದಂತೆ ಹೋಗುತ್ತ ಕೊಯ್ವುದು. ಬರುತ್ತ ಕೊಯ್ವುದು. ಘಟಸರ್ಪದಲ್ಲಿ ಕೈದುಡುಕಿದರೆ, ಹಿಡಿವುದು ಮಾಬುದೆ ಕೂಡಲಸಂಗಮದೇವಾ ?

೯೯. ಹಲವು ಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯು ಒಂದು ಮಿಡಿ ಕಿಡಿಯಲ್ಲಿ ಬೇವಂತೆ, ಸಲೆ ಸನ್ನಿಹಿತನಾಗಿಪ್ಪ ಶರಣನ ಭಕ್ತಿ ಒಂದನಾಯತದಿಂದ ಕೆಡುವುದು. ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ ಅಧರ್ಮದಲ್ಲಿ ಕೆಡಿಸುವ ಸುತನಂತೆ, ಶಿವನ ಸೊಮ್ಮ ಶಿವಂಗೆ ಮಾಡದೆ ಅನ್ಯಕ್ಕೆ ಮಾಡಿದಡೆ ತನ್ನ ಭಕ್ತಿ ತನ್ನನೆ ಕೆಡಿಸುವುದು ಕೂಡಲಸಂಗಮದೇವಾ.

೧೦೦. ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು. ಇವಕ್ಕೆಲ್ಲ ಕಂಜದಿದ್ದರೆ, ಭಕ್ತಿ ಕಂಪಿತ ನಮ್ಮ ಕೂಡಲಸಂಗಮದೇವ.

೧೦೧. ಕೌಳುಗೋಲ ಹಿಡಿದು ಶ್ರವವ ಮಾಡಬಹುದಲ್ಲದೆ, ಕಳನೇರಿ ಕಾದುವದರಿಯದು ನೋಡಾ! ಬಣ್ಣವಿಟ್ಟು ನುಡಿದಲ್ಲಿ ಫಲವೇನು ? ಚಿನ್ನಗೈಯ್ಯುವನಾಡುವನಂತೆ, ಬಂದ ಸಮಯವನರಿತು, ಇದ್ದುದ ವಂಚಿಸದಿದ್ದರೆ, ಕೂಡಲಸಂಗಮದೇವನೊಲಿದು ಸಲಹುವ.

೧೦೨. ಧನಕ್ಕೆ ಮನವನೊಡ್ಡಿದರೇನು ? ಮನಕ್ಕೆ ಧನವನೊಡ್ಡಿದರೇನು ? ತನು ಮನ ಧನವ ಮೀರಿ ಮಾತಾಡಬಲ್ಲರೆ, ಆತ ನಿಸ್ಪೀಮನು. ಆತ ನಿಜೈಕ್ಯನು. ತನು ಮನ ಧನವ ಸವಿದರೆ ಕೂಡಲಸಂಗಮದೇವನೊಲಿವ.

೧೦೩. ಅರ್ಥಪ್ರಾಣಾಭಿಮಾನದಲ್ಲಿ ವಂಚನೆಯಿಲ್ಲದ ಭಕ್ತಿ ಸನು ಯಾಚಾರ. ಜಂಗಮವೇ ಲಿಂಗವೆಂಬುದಕ್ಕೆ ಏನು ಗುಣ? ಮನದ ಲಂಪಟತನ ಹಿಂಗದಾಗಿ, ಒಡೆಯರ ಬರವಿಂಗೆ ಕುನ್ನಿಬಾಲವ ಬಡಿದರೆ ವೆಚ್ಚವೇನು ಹತ್ತುವುದು ಕೂಡಲಸಂಗಮದೇವಾ?

೧೦೪. ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತು. ಮಧ್ಯಾನ್ಹದ ಬಿಸಿಲು ಅಂಗಕ್ಕೆ ಕಠಿಣವಾಯಿತ್ತು. ಮೊದಲಲ್ಲಿ ಲಿಂಗ ಭಕ್ತಿ ಹಿತವಾಯಿತ್ತು. ಕಡೆಯಲ್ಲಿ ಜಂಗಮ ಭಕ್ತಿ ಕಠಿಣವಾಯಿತ್ತು. ಇದು ಕಾರಣ ಕೂಡಲಸಂಗಮದೇವನವರ ಬಲ್ಲನಾಗಿ ಒಲ್ಲನಯ್ಯ.

೧೦೫. ಹಸಿದು ಬಂದ ಗಂಡಂಗೆ ಊಣಲಿಕ್ಕದೆ, ಬಡವಾದನೆಂದು ಮರುಗುವ ಸತಿಯ ಸ್ನೇಹದಂತೆ, ಬಂದುದನರಿಯಳು, ಇದ್ದುದ ಸವಿಸಳು. ದುಃಖವಿಲ್ಲದ ಅಕ್ಕೆ ಹಗರಣಿಗನ ತೆರನಂತೆ, ಕೂಡಲಸಂಗಮದೇವಾ.

೧೦೬. ಬರಬರ ಭಕ್ತಿ ಮಾಯೆಯಾಯಿತ್ತು ಕಾಣಿರಣ್ಣಾ! ಮೊದಲ ದಿನ ಹಣೆ ಮುಟ್ಟಿ, ಮರುದಿನ ಕೈಮುಟ್ಟಿ, ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ. ಹಿಡಿದುದ ಬಿಡಲಿದ್ದರೆ, ಕಡೆಗೆ ಚಾಚುವ. ಅಲ್ಲದಿದ್ದರೆ ನಡು ನೀರಲದ್ದುವ ನಮ್ಮ ಕೂಡಲಸಂಗಮದೇವಾ.

೧೦೭. ಬಿದಿರ ಅಂದಣವಕ್ಕು. ಬಿದಿರ ಸತ್ತಿಗೆಯಕ್ಕು. ಬಿದಿರಲ್ಲಿ ಗುಡಿಯು ಗುಡಾರವಕ್ಕು. ಬಿದಿರಲ್ಲಿ ಸಕಲಸಂಪದವೆಲ್ಲವು. ಬಿದಿರದವರ ಮೆಚ್ಚ ನಮ್ಮ ಕೂಡಲಸಂಗಮದೇವಾ.

೧೦೮. ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ, ಬಂಧುಗಳು ಬಂದಾಗಳಿಲ್ಲೆನ್ನ, ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ, ಬಂದ ಪುರಾತರಿಗೆ ಇಲ್ಲೆಂಬ. ಸಾವಾಗ ದೇಹವ ದೇಗುಲಕ್ಕೆ ಒಯ್ಯಿ ಎಂಬ. ದೇವರಿಗೆ ಹೆಣ ಬಿಟ್ಟ ಹೇಳಿತ್ತೆ ಕೂಡಲಸಂಗಮದೇವಾ?

೧೦೯. ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ, ಸತ್ಪಾತ್ರಕ್ಕೆ ಸಲ್ಲದಯ್ಯ! ನಾಯ ಹಾಲು ನಾಯಿಂಗಲ್ಲದೆ, ಪಂಚಾವೃತಕ್ಕೆ ಸಲ್ಲದಯ್ಯ! ನಮ್ಮ ಕೂಡಲಸಂಗನ ಶರಣರಿಂಗಲ್ಲದೆ, ಮಾಡುವ ಅರ್ಥ ವ್ಯರ್ಥ ಕಂಡಯ್ಯ.

೧೧೦. ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ, ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ! ॥ಶ್ಲೋ॥ ಶಿವಭಕ್ತಿ ಮತಿಕ್ರಮ್ಯ। ಯಶ್ಚ ದಾನಂ ಕರೋತಿ ಸಃ। ನಿಷ್ಫಲಂ ತು ಭವೇದ್ದಾನಂ। ರೌರವಂ ನರಕಂ ವ್ರಜೇತ್॥ ಇಂತೆಂದುದಾಗಿ ಕೂಡಲಸಂಗನ ಶರಣರಂನರಿಯದೆ ಕೀರ್ತಿವಾರ್ತೆಗೆ ಮಾಡಿದವನ ಧನ ವೃಥಾ ಹೋಯಿತ್ತಲ್ಲಾ.

೧೧೧. ಹತ್ತು ಮತ್ತರ ಭೂಮಿ, ಬತ್ತುವ ಹಯನು, ನಂದಾದೀವಿಗೆಯ ನಡಸಿಹೆನೆಂಬವರ ಮುಖವ ನೋಡಲಾಗದು. ಅವರ ನುಡಿಯ ಕೇಳಲಾಗದು. ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ ಪ್ರಾಣಿಗಳಿಗೆ ಭವಿತವ್ಯವ ಕೊಟ್ಟವರಾರೋ? ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ ಎನ್ನಿಂದಲೇ ಆಯಿತ್ತು, ಎನ್ನಿಂದಲೇ ಹೋಯಿತ್ತು ಎಂಬವನ ಬಾಯಲ್ಲಿ ಮೆಟ್ಟಿ ಹುಡಿಪು ಹೊಯ್ಯದೆ ಮಾಬನೆ ಕೂಡಲ ಸಂಗಮದೇವಾ?

೧೧೨. ಅನವರತ ಮಾಡಿಹೆನೆಂದು, ಉಸ್ಪರ ಗುಡಿಯ ಕಟ್ಟಿ ಮಾಡುವ ಭಕ್ತನ ಮನೆಯದು ಅಂದಣಗಿತ್ತಿಯ ಮನೆ. ಸರ್ವ ಜೀವದ ಯಾಪಾರಿಯೆಂದು ಭೂತದೈವಕೆಕ್ಕುವನ ಮನೆ ಸುಯಿಧಾನವ ಕೇಡು. ಸೂಳೆಯ ಮಗ ಮಹವ ಮಾಡಿದರೆ, ತಾಯ ಹೆಸರಾಯಿತ್ತಲ್ಲದೆ, ತಂದೆಯ ಹೆಸರಿಲ್ಲ ಕೂಡಲಸಂಗಮದೇವಾ.

೧೧೩. ಕಾಲಾಗ್ನಿ ರುದ್ರನ ಮೇಳಾಪವನರಿಯದವರು, ಕಾಳು ಬೆಳೆ ಎನುತಿಪ್ಪರಯ್ಯ. ಕಾನನದೊಳಗಣ ಕಿಚ್ಚು ಬಳುವೆಯಾಗಿ ಮಿಕ್ಕ ಡೊರಲುವ ಬಳ್ಳವಿನಂತಿಪ್ಪರಯ್ಯ ಮನುಜರು ನರವಿಂಧ್ಯದೊಳಗೆ. ತತ್ತ್ವಾಲ ಪ್ರೇಮವನರಿಯದೆ, ವಿಭವಕ್ಕೆ ಮಾಡಿದ ಭಕ್ತಿ, ಇರುಳು ಸತ್ತಿಗೆಯ ಹಿಡಿಸಿಕೊಂಡಂತೆ ಕೂಡಲಸಂಗಮದೇವಾ.

೧೧೪. ಹರಿಸಿ ಮಾಡುವದು ಹರಿಕೆಯ ದಂಡ. ನೆರಹಿ ಮಾಡುವದು ಡಂಭಿನ ಭಕ್ತಿ. ಹರಿಸಬೇಡ, ನೆರಹಬೇಡ. ಬಂದ ಬರವನರಿದರೆ, ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವಾ.

೧೧೫. ಹಡೆದೊಡವೆ ವಸ್ತುವನು ಮೃಡ ಭಕ್ತರಿಗಲ್ಲದೆ ಕಡ ಬಡ್ಡಿಯ ಕೊಡಲಾಗದು. ಬಂದರೊಂದು ಲೇಸು. ಬಾರದಿದ್ದರೆರಡು ಲೇಸು. ಅಲ್ಲಿದ್ದರೆಯೂ ಲಿಂಗಕ್ಕೆ ಜೋನ. ಇಲ್ಲಿದ್ದರೆಯೂ ಲಿಂಗಕ್ಕೆ

ಬೋನ. ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ ಬಂದಿತ್ತೆಂಬ ಪರಿಣಾಮವಿಲ್ಲ. ಬಾರದೆಂಬ ದುಃಖವಿಲ್ಲ. ಇದು ಕಾರಣ ಕೂಡಲಸಂಗಮದೇವ ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು.

೧೧೬. ಓಡಲಾರದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ ಮಾಡಲಾಗದು ಭಕ್ತನು, ಕೊಳಲಾಗದು ಜಂಗಮ. ಹಿರಿಯರು ನರಮಾಂಸವ ಭುಂಜಿಸುವರೆ, ತನು ಉಕ್ಕಿ ಮನ ಉಕ್ಕಿ ಮಾಡಬೇಕು, ಭಕ್ತಿಯ ಮಾಡಿಸಿಕೊಳ್ಳಬೇಕು ಜಂಗಮ, ಕೂಡಲಸಂಗಮದೇವಾ.

೧೧೭. ಬಂದುದ ಕೈಕೊಳ್ಳ ಬಲ್ಲರೆ ನೇಮ. ಇದ್ದುದ ವಂಚನೆಯ ಮಾಡದಿದ್ದರೆ ಅದು ನೇಮ. ನಡೆದು ತಪ್ಪದಿದ್ದರೆ ಅನು ನೇಮ. ನುಡಿದು ಹುಸಿಯದಿದ್ದರೆ ಅದು ನೇಮ. ನಮ್ಮ ಕೂಡಲಸಂಗನ ಶರಣರು ಬಂದರೆ ಒಡೆಯರಿಗೊಡವೆಯನರ್ಪಿಸುವದೇ ನೇಮ.

೧೧೮. ಹಾಲನೇಮ. ಹಾಲಕೆನೆಯ ನೇಮ, ಕೆನೆಯು ತಪ್ಪಿದ ಬಳಿಕ ಕಿಚ್ಚಡಿಯ ನೇಮ, ಬೆಣ್ಣೆಯ ನೇಮ, ಬೆಲ್ಲದ ನೇಮ. ಜಂಬಿಲಿಯ ನೇಮವದವರನಾರನೂ ಕಾಣೆ. ಕೂಡಲಸಂಗನ ಶರಣರಲ್ಲಿ ಜಂಬಿಲಿಯ ನೇಮವದಾತ ಮಾದಾರ ಚನ್ನಯ್ಯ.

೧೧೯. ಮಾಡಿ, ಮಾಡಿ, ಕೆಟ್ಟರು ಮನವಿಲ್ಲದೆ. ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ. ಮಾಡುವ ನೀಡುವ ನಿಜಗುಣವುಳ್ಳರೆ, ಕೂಡಿಕೊಂಬ ನಮ್ಮ ಕೂಡಲಸಂಗಮದೇವಾ.

೧೨೦. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಏಡಿಸಿ ಕಾಡಿತ್ತು ಶಿವನ ಡಂಗುರ. ಮಾಡಿದೆನೆನ್ನದಿರಾ ಲಿಂಗಕ್ಕೆ. ಮಾಡಿದೆನೆನ್ನದಿರಾ ಜಂಗಮಕ್ಕೆ. ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ ಬೇಡಿತ್ತ ನೀವನು ಕೂಡಲಸಂಗಮದೇವಾ.

೧೨೧. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಬಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ. ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ.

೧೨೨. ಕೆಡೆ ನಡೆಯದೆ, ಕೆಡೆ ನುಡಿಯದೆ, ಅನ್ಯರ ಪ್ರತಿಪಾದಿಸದಿದ್ದರೆ ಏನ ಮಾಡನಯ್ಯ ಲಿಂಗವು? ಏನ ಕೊಡನಯ್ಯ ಲಿಂಗವು?

ತಾನೇನ ಬೇಡಿಮದನೀವನಾಗಿ, ನಂಬಿಕೆಯುಳ್ಳ ಶಿವಭಕ್ತಂಗೆ ಇದೇ ದಿವ್ಯ ಕೂಡಲಸಂಗಮದೇವಾ.

೧೨೩. ಸ್ವಾಮಿಭೃತ್ಯ ಸಂಬಂಧಕ್ಕೆ ಅವುದು ಪಥವೆಂದರೆ ದಿಟವ ನುಡಿವುದು, ನುಡಿದಂತೆ ನಡೆವುದು. ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲಸಂಗಮದೇವಾ.

೧೨೪. ಸತ್ಯವುಳ್ಳ ಭಾಂಡವ ತುಂಬುವುದಯ್ಯಾ! ಸುಯಿಧಾನವಯ್ಯ! ಸುಯಿಧಾನವಯ್ಯ! ಮನ ಧಾರೆವಟ್ಟಲು. ಕೂಡಲಸಂಗನ ಶರಣರು ಹಿಡಿಯದ ಭಾಂಡನು ಆರಾದಡಾಗಲಿ ಹೋಗಲೀಯರಯ್ಯಾ.

೧೨೫. ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ. ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ. ಕೂಡಲಸಂಗಮದೇವಾ ನೀನೇ ಪ್ರಮಾಣು.

೧೨೬ ಪುಣ್ಯಪಾಪಂಗಳೆಂಬುವು ತಮ್ಮ ಇಷ್ಟವು ಕಂಡಿರೇ. ಅಯ್ಯ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ. ದೇವಾ ಭಕ್ತ ಜಯ ಜೀಯ ಎಂಬ ನುಡಿಯೊಳಗೆ ಕೈಲಾಸವೈದದೇ ಕೂಡಲಸಂಗಮದೇವಾ?

೧೨೭. ಏನಿ ಬಂದಿರಿ, ಹದುಳವಿದ್ದಿರೆಂದರೆ, ನಿಮ್ಮ ವೈಸಿರಿ ಹಾರಿ ಹೋಹುದೇ? ಕುಳ್ಳಿರೆಂದರೆ ನೆಲ ಕುಳಿ ಹೋಹುದೇ? ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೇ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದರೆ ಮೂಗ ಕೊಯ್ಯದೆ ಮಾಣ್ಬನೇ ಕೂಡಲಸಂಗಯ್ಯ?

೧೨೮. ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯ? ನಗುವುದು, ನುಡಿವುದು ಶಿವಭಕ್ತರೊಡನೆ. ಸುಮ್ಮನೆ ಹಮ್ಮು ಬಿಮ್ಮಾಗಿರಲೇಕಯ್ಯ? ॥ಶ್ಲೋ॥ ಅಭ್ಯಾಸಸ್ಯ ವಿಹೀನಸ್ಯ। ತಸ್ಯ ಜನ್ಮ ನಿರರ್ಥಕಂ। ಗುರೋರಪಿ ಸಮಂ ಹಾಸ್ಯಂ। ಕರ್ತವ್ಯಂ ಕುಟಿಲಂ ವಿನಾ॥ ನಮ್ಮ ಕೂಡಲಸಂಗನ ಶರಣರೊಡನೆ ಮನದೆರೆದು ಮಾತನಾಡುವುದಯ್ಯಾ.

೧೨೯. ಭಕ್ತಿ ಎಂಬ ನಿಧಾನವ ಸಾಧಿಸುವರೆ, ಶಿವಪ್ರೇಮವೆಂಬ ಅಂಜನವನೆಚ್ಚು? ಕೊಂಬುದು. ಭಕ್ತನಾದವಂಗೆ ಇದೇ ಪಥವಾಗಿರಬೇಕು ನಮ್ಮ ಕೂಡಲಸಂಗನ ಶರಣರ ಅನುಭಾವ ಗಜವೈದ್ಯ.

೧೩೦. ಕಂಡ ಭಕ್ತರಿಗೆ ಕೈ ಮುಗಿವಾತನೇ ಭಕ್ತ. ವೃದುವ ಚನವೇ ಸಕಲ ಜಪಂಗಳಯ್ಯಾ! ವೃದುವಚನವೇ ಸಕಲ ತಪಂಗ ಳಯ್ಯಾ! ಸದುವಿನಯವೇ ಸದಾಶಿವನ ಒಲುಮೆಯಯ್ಯ! ಕೂಡಲಸಂ ಗಯ್ಯನಂತಲ್ಲದೊಲ್ಲನಯ್ಯ.

೧೩೧. ಇತ್ತ ಬಾರಯ್ಯ, ಇತ್ತ ಬಾರಯ್ಯ, ಎಂದು ಭಕ್ತರೆಲ್ಲರು ಕೂರ್ತು ಹತ್ತೆ ಕರೆವುತಿರಲಿಕೆ ಮತ್ತೆ ಕೆಲಕೆ ಹೋಗಿ ಶರಣೆಂದು ಹಸ್ತಬಾಯನೆ ಮುಚ್ಚಿ, ಕಿರಿದಾಗಿ ಭೃತ್ಯಾಚಾರವ ನುಡಿವು ವಿನಯ ತದ್ಭಾವನವುಳ್ಳವರ ಎತ್ತಿಕೊಂಬನಯ್ಯ, ಕೂಡಲಸಂಗಮದೇವಾ, ಪ್ರಮ ಥರ ಮುಂದ.

೧೩೨. ಭಕ್ತ ಭಕ್ತನ ಮನೆಗೆ ಬಂದರೆ, ಭೃತ್ಯಾಚಾರವ ಮಾಡ ಬೇಕು. ಕರ್ತನಾಗಿ ಕಾಲ ತೊಳೆಯಿಸಿಕೊಂಡರೆ ಹಿಂದೆ ಮಾಡಿದ ಭಕ್ತಿಗೆ ಹಾನಿ. ಲಕ್ಷ ಗಾವುದ ದೂರಿಯ ಹೋಗಿ, ಭಕ್ತನು ಭಕ್ತನ ಕಂಬುದು ಸದಾಚಾರ. ಅಲ್ಲಿ ಕೂಡಿ ದಾಸೋಹವ ಮಾಡಿದರೆ ಕೂಡ ಕೊಂಬನು ನಮ್ಮ ಕೂಡಲಸಂಗಯ್ಯ.

೧೩೩. ದಯವಿಲ್ಲದ ಧರ್ಮವದಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ. ದಯವೇ ಧರ್ಮದ ಮೂಲವಯ್ಯ. ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ.

೧೩೪. ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ? ತನಗಾ ದಡೆಗೇನು? ಅವರಿಗಾದಡೆಗೇನು? ತನುವಿನ ಕೋಪ ತನ್ನ ಹಿರಿಯತ ನದ ಕೇಡು. ಮನದ ಕೋಪ ತನ್ನ ಅರುಹಿನ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆಯ ಸುಡದು ಕೂಡಲಸಂಗಮ ದೇವಾ.

೧೩೫. ಅರ್ಥಕ್ಕೆ ತಪ್ಪಿದರೇನು? ಪ್ರಾಣಕ್ಕೆ ತಪ್ಪಿದರೇನು? ಅಭಿ ಮಾನಕ್ಕೆ ತಪ್ಪಿದರೇನು? ಶರಣರು ಶರಣರಲಿ ಗುಣವನರಸುವರೆ? ಕೂಡಲಸಂಗನ ಶರಣರು ನೊಂದು ಸೈರಿಸಬೇಕು.

ಭಕ್ತಸ್ಥಲ.

೧. ಕಾಣದ ಠಾವಿನಲ್ಲಿ ಜರಿದರೆಂದರೆ ಕೇಳಿ ಪರಿಣಾಮಿಸಬೇಕು. ಆದೇನು ಕಾರಣ? ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ. ಎನ್ನ ಮನದ ತದ್ವೇಷವಳಿದು, ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.

೨. ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ! ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯ! ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡಿಯಾಣಿಯ ಮಾಡಿ, ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿಸಲುಹು ಕೂಡಲಸಂಗಮದೇವಾ.

೩. ॥ಶ್ಲೋ॥ ವೇದಾದಿ ನಾವು ನಿರ್ನ್ನಮಂ। ಮಹತ್ವಂ ಮಹದೀಶ್ವರಂ। ಗುರೂಕ್ತ ಮನ್ತ್ರ ಮಾರ್ಗೇಣ। ಇಷ್ಟ ಲಿಂಗಂ ತು ಶಾಂಕರೀ॥ ಎಂದುದಾಗಿ ವಚನಸಾತಕವೆನ್ನ, ವಚನದೋಷವೆನ್ನ ಕಾಡಿ ಕಾಡಿ ಕೆಡಿಸಿಹವೆನ್ನ, ಕೂಡಲಸಂಗಮದೇವಾ ಅಹಂಮೆಂಬ ಅಹಂಕಾರವೆನ್ನ.

೪. ಅವರಿವರೆನ್ನದೆ, ಚರಣಕ್ಕೆರಗಲು, ಅಯ್ಯ, ತನುವೇರಿ ಬೆಬ್ಬನೆ ಬೆರೆವೆ ನಾನು. ಕೆಚ್ಚು ಬೆಳೆಯಿತ್ತಯ್ಯ! ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳುಕನ ಮಾಡಿ, ಬೆಳುಗಾದಂತೆ ಮಾಡು ಕೂಡಲಸಂಗಮದೇವಾ.

೫. ನಡೆಯ ಕಂಡು ನಂಬೆ. ನುಡಿಯೆಲ್ಲ ಉಪಚಾರ. ಮಿಗಿಲೊಂದು ಮಾತು ಬಂದರೆ ಸೈರಿಸಲಾರೆನು. ತುಯ್ಯಲಾದೊಡೆ, ಉಂಬೆ. ಹುಯ್ಯಲಾದೊಡೆ ಓಡುವೆ. ಆಳು ಬೇಡಿದೊಡೆ ಆಳ್ವನೆನಗೀವನಯ್ಯ. ಆಳಾಗಿ ಹೊಕ್ಕು, ಅರಸಾಗಿ ನಡೆವಡೆ ಆಳಗೊಂಡಿತ್ತೆನ್ನ ಕೂಡಲಸಂಗನ ಭಕ್ತಿ.

೬. ಇರಿಸಿಕ್ಕೊಂಡು ಭಕ್ತರಾದರೆಮ್ಮವರು. ತರಿಸಿಕ್ಕೊಂಡು ಭಕ್ತರಾದರೆಮ್ಮವರು. ಜರಿಸಿಕ್ಕೊಂಡು ಭಕ್ತರಾದರೆಮ್ಮವರು. ಕೊರಿಸಿಕ್ಕೊಂಡು ಭಕ್ತರಾದರೆಮ್ಮವರು. ಕೂಡಲಸಂಗನ ಶರಣಾಗೆ ಮುನಿಸ ತಾಳಿ ಎನ್ನ ಭಕ್ತಿ ಅರೆಯಾಯಿತ್ತು.

೭. ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ. ಕುಂದು ಹೆಚ್ಚು ನುಡಿವೆ. ಒಂದು ಮಾತಿನ ಗೆಲ್ಲಕ್ಕೆ ಹಿಡಿದು ಹೋರುವೆ. ಕೂಡಲ ಸಂಗನ ಶರಣರೆನ್ನಾಳ್ದರೆಂಬೆ.

೮. ಇಲ್ಲವೆಯ ಮೇಲೆ ಕಂಚೊಡೆದಂತೆ, ಬಡಮನವೆನ್ನ ಕಾಡಿ ಹಿತಯ್ಯ. ಮತಿ ಇಲ್ಲದ ಮರುಳ ನಾನಯ್ಯ! ಭಕ್ತಿಯಿಲ್ಲದ ಬಡವ ನಾನು.! ನಿಮ್ಮ ನೆನಹಿಲ್ಲದೆ ನಿರ್ಭಾಗ್ಯನಾದೆ. ಎನಗೆ ನೀ ಕರುಣಿಸಾ ಕೂಡಲಸಂಗಮದೇವಾ.

೯. ಲಿಂಗವ ನೆಚ್ಚದೀ ಮನವು. ಜಂಗಮವ ನಂಬದೀ ಮನವು. ಕೂಪರ ಕಂಡರೆ, ಒಲ್ಲದೀ ಮನವು. ಈ ಮನದ ಭ್ರಮೆಯನೆಲ್ಲವ ಮರಿಸಿ ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.

೧೦. ಆಶನ ಕುಂದದು, ವ್ಯಸನ ಮಾಣದು, ಅರ್ಥವಡಗದು, ಬೆವಹಾರ ಮಾಣದು. ಮಜ್ಜನಕ್ಕೆರೆವೆನಯ್ಯ! ಕಾಯವಿಕಾರಿಯಾನು. ಮಜ್ಜನಕ್ಕೆರೆವೆನಯ್ಯ! ಜೀವವಿಕಾರಿಯಾನು. ಮಜ್ಜನಕ್ಕೆರೆವೆನಯ್ಯಾ! ಶರಣನಲ್ಲ, ಲಿಂಗೈಕ್ಯನಲ್ಲ. ಕೂಡಲಸಂಗಮದೇವರಲ್ಲಿ ಅಂತರ ಬಿಂತರನಾನಯ್ಯಾ.

೧೧. ಕುದರನೇಸು ತೊಳೆದರೆಯು ಕೆಸರು ಮಾಬುದೇ? ಎನ್ನ ಕಾಯವಲುಳ್ಳ ಅವಗುಣಂಗಳ ಕಳೆದು, ಕೃಪೆಯ ಮಾಡಯ್ಯ! ಕಂಬಳಿಯಲ್ಲಿ ಕಣಕವ ನಾದಿದಂತೆ, ಕಾಣಿರೆ ಎನ್ನ ಮನ. ಕೂಡಲಸಂಗಮದೇವ ನಿಮಗೆ ಶರಣೆಂದು ಶುದ್ಧ ಕಾಣಯ್ಯ.

೧೨. ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾರೆನಯ್ಯ! ನಿಮ್ಮುವ ಪೂಜಿಸಿ ಭವಬಂಧನ ಬಿಡದೇಕಯ್ಯಾ? ಹಿಂದಣ ಜನ್ಮದ ಚಿನ್ಹ ಬಿಡದನ್ನಕ್ಕ, ನಿಮ್ಮ ಪೂಜಿಸಿ ಏನೆನಯ್ಯ! ಎನ್ನ ಮನದ ಅವಗುಣವ ಕಳೆದು ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.

೧೩. ದುರ್ವ್ಯಸನಿ, ದುರಾಚಾರಿ ಎಂದೆನಿಸದಿರಯ್ಯಾ! ಎನ್ನ ಲಿಂಗ ವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯ. "ಅವಶ್ಯಮನುಭೋ

ಕ್ತವ್ಯಂ" ಎಂದೆನಿಸದಿರಯ್ಯ! ಕೂಡಲಸಂಗಮದೇವಾ ನೆರೆಗೊಡ್ಡಿ ಬೇಡುವೆನು.

೧೪. ಧೃತಿಗೆಟ್ಟ ಅನ್ಯರ ಬೇಡದಂತೆ, ಮತಿಗೆಟ್ಟ ಪರರ ಹೊಗಳದಂತೆ, ಪರಸತಿಯ ರತಿಗೆ ಮನವೆಳಸಿದಂತೆ, ಶಿವಪಥ ಒಲ್ಲದವರೊಡನಾಡದಂತೆ, ಅನ್ಯಜಾತಿಯ ಸಂಗವ ಮಾಡದಂತೆ, ಎನ್ನ ಪ್ರತಿಪಾಲಿಸು ಕೂಡಲಸಂಗಮದೇವಾ.

೧೫. ಮತ್ತೊಂದ ಕಾಣದಂತೆ, ಮತ್ತೊಂದ ಕೇಳದಂತೆ, ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸಯ್ಯಾ ಕೂಡಲಸಂಗಮದೇವಾ.

೧೬. ಮತಿಮಂದನಾಗಿ ಗತಿಯ ಕಾಣದೆ ಇದ್ದೆನಯ್ಯ! ಹುಟ್ಟುಗುರುಡನ ಕೈಯ್ಯ ಕೋಲು ಕೊಟ್ಟು ನಡಿಸುವಂತೆ, ನಡಿಸಯ್ಯ ಎನ್ನ! ನಿಮ್ಮ ಶರಣರ ಮಿಕ್ಕುವ ಒಕ್ಕುವ ನಚ್ಚಿಸು ಮಚ್ಚಿಸು ಕೂಡಲಸಂಗಮದೇವಾ.

೧೭. ಕಾಣದುದನೆಲ್ಲವ ಕಾಣಲಾರೆನಯ್ಯ! ಕೇಳದುದನೆಲ್ಲವ ಕೇಳಲಾರೆನಯ್ಯ! ದ್ರೋಹವಿಲ್ಲ ಎಮ್ಮ ಶಿವನಲ್ಲಿ. ಸೀಮೆಯಯ್ಯಾ! ಒಲೆಯ ಮುಂದಿನ್ನು ಮಾಡದ ಕನಸ ಕಾಂಬವರನೊಲ್ಲನಯ್ಯ ಕೂಡಲಸಂಗಮದೇವಾ.

೧೮. ಕಾಣಬಹುದೆ ಪರುಷದ ಗಿರಿಯಂಧಕಂಗೆ? ಅರಿಯಬಹುದೆ ರಸನ ಭಾವಿ ನಿರ್ಭಾಗ್ಯಂಗೆ? ತೆಗೆಯಬಹುದೆ ಕಡವರನ ದರಿದ್ರಂಗೆ? ಕರೆಯಬಹುದೆ ಕಾಮಧೇನುವಶುದ್ಧಂಗೆ? ಹೊನ್ನೆಯ ಹುಳವ ಕಂಡು ನರಿ ತನ್ನ ಬಾಲವ ಹುಣ್ಣು ಮಾಡಿಕೊಂಡರೆ ಹೋಲಬಹುದೆ? ಎನ್ನೊಡೆಯ ಕೂಡಲಸಂಗನ ಶರಣರನು ಪುಣ್ಯವಿಲ್ಲದೆ ಕಾಣಬಹುದೆ?

೧೯. ಏತಕ್ಕೆ ನಾ ನಿಮ್ಮ ದೇವರೆಂದರಿದೆನು? ಇಂತಾಗಿ ನೀವೆನ್ನ ನಾರೆಂದರಿಯರಿ. ನಂಬಲರಿಯೆ ನಂಬಿಸಲರಿಯೆ. ಒಲಿಯಲರಿಯೆ, ಒಲಿಸಲರಿಯೆ. ॥ಶ್ಲೋ॥ ಯಥಾ ಭಾವಸ್ತಥಾ ಲಿಂಗಂ ! ಸತ್ಯಂ ಸತ್ಯಂ ನ ಸಂಶಯಃ ॥ ಯಥಾ ಭಕ್ತಿಸ್ತಥಾ ಸಿದ್ಧಿಃ। ಸತ್ಯಂಸತ್ಯಂ ನ ಸಂಶಯಃ ॥ ಕೂಡಲಸಂಗಮದೇವ ಕೇಳಯ್ಯ, ಕೋಟಿ ಕೋಟಿ ವರುಷ ಕೋಟಲೆಗೊಂಡೆನಯ್ಯ.

೨೦. ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯಾ! ವಿಭೂತಿಯನೆ ಹೂಸು ರುದ್ರಾಕ್ಷಿಯನೆ ಕಟ್ಟಿ, ಶಿವ ನಿಮ್ಮ ಒಲವಿಲ್ಲದಂತೆ ಆಗಿದ್ದೆನಯ್ಯಾ! ಕಟ್ಟಿ ಬಾಳುವರಿಲ್ಲ ಎಮ್ಮವರ ಕುಲದಲ್ಲಿ. ನೀನೊಲಿದಂತೆ ಸಲಹಯ್ಯ ಕೂಡಲಸಂಗಮದೇವಾ.

೨೧. ಉದಯಾಸ್ತಮಾನವೆನ್ನ ಬೆಂದ ಬಸುರಿಂಗೆ ಕುದಿಯಲಲ್ಲದೆ ನಿಮ್ಮ ನೆನೆಯಲು ತೆರಹಿಲ್ಲವಯ್ಯಾ! ಎಂತೋ ಲಿಂಗ ತಂದೆ ಎಂತಯ್ಯ! ಎನ್ನ ಪೂರ್ವಲಿಖಿತ ಬೆರಣಿಯನಾಯಲಲ್ಲದೆ, ಅಟ್ಟಣ್ಣಿ ತೆರಹಿಲ್ಲೆನಗೆ. ನೀ ಕರುಣಿಸು ಕೂಡಲಸಂಗಮದೇವಾ.

೨೨. ತಾಮಸದ ಮುಸುಕು ಕಂಗಳ ಕೆಡಿಸಿತ್ತೆನ್ನ ಭಕ್ತಿ. ಕಾಮವೆಂಬ ಅಗ್ನಿಯಲ್ಲಿ ಮುರಿದಿಕ್ಕಿತ್ತೆನ್ನ ಭಕ್ತಿ. ಉದರಕ್ಕೆ ಕುದಿಕುದಿದು ಮುಂದುಗೆಡಿಸಿತ್ತೆನ್ನ ಭಕ್ತಿ. ಇವಿರನಾಶ್ರಯಿಸ ಹೋಯಿತ್ತೆನ್ನ ಭಕ್ತಿ. ಹೆಣ ಮೂಳ ನಾಳ ನಾನು ಕೂಡಲ ಸಂಗಮದೇವಾ ಕ್ಷಣ ಹದುಳವಿರದೆ ಬಾಯ ಟೊಣೆದು ಹೋಯಿತ್ತೆನ್ನ ಭಕ್ತಿ.

೨೩. ಏನಿದ್ದರೇನಿದ್ದರೊಲ್ಲದು ನಿಮ್ಮನುಭಾವಕ್ಕೆನ್ನ ಮನವು. ಡಂಭಕನೆಂಬವ ನಾನು ಕಂಡಯ್ಯ. ಕೂಡಲಸಂಗನ ಪೂಜಿಸಿ, ಮಾನವರಾಸೆ ಬಿಡದಾಗಿ.

೨೪. ಬೆಲ್ಲವ ತಿಂದ ಕೋಡಗನಂತೆ ಸಿಹಿಯ ನೆನೆಯದಿರಾ ಮನವೇ. ಕಬ್ಬ ತಿಂದ ನರಿಯಂತೆ ಹಿಂದಕ್ಕೆಳಸದಿರಾ ಮನವೇ. ಗಗನವ ನಡರಿದ ಕಾಗೆಯಂತೆ, ದೆಸೆದೆಸೆಗೆ ಹಂಬಲಿಸದಿರಾ ಮನವೇ. ಕೂಡಲಸಂಗನ ಶರಣರ ಕಂಡು ಲಿಂಗವೆಂದು ನಂಬು ಮನವೇ.

೨೫. ಒಡೆಯನ ಕಂಡರೆ, ಕಳ್ಳನಾಗದಿರಾ ಮನವೇ. ಭವದ ಬಾಧೆಯ ತಪ್ಪಿಸಿಕೊಂಬರೆ, ನೀನು ನಿಯತವಾಗಿ ಭಯಭರಿತನಾಗಿ ಅಹಂಕಾರಿಯಾಗದೆ ಶರಣೆನ್ನು ಮನವೇ. ಕೂಡಲಸಂಗನ ಶರಣರಲ್ಲಿ ಭಕ್ತಿಯ ನೂನುವರೆ, ಕಿಂಕರನಾಗಿ ಬದುಕು ಮನವೇ.

೨೬. ಕೋಟಾನುಕೋಟಿ ಜಪವ ಮಾಡಿ ಕೋಟಲೆಗೊಳಲದೇಕೆ ಮನವೇ? ಕಿಂಚಿದ್ಗೀತವನಂತಕೋಟಿ ಜಪ. ಜಪವೆಂಬುದೇಕೆ ಮನವೇ ? ಕೂಡಲಸಂಗನ ಶರಣರ ಕಂಡು, ಆಡಿ, ಹಾಡಿ, ಬದುಕು ಮನವೇ.

೨೭. ಮನವೇ, ನಿನ್ನ ಜನ್ಮದ ಪರಿಭವವ ಮರೆದೆಯಲ್ಲಾ ಮನವೇ. ಲಿಂಗವ ನಂಬು ಕಂಡಾ ಮನವೇ. ಜಂಗಮವ ನಂಬು ಕಂಡಾ ಮನವೇ. ಕೂಡಸಂಗಮದೇವರ ಬಿಡದೆ ಬೆಂಬತ್ತು ಕಂಡಾ ಮನವೇ.

೨೮. ಸುರರ ಬೇಡಿದರಿಲ್ಲ. ನರರ ಬೇಡಿದರಿಲ್ಲ. ಬರಿದೆ ಧೃತಿಗೆಡಬೇಡ ಮನವೇ. ಅರನಾದಡೆಯೂ ಬೇಡಿ ಬೇಡಿ, ಬರಿದೆ ಧೃತಿಗೆಡ ಬೇಡ ಮನವೇ. ಕೂಡಲಸಂಗಮದೇವನಲ್ಲದೆ, ಅರ ಬೇಡಿದರಿಲ್ಲ ಮನವೇ.

೨೯. ಆಡಿ ಅಳುಪವಿರಾ. ಲೇಸ ಮಾಡಿ ಮರುಗದಿರಾ. ಎಲೆ ಮನವೇ ಕೂಡಿ ತಪ್ಪದಿರಾ. ಬೇಡಿದನಂಗೆ ಇಲ್ಲೆನ್ನದಿರಾ ಕಂಡ್ಯಾ! ನಾಡವಮಾತ ಬೇಡ ಸೆರೆಗೊಡ್ಡಿ ಬೇಡು ಕೂಡಲ ಸಂಗನ ಶರಣರ.

೩೦. ಹೃದಯದಿ ಕತ್ತುರಿ, ತುದಿ ನಾಲಿಗೆ ಬೆಲ್ಲಂಬೋ ಆಡಿ ಹೆನೆಂಬೋ ಹಾಡಿಹೆನೆಂಬೋ. ನಿಚ್ಚನಿಚ್ಚ ಶಿವರಾತ್ರಿಯ ಮಾಡಿಹೆನೆಂಬೋ. ಆನು ಎನ್ನಂತೆ ಮನ ಮನದಂತೆ, ಕೂಡಲಸಂಗಮದೇವ ತಾನು ತನ್ನಂತೆ.

೩೧. ಒಳ್ಳಿಹ ವೈಲಾರನ ಒಳಗೆಲ್ಲ ಸಣಬು. ಹೊರಗಣ ಬಣ್ಣ ಕರ ಲೇಸಾಯಿತ್ತಯ್ಯ! ಶ್ವಾನನ ನಿದ್ದೆ ಅಜ್ಞಾನಿಯ ತಪದಂತೆ ಆಯಿತ್ತಯ್ಯ ಎನ್ನ ಮತಿ ಕೂಡಲಸಂಗಮದೇವಾ.

೩೨. ಲೋಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯಾ! ಮನದ ತಾಮಸ ಬಿಡದು, ಮನದ ಕಪಟ ಬಿಡದು, ಶಿವಶರಣೆಂಬುದು ಅಳವಡದಯ್ಯ! ಎನ್ನ ಮನದಲ್ಲಿ ಎರಡುಳ್ಳನ್ನಕ್ಕ ಕೂಡಲಸಂಗಮದೇವರೆಂತೊಲಿವ ?

೩೩. ಮಜ್ಜನಕ್ಕೆರೆವೆನಲ್ಲದಾನು ಸಜ್ಜನವೆನ್ನಲ್ಲಿಲ್ಲವಯ್ಯ. ಎನ್ನಲ್ಲೇ ನರಸುವೆ? ನಂಬಿಯೂ ನಂಬದ ಡಂಭಕ ನಾನಯ್ಯ. ಹಾವ ತೋರಿ ಹವಿಯ ಬೇಡುವಂತೆ ಕೂಡಲಸಂಗಮದೇವಾ.

೩೪. ಕೆಲಕ್ಕೆ ಶುದ್ಧನಾದೆನಲ್ಲದೆ ಎನ್ನ ಮನಕ್ಕೆ ಶುದ್ಧನಾಗೆನಯ್ಯ! ಕೈಮುಟ್ಟಿ ಪೂಜಿಸುವೊಡೆ, ಎನ್ನ ಕೈ ಶುದ್ಧವಲ್ಲಯ್ಯ! ಮನಮುಟ್ಟಿ ಪೂಜಿಸುವೊಡೆ, ಎನ್ನ ಮನ ಶುದ್ಧವಲ್ಲಯ್ಯ! ಭಾವ ಶುದ್ಧವಾದೊಡೆ, ಕೂಡಲಸಂಗಯ್ಯನಿತ್ತ ಬಾ, ಎಂದೆತ್ತಿಕೊಳ್ಳನೇಕಯ್ಯ?

೩೫. ಕುಲಮದಕ್ಕೆ ಹೋರಿ, ಜಂಗಮ ಭೇದವ ಮಾಡುವೆ. ಫಲವೇನು? ನಿತ್ಯ ಲಿಂಗಾರ್ಚನೆ ಸ್ವಾಯಶ್ಚಿತ್ತ. ಛಲಮದಕ್ಕೆ ಹೋರಿ, ಲಿಂಗವ ಭೇದವ ಮಾಡುವೆ. ಜಂಗುಳಿಯ ಕಾವ ಗೋವಳ ಹಲವು ಪಶುವ ನಿವಾರಿಸುವಂತೆ, ತನು ಭಕ್ತನಾಯಿತ್ತು, ಎನ್ನ ಮನ ಭವಿ, ಕೂಡಲಸಂಗಮ್ಮದೇವಾ.

೩೬. ಲಿಂಗದಲ್ಲಿ ಕಠಿಣ ಉಂಟೆ? ಜಂಗಮದಲ್ಲಿ ಕುಲ ಉಂಟೆ? ಪ್ರಸಾದದಲ್ಲಿ ಅರುಚಿಯುಂಟೇ? ಈ ತ್ರಿವಿಧದಲ್ಲಿ ಭಾವಭೇದವನರಸುವೆನು. ಕೂಡಲ ಸಂಗಮದೇವ, ಧಾರೆವಟ್ಟಲೆನ್ನ ಭಕ್ತಿ.

೩೭. ಲೌಕಿಕರ ಕಂಡು, ಆಡುವೆ ಹಾಡುವೆ. ತಾರ್ಕಿಕರ ಕಂಡು, ಆಡುವೆ ಹಾಡುವೆ. ಸಹಜ ಗುಣವೆನ್ನಲಿಲ್ಲಯ್ಯ. ನಿಜಭಕ್ತಿ ಎನಗಿಲ್ಲ. ತಂದೆ ಏಕೋಭಾವ ಎನಗುಳ್ಳರೆ, ಏಕೆ ನೀ ಕರುಣಿಸೆ ಕೂಡಲಸಂಗಮದೇವಾ?

೩೮. ಓತಿ ಬೇಲಿವರಿದಂತೆ, ಎನ್ನ ಮನವಯ್ಯ. ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು. ಬಾವಲ ಬಾಳುವೆಯಂತೆನ್ನ ಮನವು. ನಡುವಿರುಳಿದ್ದ ಕುರುಡಂಗೆ ಅಗುಸೆಯಲ್ಲಿ ಬೆಳಗಾದಂತೆ, ನೀನಿಲ್ಲದ ಭಕ್ತಿಯ ಬಯಸಿದರುಂಟೆ ಕೂಡಲಸಂಗಮದೇವಾ?

೩೯. ಸತ್ಯ ಸಂಬಂಧ ಸಯವಾದ ಭೃತ್ಯಾಚಾರವೆನಗಿಲ್ಲಯ್ಯಾ. ಅನುದಿನ ನಿಮ್ಮ ನೆನೆಯಲು ಭಕ್ತಿ ಇಲ್ಲಯ್ಯ ಎನಗೆ. ಕೂಡಲಸಂಗಮದೇವಾ ಕರುಣಿಸು. ಕೃಪೆಯ ಮಾಡಯ್ಯ.

೪೦. ಶಬ್ದ ಸಂಧಾನೆಯ ನುಡಿಯ ವರ್ತಿಸಿ ನುಡಿವೆ. ತೊಡೆ ಹದ ಕೆಲಸದ ಬಣ್ಣದಂತೆ, ಕಡಿಹಕ್ಕೆ ಒರೆಗೆ ಬಾರದು ನೋಡಾ! ಎನ್ನ ಮನದಲೊಂದು, ಹೃದಯದಲೊಂದು, ವಚನದಲೊಂದು ನೋಡಾ!

ಕೂಡಲಸಂಗಮದೇವಾ ಆನು ಭಕ್ತನೆಂಬ ಹುಸಿಯ ಮಸಕವನೇನ ಬಣ್ಣಿಸುವೆನಯ್ಯ?

೪೧. ಹಾಲತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವ ರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು, ಬೇರೆ ಬಾವಿಯ ತೋಡಿ, ಉಪ್ಪುನೀರನುಂಬವನ ವಿಧಿಯಂತೆ ಆಯಿತ್ತೆನ್ನ ಮತಿ ಕೂಡಲ ಸಂಗಮದೇವಾ.

೪೨. ಜನ್ಮ ಹೊಲ್ಲೆಂಬೆನೆ? ಜನ್ಮವ ಬಿಡಲಹೆನು. ಭಕ್ತರೊಲವ ಪಡೆವನೆ? ಭಕ್ತಿಯ ಪಥವನರಿವೆನು. ಲಿಂಗವೆಂದು ಬಲ್ಲೆನೆ? ಜಂಗ ಮವೆಂದು ಕಾಂಬೆನು. ನಿಚ್ಚ ಶಿವರಾತ್ರಿಯ ಮಾಡಬಲ್ಲೆನೆ? ಕೈಲಾಸವ ಕಾಣಬಲ್ಲೆನು. ಎನ್ನಲ್ಲಿ ನಡೆ ಇಲ್ಲವಾಗಿ, ನಾನು ಭಕ್ತನೆಂತಹನಯ್ಯ ಕೂಡಲಸಂಗಮದೇವಾ?

೪೩. ಉಡುವಿನ ಭಾವದಲ್ಲಿ ಹಡೆದರೆಮ್ಮವರು. ಉಸಿರುವಳ್ಳಯಂತೆ ಎನ್ನಿರವು. ಬಾವಲ ಬಾಳುವೆಯ ತೆರನಂತೆ, ಹೊತ್ತಾರೆ ಎದ್ದ ಕುರು ಡಂಗೆ ಅಗುಸೆಯಲ್ಲಿ ಆಸ್ತಮಯವಾದಂತೆ, ಆನು ಭಕ್ತಿಯ ಬಯಸಿದರ ಹುದೆ ಕೂಡಲಸಂಗಮದೇವಾ?

೪೪. ಬಸಿರ ಬಾಳುವೆಗೆ ನಿಮ್ಮಲ್ಲಿ ಮಸಿಯ ಹೂಸಿ, ನೇರಿಲ ಹಣ್ಣ ಮಾರುವಂತೆ, ಕಾಲಸಾಲ ದಾರಿದ್ರಕ್ಕಂಜಿ ನಿಮ್ಮ ಮರೆಹೊಕ್ಕೆನಯ್ಯ! ಆವುದು ಹುಸಿ ಎಂಬೆ ಆವುದು ಕೆರಿದೆಂಬೆ? ಇದ ನೀನೇ ಬಲ್ಲೆಯಯ್ಯಾ. ಕೂಡಲಸಂಗಮದೇವಾ ನಾನು ಉದರ ಪೋಷಕನಯ್ಯಾ.

೪೫. ಮೂಗ ಕಂಡ ಕನಸಿನಂತಾಯಿತ್ತಯ್ಯ. ಎನ್ನ ಭಕ್ತಿ ಗುಣವ ಹೇಳಬಾರದಾರಿಗೆಯೂ. ಕೇಳಲೆಂತೂ ಬಾರದು. ಎನ್ನ ಎಗ್ಗತನವ ಮಾಣಿಸು ಕೂಡಲಸಂಗಮದೇವಾ.

೪೬. ಕಾಣಿಯ ಲೋಭ, ಕೋಟೆಯ ಲಾಭವ ಕೆಡಿಸಿದುದನಾ ನರಿಯೆನಯ್ಯ. ಭಕ್ತಿಯ ಕುಳವನಾನರಿಯದೆ ಮತಿಗೆಟ್ಟ ಪರಿಯ ನಾನರಿ ಯೆನಯ್ಯ. ಕೂಡಲಸಂಗನ ಶರಣರ ಸಂಗದಿಂದರಿದರೆ, ನಾನು ಬದುಕು ವೆನಯ್ಯಾ.

೪೭. ಏನನೋದಿ, ಏನ ಕೇಳಿ, ಏನ ಮಾಡಿಯೂ ಫಲವೇನು ನಿನ್ನವರೊಲಿಯದನ್ನಕ್ಕ? ಶಿವಶಿವ, ಮಹಾದೇವ, ಬಾಳಿಲ್ಲದವಳ ಒಲೆಯಂತಾಯಿತ್ತಿನಗೆ ಕೂಡಲಸಂಗಮದೇವಾ.

೪೮. ಮುನ್ನೂರರುವತ್ತು ದಿನ ಶ್ರಮವ ಮಾಡಿ, ಕಳನೇರಿ ಕೈಮರೆದಂತಾಯಿತ್ತಿನ್ನ ಭಕ್ತಿ. ಎನಿಸು ಕಾಲ ಲಿಂಗಾರ್ಚನೆಯ ಮಾಡಿ ಏವೆನಯ್ಯ, ಮನದಲ್ಲಿ ದೃಢವಿಲ್ಲದನ್ನಕ್ಕ? ಕೊಡನ ತುಂಬಿದ ಹಾಲನೆಡಹಿ, ಉಡುಗಲೆನ್ನಳವೆ ಕೂಡಲಸಂಗಮದೇವಾ?

೪೯. ಶಬ್ದ ಸುಖಕ್ಕೆ ಮಚ್ಚಿ ಮಾತಿಂಗೆ ಮಾತನೆ ಕೊಟ್ಟು, ಕೆಟ್ಟಿನಯ್ಯಾ! ಅನುಭಾವ ಆಕ್ಕನೆಯಾಗದೆ ಬೆಬ್ಬನೇ ಬೆರೆತೆನಯ್ಯಾ! ಅವ್ವನ ತವ ಕೊಡನ ತುಂಬಿ ಒಡೆಯ ಹೊಯಿದು, ಅರಸಲುಂಟೇ? ಸ್ವಾಮಿ ಭೃತ್ಯಸಂಬಂಧವೆನ್ನ ಭಕ್ತಿ. ಪ್ರತ್ಯುತ್ತರ ನಾಯಕನರಕ, ಕೂಡಲಸಂಗಮದೇವಾ.

೫೦. ಅಂಕ ಓಡಿದರೆ, ತೆತ್ತಿಗಂಗೆ ಭಂಗವಯ್ಯ. ಕಾದಿ ಗೆಲಿಸಯ್ಯ ಎನ್ನನು. ಕಾದಿ ಗೆಲಿಸಯ್ಯ ಕೂಡಲಸಂಗಮದೇವಯ್ಯ ಎನ್ನ ತನು ಮನ ಧನದಲ್ಲಿ ವಂಚನೆ ಇಲ್ಲದೆ.

೫೧. ಹೇಡಿ ಬಿರಿದು ಕಟ್ಟಿದಂತಾಯಿತ್ತಿನ್ನ ವೇಷ. ಕಾದಬೇಕು. ಕಾದುವರೆ ಮನವಿಲ್ಲ. ಆಗಳೇ ಹೋಯಿತ್ತು ಬಿರಿದು. ಹಗರಣ ನಗೆಗೆಡೆಯಾಯಿತ್ತು. ಮಾರಾಂತಕ ಜಂಗಮ ಮನೆಗೆ ಬಂದರೆ, ಕಾಣದಂತಡ್ಡ ಮುಸುಡಿಟ್ಟರೆ, ಕೂಡಲಸಂಗವದೇವ ಜಾಣ ಮೂಗ ಕೊಯ್ವ ಹಲ್ಲು ದೋರಿ.

೫೨. ಅಚ್ಚ ಶರಣರು ನಿಮ್ಮ, ನಿಚ್ಚ ನೆನೆವರು. ಬಚ್ಚ ಬರಿಯ ಮಾತನಾಡುವೆನು. ಒಪ್ಪಚ್ಚಿ ಅರಿಭಕ್ತಿ ನೆನೆಯಲೀಯ್ಯದು ನಿಮ್ಮ ಮೆಚ್ಚರು ನಿಮ್ಮ ಶರಣರು ಎನ್ನ ಕೂಡಲಸಂಗಮದೇವಾ.

೫೩. ಆಡುವದಳವಟ್ಟಿತ್ತು. ಹಾಡುವದಳವಟ್ಟಿತ್ತು. ಅರ್ಚನೆ ಅಳವಟ್ಟಿತ್ತು. ಪೂಜನೆ ಅಳವಟ್ಟಿತ್ತು. ನಿತ್ಯ ಲಿಂಗಾರ್ಚನೆ ಮುನ್ನವೇ ಅಳವಟ್ಟಿತ್ತು. ಕೂಡಲಸಂಗನ ಶರಣರು ಬಂದರೆ, ಎಗೂದೆ ಬಿಸನೆಂಬುದು ಒಪ್ಪಚ್ಚಿಯಳವಡದು.

೫೪. ಒಡೆಯರಿಗೊಡವೆಯನೊಪ್ಪಿಸಲಾರದೆ, ಪೊರೆ ಇಡುವ ಮಾನವ ನಾನೇನೆಂಬೆ? ನೆತ್ತಿಯಲ್ಲಿ ಅಲಗು ತಿರುಹುವಂತಪ್ಪ ವೇದನೆಯಹುದೆನಗೆ. ಕೊಯ್ದು ಮೂಗಿಂಗೆ ಕನ್ನಡಿಯ ತೋರುವಂತಪ್ಪ ವೇದನೆಯಹುದೆನಗೆ. ಬೆಂದ ಹುಣ್ಣಾ ಕಾಬಿಯಲ್ಲಿ ಕೀಸುವಂತಪ್ಪ ವೇದನೆಯಹುದನಗೆ. ಕೂಡಲಸಂಗಮದೇವ ಮಾಡಿ ನೋಡುವ ಹಗರಣವ ನಾ ಮಾಡಿಹೆನೆಂದರೆ ಮನಕ್ಕೆ ಮನ ನಾಚದೆ ಅಯ್ಯಾ?

೫೫. ಹೊರಿಸಿಕೊಂಡು ಹೋದ ನಾಯಿ ಮೊಲನೇನ ಹಿಡಿವು ದಯ್ಯ? ಇರಿಯದ ವೀರ ಇಲ್ಲದ ಸೊಬಗುವ ಹೇಳುವುದೇ ನಾಚಿಕೆ. ಆನು ಭಕ್ತನೆಂತೆಂಬೆನಯ್ಯ, ಕೂಡಲಸಂಗಮದೇವಾ?

೫೬. ಎನ್ನ ಭಕ್ತನೆಂದೆಂಬರು, ಎನ್ನ ಹೊಗಹಂಚೆ ಒಳಬೊಳ್ಳೆ ತನವನರಿಯರಾಗಿ. ಎನ್ನ ಮಾನಾಪಮಾನವು ಶರಣರಲ್ಲಿ, ಜಾತಿವಿಜಾತಿಯು ಶರಣರಲ್ಲಿ, ತನುಮನ ಧನವು ಶರಣರಲ್ಲಿ. ವಂಚನೆಯುಳ್ಳ ಡಂಭಕ ನಾನು. ತಲೆಯೊಡೆಯಂಗೆ ಕಣ್ಣಾ ಬೈಚಿತುವೆ ಕೂಡಲಸಂಗಮದೇವಾ.

೫೭. ನೋಡುವರುಳ್ಳರೆ ಮಾಡುವೆ ದೇಹಾರವ. ಎನಗೊಂದು ನಿಜವಿಲ್ಲ. ಎನಗೊಂದು ನಿಸ್ಪತ್ತಿ ಇಲ್ಲ. ಲಿಂಗವ ತೋರಿ ಉದರವ ಹೊರೆವ ಭಂಗಗಾರ ನಾನು ಕೂಡಲಸಂಗಮದೇವಾ.

೫೮. ಭಕ್ತಿ ಎಳ್ಳಿನಿತಿಲ್ಲ. ಯುಕ್ತಿ ಶೂನ್ಯನಯ್ಯ ನಾನು. ತನು ವಂಚಕ ಮನವಂಚಕ ಧನವಂಚಕ ನಾನಯ್ಯ! ಕೂಡಲಸಂಗಮದೇವ ಮಳಲೊಟ್ಟಿಲಿನ್ನ ಮಾತು.

೫೯. ತನು ನಿಮ್ಮದೆಂಬೆ, ಮನ ನಿಮ್ಮದೆಂಬೆ, ಧನ ನಿಮ್ಮದೆಂಬೆ. ಮತ್ತೆಯೂ ವಂಚನೆ ಮಾಣದಯ್ಯಾ! ಲಿಂಗ ಜಂಗಮವೆಂಬೆ, ಜಂಗಮ ಲಿಂಗವೆಂಬೆ, ಮತ್ತೆಯೂ ವಂಚನೆ ಮಾಣದಯ್ಯ. ಒಡಲೊಡವೆ ಹಡೆದರ್ಥ ನಿಮ್ಮದೆಂದರಿಯದೆ ಕೆಮ್ಮನೆ ಕೆಟ್ಟೆ ಕೂಡಲಸಂಗಮದೇವಾ.

೬೦. ಊರ ಸೀರೆಗೆ ಆಸಗ ಬಡಿವಡೆದಂತೆ, ಹೊನ್ನೆನ್ನದು, ಹೆಣ್ಣೆನ್ನದು ಮಣ್ಣೆನ್ನದು ಎಂದು ಮರುಳಾದೆ. ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ ಕೂಡಲಸಂಗಮದೇವಾ.

೬೧. ಅರ್ಥಪ್ರಾಣಾಭಿಮಾನ ನಿಮ್ಮದೆಂಬೆ. ಮತ್ತೆಯೂ ಆಸೆ ಬಿಡದನ್ನಕ್ಕ, ಭಕ್ತನೆಂತಪ್ಪೆನಯ್ಯಾ, ಶರಣನೆಂತೆನಿಸುವೆನಯ್ಯಾ, ಕೂಡಲಸಂಗನ ಶರಣರ ಸಕಲ ರತಿಗೆ ಸಲ್ಲವನ್ನಕ್ಕ?

೬೨. ನಿಮ್ಮ ಭಕ್ತಿಯಲ್ಲಿ ದರದುರನೆಂಬೆ. ದಿಟಕ್ಕೆ ಬಂದರೆ, ಅಡ್ಡ ಮುಖವಿಕ್ಕುವೆ. ಗರುಡಂಗೆ ಘಟಸರ್ಪನ ತೋರುವಂತೆ, ಶಿವಶರಣರೆಂದರೆ, ಕಿವಿ ಕೇಳದಂತಿಹೆನು. ಮನಕ್ಕೆ ಮನ ಸಾಕ್ಷಿಯಯ್ಯಾ ಕೂಡಲಸಂಗಮದೇವಾ.

೬೩. ಆದ್ಯರ ವಚನ ಪರುಷವೆಂದೆಂಬೆನು. ಆ ಪರುಷವೆನಗೆಂತು ದೊರೆಕೊಂಬುದಯ್ಯ! ತನುಮನಧನವ ವಿವರಿಸಿ ನುಡಿವೆ. ಸೋಂಕಿಂಗೆ ಸೈರಿಸಲಾರೆ. ಹೊಲೆಯರ ಮದ್ದಳೆಯಂತೆ ನುಡಿವ ಡಂಭಕ ನಾನಯ್ಯ, ಕೂಡಲಸಂಗಮದೇವಾ.

೬೪. ಕಾಂಚನವೆಂಬ ನಾಯ ನೆಚ್ಚಿ ನಿಮ್ಮ ನಾನು ಮರೆದೆನಯ್ಯ! ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆ ಇಲ್ಲ. ಹಡಿಕಿಗೆ ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೆ ಕೂಡಲಸಂಗಮದೇವಾ ?

೬೫. ಒಲಿವ ಗಂಡನೊಮ್ಮೆ ಒಲ್ಲದಿಪ್ಪ ಕಂಡವ್ವಾ! ತಪ್ಪೆನ್ನದು ತಪ್ಪೆನ್ನದು. ತನುಮನ ಧನದಲ್ಲಿ ಮಾಟಕೂಟ ವೆಂದರಿಯದ ತಪ್ಪೆನ್ನದು, ತಪ್ಪೆನ್ನದು. ಕಡೆ ಇಲ್ಲದ ಹುಸಿ ಎನ್ನದು ಕೂಡಲಸಂಗಮದೇವಾ.

೬೬. ಕಾಣುತ್ತ ಕಡೆಗಾಣಿಸಿ ಕೆಡಿಸಿಯರಸುವ ಮತಿಭ್ರಷ್ಟ ನಾನು ಲಿಂಗಯ್ಯ! ತನುಲೋಭ, ಮನಲೋಭ, ಧನಲೋಭ ಮುಂದುಗೆಡಿಸಿ ಕಾಡಿಹವೆನ್ನ. ತನುಮನಧನವ ನಿವೇದಿಸಿದವರ ಮನೆಯ ಮಗ ನಾನಯ್ಯ ಕೂಡಲಸಂಗಮದೇವಾ.

೬೭. ಹಗೆಯಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ? ಕೊಳದ ಮೇಲೆ ಸಂಕೊಲೆಯನಿಕ್ಕುವರೆ? ಬೆಂದ ಹುಣ್ಣಾ ಕಂಬಿಯಲ್ಲಿ ಕೀಸುವರೆ? ಕೂಡಲಸಂಗಯ್ಯ ಕಾಡುವ ಕಾಟ ಸಿರಿಯಾಳಂಗಲ್ಲದೆ ಸೈರಿಸಬಹುದೆ?

೬೮. ಸೋಲಬಲ್ಲರು, ಅವರು ಗೆಲಲರಿಯರಯ್ಯ. ತನುಮನ ಧನದಲ್ಲಿ ವಂಚನೆಯನರಿಯರಯ್ಯ ದಾಸ ಸಿರಿಯಾಳನವರು. ಕೂಡಲ ಸಂಗನ ಶರಣರು ಉಪಚಾರವನರಿಯರಯ್ಯ.

೧೯. ಮಾತಿನಲ್ಲಿ ಶ್ರೋತೃ ಸುಖವನುಡಿಯಬಹುದಲ್ಲದೆ, ಮಾಡುವ ಸತ್ಕ್ರಿಯೆಯಿಂದ ಭಕ್ತನೆನಿಸಲು ಬಾರದು. ಅರ್ಥ ಪ್ರಾಣಾಭಿಮಾನ ವಾರಿಗೆಯೂ ಸಮನಿಸದು ಲಿಂಗ ಮುಖದಲುದಯವಾದ ಶರಣಂಗಲ್ಲದೆ. ಆಯ್ಯ, ಕೂಡಲಸಂಗನ ಶರಣರ ಭಕ್ತಿ ಭಾಂಡಾರವು ಎನಗೆಂತು ಸಾಧ್ಯವಪ್ಪುದು ಹೇಳಿನ್ನ ತಂದೆ?

೨೦. ಬಾಣನಯೂರನಂತೆ ಬಣ್ಣಿಸಬಲ್ಲೆನೆ? ಸಿರಿಯಾಳನಂತೆ ಉಣಲಿಕ್ಕಿ ಬಲ್ಲೆನೆ? ದಾಸಿಮಯ್ಯನಂತೆ, ಉಡಕೊಡಬಲ್ಲೆನೆ? ಉಂಡುಟ್ಟು ಕೊಟ್ಟರೆ ಮುಯ್ಯಿಗೆ ಮುಯ್ಯೆನಿಸಿತ್ತು. ಎನಗೆ ಕೊಟ್ಟರೆ ಧರ್ಮ ಕೂಡಲ ಸಂಗಮದೇವಾ.

೨೧ ದಾಸಿದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ. ಸಿರಿಯಾಳ ತನ್ನ ಮಗನನಿತ್ತು ಪ್ರಾಣ ಪ್ರಸಾದವ ಪಡೆದ. ಬಲ್ಲಾಳ ತನ್ನ ವಧುವನಿತ್ತು ಸಮತೆ ಪ್ರಸಾದವ ಪಡೆದ. ಇವರೆಲ್ಲರು ತಮತಮಗೆ ಮಾಡಿ ಹಡೆದರು ಸಮ್ಯಕ್ಪದವಿಯನು. ನಾನೇನು ಅರಿಯದ ಭಕ್ತಿಯ ಬಡವಂಗೆ ಕರುಣಿಸು ಕೂಡಲಸಂಗಮದೇವಾ.

೨೨. ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯ! ಒಮ್ಮಿಂಗೆ ಕರುಣಿಸಯ್ಯ! ಇದನರಿದು ಇನ್ನು ತಪ್ಪಿದೆನಾದರೆ, ನೀವು ಮಾಡಿತ್ತೆ ಸಲುವುದು ಕೂಡಲಸಂಗಮದೇವಾ.

೨೩. ಎನ್ನ ತಪ್ಪು ಅನಂತಕೋಟಿ. ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದರೆ, ನಿಮ್ಮ ಪಾದವೇ ದಿಬ್ಯ. ಕೂಡಲಸಂಗಮದೇವಯ್ಯ ನಿಮ್ಮ ಪ್ರಮಥರ ಮುಂದೆ ಕೆನ್ನರೀ ಬೊಮ್ಮಣ್ಣನೇ ಸಾಕ್ಷಿ.

೨೪. ಅಡಿಗಡಿಗೆ ಎನ್ನ ಮನವ ಜಡಿದು ನೋಡದಿರಯ್ಯ! ಬಡವನೆಂದೆನ್ನ ಕಾಡದಿರಯ್ಯ! ಎನಗೊಡೆಯರುಂಟು ಕೂಡಲಸಂಗನ ಶರಣರು.

೨೫. ಭಕ್ತಿ ವಿಶೇಷವ ಮಾಡುವರೆ, ಹತ್ತು ಬೆರಳುಂಟು, ಹಾಸಿದುಡಿವರೆ, ತನಗುಂಟು, ತನ್ನ ಪ್ರಮಥರಿಗುಂಟು. ಮಾರಿತಂದೆಗಳಂತೆ, ಎನಗೇಕಹುದಯ್ಯಾ! ರತ್ನದ ಸಂಕೊಲೆಯನಿಕ್ಕಿ ಕಾಡಿಹ ಕೂಡಲ ಸಂಗಮದೇವ, ಶಿವಧೋ ಶಿವಧೋ.

೨೬. ಮನೆ ನೋಡಾ ಬಡವರು. ಮನ ನೋಡಾ ಘನ. ಸೋಂಕಿನಲ್ಲಿ ಶುಚಿ, ಸರ್ವಾಂಗ ಕಲಿ. ಪಸಾರಕ್ಕನುವಿಲ್ಲ. ಬಂದ ತತ್ಕಾಲಕ್ಕುಂಟು. ಕೂಡಲಸಂಗನ ಶರಣರು ಸ್ವತಂತ್ರ ಧೀರರು.

೨೭. ತತ್ವವನರಿದಿಹೆನೆಂದು ವೃತ್ಯುವ ಕರೆಕೊಂಡೆನೆಯ್ಯ. ನಾನೆತ್ತಬಲ್ಲೆನು, ನಿಮ್ಮ ಶರಣರಂತುವನು? ನಾನೆತ್ತಬಲ್ಲೆ ನಿಮ್ಮ ಪ್ರಮಥರಂತುವನು? ಸರ್ವಾಪರಾಧಿಯಾನು. ಎನ್ನ ಮನದ ಕೊನೆಯ ಸೂತಕವಿಂಗದು ಕೂಡಲಸಂಗಮದೇವಾ.

೨೮. ಆ ಮಿಹಿಲಾಳು ಭೋಜದೇವ ಬಲ್ಲಾಳು ಅನು ಸೂಳೆ ನಮ್ಮಕ್ಕ ಸೂಳೆ. ಬೆಳ್ಳಿಗೆ ಆವಿನ ಕರುವೆಂದರೆ ಅದು ಬೃವಾಲು ಕರೆವುದೇ ಕೂಡಲಸಂಗನ ಶರಣರ ಮುಂದೆ ನಾನು ಕಾದೆನು ಬಾಬಿಸಿಲೆ.

೨೯. ಅನೆ ಆ ದಾರಿಯಲ್ಲಿ ಹೊಯಿತ್ತೆಂದರೆ, ಆಡು ಆ ದಾರಿಯಲ್ಲಿ ಹೋಯಿತ್ತೆನ್ನಬಹುದೇ? ಸಂಗನ ಶರಣರಿಗೆ ಅನು ಸರಿ ಎಂದು ಗಳಹಲು ಬಹುದೆ? ಜಂಗಮಕ್ಕೆ ಮಾಡುವ ಭಕ್ತರಿಗೆ ಅನು ಸರಿಯೆ ಹೇಳಾ ಕೂಡಲಸಂಗಮದೇವಾ?

೩೦. ಆ ಕರಿಯಾಕೃತಿಯ ಸೂಕರನ ಹೋಲಿಸಿದರೆ, ಸೂಕರ ಕರಿಯಾಗಬಲ್ಲುದೇ? ಭೂನಾಗನಾಕೃತಿಯನು ವ್ಯಾಳೇಶನ ಹೋಲಿಸಿದರೆ, ಅದು ವ್ಯಾಳೇಶನಾಗಲರಿವುದೆ? ನಾನು ಭಕ್ತನಾದರೇನಯ್ಯ? ನಮ್ಮ ಕೂಡಲಸಂಗಮದೇವರ ಸದ್ಭಕ್ತರ ಹೋಲಲರಿವನೆ?

೩೧ ಮೋಟನ ಮೌಳಿ, ಮೂಕೊರೆಯನ ಶೃಂಗಾರ, ಬೇಟಕುರುಡಂಗೆ ನಗೆಗೆಡೆಯಾಯಿತ್ತು. ನಮ್ಮ ಕೂಡಲಸಂಗನ ಶರಣರ ಮುಂದೆ, ಅನು ಭಕ್ತನೆಂಬ ನಾಚಿಕೆ ಸಾಲದೆ?

೩೨. ಮೂಗಿಲ್ಲದ ಮುಖಕ್ಕೆ ಶೃಂಗಾರನೆ? ವಿಕೃತವೇಷಧಾರಿಯಾನು, ಭಂಡನು, ಲಜ್ಜೆಭಂಡನು, ಕೂಡಲಸಂಗಮದೇವನ ಶರಣರಲ್ಲಿ ಹಾವ ತೋರಿ ಹವಿಯ ಬೇಡುವಂತೆ.

೩೩. ಮಾವಿನ ಕಾಯೊಳಗೊಂದು ಎಕ್ಕೆಯ ಕಾಯಿ ನಾನೈಯ್ಯ! ಅನು ಭಕ್ತನೆಂತೆಂಬೆ, ನಿಮ್ಮ ಶರಣರ ಮುಂದೆ, ನಾಚಿಕೆಯಿಲ್ಲದೆ? ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯ?

೪೪. ಮರದ ನೆಳಲಲ್ಲಿದ್ದು ತನ್ನ ನೆಳಲನರಸಬಹುದೆ? ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯ? ನಿಮ್ಮ ಶರಣರ ಮುಂದೆ, ನಾನೇತರ ಯುಕ್ತನಯ್ಯ? ಆನು ಭಕ್ತನೆಂಬ ನುಡಿ ನುಡದೆ ಕೂಡಲಸಂಗಮದೇವಾ?

೪೫. ಎನಗಿಂದ ಕಿರಿಯರಿಲ್ಲ. ಶಿವಭಕ್ತರಿಗಿಂದ ಹಿರಿಯರಿಲ್ಲ. ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ. ಕೂಡಲಸಂಗಮದೇವಾ ಎನಗಿದೇ ದಿವ್ಯ.

೪೬. ಆನು ಭಕ್ತನಲ್ಲಯ್ಯ. ಆನು ವೇಷಧಾರಿಯಯ್ಯ. ಕಾಟುಗ, ಕೆತ್ತುಗ, ಪೊಲ್ಲುಗನೆಂಬುದು ಎನ್ನ ಹೆಸರು. ಕೂಡಲಸಂಗಮದೇವಾ, ನಿಮ್ಮ ಶರಣರ ಮನೆಯ ಮಗ ನಾನಯ್ಯ.

೪೭. ಡಂಬ ಡಳುಹು ಎನ್ನದಯ್ಯ. ಡಂಭಕನೆಂಬವ ನಾನಯ್ಯ. ನಿಮ್ಮನಂಬಿದ ಶರಣರ ಡಿಂಗರಿಗ ನಾನು, ಕೂಡಲಸಂಗಮದೇವಾ.

೪೮. ಚನ್ನ ಚಾರಮನ ಬಂಟ ನಾನಯ್ಯ. ಎನ್ನ ಚಾಂಗು ಬೊಲ್ಲನ ಕಾವ ಗೋವನೆಂಬರು. ಕೂಡಲಸಂಗನ ಶರಣರೊಡೆಯರಾಗಿ, ತಮ್ಮ ತೊತ್ತಿನ ಮಗನೆಂದು ಒಲಿದಂತೆ ನುಡಿವರು.

೪೯. ಕಾಲಿಲೊದೆದು, ಬಡಿದು ಜಡಿವರಯ್ಯ. ಭಕ್ತಿಯೈದದೆಂದೆನ್ನ ಜರಿವರಯ್ಯ. ನುಡಿವರಯ್ಯ, ಕೂಡಲಸಂಗನ ಶರಣರೊಡೆಯರಾಗಿ.

೫೦. ನಡೆವರಯ್ಯ ಒಡೆಯರು, ತನುಮನ ಧನದ ಮೇಲೆ. ನುಡಿವರಯ್ಯ ಒಡೆಯರು ಒಂದು ನಿಮಿಷ ಬಾರದಿದ್ದರೆ. ಜರಿವರಯ್ಯ ಒಡೆಯರು, ಮನ ಬಂದ ಪರಿಯಲಿ. ಶಿವಶಿವ ಅಣೆವಾಯ್ಯ ಮಂಡೆಯನೂರಿ ಪ್ರಾಣದೊಡೆಯರಯ್ಯ ಕೂಡಲಂಗಮದೇವ ನಿಮ್ಮ ಶರಣರು.

೫೧. ಆರ್ಥಪ್ರಾಣಾಭಿಮಾನಕ್ಕೆ ಒಡೆಯರು ಸದ್ಭಕ್ತರಲ್ಲದೆ ಎನಗಾರು ಇಲ್ಲವಯ್ಯ! ಭೃತ್ಯಾಪರಾಧ ಸ್ವಾಮಿನೋದ್ದಂಡ, ಕೂಡಲಸಂಗಮದೇವಾ, ನೀವೇ ಪ್ರಮಾಣು.

೫೨. ಅರ್ಚಿಸಲರಿಯೆ, ಪೂಜಿಸಲರಿಯೆ, ನಿಚ್ಚ ಶಿವರಾತ್ರಿಯನಾ ಮಾಡಲರಿಯೆ. ಕಪಟನೇಷದಿಂದಾನು ಬಂದಾಡುವೆ. ಕಪಟವೇಷದಿಂದ ಈಶ ನಿಮ್ಮ ದಾಸರ ದಾಸಿಯ ದಾಸ ನಾನಯ್ಯ! ನಿಮ್ಮ ವೇಷಧಾರಿಯ

ಮನೆಪಂಗುಳನು ನಾನಯ್ಯ. ಕೂಡಲಸಂಗಮದೇವ, ನಿಮ್ಮ ಲಾಂಛನವ ಧರಿಸಿಪ್ಪ ಉದರಪೋಷಕ ನಾನಯ್ಯ.

೯೩. ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತೈಯ್ಯ ಚನ್ನಯ್ಯ ನಾದರೆ, ಆನು ಬದುಕುವೆನು. ಮತ್ತತ್ತ ಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ ಸದ್ಗುಣವ ನಾನರಿವೆನಯ್ಯ. ಕಷ್ಟ ಜಾತಿ ಜನ್ಮದಲಿ ಜನಿಸಿದೆ. ಎನಗಿದು ವಿಧಿಯೇ ಕೂಡಲಸಂಗಮದೇವಾ?

೯೪. ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ! ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ. ದಾಸಯ್ಯ ಶಿವದಾನವನೆರೆಯ ನೋಡಯ್ಯ. ಮನ್ನಣೆಯ ಚನ್ನಯ್ಯನೆನ್ನವ ಮನ್ನಿಸ. ಉನ್ನತಮಹಿಮ ಕೂಡಲಸಂಗಮದೇವಾ, ಶಿವಧೋ ಶಿವಧೋ.

೯೫. ಸೆಟ್ಟಿ ಎಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚನ್ನಯ್ಯನ? ಆನು ಹಾರುವನೆಂದಡೆ, ಕೂಡಲಸಂಗಯ್ಯ ನಗುವನಯ್ಯ.

೯೬. ಚನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರೂ ಹೊಲದಲ್ಲಿ ಬೆರಣಿಯನಾಯು ಹೋಗಿ, ಸಂಗವ ಮಾಡಿದರು. ಇವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲಸಂಗಮದೇವ ನೀ ಸಾಕ್ಷಿಯಾಗಿ.

೯೭. ಸೂಳೆಗೆ ಹುಟ್ಟಿದ ಕೂಸಿನಂತೆ, ಅರನಾಡಡೆಯೂ ಅಯ್ಯ ಅಯ್ಯ ಎನಲಾರೆನಯ್ಯ. ಚನ್ನಯ್ಯನೆಮ್ಮಯ್ಯನು, ಚನ್ನಯ್ಯನ ಮಗ ನಾನು ಕೂಡಲಸಂಗನ ಮಹಾಮನೆಯಲು ಧರ್ಮಸಂತಾನದ ಭಂಡಾರಿ ಬಸವನು.

೯೮. ಹರನು ಮೂಲಿಗನಾಗಿ, ಪುರಾತರೊಳಗಾಗಿ, ಬಳಿಬಳಿಯಲು ಬಂದ ಮಾದಾರನ ಮಗ ನಾನಯ್ಯ. ಕಳೆದ ಹೊಲೆಯ ನಮ್ಮಯ್ಯ ಜಾತಿ ಸೂತಕ. ಮಾದಾರನ ಮಗ ನಾನಯ್ಯ. ಪನ್ನಗಭೂಷಣ ಕೂಡಲಸಂಗಯ್ಯ, ಚನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯ.

೯೯. ಅಪ್ಪನು ನಮ್ಮ ಮಾದಾರ ಚನ್ನಯ್ಯ. ಬೊಪ್ಪನು ನಮ್ಮ ಡೋಹರ ಕಕ್ಕಯ್ಯ. ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯ. ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ. ಎನ್ನನೇತಕ್ಕೆ ಅರಿಯಿರಿ ಕೂಡಲಸಂಗಮದೇವ?

೧೦೦. ಭಕ್ತಿ ಇಲ್ಲದ ಬಡವ ನಾನಯ್ಯ! ಕಕ್ಕಯ್ಯನ ಮನೆಯಲ್ಲು ಬೇಡಿದೆ. ದಾಸಯ್ಯನ ಮನೆಯಲ್ಲು ಬೇಡಿದೆ. ಚನ್ನಯ್ಯನ ಮನೆಯಲ್ಲು ಬೇಡಿದೆ. ಎಲ್ಲ ಪುರಾತನರು ನೆರೆದು ಭಕ್ತಿ ಭಿಕ್ಷವನಿಕ್ಕಿದರೆ, ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ.

೧೦೧. ಹಿರಿಯಯ್ಯ ಶ್ವಪಚಯ್ಯ. ಕಿರಿಯಯ್ಯ ಡೋಹರ ಕಕ್ಕಯ್ಯ. ಆಯ್ಯಗಳಯ್ಯ ನಮ್ಮ ಮಾದಾರ ಚನ್ನಯ್ಯ. ಕೂಡಲಸಂಗಮದೇವಾ ನಿಮ್ಮ ಶರಣರು ಎನ್ನ ಸಲಹುವರಾಗಿ.

೧೦೨. ನಮ್ಮ ತಾಯಿ ನಿಂಬಿಯವ್ವೆ. ನೀರನೆರೆದುಂಬಳು. ನಮ್ಮಯ್ಯ ಚನ್ನರಾಯ ಕಂಪಣವ ಹೊರೆವ. ಎಮಗಾರುವಿಲ್ಲವೆಂಬಿರಿ. ನಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು. ನಮಗಾರುವಿಲ್ಲವೆಂಬಿರಿ. ಎಮ್ಮಜ್ಜರಜ್ಜರು ಹಡೆದ ಭಕ್ತಿಯ ನಿಮ್ಮ ಕೈಯ್ಯಲ್ಲು ಕೊಂಬೆ ಕೂಡಲ ಸಂಗಮದೇವ.

೧೦೩. ಎನಗಾರು ಇಲ್ಲ, ಎನಗಾರು ಇಲ್ಲವೆಂಬರು. ಬಾಣನವ ನಾನು, ಮಯೂರನವ ನಾನು, ಕಾಳಿದಾಸನವ ನಾನು. ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ ಚನ್ನಯ್ಯ ಎತ್ತಿ ಮುದ್ರಾಡಿದರೆನ್ನ ಕೂಡಲ ಸಂಗಯ್ಯ.

೧೦೪. ಅಯ್ಯ, ನಿಮ್ಮ ವಂಶಾವಳಿಯಲೊಬ್ಬ ತೊತ್ತಿನ ಮಗ ಹುಟ್ಟಿದಾತನ ತೊತ್ತಿನ ಮಗ ನಾನಯ್ಯ. ಬಳಿದೊತ್ತು, ಬಳಗದೊತ್ತು, ವಂಶದೊತ್ತು ನಾನಯ್ಯ. ಕೂಡಲಸಂಗಮದೇವಾ, ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ಎನ್ನ ತೊತ್ತುತನಕ್ಕೆ ಕೇಡಿಲ್ಲವಯ್ಯ.

೧೦೫. ಕೆಯ್ಯ ಬೊಹರಿಗೆ, ಮಂಡೆಯ ಮೇಲೆ ಸಿಂಬಿ, ಸಿಂಬಳನ ಮನೆಯ ಮಗ ನಾನಯ್ಯ. ಕೂಡಲಸಂಗಮದೇವರ ಮಂಚದ ಕೂಡೇರಿ ಬಂದ ತೊತ್ತಿನ ಮಗ ನಾನಯ್ಯ.

೧೦೬. ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ, ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸಯ್ಯ. ತಾರೌ ಅಗ್ಗವಣಿಯ, ನೀಡೌ ಪತ್ರೆಯ, ಲಿಂಗಕ್ಕೆ ಬೋನವ ಹಿಡಿಯೌ ಎಂಬರು. ಕೂಡಲಸಂಗನ ಮಹಾಮನೆಯಲ್ಲೊಕ್ಕುದನುಣ್ಣೊ ತೊತ್ತೇ ಎಂಬರು.

೧೦೬. ಆನು ನಿಮ್ಮ ಶರಣರಿಗೆ ಮಂಡೆಯ ಬೋಳಿಸಿಕೊಂಡು, ಗಂಡುದೊತ್ತಾದೆನಯ್ಯಾ ಕೂಡಲಸಂಗಮದೇವಾ ನಿಮ್ಮ ಶರಣರಿಗೆ.

೧೦೭. ಆನುದಿನ ಮನಮುಟ್ಟ ಧನ್ಯನಯ್ಯ. ದಮ್ಮಯ್ಯ, ದಮ್ಮಯ್ಯ! ನಿಮ್ಮ ಧರ್ಮದ ಕವಲೆಯಾನಯ್ಯಾ. ಕೂಡಲಸಂಗಮದೇವಾ, ನಿಮ್ಮ ಶರಣರ ಮನೆಯ ನಂಗ ನಾನಯ್ಯ.

೧೦೮. ಕಾಮವ ತೊರೆದಾತ, ಹೇಮವ ಜರಿದಾತ, ಭಾನುವಿನ ಉದಯಕ್ಕೆ ಒಳಗಾಗದಾತ ಶರಣನು. ಆವಾಗಳು ನಿಮ್ಮ ಮಾಣದೆ ನೆನೆವರ ಮನೆಯಲು ಶ್ವಪನನಾಗಿರಿಸು ಮಹಾದಾನಿ ಕೂಡಲಸಂಗಮದೇವಾ.

೧೦೯. ಮೇಲಾಗಲೊಲ್ಲೆನು, ಕೀಳಾಗಲೊಲ್ಲದೆ. ಕೀಳಿಂಗಲ್ಲದೆ ಹಯನು ಕರೆವುದೆ? ಮೇಲಾಗಿ ನರಕದಲೋಲಾಡಲಾರೆನು. ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು ಮಹಾದಾನಿ ಕೂಡಲಸಂಗಮದೇವಾ.

೧೧೦. ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ, ನಾನು ಮತ್ತಾವ ಪದವಿಯನೊಲ್ಲೆನಯ್ಯ. ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯನೆ ಕರುಣಿಸಯ್ಯ.

೧೧೧. ಕಾಗೆ ವೃಷ್ಟಿಸುವ ಹೊನ್ನ ಕಳಶವಹುದರಿಂದ, ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯ. ಆಯ್ಯಾ ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯ. ॥ಶ್ಲೋಕ॥ ಕರ್ಮಾವಲಂಬನಂ ಕೇಚಿತ್। ಕೇಚಿತ್ ಜ್ಞಾನಾವಲಂಬನಂ। ವಯಂತು ಶಿವಭಕ್ತಾನಾಂ। ಪಾದುಕಸ್ಯಾವಲಂಬನಂ॥ ಕೂಡಲಸಂಗಮದೇವಾ ನಿಮ್ಮ ಸೆರಗೊಡ್ಡಿ ಬೇಡುವದೊಂದೇ ವರವ ಕರುಣಿಸಯ್ಯ.

೧೧೨. ಆವಾವ ಭಾವದಲ್ಲಿ ಮಾಡಿ ಕೂಡಿಹೆವೆಂಬವರ ಬಾಗಿಲ ತೋರಯ್ಯ! ತನುವನೊಪ್ಪಿಸಿದವರ, ಮನವನೊಪ್ಪಿಸಿದವರ, ಧನವನೊಪ್ಪಿಸಿದವರ ಬಾಗಿಲ ತೋರಯ್ಯ! ಇವೆಲ್ಲವನೊಪ್ಪಿಸಿ ಜಂಗಮವೆನ್ನವರೆನ್ನವರೆಂಬವರ ಕೆರಹ ಹೊತ್ತಿರಿಸೆನ್ನನು ಕೂಡಲಸಂಗಮದೇವಾ.

೧೧೩. ಆಯತ ಸ್ವಾಯತ ಸನ್ನಿಹಿತದನುಭಾವವ ನಾನೆತ್ತ ಬಲ್ಲೆನು? ಲಿಂಗಜಂಗಮಕ್ಕೆ ಮಾಡಿ ನೀಡುವ ಅಚ್ಚ ಶರಣರ ಮನೆ

ಯಲ್ಲಿ ಭೃತ್ಯನಾಗಿರ್ದೆನಯ್ಯ! ಇದು ಕಾರಣ ಕೂಡಲಸಂಗನ ಶರಣರಲ್ಲದೆ ಅನ್ಯವನರಿಯೆನಾಗಿ.

೧೧೪. ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ, ಅಂಬುಜಕ್ಕೆ ಭಾನುವಿನ ಉದಯದ ಚಿಂತೆ, ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ, ಎನಗೆ ನಮ್ಮ ಕೂಡಲಸಂಗಮದೇವರ ನೆನೆವ ಚಿಂತೆ.

೧೧೫. ಹೊಲಬುಗೆಟ್ಟ ಶಿಶು ತನ್ನ ತಾಯನರಸುವಂತೆ, ಬಳೆದಪ್ಪಿದ ಪಶು ತನ್ನ ಹಿಂಡನರಸುವಂತೆ, ಬಯಸುತ್ತಿರ್ದೇನಯ್ಯ ನಿಮ್ಮ ಶರಣರ ಬರವನು. ಬಯಸುತ್ತಿರ್ದೇನಯ್ಯ ನಿಮ್ಮ ಭಕ್ತರ ಬರವನು. ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ ಎನಗೆ ನಿಮ್ಮ ಶರಣರ ಬರವು ಕೂಡಲಸಂಗಮದೇವಾ.

೧೧೬. ಸೂರ್ಯನುದಯ ತಾವರೆಗೆ ಜೀವಾಳ. ಚಂದ್ರಮನುದಯ ನೈದಿಲೆಗೆ ಜೀವಾಳ. ಕೂಪರ ತಾವಿನಲ್ಲಿ ಕೂಟ ಜೀವಾಳವಯ್ಯ. ಒಲಿದ ತಾವಿನಲ್ಲಿ ನೋಟ ಜೀವಾಳವಯ್ಯ. ಕೂಡಲ ಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯ.

೧೧೭. ಜಲವ ತಪ್ಪಿದ ಮತ್ಸ್ಯ ಬದುಕುವದೇ ಸೋಜಿಗ. ಗಣತಿಂಥಿಣಿಯೊಳಗಿರಿಸೆನ್ನ ಲಿಂಗವೇ. ಶಿವಶಿವ ಕೂಡಲಸಂಗಮದೇವ ಸೆರೆಗೊಡ್ಡಿ ಬೇಡುವೆನಯ್ಯ.

೧೧೮. ಅಯ್ಯಾ, ನಿಮ್ಮ ಮಹಾವ್ರತಿಗಳನಗಲಿ ಬದುಕಲಾರೆನು. ಶಿವಧೋ ಶಿವಧೋ. ಕಂಗಳಶೃಗಳಲ್ಲಿ ಮುಂದುಗಾಣೆನು. ಲಿಂಗಸಂಗಿಗಳನಗಲಿ ಆನೆಂತು ಬದುಕುವೆನು ಕೂಡಲಸಂಗಮದೇವಾ?

೧೧೯. ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ಜಜ್ಜನೆ ಜರಿದೆನೋಡಯ್ಯ! ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನೋಡಯ್ಯ! ನಾನೊಬ್ಬನೆ ಉಳಿದೆನು ನಾನೊಬ್ಬನೆ ಉಳಿದೆನು. ಕೂಡಲಸಂಗಮದೇವಾ, ನಿಮ್ಮ ಶರಣರನಗಲಿದಕಾರಣ.

೧೨೦. ಕಂಡರೆ ಮನೋಹರವಯ್ಯ. ಕಾಣದಿದ್ದರೆ ಆವಸ್ಥೆ ನೋಡಯ್ಯ. ಹಗಲು ಇರುಳಹುದು, ಇರುಳು ಹಗಲಹುದು. ಎಂತಯ್ಯ? ಅಳವಾಡಿ ಕಳೆವೆನು ಒಂದು ಜುಗ ಮೇಲೆ ಕೆಡೆದಂತೆ. ಕೂಡಲಸಂಗನ ಶರಣರನಗಲುವ ಧಾವತಿಯಿಂದ ಮರಣವೇ ಲೇಸು ಕಂಡಯ್ಯ.

೧೨೧. ಅಂಗಯ್ಯ ತಿಂದುದೆನ್ನ ಕಂಗಳು. ತೆತ್ತಿಹವಯ್ಯ. ಬಂದಿಹರಯ್ಯ ಪುರಾತರೆನ್ನ ಮನೆಗೆ. ಬಂದಿಹರಯ್ಯ ಶರಣರೆನ್ನ ಮನೆಗೆ. ಕಂಡ ಕನಸು ದಿಟವಾಗಿ, ಜಂಗಮ ಮನೆಗೆ ಬಂದರೆ ಶಿವಾರ್ಚನೆಯು ಮಾಡಿ ಸುವೆ ಕೂಡಲಸಂಗಮದೇವಾ ನಿಮ್ಮ ಮುಂದೆ.

೧೨೨. ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ ಸುಖವ ಕೊಡು ಕಂಡೆಯಾ ಲಿಂಗವೇ. ಪರಮಸುಖವ ಕೊಡು ಕಂಡೆಯಾ ಲಿಂಗವೇ. ಕೂಡಲಸಂಗಮದೇವಯ್ಯ ಇದೇ ವರವ ನಿಮ್ಮಲ್ಲಿ ಬೇಡುವೆ.

೧೨೩. ಮನೆದೈವವು, ಕುಲದೈವವೆನಗೆ ನಿಮ್ಮವರಯ್ಯಾ. ತನು ವಿಸಲು, ಮನ ಮೀಸಲು, ನಯನ ವಿಸಲು, ಎನ್ನ ಕೂಡಲಸಂಗಮದೇವಯ್ಯ ನಿಮ್ಮ ಶರಣರಿಗೆ.

೧೨೪. ಗಿಳಿಯ ಪಂಜರವಿಕ್ಕಿ, ಸೊಡರಂಗೆಣ್ಣೆಯನೆರೆದು, ಬತ್ತಿಯ ನಿಕ್ಕಿ, ಬರವ ಹಾರುತ್ತಿದ್ದೆನೆಲಗವ್ವಾ. ತರಗೆಲೆ ಗಿರಕೆಂದಡೆ, ಹೊರಗಾ ನಾಲಿಸುವೆ. ಅಗಲಿವೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವ. ಕೂಡಲ ಸಂಗನ ಶರಣರು ಬಂದು ಬಾಗಿಲ ಮುಂದೆ ನಿಂದು, ಶಿವಾ, ಎಂದೊಡೆ ಸಂತೋಷಬಟ್ಟೆನೆಲಗವ್ವ.

೧೨೫. ಅಡವಿಯಲೊಬ್ಬ ಕಡು ನೀರಡಿಸಿ, ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ. ಕುರುಡ ಕಣ್ಣ ಹಡೆದಂತೆ, ಬಡವ ನಿಧಾನವ ಹಡೆದಂತಾಯಿತ್ತಯ್ಯಾ. ನಮ್ಮ ಕೂಡಲಸಂಗನಶರಣರ ಬರವೆನ್ನ ಪ್ರಾಣ ಕಂಡಯ್ಯ.

೧೨೬. ಇಂದೆನ್ನ ಮನೆಗೆ ಪ್ರಮಥರು ಬಂದಿಹರೆಂದು, ಗುಡಿತೋರಣವ ಕಟ್ಟಿ, ಪಡುಸವಮ್ಮಾರ್ಜನೆಯ ಮಾಡಿ, ರಂಗುವೋಲೆಯನಿಕ್ಕಿ, ಉಘೇ, ಚಾಂಗು, ಭಲಾ ಎಂಬೆ, ಕೂಡಲಸಂಗನ ಶರಣರು ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ.

೧೨೭. ಸಾಸಿವೆಯ ಮೇಲೆ ಸಾಗರವರಿದಂತಾಯಿತ್ತಯ್ಯಾ! ಆನಂದದಿಂದ ನಲಿನಲಿದಾಡುವೆನು. ಆನಂದದಿಂದ ಕುಣಿಕುಣಿದಾಡುವೆನು. ಕೂಡಲಸಂಗನಶರಣರು ಬಂದರೆ ಉಬ್ಬಿ ಕೊಬ್ಬಿ ಹರುಷದಲೋಲಾಡುವೆನು.

೧೨೮. ಮನಮನ ಬೆರಸಿದಲ್ಲಿ, ತನು ಕರಗದಿದ್ದಡೆ. ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ, ಕಂಡಾಗಳಶ್ರುಜಲಂಗಳು ಸುರಿಯದಿದ್ದಡೆ, ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ, ಕೂಡಲಸಂಗಮದೇವರ ಭಕ್ತಿಗಿದು ಚಿನ್ಹ. ಎನ್ನಲ್ಲಿ ಇಲ್ಲವಾಗಿ, ಆನು ಡಂಭಕ ಕಾಣಿರೇ.

೧೨೯. ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನು, ಅರಸರಿಯದ ಬಿಟ್ಟಿಯ ಮಾಡುವೆನು. ಎನ್ನ ತಾಗಿದ ಸುಖವ ಜಂಗಮಕರ್ಪಿಸಲರಿಯದ ಉಪಚಾರಿಯಾನು. ಸ್ಥಾವರ ಜಂಗಮವನರಿಯದ ಪೂಜಕನಾನು. ಮತ್ತೆ ನಾಚದೆ ಕೂಡಲಸಂಗಮದೇವಯ್ಯ ಜಂಗಮವೆನ್ನ ಪ್ರಾಣಲಿಂಗವೆಂಬೆನು.

೧೩೦. ಅವಿಗೆಯಲೊದಗಿದ ಕಪ್ಪಿನಂತೆ ಅವ್ಯತದೊಳಗಿರ್ದ ಸರ್ಪನ ತನುವಿನಂತೆ ಇರ್ದೆನಯ್ಯ. ಹೊರಗೆ ನುಂಪಾಗಿ ಸಿಂಹಕ್ಕೊಲಿದ ಮದಕರಿಯಂತೆ ಆನು ಜಂಗಮಕ್ಕೊಲಿದೆನಯ್ಯ ಕೂಡಲಸಂಗಮದೇವಾ.

೧೩೧. ಸ್ಥಾವರ ಜಂಗಮ ಒಂದೇ ಎಂದು ಇದಿರ ನುಡಿವೆ. ನಾನೆ ಡಹುತಿಪ್ಪೆ. ಸಹಜನಲ್ಲಯ್ಯ. ಆನು ಸಮ್ಯಕ್ಕನಲ್ಲಯ್ಯ. ಅನುಭಯಲಿಂಗಸಂಗಿ ಎಂಬೆನು. ಈ ನುಡಿ ಸುಡದಿಹುದೆ ಕೂಡಲಸಂಗಮದೇವಾ?

೧೩೨. ಮಸಿಯನೇಸು ಕಾಲ ಬೆಳಗಿದರೆ, ಬೆಳದಾಗಬಲ್ಲುದೆ? ಕರ್ಮಸ್ಥಿತಿ ಬೆನ್ನ ಬಿಡದು. ಅನಂತಕೋಟಿ ಸನ್ಯಾನವ ಮಾಡಿದಡೇನು? ನಿಮಿಷದ ಉದಾಸೀನ ಕೆಡಿಸಿತ್ತು. ಕೂಡಲಸಂಗಮದೇವಾ ನಿಮ್ಮನಂಬಿಯೂ ನಂಬದ ಡಂಭಕ ನಾನಯ್ಯ.

೧೩೩. ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ. ಉಪ್ಪು ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ. ಕೂಡಲಸಂಗಮದೇವಾ ಆನು ಮಾಡಿದೆನೆಂಬ ಕೆಚ್ಚು ಸಾಲದೇ?

೧೩೪. ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವ ಹವ್ಯಿನಲ್ಲಿ ಬೆಂದೆನಯ್ಯಾ. ಗುರುವೆಂದರಿಯೆ, ಲಿಂಗವೆಂದರಿಯೆ, ಜಂಗಮವೆಂದರಿಯೆ, ಪ್ರಸಾದವೆಂದರಿಯೆ. ಆನು ಬೆಂದೆನಯ್ಯಾ ಕೂಡಲಸಂಗಮದೇವಾ, ಆನು ಮಾಡುವುದೆಲ್ಲ ಉಪಚಾರವಯ್ಯ.

೧೩೫. ಎನ್ನಲ್ಲಿ ಭಕ್ತಿ ನಾಸವೆಯ ಪಡ್ಯಾಗದಿನಿತಿಲ್ಲ. ಎನ್ನ ಭಕ್ತನೆಂಬರು. ಎನ್ನ ಸಮಯಾಚಾರಿ ಎಂಬರು. ನಾನೇನ ಪಾಪವ ಮಾಡಿದೆನೋ? ಬೆಳೆಯದ ಮುನ್ನವೇ ಕೊಯ್ವರೇ ಹೇಳಾ? ಇರಿಯದ ವೀರ ಇಲ್ಲದ ಸೊಬಗುವ ಎಲ್ಲ ಒಡೆಯರು ಎರಿಸಿ ನುಡಿವರು. ಎನಗಿದು ವಿಧಿಯೇ ಕೂಡಲಸಂಗಮದೇವಾ?

೧೩೬. ಎನ್ನವರೊಲಿದು ಹೊನ್ನ ಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ. ಎನ್ನ ಹೊಗಳತೆ ಎನ್ನ ವೈಗೊಂಡಿತಲ್ಲಾ! ಅಯ್ಯೋ ನಿಮ್ಮ ಮನ್ನಣೆಯೆ ಮಸದಲಗಾಗಿ ತಾಗಿತ್ತಯ್ಯಾ. ಅಯ್ಯೋ ನೊಂದೆನು, ಸೈರಿಸಲಾರೆನು. ಕೂಡಲಸಂಗಮದೇವಾ ನೀನೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡ ಬಾರಾ ಧರ್ಮಿ.

೧೩೭. ಎನ್ನವರೆನಗೊಲಿದು, ಹೊನ್ನ ಶೂಲದಲಿಕ್ಕಿದರಯ್ಯಾ. ಅಹಂಕಾರ ಪೂರಾಯ ಗಾಯದಲ್ಲಿ ಆನೆಂತು ಬದುಕುವೆನೆಂತು ಜೀವಿಸುವೆ? ಜಂಗಮವಾಗಿ ಬಂದು ಜರಿದು, ಶೂಲವನಿಳುಹಿ, ಪ್ರಸಾದದ ಮದ್ದನಿಕ್ಕಿ ಸಲಹು ಕೂಡಲಸಂಗಮದೇವಾ.

೧೩೮. ಎಡದ ಕೆಯ್ಯಲ್ಲಿ ಹಾಲಬಟ್ಟಲು, ಬಲದ ಕೆಯ್ಯಲ್ಲಿ ಓಜು ಗಟ್ಟಿಗೆ. ಆವಾಗ ಬಂದಾನೆಮ್ಮಯ್ಯ ಬಡಿದು ಹಾಲ ಕುಡಿಸುವ ತಂದೆ? ॥ಶ್ಲೋಕ॥ ದಂಡಕ್ಷೀರ ದ್ವಯೋರ್ಹಸ್ತಂ। ಜಂಗಮಂ ಭಕ್ತಿ ಮುಂದಿರಂ। ಅತಿ ಭಕ್ತಿ ಲಿಂಗ ಸಂತುಷ್ಟಂ। ಅಪಹಾಸ್ಯಂ ಯಮ ದಂಡನಂ॥ ಎಂದುದಾಗಿ ಕೂಡಲಸಂಗಮದೇವಯ್ಯ ತಾನೇ ಭಕ್ತಿಪಥವ ತೋರುವ ತಂದೆ.

೧೩೯. ಎನ್ನ ಆಪತ್ತು ಸುಖ ದುಃಖವನಿನ್ನಾರಿಗೆ ಹೇಳುವೆ? ಶರಣಸ್ಥಲದವರಿಗೆ ಹೇಳಿದರೆ ಮಚ್ಚರ. ಸವತಿ ಸಕ್ಕರೆ ಬೇವು ಬೆಲ್ಲ ಉಂಟೇ? ಇನ್ನಾರಿಗೆ ಹೇಳುವೆ? ಕೂಡಲಸಂಗಮದೇವ ಜಂಗಮವಾಗಿ ಬಂದು ಎನ್ನ ಮನದ ಸೂತಕವ ಕಳೆಯಾ.

೧೪೦. ನಾನಾ ಸ್ಥಾನಂಗಳಲ್ಲಿ ಬಂದು ಕುಳ್ಳಿರ್ದುದು ತೆರಳುವುದೇ ಅಯ್ಯಾ? ಉಭಯ ಕುಳಕ್ಕಲ್ಲದೆ ತೆರಳದು. ಬೀದಿಯಲ್ಲಿ ಬಿದ್ದ ಶಿಶುವನು ಹೆತ್ತ ತಾಯಿ ಹತ್ತಿರೆ ಬಂದು ಎತ್ತುವಂತೆ, ಎನ್ನನಾರು ಜನ್ಮಕ್ಕೆ ತಂದು ಅಘೋರ ನರಕದಲ್ಲಿಕ್ಕಿದುದ ನಾನು ಬಲ್ಲೆ. ಕೂಡಲಸಂಗಮ

ದೇವಾ ನಿಮ್ಮ ಹಂಗೇನು ಹರಿಯೆನು. ನಾನುಭಯ ಲಿಂಗಜಂಗವದ ಮರೆಹೊಕ್ಕು ಬದುಕಿದೆನು.

೧೪೧. ಅಯ್ಯ ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯ. ಮೀನಜ ರೋಮಜ ಮಹಾಮುನಿಗಳ ಲಯವ ಮಾಡುವುದ ನಾ ಬಲ್ಲೆನಾಗಿ. ಅಯ್ಯ ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯ. ನವಕೋಟಿ ಬ್ರಹ್ಮರಿಗೆ ಪ್ರಳಯವ ಮಾಡುವುದ ಬಲ್ಲೆನಾಗಿ. ಅಯ್ಯ ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯ. ದಶಕೋಟಿ ನಾರಾಯಣರಿಗೆ ಮರಣವ ಮಾಡುವುದ ನಾ ಬಲ್ಲೆನಾಗಿ. ಅಯ್ಯ ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ. ಅನಂತಕೋಟಿ ರುದ್ರರಿಗೆ ಲಯವ ಮಾಡುವುದ ನಾ ಬಲ್ಲೆನಾಗಿ. ಅಯ್ಯ ನಿಮ್ಮ ದೇವರೆಂದು ಪೂಜಿಸಲಾಗದಯ್ಯ. ಎನ್ನನೇಳೇಳು ಭವಕ್ಕೆ ತಂದಲ್ಲಿ ಆನು ಉಭಯ ಲಿಂಗಜಂಗಮದ ಮರೆಹೊಕ್ಕು, ಭವಂ ನಾಸ್ತಿಯಾಗಿ ಬದುಕಿದೆನಯ್ಯಾ ಕೂಡಲಸಂಗಮದೇವಾ.

೧೪೨. ಲಿಂಗದರ್ಶನ ಕರಮುಟ್ಟಿ, ಜಂಗಮದರ್ಶನ ಶಿರಮುಟ್ಟಿ, ಆವುದು ಘನವೆಂಬೆ, ಆವುದು ಕಿರಿದೆಂಬೆ? ತಾಳ ಸಂಪುಟಕ್ಕೆ ಬಾರದ ಘನವ ಆರ್ಪಿಸಹೋದರೆ, ಆರ್ಪಣ ಮುನ್ನಿಲ್ಲ. ಗಮನ ನಿರ್ಗಮನವಾಯಿತ್ತು. ಈ ಉಭಯ ಭೇದವನರಿಯರಾಗಿ ಜಂಗಮವೇ ಲಿಂಗ ಕೂಡಲಸಂಗಮದೇವಾ.

೧೪೩. ಶಿವಭಕ್ತರೇ ಅಧಿಕರು ನೋಡಯ್ಯ. ಇವಕ್ಕೆ ಅಧಿಕವಾಗಿ ಜಂಗಮವ ಕಂಡೆ. ಈ ದ್ವಿವಿಧವನೊಂದೇ ಎಂದು ನಂಬಿದೆ ಕೂಡಲಸಂಗಮದೇವಾ.

೧೪೪. ಕೃತಯುಗದಲ್ಲಿ ಕೇದಾರವೆಂಬ ಮೂಲಸ್ಥಾನ, ತ್ರೇತಾಯುಗದಲ್ಲಿ ವಾರಣಾಸಿ ಎಂಬ ಮೂಲಸ್ಥಾನ, ದ್ವಾಪರಯುಗದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ, ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ. ಇಂತೀ ನಾಲ್ಕು ಮೂಲಸ್ಥಾನ. ನಾನಾ ಸ್ಥಾನವ ಮೆಟ್ಟದೆ, ಜಂಗಮವೇ ಲಿಂಗವೆಂದು ನಂಬಿದೆ ಕೂಡಲಸಂಗಮದೇವಾ.

೧೪೫. ಭಕ್ತದೇಹಿಕ ದೇವನಪ್ಪ ದೇವನು ಸದ್ಭಕ್ತರ ಬಳಿಯಲ್ಲಿ ಬಪ್ಪನಾಗಿ. ಅಳ್ಳನು ಬರಲಾಳು ಮಂಚದ ಮೇಲೆ ಇಪ್ಪವು ಗುಣವೇ

ಹೇಳಾ? ಕೂಡಲಸಂಗಮದೇವನು ಜಂಗಮರೂಪಾಗಿ ಸಂಗಯ್ಯ ಬಂದಾನೆಂದು ಎಂದೆಂದೂ ನಾನು ಮುಂಚವನೇರದ ಭಾಷೆ.

೧೪೬. ಜಂಗಮಸನ್ನಿಧಿಯಲ್ಲಿ ವಾಹನವನೇರಲಮ್ಮೆ. ಏರಿದರೆ ಭವ ಹಿಂಗದು. ಏನು ಕಾರಣ? ಮುಂದೆ ಶೂಲವನೇರುವ ಪ್ರಾಪ್ತಿಯುಂಟಾದ ಕಾರಣ. ಜಂಗಮ ಬರಲಾಸನದಲ್ಲಿ ಇರಲಮ್ಮೆ. ಇದ್ದರೆ ಭವ ಹಿಂಗದು. ಏನು ಕಾರಣ? ಮುಂದೆ ಕಾಯ್ದಿಟ್ಟಿಗೆಯ ಮೇಲೆ ಕುಳ್ಳಿರುವ ಪ್ರಾಪ್ತಿಯುಂಟಾದ ಕಾರಣ. ಜಂಗಮದ ಮುಂದೆ ದಿಟ್ಟತನದಲ್ಲಿ ಬೆರೆತು ನಿಂದಿರಲಮ್ಮೆನು. ಏನು ಕಾರಣ? ಮುಂದೆ ಹೆಡಗುಡಿಯ ಕಟ್ಟಿ ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ. ಇಂತೀ ಬಾಧೆಭವಂಗಳಿಗಂಜುವೆನಯ್ಯ. ನಿಮ್ಮವರ ಸುಳುಹ ನೀವೆಂದು ಭಾವಿಸಿ ತೊತ್ತು ಭೃತ್ಯನಾಗಿಪ್ಪೆನಯ್ಯ ಕೂಡಲಸಂಗಮದೇವಾ.

೧೪೭. ಜಂಗಮ ವಿರಹಿತ ಲಿಂಗಾರ್ಚನೆ ಮಳಲಲೆರೆದ ಜಲದಂತೆ. ಜಂಗಮ ಸನ್ನಿಹಿತ ಲಿಂಗಾರ್ಚನೆ ಇದೇ ಭಕ್ತಿಗೆ ಪಥವಯ್ಯ. ಜಂಗಮ ಪ್ರಸಾದ ಭೋಗೋಪಭೋಗವು ಎನಗಿದೆ ಲಿಂಗಾರ್ಚನೆ. ಬೇರೆ ಮತ್ತೊಂದನರಿದೆನಾದರೆ, ಕೂಡಲಸಂಗಮದೇವ ನರಕದಲ್ಲಿಕ್ಕುವ.

೧೪೮. ಭಿತ್ತಿ ಇಲ್ಲದೆ ಬರೆಯಬಹುದೆ ಚಿತ್ತಾರವ? ಬಿತ್ತಿ ಬೆಳೆಯಬಹುದೆ, ಧರೆ ಇಲ್ಲದೆ? ಜಂಗಮವಿಲ್ಲದೆ ಮಾಡಬಹುದೇ? ರೂಢೀಶನ ಭೇದಿಸಬಹುದೇ? ಒಡಲಿಲ್ಲದ ನಿರಾಳ ಕರ್ತೃ ಕೂಡಲಸಂಗಮದೇವ ಜಂಗಮ ಮುಖ ಲಿಂಗವಾದನಾಗಿ, ಮತ್ತೊಂದನರಿಯೆನಯ್ಯ.

೧೪೯. ಸಮಯೋಚಿತದಲ್ಲಿ ಲಿಂಗಾರ್ಚನೆಯ ಮಾಡುತ್ತಿರ್ಪನಾ ಭಕ್ತನು. ಮಾಡಿದರೆ ಮಾಡಲಿ. ಮಾಡಿದರೆ ತಪ್ಪೇನು? ಆ ಜಂಗಮದ ಶಬ್ದವ ಕೇಳಿ, ಪ್ರಸಾದಕ್ಕೆ ಕೈ ದುಡಿಕಿದರೆ, ಅದು ಪ್ರಸಾದವಲ್ಲ, ಕಿಲ್ಬಿಷ. ಆ ಸಮಯೋಚಿತದಲ್ಲಿ ಬಂದ ಜಂಗಮದ ಶಬ್ದವ ಕೇಳಿ, ಪ್ರಸಾದಕ್ಕೆ ಕೈದೆಗೆದಡೆ ಅದು ಲಿಂಗಕ್ಕೆ ಬೋನ. ಇದು ಕಾರಣ ಕೂಡಲಸಂಗಮದೇವಾ ಇಂತಪ್ಪ ಸದಾಚಾರಿಗಳನೆನಗೆ ತೋರಾ.

೧೫೦. ಉತ್ತಮ, ಮಧ್ಯಮ, ಕನಿಷ್ಠವೆಂದು, ಬಂದ ಜಂಗಮವನೆಂದೆನಾದರೆ ನೊಂದೆನಯ್ಯ, ಬೆಂದೆನಯ್ಯ. ಎನ್ನ ಕೆಚ್ಚು ಎನ್ನ ಸುಟ್ಟಿತ್ತು. ಸುಖಿ ಜಂಗಮ, ಸಾಮಾನ್ಯ ಜಂಗಮವೆಂದುಂಟೆ ಕೂಡಲಸಂಗಮದೇವಾ?

೧೫೧. ಕೆಂಡದಲ್ಲಿಟ್ಟರೆ ಮೈ ಬೆಂದುದೆಂಬರು. ಕೊಂಡಿಟ್ಟವರ ಕೈ ಮುನ್ನವೇ ಬೆಂದುದು. ನೊಂದೆ ನಾನು ನೊಂದೆನಯ್ಯ. ಬೆಂದೆ ನಾನು ಬೆಂದೆನಯ್ಯ. ಕೂಡಲಸಂಗನ ಶರಣರ ಕಂಡು ಕಾಣದಂತಿದ್ದರೆ ಅಂದೇ ಬೆಂದೆನಯ್ಯಾ.

೧೫೨. ಲಾಂಛನವ ಕಂಡು ನಂಬುವೆ. ಅವರಂತರಂಗವ ನೀವೇ ಬಲ್ಲಿರಿ. ತೊತ್ತಿಂಗೆ ತೊತ್ತುಗೆಲಸವಲ್ಲದೆ ಅರಸರ ಸುದ್ದಿ ಎಮಗೇಕಯ್ಯ? ರತ್ನ ವೆಂತಕ್ತಿಕದಚ್ಚು ಕೂಡಲಸಂಗಮದೇವಾ ನಿಮ್ಮ ಶರಣರು.

೧೫೩. ಆರಾರ ಮನದಲ್ಲಿ ಏನೇನಿಹುದೆಂದರಿಯೆ. ಒಳ್ಳಿಹರೆಂದೆನಲೆನ್ನ. ಹೊಲ್ಲಹರೆಂದೆನಲೆನ್ನ. ಶಿವಭಕ್ತರಾದ ಕಾರಣ ಜಂಗಮವೇ ಲಿಂಗ ಕೂಡಲಸಂಗಮದೇವಾ.

೧೫೪. ಸಂಗಸಹಿತ ಶರಣರು ಬಂದರೆ ನಂಬುವುದೆನ್ನ ಮನವು, ನಚ್ಚುವುದೆನ್ನ ಮನವು. ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕ ನಾನು ಭಕ್ತನೆಂತಪ್ಪೆನು? ಅಂಗ ಲಿಂಗ ಸಹಿತವಾಗಿ ಬಂದರೆ ಸಂಗ ನೀನೆಂದು ಮತ್ತೆ ಮನದಲ್ಲಿ ಸಂದೇಹ ಹೊಳೆದರೆ ಬೆಂದೆನಲ್ಲಾ ನಾನು ಕೂಡಲಸಂಗಮದೇವಾ.

೧೫೫. ಎಡದ ಕೆಯ್ಯಲು ನಿಗಳವನಿಕ್ಕಿ, ಬಲದ ಕೆಯ್ಯ ಕಡಿದು ಕೊಂಡರೆ, ನೋಯದಿಪ್ಪುದೇ ? ಪ್ರಾಣ ಒಂದಾಗಿ ದೇಹ ಬೇರಿಲ್ಲ. ಲಿಂಗವ ಪೂಜಿಸಿ, ಜಂಗಮವನುದಾಸೀನವ ಮಾಡಿದರೆ, ಬೆಂದೆನಯ್ಯ ನಾನು ಕೂಡಲಸಂಗಮದೇವಾ.

೧೫೬. ತನುವ ನೋಯಿಸಿ, ಮನವ ಬಳಲಿಸಿ, ನಿಮ್ಮ ಪಾದವ ಪಿಡಿದವರೊಳರೇ? ಈ ನುಡಿ ಸುಡದಿಹುದೆ ? ಕೂಡಲಸಂಗಮದೇವಾ, ಶಿವಭಕ್ತರ ನೋವೇ ಅದು ಲಿಂಗದ ನೋವು.

೧೫೭. ಆತ್ಮಸ್ತುತಿ, ಪರನಿಂದೆಯ ಕೇಳಿಸದಿರಯ್ಯ. ನಿಮ್ಮ ಧರ್ಮ. ಆನು ಭಕ್ತನೆನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದರೆ, ನಿಮಗಾನು ದ್ರೋಹಿಯಯ್ಯ. ಕೂಡಲಸಂಗಮದೇವಾ ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯ.

೧೫೮. ನಡೆಯಲರಿಯದೆ, ನುಡಿಯಲರಿಯದೆ, ಲಿಂಗವ ಪೂಜಿಸಿ ಫಲವೇನು? ಅವರ ಸುಖ ಎನ್ನ ಸುಖ. ಅವರ ದುಃಖ ಎನ್ನ ದುಃಖ. ಕೂಡಸಂಗನ ಶರಣರ ಮನ ನೊಂದರೆ ಅನು ಬೆಂದೆನಯ್ಯಾ.

೧೫೯. ಒಂಜೆ ಬೇನೆಯನರಿಯದಂತೆ, ಒಬ್ಬರೊಂದ ನುಡಿವಿರಿ ಕೇಳಿರಯ್ಯ. ಎನಗೆ ಆಯುಷ್ಯ ಭವಿಷ್ಯ ಎನ್ನ ಭಕ್ತರು ಕಂಡಯ್ಯ. ಎನಗೆ ಆಯುಷ್ಯ ಭವಿಷ್ಯ ಎನ್ನ ಪ್ರಮಥರು ಕಂಡಯ್ಯ. ಕೂಡಲ ಸಂಗನ ಶರಣರು ಮುಖಲಿಂಗಿಗಳಯ್ಯ.

೧೬೦. ಬೇರೂರಲಿದ್ದು ಬಂದ ಜಂಗಮವೇ ಲಿಂಗವೆಂದು ಕಂಡು ಮನೆಯಲ್ಲಿದ್ದ ಜಂಗಮವನುದಾಸೀನವ ಮಾಡಿದರೆ, ನಾನು ಬೆಂದೆನಯ್ಯ. ಅನು ಬೆಂದ ಬೇಗೆಯನರಿಯೆ ಕಾಣಾ ಕೂಡಲಸಂಗಮದೇವಾ.

೧೬೧. ಉಟ್ಟು ತೊಟ್ಟು ಪೂಜ್ಯನಾಗಿ ಬಂದ ಜಂಗಮ ವಿಶೇಷವೆಂದು ಕಂಡು, ಕಂತೆಬೊಂತೆಯ ಜಂಗಮ ಬಂದರೆ ಹೀನವೆಂದು ಕಂಡೆನಾದರೆ, ಪಂಚಮಹಾಪಾತಕ. ಇದು ಕಾರಣ ಅನ್ನವಸ್ತ್ರ ಧನ ಮಾಟದಲು ಎರಡಾಗಿ ಕಂಡೆನಾದಡೆ, ನರಕದಲ್ಲಿಕ್ಕುವ ಕೂಡಲಸಂಗಮದೇವಾ.

೧೬೨. ಅಡ್ಡ ದೊಡ್ಡ ನಾನಲ್ಲಯ್ಯ. ದೊಡ್ಡ ಬಸಿರು ಎನಗಿಲ್ಲವಯ್ಯ. ದೊಡ್ಡವರನಲ್ಲದೆ ನಿಮ್ಮ ಶರಣರು ಮನ್ನಿಸರಯ್ಯ. ಹಡೆದುಂಬ ಸೂಳೆಯಂತೆ, ಧನವುಳ್ಳವರನರಸಿಯರಸಿ ಬೋಧಿಸಲು, ಪ್ರಾರ್ಥಿಸಲು, ಮುನ್ನ ನಾನರಿಯೆನಯ್ಯ. ದೊಡ್ಡತನವೆನ್ನಲ್ಲಿಲ್ಲವಯ್ಯ. ಅಂಜುವೆ ಅಂಜುವೆ ನಿಮ್ಮ ಪ್ರಮಥರಿಗೆ. ಅನಾಥ ನಾನಯ್ಯ ಕೂಡಲಸಂಗಮದೇವಾ.

೧೬೩. ಕುದುರೆ ಸತ್ತಿಗೆಯವರ ಕಂಡರೆ ಹೊರಳಿ ಬಿದ್ದು ಕಾಲ ಹಿಡಿವರಯ್ಯ. ಬಡ ಭಕ್ತರು ಬಂದರೆ ಎಡೆ ಇಲ್ಲ, ಅತ್ತ ಸನ್ನಿ ಎಂಬರು. ಎನ್ನೊಡೆಯ ಕೂಡಲಸಂಗಯ್ಯನವರ ತಡೆಗೆಡೆಹಿ ಮೂಗ ಕೊಯ್ಯದೆ ಮಾಣ್ಬನೇ?

೧೬೪. ದೂರದಿಂದ ಬಂದ ಜಂಗಮನಯ್ಯಗಳೆಂದು ಸಾರಿದ್ದ ಜಂಗಮವ ಪರಿಚಾರಕರೆಂಬ ಕೇಡಿಂಗೆ ಬೆರಗಾದೆನಯ್ಯ. ಸಾರಿದ್ದವರು ದೂರದವರೆಂದು ಬೇರು ಮಾಡಿ ಕಂಡರೆ, ಕೂಡಲಸಂಗಮದೇವ ನಿಂಗಾರವ ಮೂಗ ಕೊಯ್ಯದೆ ಮಾಣ್ಬನೇ?

೧೬೫. ಹಿಡಿವೆಡೆಯನೆ ಕಾಸಿ, ಹಿಡಿದ ಕೈ ಬೆಂದು, ಮಿಡು ಮಿಡನೆ ಮಿಡುಕುವ ಮರುಳು ಮಾನವನೇ ಬಡವನೆಂದೆನಬೇಡ. ಲಾಂಛನ ಧಾರಿಯನು ಕಂಡು ಸ್ನೇಹದಿಂದವರ ಪೂಜೆಯ ಮಾಡುವುದು. ನಿಜ ವಡಗಿದ ರೂಪು ನಿರ್ವಯಲ ಸ್ಥಾನ ನಡೆ ಲಿಂಗಜಂಗಮ ಕೂಡಲ ಸಂಗಮದೇವಾ.

೧೬೬. ಹಾಲ ಕಂದಲು ತುಪ್ಪದ ಮಡಿಕೆಯ ಬೋಡ ಮುಕ್ಕೆನ ಬೇಡ. ಹಾಲು ಸಿಹಿ ತುಪ್ಪ ಕಮ್ಮನೆ ಲಿಂಗಕ್ಕೆ ಬೋನ. ಕೂಡಲ ಸಂಗನ ಶರಣರ ಅಂಗಹೀನರೆಂದರೆ ನಾಯಕ ನರಕ.

೧೬೭. ಆಚಾರವನರಿಯಿರಿ. ವಿಚಾರವನರಿಯಿರಿ. ಜಂಗಮಸ್ಥಲ ಲಿಂಗ ಕಾಣಿರಯ್ಯ. ಜಾತಿಭೇದವಿಲ್ಲ. ಸೂತಕವಿಲ್ಲ. ಅಜಾತಂಗೆ ಕುಲವಿಲ್ಲ. ನುಡಿದಂತೆ ನಡೆಯದಿದ್ದರೆ ಕೂಡಲಸಂಗಯ್ಯ ಮೆಚ್ಚ ಕಾಣಿರಯ್ಯ.

೧೬೮. ಇಷ್ಟವರಭಕ್ತಂಗೆ ಸೀಮೆಯಲ್ಲದೆ ಘನಲಿಂಗ ಜಂಗಮಕ್ಕೆ ಸೀಮೆ ಎಲ್ಲಿಯದೋ? ಅಂಬುಧಿಗೆ ಸೀಮೆಯಲ್ಲದೆ, ಹರಿವ ನದಿಗೆ ಸೀಮೆ ಎಲ್ಲಿಯದು? ಭಕ್ತಂಗೆ ಸೀಮೆಯಲ್ಲದೆ ಜಂಗಮಕ್ಕೆ ಸೀಮೆಯುಂಟೇ ಕೂಡಲಸಂಗಮದೇವಾ?

೧೬೯. ಎತ್ತಿಕೊಳಲೇಕೆ, ಮತ್ತಿಳುಹಲೇಕಯ್ಯಾ? ದರದುರದ ಭಕ್ತಿಯ ಮಾಡಲೇಕಯ್ಯ? ನಿಂದಿಸಲೇಕೆ? ಸ್ತುತಿಸಲೇಕೆ? ಹೋಗಬಿಟ್ಟು ಜಂಗಮವ ಹಿಂದೆಯಾಡುವನ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಬನೆ ಕೂಡಲಸಂಗಮದೇವಾ?

೧೭೦. ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದರೆ, ಮೇಲೆ ಪಲ್ಲವಿಸಿತ್ತು ನೋಡಾ! ಲಿಂಗದ ಬಾಯಿ ಜಂಗಮವೆಂದು ಪಡಿ ಪದಾರ್ಥವ ನೀಡಿದಡೆ, ಮುಂದೆ ಸಕಳಾರ್ಥವನೀವನು. ಆ ಜಂಗಮವ ಹರನೆಂದು ಕಂಡು, ನರನೆಂದು ಭಾವಿಸಿದರೆ ನರಕ ತಪ್ಪದು ಕಾಣಾ ಕೂಡಲಸಂಗಮದೇವಾ.

೧೭೧. ಆರಾಧನೆಯ ಮಾಡಿದರೆ, ಅಮೃತದ ಬೆಳಸು. ವಿರೋಧಿಸಿದರೆ ವಿಷದ ಬೆಳಸು. ಇದು ಕಾರಣ ಲಿಂಗಜಂಗಮಕ್ಕೆ ಅಂಜ

ಲೇಬೇಕು. ಸ್ಥಾವರ ಜಂಗಮ ಒಂದೆಂದರಿದರೆ, ಕೂಡಲಸಂಗಮದೇವ ಶರಣಸನ್ನಿಹಿತ.

೧೭೨. ಹೊಸತಿಲ ಪೂಜಿಸಿ, ಹೊಡೆವಂಟು ಹೋಹ ಒಕ್ಕಲಿತಿಯಂತಾಯಿತ್ತೆನ್ನ ಭಕ್ತಿ. ಜಂಗಮವೆನ್ನೊಡೆಯರೆಂದು ಒಕ್ಕುದ ಕೊಂಡು ಉದಾಸೀನವ ಮಾಡಿದರೆ ಇಹಲೋಕಕ್ಕೆ ದೂರ ಪರಲೋಕಕ್ಕೆ ದೂರ. ಕೂಡಲಸಂಗಮದೇವ ಅಘೋರ ನರಕದಲ್ಲಿಕ್ಕುವ.

೧೭೩. ಲಿಂಗಪೂಜೆಯ ಮಾಡಿ, ಜಂಗಮವ ಕಂಡು ಉದಾಸೀನವ ಮಾಡಿದರೆ, ಆ ಲಿಂಗ ಪೂಜಕರಿಗೆ ಮಾಡಿದ ಶಿವದೂತರ ದಂಡವೆಂಬುದ. ಲೋಕದ ಕರ್ಮಿಗಳಿಗೆ ಮಾಡಿದ ಯಮದೂತರ ದಂಡವೆಂಬುದ. ಇದು ಕಾರಣ ಲಿಂಗಜಂಗಮವನೊಂದೆ ಎಂದರಿಯದವರ ಎನಗೆ ತೋರದಿರಯ್ಯ ಕೂಡಲಸಂಗಮದೇವಾ.

೧೭೪. ಜಂಗಮ ನಿಂದೆಯ ಮಾಡಿ, ಲಿಂಗವ ಪೂಜಿಸುವ ಭಕ್ತನ ಅಂಗವಣೆ ಎಂತೋ? ಶಿವಶಿವ, ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು. ಗುರುವಿನ ಗುರು ಜಂಗಮ ಇಂತೆಂದುದು ಕೂಡಲಸಂಗನ ವಚನ.

೧೭೫. ಅರಸನ ಕಾಡು ತನ್ನ ಪುರುಷನ ಮರೆದರೆ, ಮರನ ನೇರಿ ಕೆಯ್ಯ ಬಿಟ್ಟಿಂತಾದೆನಯ್ಯ. ಇಹಲೋಕಕ್ಕೆ ದೂರ ಪರಲೋಕಕ್ಕೆ ದೂರ, ನಮ್ಮ ಕೂಡಲಸಂಗಮದೇವಯ್ಯ ಜಂಗಮ ಮುಖ ಲಿಂಗವಾದಕಾರಣ.

೧೭೬. ಜಂಗಮವಿಲ್ಲದ ಮಾಟ, ಕಂಗಳಿಲ್ಲದ ನೋಟ ಹಿಂಗಿತ್ತು ಶಿವಲೋಕ. ಇನ್ನೆಲ್ಲಿಯದಯ್ಯ? ಲಿಂಗಕ್ಕೆ ಮಾಡಿದ ಬೋನವ ಸಿಂಬಳತಿಂಬಂತೆ, ಸಮಯೋಚಿತವನರಿಯದೆ ಉದರವ ಹೊರೆವರ ನರಕದಲ್ಲಿಕ್ಕದೆ ಮಾಬನೇ ಕೂಡಲಸಂಗಮದೇವ?

೧೭೭. ಲಿಂಗದಲ್ಲಿ ದಿಟವನರಸುವರೆ, ಜಂಗಮವ ನೆರೆ ನಂಬುವುದು. ನಡೆ ಲಿಂಗ ನುಡಿ ಲಿಂಗ ಮುಖ ಲಿಂಗವೆಂದೆನ್ನಿ ಭೋ. ಯತ್ರ ಮಾಹೇಶ್ವರಸ್ತತ್ರ ಸನ್ನಿಹಿತನಾಗಿ, ಆಧರ ತಾಗಿನ ರುಚಿಯನು

ದರ ತಾಗಿದ ಸುಖವ ಉಂಬ ಉಡುವ ಕೂಡಲಸಂಗಮದೇವ ಜಂಗಮ ಮುಖದಲ್ಲಿ.

೧೭೮. ಜಂಗಮದ ಮನ ಭಾವದಲ್ಲಿ ಭಕ್ತನ ಭೃತ್ಯನೆಂದು ಭಕ್ತನ ಮನ ಭಾವದಲ್ಲಿ ಜಂಗಮವೇ ಕರ್ತನೆಂದು ಇದ್ದ ಬಳಿಕ ಬಂದುದು ಬಾರದು, ಇದ್ದುದು ಹೋಯಿತ್ತೆಂಬ ಸಂದೇಹವಿಲ್ಲದಿರಬೇಕು. ಹೋಯಿತ್ತೆಂಬ ಗುಣ ಉಳ್ಳನ್ನಕ್ಕ ನಿಮಗೆ ದೂರ, ನಿಮ್ಮವರಿಗೆ ಮುನ್ನವೇ ದೂರ, ಶಿವಾಚಾರಕ್ಕೆ ಆಲ್ಲಿಂದತ್ತತ್ತ ದೂರ. ಜಂಗಮ ಹರಿದ ಹರಿವು ಜಂಗಮದ ನಿಂದ ನಿಲವು ಜಂಗಮದ ಗಳಗರ್ಜನೆ ಜಂಗಮದ ಕೋಳಾಟಕ್ಕೆ ಸೈರಿಸದಿದ್ದರೆ, ನೀನಂದೇ ಮೂಗ ಕೊಯ್ಯಿ ಕೂಡಲ ಸಂಗಮದೇವಾ.

೧೭೯. ನಯನದಾಹಾರವ ಜಂಗಮಕ್ಕೆ ನೋಡಿಸುವೆ. ಶ್ರೋತ್ರ ದಾಹಾರವ ಜಂಗಮಕ್ಕೆ ಕೇಳಿಸುವೆ. ಘ್ರಾಣದಾಹಾರವ ಜಂಗಮಕ್ಕೆ ವಾಸಿಸುವೆ. ಜಿಹ್ವೆಯಾಹಾರವ ಜಂಗಮಕ್ಕೆ ಊಡಿಸುವೆ. ಕವಚದಾ ಹಾರವ ಜಂಗಮಕ್ಕೆ ಹೊದ್ದಿಸುವೆ. ಆಧಿಕ ಪ್ರೇಮ ಪ್ರಣಾಮಂಗಳ ಮಾಡುವೆ. ಸಕಲ ಪದಾರ್ಥಂಗಳ ನೀಡುವೆ, ಕೂಡಲಸಂಗಾ ನಿಮ್ಮ ಶರಣರಿಂಗೆ.

ಭಕ್ತನ ಮಹೇಶ.

೧. ಎಂಬತ್ತುನಾಲ್ಕು ಲಕ್ಷ ಮುಖದೊಳಗೊಂದೇ ಮುಖವಾಗಿ ಕಾಡಿ ನೋಡೆನ್ನನು. ಬೇಡಿ ನೋಡೆನ್ನನು. ಬೇಡದಿದ್ದರೆ, ಅಯ್ಯ ನಿಮಗೆ ಪ್ರಮಥರಾಣೆ. ನೀನಾವ ಮುಖದಲ್ಲಿ ಬಂದು ಬೇಡಿದೊಡೀವೆನು ಕೂಡಲಸಂಗಮದೇವಯ್ಯ.

೨. ಕಂದಿದೆನಯ್ಯ ಎನ್ನ ನೋಡುವರಿಲ್ಲದೆ. ಕುಂದಿದೆನಯ್ಯ ಎನ್ನ ನುಡಿಸುವರಿಲ್ಲದೆ. ಬಡವಾದೆನಯ್ಯ ಎನ್ನ ತನುಮನಧನವ ಬೇಡುವರಿಲ್ಲದೆ. ಕಾಡುವ ಬೇಡುವ ಶರಣರ ಕಂದು ಕಾಡಿಸು ಬೇಡಿಸು ಕೂಡಲಸಂಗಮದೇವಾ.

೩. ವೇಷ ಅವಿಚಾರದಲ್ಲಿ ನಡೆಯಿತ್ತೆಂದು ಅಸುರದಲ್ಲಿ ಬೊಗಳುವ ಕುನ್ನಿ ನೀ ಕೇಳಾ! ಹರಿಯನೇ ದಾಸನ ವಶ್ಯನ? ಉಣ್ಣನೇ ಚನ್ನಯ್ಯನ ಸಂಗಾತ? ಪರವಧುವ ಕೊಳ್ಳನೇ ಸಿಂಧು ಬಲ್ಲಾಳನ? ಬೇಡನೇ ಸಿರಿಯಾಳನ ಮಗನ? ನಡೆವುದು ನುಡಿವುದು ಅವಿಚಾರವೆಂದು ಭಾವ ವಿಭಾವವೆಂದು ಕಂಡೆನಾದಡೆ, ತಪ್ಪೆನ್ನದು. ಮೂಗ ಕೊಯ್ಯ ಕೂಡಲಸಂಗಮದೇವಾ.

೪. ನೀನಿಕ್ಕಿದ ಬಿಯ್ಯದಲ್ಲಿ ವಂಚನೆಯುಳ್ಳೊಡೆ, ಸಂಗ ನಿಮ್ಮ ತೊತ್ತುತನಕ್ಕೆ ದೂರವಯ್ಯ. ಕದ್ದು ತಿಂಪರೆ ಕೆಯ್ಯ ಹಿಡಿದೊಪ್ಪಿಸಿ ಬಡಿದು ತುಡುಗುಣಿತನವ ಬಿಡಿಸಯ್ಯ. ಜಂಗಮ ಮನೆಗೆ ಬಂದಲ್ಲಿ ಓಸರಿಸಿದರೆ ಹಿಡಿದು ಮೂಗ ಕೊಯಿಯಯ್ಯ ಕೂಡಲಸಂಗಮದೇವ.

೫. ದೇವ ನಿಂತವನೆಂದು ತೋರಿ ಕೊಡುವೆನು ಗಣಂಗಳಿಗೆ. ಬಲ್ಲಾಳನ ವಧುವ ಬೇಡಿದಾತ ನೀ ದೇವಾ! ದೇವನಿಂತವನೆಂದು ತೋರಿಯೆ ಕೊಡುವೆನು ನಾನು ಗಣಂಗಳಿಗೆ. ದಾಸನ ವಶ್ಯವ ಬೇಡಿದಾತ ನೀ ದೇವಾ! ದೇವನಿಂತವನೇದು ತೋರಿಕೊಡುವೆನು ನಾನು ಗಣಂಗಳಿಗೆ. ಸಿರಿಯಾಳನ ಮಗನ ಬೇಡಿದಾತ ನೀ ದೇವಾ. ಕೂಡಲಸಂಗಮದೇವ ಜಂಗಮ ಮುಖ ಲಿಂಗವಾಗಿ ಕಾಡಿ ನೋಡುವ ಬೇಡಿ ನೋಡುವ.

೬. ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ, ನಿಮ್ಮಾಣೆ ನಿಮ್ಮ ಪುರಾತರಾಣೆ. ನಿಮ್ಮ ಶರಣರಿಗಲ್ಲದೆ, ಮತ್ತೊಂದುವನರಿಯೆ ಕೂಡಲಸಂಗಮದೇವಾ.

೭. ಆಲುತ್ತಲು ಹರೆಯ ಹೊಯಿಸಿ, ಅಂಕವ ಮಾಡಿದೆನೆಲ್ಲರ ಕಂಡು, ಆನು ಬೇಡೆಂದಡೆ ಮಾಣೆ. ಕಲಿತನವ ಮಾಡಿದೆನೆಲ್ಲರ ಕಂಡು, ಅಲ್ಲಿ ಹೋಯಿತ್ತಾಗಳೆ ಎಂದಡೆ ಆಶಿಮಾಡಿಸು ಕೂಡಲಸಂಗಮದೇವಾ.

೮. ಕಾಗೆ ಒಂದಗಳ ಕಂಡರೆ, ಕರೆಯದೆ ತನ್ನ ಬಳಗವನು? ಕೋಳಿ ಒಂದು ಕುಟಕ ಕಂಡರೆ ಕರೆಯದೆ ತನ್ನ ಕುಲವೆಲ್ಲವ? ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ, ಆ ಕಾಗೆ ಕೋಳಿಗಿಂದ ಕರಕಷ್ಟ ಕೂಡಲಸಂಗಮದೇವಾ.

೯. ಆವನೇವನಾದರೇನು? ಹೇವವಿಲ್ಲದಂಗೈಸಬಹುದೆ? ಕೊಡಲಿಲ್ಲೆಂಬುದರಿಂದ ಸಾಯಲುಬಹುದು. ಸೈರಿಸಬಾರದು. ಬೇಡುವರ ನೋಡಿ ನೋಡಿ, ಈಯಲಿಲ್ಲದ ಜೀವನವದೇಕೆ ಕೂಡಲಸಂಗಮದೇವಾ?

೧೦. ಹರಗಣಸಂಕ್ತಿಯ ನಡುವೆ ಕುಳ್ಳಿರ್ದ ನಾನು ಒಡೆತನದ ನಾಯತೇಜವ ಹೊತ್ತುಕೊಂಡು ಮಡದಿಯನ್ನಗಲೊಳಗೆ ಸಕಲದೇವಾಸ್ನವ ಒಡೆಯರಿಗಿಂದ ಮಿಗಿಲಾಗಿ ಇಕ್ಕಲು ತೆಗೆದಿರಿಸಿದೆನು. ಈ ಪರಿಯ ಆಕಿಂಗೆ ತೋರಲು ಕೆಲ್ಬಿಸವಾದವು. ಕರುಣಿ ಚೆನ್ನಬಸವಣ್ಣಾ ಮರೆದು ಕೊಂಡೆನಾದರೆ ಒಡೆಯ ಕೂಡಲಸಂಗಯ್ಯ ಕೆಡಹು ನರಕವಲ್ಲಿಕ್ಕುವ.

೧೧. ಭಕ್ತಿ ಸುಭಾಷೆಯ ನುಡಿಯ ವರ್ತಿಸಿ ನುಡಿವೆ. ನುಡಿದಂತೆ ನಡೆವೆ. ನಡೆಯೊಳಗೆ ನುಡಿಯ ಪೂರೈಸುವೆ. ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೆಯ್ಯಲ್ಲಿ ಒಂದು ಜವೆ ಕೊರತೆಯಾದರೆ, ಎನ್ನನದ್ದಿ ನೀನೆದ್ದು ಹೋಗು ಕೂಡಲಸಂಗಮದೇವಾ.

೧೨. ಓಡುವಾತ ಲೆಂಕನಲ್ಲ. ಬೇಡುವಾತ ಭಕ್ತನಲ್ಲ. ಓಡಲಾಗದು ಲೆಂಕನು. ಬೇಡಲಾಗದು ಭಕ್ತನು. ಓಡೆನಯ್ಯಾ ಬೇಡೆನಯ್ಯಾ ಕೂಡಲಸಂಗಮದೇವಾ.

೧೩. ಚಂದ್ರನ ಶೈತ್ಯವಲ್ಲಿ ಬೆಳೆವ ಕಾಯಕ್ಕೆ ಬೆಳದಿಂಗಳ ಬಯಸುವ ಹಂಗೇಕಯ್ಯ? ಶರಣರ ಸಂಗದಲ್ಲಿದ್ದು ಶಿವನ ಬೇಡುವ ಹಂಗೇ

ಕಯ್ಯ? ಕೂಡಲಸಂಗನ ಶರಣರು ಬಂದು ತಮ್ಮನೆನಿಂದರೆ, ಸಾಲದೇ ಅಯ್ಯಾ?

೧೪. ದಾಸನ ವಸ್ತ್ರವ ಬೇಡದ ಮುನ್ನ ತವನಿಧಿಯನಿಶ್ಚಡೆ, ನಿಮ್ಮ ದೇವರೆಂಬೆ. ಸಿರಿಯಾಳನ ಮಗನ ಬೇಡವ ಮುನ್ನ ಕಾಂಚಿಯ ಪುರವ ಕೈಲಾಸಕ್ಕೊಯ್ದರೆ, ನಿಮ್ಮ ದೇವರೆಂಬೆ. ಬಲ್ಲಾಳನ ವಧುವ ಬೇಡವ ಮುನ್ನ ಸ್ವಯಲಿಂಗವ ಮಾಡಿದರೆ, ನಿಮ್ಮ ದೇವರೆಂಬೆ. ದೇಹಿ ನೀನು ವ್ಯಾಪಾರಿಗಳು ನಮ್ಮವರು. ಬೇಡು ಕೂಡಲಸಂಗಮದೇವಾ ಎಮ್ಮವರ ಕೆಯ್ಯಲು.

೧೫. ಎಲ್ಲರೂ ವೀರರು. ಎಲ್ಲರೂ ಧೀರರು. ಎಲ್ಲರೂ ಮಹಿಮರು. ಎಲ್ಲರೂ ಪ್ರಮಥರು. ಕಾಳಗದ ಮುಖದಲ್ಲಿ ಕಾಣಬಾರದು. ಓಡುವ ಮುಖದಲ್ಲಿ ಕಾಣಬಹುದು. ನಮ್ಮ ಕೂಡಲಸಂಗನ ಶರಣರು ಧೀರರು. ಉಳಿದವರೆಲ್ಲ ಅಧೀರರು.

೧೬. ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ, ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪರವಧುವನು ಮಹಾದೇವಿ ಎಂಬೆ ಕೂಡಲ ಸಂಗಮದೇವಾ.

೧೭. ಹರಿವ ಹಾವಿಗಂಜೆ, ಉರಿಯ ನಾಲಿಗೆಗಂಜೆ, ಸುರಿಗೆಯ ಮೊನೆಗಂಜೆ. ಒಂದಕ್ಕಂಜುವೆನೊಂದಕ್ಕಳುಕುವೆ. ಪರಸ್ತ್ರೀ ಪರಧನವೆಂಬ ಜೂಬಿಂಗಂಜುವೆ. ಮುನ್ನಂಜದ ರಾವಣನೇ ವಿಧಿಯಾದ? ಅಂಜುವೆನಯ್ಯಾ. ಕೂಡಲಸಂಗಮದೇವಾ.

೧೮. ಒಂದಕ್ಕೊಂಬತ್ತ ನುಡಿದು, ಕಣ್ಣ ಕೆಂಡವನೆಮಾಡಿ, ಗಂಡು ಗೆದರಿ, ನುಡುಹಿಕ್ಕಿ ಕಲವರ ಕಂಡಂಜುವೆ ಓಸರಿಸುವೆ. ಓಡಿದೆನೆಂಬ ಭಂಗವಾದಡಾಗಲಿ ನಮ್ಮ ಕೂಡಲಸಂಗನ ಶರಣರನುಭಾವವಿಲ್ಲದವರ ಹೊಲಮೇರೆಯ ಹೊದ್ದೆ, ಹೊಲನ ಬಿಟ್ಟೋಡುವೆ.

೧೯. ಒಡೆಯರು ಬಂದಡೆ ಗುಡಿತೋರಣವ ಕಟ್ಟು, ನೆಂಟರು ಬಂದರೆ, ಸಮಯವಿಲ್ಲೆನ್ನಿ. ಅಂದೇಕೆ ಬಾರರು? ನೀರಿಂಗೆ ನೇಣಿಂಗೆ ಹೊರಗಾದಂದು ಸಮಯಾಚಾರಕ್ಕೆ ಒಳಗಾದಂದು? ಪರುಷ ಮುಟ್ಟಲು, ಕಬ್ಬುನ ಸುವರ್ಣವಾಯಿತ್ತು. ಬಳಿಕ ಬಂಧುಗಳುಂಟೇ ಕೂಡಲಸಂಗಮ ದೇವಾ?

೨೦. ಒಡೆಯರಾಡುವ ಮಾತ ಕಡಿಸರಿಯಂತರ ಕೇಳಿ, ಇದಿರು ವೋಗಿ ಕಿಂಕರನಾಗಿ ನಡುಗುತ್ತ ಬಿನ್ನಹವ ಮಾಡುವ ಸದ್ಭಕ್ತನ ತೋರಯ್ಯ. ಒಡೆಯರಾಡುವ ಮಾತ ಕಂಡು, ಕರೆವಲ್ಲಿ ಕೆಡೆಮೆಟ್ಟಿ ಬಾಯಿ ಘೇನ ವೆಂದು ಆಡುವವನ ತೋರದಿರಯ್ಯ. ಆವನ ಸಂಗದಲ್ಲಿ ಇರಿಸದಿರಯ್ಯ. ಆವನ ಸಹಸಂಕ್ತಿಯಲ್ಲಿ ಕುಳ್ಳಿರಿಸದಿರಯ್ಯ. ಕೂಡಲಸಂಗಮದೇವಯ್ಯ ನಿಮ್ಮ ಬೇಡುವುದೊಂದೇ ವರವ.

೨೧. ಬಡ ಹಾರುವನೇಸು ಭಕ್ತನಾದರೆಯು ನೇಣಿನ ಹಂಗ ಬಿಡ. ಮೂಲೆಗಾರನೇಸು ಭಕ್ತನಾದರೆಯು, ಬಾವಿಯ ಬೊಮ್ಮನ ಹಂಗ ಬಿಡ. ಬಣಜಿಗನೇಸು ಭಕ್ತನಾದರೆಯು ಒಟ್ಟಿಲ ಬೆನಕನ ಹಂಗ ಬಿಡ. ಕಂಚಗಾರನೇಸು ಭಕ್ತನಾದರೆಯು, ಕಾಳಿಕಾದೇವಿಯ ಹಂಗ ಬಿಡ. ನಾನಾವ ಹಂಗಿನವನಲ್ಲ. ನಿಮ್ಮ ಶರಣರ ಹಂಗಿನವನಯ್ಯಾ. ಕೂಡಲ ಸಂಗಮದೇವಾ.

೨೨. ಶ್ರೀ ವಿಭೂತಿ ರುದ್ರಾಕ್ಷಿ ಇದ್ದವರ ಲಿಂಗವೆಂಬೆ. ಇಲ್ಲದವರ ಭವಿ ಎಂಬೆ. ಕೂಡಲಸಂಗಮದೇವ ಸದುಭಕ್ತರ ನೀನೆಂಬೆ.

೨೩. ದೇವ ಸಹಿತ ಭಕ್ತ ಮನೆಗೆ ಬಂದರೆ, ಕಾಯಕವಾವುದೆಂದು ಬೆಸಗೊಂಡಿನಾದರೆ, ನಿಮ್ಮಾಣೆ ನಿಮ್ಮ ಪುರಾತರಾಣೆ. ತಲೆದಂಡ, ತಲೆದಂಡ. ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದರೆ, ನಿಮ್ಮ ರಾಣಿವಾಸದಾಣೆ

೨೪. ಲಿಂಗಾಂಗಿಗಳಲ್ಲದವರ ಶರಣರ ಸಂಗವಿಲ್ಲದವರ ಕಂಡರೆ ನಾಚುವೆ. ಅವರ ನುಡಿ ಎನಗೆ ಸಮನಿಸದಯ್ಯ ಕೂಡಲಸಂಗಮದೇವಾ ನೀನು ಅಲ್ಲಿ ಇಲ್ಲದ ಕಾರಣ.

೨೫. ಶ್ರೀ ವಿಭೂತಿಯ ಹೊಸದವರ ಶ್ರೀ ರುದ್ರಾಕ್ಷಿಯ ಧರಿಸದವರ ನಿತ್ಯ ಲಿಂಗಾರ್ಚನೆಯ ಮಾಡದವರ ಜಂಗಮವೇ ಲಿಂಗವೆಂದರಿಯದವರ ಸದ್ಭಕ್ತರ ಸಂಗದಲ್ಲಿರದವರ ತೋರದಿರು ಕೂಡಲಸಂಗಮದೇವಾ ಸೆರೆಗೊಡ್ಡಿ ಬೇಡುವೆನು.

೨೬. ಕೂಪರಿಗೆ ಹೇಳುವೆನು ಕುಳಸ್ಥಳಂಗಳನೆಲ್ಲವ. ಕೂರದವರಿಗೆ ಹೇಳಿ ನಾನೇನೆನು ಶಿವನೇ? ಕವಲ ಭೂಮಿಯಲ್ಲಿ ಕರೆದ ವೃಷ್ಟಿಯ

ತೆರನಂತೆ ಅವರಿತ್ತ ಬಲ್ಲರಿನ್ನ ಸುಖ ದುಃಖವ? ಅಂಗವಿಲ್ಲದ ಸಂಗವು ಆಳಲಿಲ್ಲದ ಹುಯ್ಯಲಂತೆ. ಇದು ಕಾರಣ ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದೆ ಬಾಯ ತೆರೆಯೆನು.

೨೭. ಒಡೆದೋಡು ಎನ್ನ ಮನೆಯಲ್ಲಿಲ್ಲದಂತೆ ಮಾಡಯ್ಯ. ಕೊಡು ದೇವ, ಎನ್ನ ಕೆಯ್ಯಲೊಂದು ಕರಿಕೆಯನು. ಮೃಡದೇವ ಶರಣೆಂದು ಭಿಕ್ಷಕ್ಕೆ ಹೋದರೆ, ಅಲ್ಲಿ ನಡೆ ದೇವ ಎಂದೆನಿಸೋ ಕೂಡಲಸಂಗಮದೇವಾ.

೨೮. ಭವ ವಿರಹಿತ ಭಕ್ತನಾದ ಬಳಿಕ, ಭಕ್ತಿ ಭಾಜನದಲ್ಲಿ ಮಾಡಿ ಭವಿಗಿಕ್ಕಲಾಗದಯ್ಯಾ. ಯುಕ್ತಿಶೂನ್ಯಂಗೆ ಮುಂದೆ ಪ್ರಸಾದ ದೂರ, ಮುಕ್ತಿ ಇಲ್ಲ. ಮುಂದೆ ನಾಯ ಬಸಿರಲ್ಲಿ ಬಪ್ಪುದು ತಪ್ಪದು. ಪೃಥ್ವಿಯೊಳಗೆ ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದೆ ಅನಾಚಾರಕ್ಕೆಲ್ಲಿಯದೋ?

ಭಕ್ತನ ಪ್ರಸಾದಿ.

೧. ಅಯ್ಯ ನಿಮ್ಮ ಶರಣರ ದಾಸೋಹಕ್ಕೆ ಎನ್ನ ತನು ಮನ ಧನವ ಲಸದಂತೆ ಮಾಡಯ್ಯ. ತನುದಾಸೋಹಕ್ಕೆ ಉಬ್ಬವಂತೆ ಮಾಡು. ಮನ ದಾಸೋಹಕ್ಕೆ ಲೀಯವಾಹಂತೆ ಮಾಡು. ಧನದಾಸೋಹಕ್ಕೆ ಸವಿದು ನಿಮ್ಮ ಶರಣರ ಪ್ರಸಾದದಲ್ಲಿ ನಿರಂತರ ಆಡಿ, ಪಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ, ಪರಿಣಾಮಿಸುವಂತೆ ಮಾಡು ಕೂಡಲಸಂಗಮದೇವಾ.

೨. ಹಾರುವ ಹಾರುವನಪ್ಪೆ ನಾನು ಸದ್ಭಕ್ತರೆನ್ನವರೆನ್ನವರೆಂದು. ಹಾರುವ ಹಾರುವನಪ್ಪೆ ನಾನು, ಶರಣರು ಎನ್ನವರೆನ್ನವರೆಂದು, ಕೂಡಲ ಸಂಗನಶರಣರು ಒಕ್ಕುದನಿಕ್ಕಿ ಸಲಹುವರೆಂದು.

೩. ಒಕ್ಕುದ ಮಿಕ್ಕುದನುಂಡು, ಕಿವಿವಿಡಿದಾಡುವೆ. ಶರಣರ ಮನೆಯ ಲಿಂಗಿಯ ಡಿಂಗರಿಗ ನಾನು, ಕೂಡಲಸಂಗನ ಶರಣರ ಮನೆಯ ಭಕ್ತಿಯ ಮರುಳ ನಾನು.

೪. ಗುರುಲಿಂಗ ಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು. ಆ ಭಾವವೇ ಮಹಾ ಪ್ರಸಾದವಾಗಿ, ಎನಗೆ ಬೇರೆ ಪ್ರಸಾದವೆಂಬುದಿಲ್ಲ ಕೂಡಲಸಂಗಮದೇವಾ.

೫. ಅಹುದೆಂದರಿಯೆ, ಆಗದೆಂದರಿಯೆ, ಆದಿಯ ಪಥವ ತೋರ ಲರಿಯೆ, ಸತ್ಯವನರಿಯೆ, ಸಹಜವನರಿಯೆ, ಸಜ್ಜನಶುದ್ಧವ ಮುನ್ನರಿಯೆ. ನಿಮ್ಮ ಶರಣರ ಒಕ್ಕುದನುಂಡಿಪ್ಪೆ ಕೂಡಲಸಂಗಮದೇವಾ.

೬. ಆವನಾದೊಡೇನು? ಶ್ರೀ ಮಹಾದೇವನ ನೆನೆವನ ಬಾಯ ತಂಬುಲವ ಮೆಲುವೆ, ಬೀಳುಡಿಗೆಯ ಹೊದಿವೆ, ಪಾದರಕ್ಷೆಯ ಕಾಯ್ದು ಬದುಕುವೆ ಕೂಡಲಸಂಗಮದೇವ.

೭. ಒಂದುವನರಿಯದ ಸಂದೇಹ ನಾನಯ್ಯಾ. ನಾಬುಗೆ ಇಲ್ಲದ ಡಂಭಕ ನಾನಯ್ಯ. ನಿಮ್ಮನಂಬಿದ ಶರಣರ ಡಿಂಗರಿಗ ನಾನು ಕೂಡಲ ಸಂಗಮದೇವಾ.

೮. ಬಿಡದೆ ಬಾಗಿಲ ಎಂಜಲ ಕಾಯ್ದಿಪ್ಪೆನು. ಕಿಂಕರನ ಮನೆ ಯಲ್ಲಿ ಕಿಂಕರನು ಆನು. ಹಾರುತಿಪ್ಪೆನು. ನಮ್ಮ ಕೂಡಲಸಂಗನ ಶರ ಣರ ಒಕ್ಕುದ ಮಿಕ್ಕುದನುಂಬ ಕಿಂಕರ ನಾನು.

೯. ತೊತ್ತಿಂಗೇಕೆ ಲಕ್ಷಣ? ಬಂಟಂಗೇಕಾಚಾರ? ಆಗಮವೇಕೆ ಡಿಂಗರಿಗಂಗೆ, ಒಕ್ಕುದ ನುಂಬವಂಗಯ್ಯ? ಕೂಡಲಸಂಗಮದೇವಾ ನಿಮ್ಮ ನಂಬುವುದಾಚಾರವಯ್ಯ.

೧೦. ತೊತ್ತಿಂಗೆ ಲಕ್ಷಣವೇಕಯ್ಯ? ಅವರೊಕ್ಕುವನುಂಡು, ಮಿಕ್ಕುದ ಕಾಯ್ದಿರ್ದುದು. ಸಾರೆ ಹೊರಸೇಕೆ? ಆವಳಿಗೆ ಮಾರುತ್ತರವೇಕೆ? ಕೂಡಲಸಂಗನಶರಣರೊಡನೆ ಇದಿರುತ್ತರವೇಕೆ ಸಿಂಬಕಂಗೆ?

೧೧. ಪಾದೋದಕವ ಕೊಂಬೆ. ಪ್ರಸಾದವ ಕೊಂಬೆ. ಆರ್ಥ ಪ್ರಾಣಾಭಿಮಾನ ನಿಮ್ಮದೆಂಬೆ. ರಾತ್ರಿಯಲೊತ್ತೆಯ ಕೊಂಬ ಪಾತಕಿ ಸೂಳೆ ಯಂತೆ, ಬರಿಮಾತಿಂಗೊಲಿವನೇ ನಮ್ಮ ಕೂಡಲಸಂಗಮದೇವಾ?

೧೨. ಪಾತಕ ಮಹಾ ಪಾತಕವ ಮಾಡಿದವನು ಸದ್ಭಕ್ತರ ಮನೆಗೆ ಹೋಗಿ, ಆನರೊಕ್ಕ ಪ್ರಸಾದವನಾಯಿದುಂಡರೆ ಸಕಲ ಬ್ರಹ್ಮಹತ್ಯಾದಿ

ಪಾತಕ ಪರಿಹಾರ. ಒಮ್ಮೆ ಬೇಡಿಕೊಂಡುಂಡರೆ ॥ಶ್ಲೋ॥ ಪಾತಕೇ ಮನು ನೋಪ್ಯಾಪ್ತೇ ಶಿವಭಕ್ತ ಗೃಹಂ ವ್ರಜೇತ್। ಯಾಚಯೇದನ್ನಮವ್ಯತಂತ ದಲಾಭೆ ಜಲಂ ಪಿಬೇತ್॥ ಇದು ಕಾರಣ ಕೂಡಲಸಂಗಮದೇವಾ ನಿಮ್ಮ ಸದ್ಭಕ್ತರಿಗೆ ನಮೋ ನಮೋ ಎಂಬೆನು.

೧೩. ನಾನು ಹೊತ್ತ ಹುಳ್ಳಿಯನಂಬಿಲಿಗೆ ಕೊಂಬುವರಿಲ್ಲ ನೋಡಯ್ಯಾ. ಅನು ನಿಮ್ಮ ಶರಣರ ಒಕ್ಕುದನುಂಡು ಬದುಕುವೆನಯ್ಯಾ. ಮೇರುವ ಸಾರಿದ ಕಾಗೆ ಹೊಂಬಣ್ಣವಪ್ಪುದು ತಪ್ಪದು ಕೂಡಲಸಂಗಮದೇವಾ.

೧೪. ಭವಭವದಲ್ಲಿ ನಿಮ್ಮ ಜಂಗಮವೇ ಶರಣಯ್ಯಾ. ಅವರುಂಡು ಮಿಕ್ಕುದ ಉಡುಗಿ, ಒಕ್ಕ ಪ್ರಸಾದವನಾಯಿದುಕೊಂಬ ಮರುಳ ನಾನಯ್ಯ. ನಮ್ಮ ಕೂಡಲಸಂಗನ ಶರಣರ ಋಣವ ನಾ ಹಿಂಗಲಾರೆ.

೧೫. ದಾಸಿಯ ವರ್ಗದಲ್ಲಿಸ್ಪೆನು. ಶಿವಶರಣರ ಮನೆಯಲ್ಲಿ ಅವರೊಕ್ಕುದನುಂಡು, ಮಿಕ್ಕುದ ಕಾಯಿದುಕೊಂಡಿಪ್ಪ ಕಾರಣ, ಕಾಲ ಮುಟ್ಟಲಮ್ಮವು. ಕಲ್ಪಿತ ತೊಡೆಯಿತ್ತು. ಎನ್ನ ಭವಬಂಧನ ಹಿಂಗಿತ್ತು. ಎನ್ನ ಕರ್ಮ ನಿರ್ಮಳವಾಯಿತ್ತು. ಅವರ ತೊತ್ತಿನ ತೊತ್ತಿನ ಮರುದೊತ್ತಿನ ಮಗನೆಂದು ಕೂಡಲಸಂಗಮದೇವ ಇತ್ತ ಬಾ ಎಂದೆತ್ತಿಕೊಂಡನು.

೧೬. ಜನ್ಮಜನ್ಮಕ್ಕೆ ಹೋಗಲೀಯ್ಯದೆ, ಸೋಹಮ್ಮೆಂದೆನಿಸದೆ, ದಾಸೋಹಂ ಎಂದೆನಿಸಯ್ಯಾ. ಲಿಂಗಜಂಗಮದ ಪ್ರಸಾದವ ತೋರಿ ಬದುಕಿಸಯ್ಯಾ ಕೂಡಲಸಂಗಮದೇವಾ.

೧೭. ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತ ಮಾಡಿ ಸಲಹುದ ಸುಖವು ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯದಂತಿರಲ್ಲ ಕೇಳಿರಯ್ಯಾ ಕೂಡಲಸಂಗನ ಶರಣರು ತಮ್ಮ ಒಕ್ಕುದನಿಕ್ಕಿ ಸಲಹುವ ಸುಖವು.

ಭಕ್ತನ ಪ್ರಾಣಲಿಂಗಿ.

೧. ತೊತ್ತಿಂಗೆ ಬಲ್ಲಪನೊಲಿದರೆ, ಪದವಿಯ ಮಾಡದೆ ಮಾಣ್ಬನೆ? ಅಯ್ಯಾ! ಜೇತರ ದಾಸಯ್ಯಂಗೊಲಿದಾತ ಮತ್ತೊಬ್ಬ ದೇವನೇ ಅಯ್ಯ?

ಮಾದರ ಚನ್ನಯ್ಯಂಗೆ, ಡೋಹರ ಕಕ್ಕಯ್ಯಂಗೆ ತೆಲುಗು ಜೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ ದೇವನೇ ಅಯ್ಯ? ಎನ್ನ ಮನದ ಪಂಚೇಂದ್ರಿಯ ನಿಮ್ಮತ್ತಲಾದರೆ ತನ್ನತ್ತ ಮಾಡುವ ಕೂಡಲಸಂಗಮದೇವಾ.

೨. ಹೊರಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧವಾಗದನ್ನಕ್ಕ? ಮಣಿಯ ಕಟ್ಟಿ ಏವೆನಯ್ಯಾ ಮನ ಮುಟ್ಟದನ್ನಕ್ಕ? ನೂರನೋದಿ ಏವೆನಯ್ಯಾ ನಮ್ಮ ಕೂಡಲಸಂಗಮದೇವನ ಮನ ಮುಟ್ಟದನ್ನಕ್ಕ?

೩. ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದೆಸ್ಸ ಮನ ಎಂತಯ್ಯ? ಎನಗಿನ್ನಾವುದು ಗತಿ ಎಂತಯ್ಯ? ಎನಗಿನ್ನಾವುದು ಮತಿ ಎಂತಯ್ಯ? ಹರಹರಾ ಕೂಡಲಸಂಗಮದೇವಾ, ಮನವ ಸಂತೈಸೆನ್ನ.

೪. ಆಷ್ಟದಳಕಮಲವ ಸುತ್ತುವ ಜೀವಾತ್ಮನೆ ಘಟ್ಟದ ದಳವನರಿಯದೆ, ಅನು ಭಕ್ತನೆಂತೆಂಬೆ? ಅನು ಶರಣನೆಂತೆಂಬೆ? ಅನು ಲಿಂಗೈಕ್ಯನೆಂತೆಂಬೆ? ಕೂಡಲಸಂಗಮದೇವಾ, ಎನ್ನ ಮನವು ಸಮಾಧಾನವಾಗದನ್ನಕ್ಕ?

೫. ನಾ ನಿಮ್ಮ ನೆನೆವೆನು. ನೀವೆನ್ನನರಿಯಿರಿ. ನಾ ನಿಮ್ಮನೋಲೈಸುವೆನೆನು. ನೀವೆನ್ನ ಕಾಣಿರಿ. ನಾನೆಂತು ಬದಕುವೆನೆಂತು ಜೀವಿಸುವೆನಯ್ಯಾ? ಕೂಡಲಸಂಗಮದೇವಾ, ಎನಗೆ ನೀವೇ ಪ್ರಾಣ ಗತಿ ಮತಿ ನೋಡಯ್ಯಾ.

೬. ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು. ನೀನಲ್ಲದೆ, ಮತ್ತಾರು ಇಲ್ಲವಯ್ಯಾ. ಕೂಡಲಸಂಗಮದೇವಾ, ಹಾಲಲದ್ದು, ನೀರಲದ್ದು.

೭. ಎನ್ನ ಆಪತ್ತು ಸುಖದುಃಖ ನೀವೇ ಕಂಡಯ್ಯಾ! ಮತ್ತಾರೂ ಇಲ್ಲ. ಹರಹರಾ, ನೀನೇ ಕಂಡಯ್ಯ! ಎನ್ನ ಮಾತಾಪಿತನು ನೀನೇ ಕಂಡಯ್ಯ ಕೂಡಲಸಂಗಮದೇವಾ,

೮. ಎನ್ನ ಜನ್ಮನ ತೊಡೆದ ನೀ ಧರ್ಮ, ಎನ್ನ ಜನ್ಮವನತಿಗಳೆದ ನೀ ಧರ್ಮ, ಎನ್ನ ಭವಬಂಧನವ ನಿಃಕರಿಸಿದೆಯಾಗಿ, ಶಿವನೇ ಗತಿ ಎಂದು ನಂಬಿದೆನಯ್ಯಾ! ಎನ್ನಷ್ಟಮದಂಗಳ ಸುಟ್ಟುರುಹಿದೆಯಾಗಿ ಕಟ್ಟು

ಗ್ರದಿಂದ ನಿಮ್ಮ ಶ್ರೀ ಚರಣವ ಕಂಡೆ. ಸೃಷ್ಟಿಸ್ಥಿತಿಪಾಲಕಾ ನಿಮ್ಮ ನಂಬಿದೆ ಕರುಣಿಸು ಕೂಡಲಸಂಗಮದೇವಾ.

೬. ಭವರೋಗ ವೈದ್ಯನೆಂದು, ನಾ ನಿಮ್ಮ ಮರೆಹೊಕ್ಕೆ. ಭಕ್ತೆ ದಾಯಕ ನೀನು. ಕರುಣಿಸು ಲಿಂಗ ತಂದೆ. ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ ಎನ್ನುತ್ತಿದ್ದಿತ್ತೆನ್ನ ಮನವು. ಕೂಡಲಸಂಗಮದೇವಂಗೆ ಶರಣೆಂದಿತ್ತೆನ್ನ ಮನವು.

ಭಕ್ತನ ಶರಣ.

೧. ಅಂಗೈಯ್ಯೊಳಗಣ ಲಿಂಗವ ನೋಡುತ್ತ ಕಂಗಳು ಕಡೆಗೋಡಿವರಿವುತ್ತ ಸುರಿವುತ್ತ ಎಂದಿಪ್ಪೆನೋ? ನೋಟವೇ ಪ್ರಾಣವಾಗಿ ಎಂದಿಪ್ಪೆನೋ? ಕೂಟವೇ ಸ್ವಾಣವಾಗಿ ಎಂದಿಪ್ಪೆನೋ? ಎನ್ನ ಅಂಗವಿಕಾರದ ಸಂಗವಳದು ಕೂಡಲಸಂಗಯ್ಯ ಲಿಂಗ ಲಿಂಗವೆನ್ನುತ್ತ?

೨. ಎದೆ ಬಿರಿವನ್ನಕ್ಕ, ಮನ ದಣಿವನ್ನಕ್ಕ, ನಾಲಿಗೆ ನಲಿನಲಿದೋಲಾಡುವನ್ನಕ್ಕ, ನಿಮ್ಮ ನಾಮಾಮೃತವ ತಂದಿಂಸು ಕಂಡಯ್ಯಾ ಎನಗೆ ಎನ್ನ ತಂದೆ. ಬಿರಿ ಮುಗುಳಂತೆ ಎನ್ನ ಹೃದಯ ನಿಮ್ಮ ಶ್ರೀ ಚರಣದ ಮೇಲೆ ಬಿದ್ದರುಳುಗೆ ಕೂಡಲಸಂಗಮದೇವಾ.

೩. ಅಡಿ ಕಾಲು ದಣಿಯವು. ನೋಡಿ ಕಣ್ಣು ದಣಿಯುವು, ಹಾಡಿ ನಾಲಿಗೆ ದಣಿಯದು. ಇನ್ನೇನೆನಿನ್ನೇನೆ? ನಾ ನಿಮ್ಮ ಕಯ್ಯಾರೆ ಪೂಜಿಸಿ ಮನದಣಿಯಲೊಲ್ಲದಿನ್ನೇನೆನಿನ್ನೇನೆ? ಕೂಡಲಸಂಗಮದೇವ ಕೇಳಯ್ಯಾ ನಿಮ್ಮ ಉದರವ ಬಗಿದಾನು ಹೊಗುವ ಭರವೆನಗೆ.

೪. ಕಾಮಸಂಗ ನಿಸ್ಸಂಗವಾಗಿ, ಇನ್ನಾವ ಸಂಗವನರಿಯೆನಯ್ಯಾ. ಮಿಗೆ ಒಲಿದೆನಾಗಿ, ಅಗಲಲಾರೆ. ನಗೆಮೊಗದರಸ ಅವಧಾರು. ಕೂಡಲಸಂಗಮದೇವಾ ಬಗಿದು ಹೋಗುವೆ ನಾ ನಿಮ್ಮ ಮನವನು.

೫. ನೋಡಿ ನೋಡಿ ಲಿಂಗಧ್ಯಾನವೆನ್ನ ವ.ನಂತಾಗರಂಜನೆಯು. ಉತ್ಪತ್ತಿ ಸ್ಥಿತಿ ಲಯ ನಿನಗೆಂದಾದವು. ರಾಗರಂಜನೆಯ ಪೂಜೆ ಎನ್ನ ಮನ ಕೂಡಲಸಂಗಮದೇವಾ, ಅಹಾ ಎನ್ನ ಮನ!

೬. ವಾರವೆಂದರಿಯೆ, ದಿನವೆಂದರಿಯೆ, ಏನೆಂದರಿಯೆನಯ್ಯಾ! ಇರುಳೆಂದರಿಯೆ, ಹಗಲೆಂದರಿಯೆ, ಏನೆಂದರಿಯೆನಯ್ಯಾ! ನಿಮ್ಮನ ಪೂಜಿಸಿ, ಎನ್ನನ ಮರೆದೆ ಕೂಡಲಸಂಗಮದೇವಾ.

೭. ನಿಮ್ಮ ನೋಟವನಂತ ಸುಖ. ನಿಮ್ಮ ಕೂಟ ಪರಮ ಸುಖ ಅಷ್ಟಕೋಟಿ ರೋಮಂಗಳೆಲ್ಲ ಕಂಗಳಾಗಿ ನೋಡುತ್ತಿದ್ದೆನು. ಕೂಡಲಸಂಗಮದೇವಯ್ಯಾ, ನಿಮ್ಮ ನೋಡಿ ನೋಡಿ ಮನದಲ್ಲಿ ರತಿ ಹುಟ್ಟಿ, ನಿಮಿರ್ದವೆನ್ನ ಕಳೆಗಳು.

೮. ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕವಿಯಲ್ಲಿ ನಿಮ್ಮ ಕೀರ್ತಿ ತುಂಬಿ, ಕೂಡಲಸಂಗಮದೇವಾ, ನಿಮ್ಮ ಚರಣಕಮಲದೊಳಗಾನು ತುಂಬಿ.

೯. ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ ಕಂಗಳು ಕಡೆಗೋಡಿವರಿದವೆನಗಯ್ಯಾ. ಎನ್ನೆಲೃಜಲಂಗಳು ಆಲಿಕಲ್ಲರೂಹಿನಂತೆ ಅರಗಿನ ಪುತ್ಥಳಿಯಂತೆ ತನುವುಳುಕಿತವಾದ ಬೆವರು ಬಿಂದುಗಳೆಲ್ಲ. ಕೂಡಲಸಂಗನ ದರ್ಶನ ಸ್ಪರ್ಶನದಿಂದ ಮನ ಒಲಿದು ನೆರೆವ ಭರವನೇನ ಹೇಳುವೆನಯ್ಯಾ?

೧೦. ತಾಳಮಾನಸರಸವನರಿಯೆ. ಓಜೆ ಬಜಾವಣೆಯ ಲೆಕ್ಕವನರಿಯೆ. ಆವೃತಗಣ ದೇವಗಣವನರಿಯೆ. ಕೂಡಲಸಂಗಮದೇವ ನಿನಗೆ ಕೇಡಿಲ್ಲವಾಗಿ, ಆನು ಒಲಿದಂತೆ ಹಾಡುವೆ.

೧೧. ॥ಶ್ಲೋ॥ ವರಂ ಪ್ರಾಣಪರಿತ್ಯಾಗೋ ಛೇದನಂ ಶಿರಸೋಪಿವಾ। ನತ್ವಮಭ್ಯರ್ಚ್ಯ ಭುಂಜೀಯಾತ್ ಭಗವಂತಂ ತ್ರಿಲೋಚನಂ॥ ಎಂದುದಾಗಿ ದೇಹಧರ್ಮ ತನ್ನ ಆದಂತಾಗಲಿ ಕೂಡಲಸಂಗನ ಪೂಜಿಸಿದಲ್ಲದೆ ನಿಲ್ಲಲಾರೆನು.

೧೨. ಸುರರು, ಕಿನ್ನರರು, ಕಿಂಪುರುಷರೆಂಬುವರನಾರು ಬಲ್ಲರು? ಎನ್ನ ಚಿತ್ತವು ನಿಮ್ಮ ಮೇಲೆ ಸಂಗಯ್ಯ. ಎನ್ನ ಚಿತ್ತವು ನಿಮ್ಮ ಮೇಲೆ ಲಿಂಗಯ್ಯಾ. ಕೂಡಲಸಂಗಮದೇವಾ ಅನ್ಯನೆಂಬುದನರಿಯೆನಯ್ಯಾ.

೧೩. ಮಂಡೆಯ ಬೋಳಿಸಿಕೊಂಡು ಗಂಡು ತೊತ್ತುವೊಕ್ಕೆನಯ್ಯ. ಲಜ್ಜೆಗೆಟ್ಟಾದರೂ, ಲಿಂಗವನೊಲಿಸುವೆ. ನಾಣುಗೆಟ್ಟಾದರೂ ಲಿಂಗವ

ನೊಲಿಸುವೆ. ಕೆಲವ ಸಂಸಾರಿಗಳು ನಗುತಿರ್ದರೆ ಇರಲಿ. ಕೂಡಲಸಂ
ಗಮದೇವಾ ಶರಣು ಗತಿವೊಕ್ಕೆನಯ್ಯ.

೧೪. ಎನಗೆ ನಿಮ್ಮ ನೆನಹಾದಾಗವೇ ಉದಯ. ಎನಗೆ ನಿಮ್ಮ
ಮರಹಾದಾಗವೇ ಅಸ್ತವಾನ. ಎನಗೆ ನಿಮ್ಮ ನೆನಹವೇ ಜೀವನ.
ಎನಗೆ ನಿಮ್ಮ ನೆನಹವೇ ಪ್ರಾಣ ಕಾಣಾ ತಂದೆ ಸ್ವಾಮಿ. ಎನ್ನ ಹೃದಯ
ದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ! ವದನದಲ್ಲಿ ಪಡಕ್ಷರಿಯ
ಬರೆಯಯ್ಯಾ ಕೂಡಲಸಂಗಮದೇವಾ.

೧೫. ಎನ್ನ ಕಾಯವ ದಂಡಿಗೆಯ ಮಾಡಯ್ಯಾ! ಎನ್ನ ಶಿರವ
ಸೋರೆಯ ಮಾಡಯ್ಯಾ! ಎನ್ನ ನರವ ತಂತಿಯ ಮಾಡಯ್ಯಾ! ಎನ್ನ
ಬೆರಳ ಕಡ್ಡಿಯ ಮಾಡಯ್ಯಾ! ಬತ್ತೀಸ ರಾಗವ ಹಾಡಯ್ಯಾ! ಉರದ
ಲೊತ್ತಿ ಬಾರಿಸು ಕೂಡಲಸಂಗಮದೇವಾ.

೧೬. ಕುರುಳು, ಬೆರಳು, ಮಿಡುಹು, ಮುಂಬಲ್ಲ ಕೊಳ್ಳಾ.
ನಿರಿಯನಿಕ್ಕಿ, ದಾಂಟಿದಡೆ ಅಂತೆನ್ನ ನಂಬು. ಪರ ಪುರುಷರ ಮುಖವ
ನೋಡದಂತೆ ಮಾಡಾ. ಬಳಿಕ ನೀನೇ ಹೇಗೆ ಇರಿಸಿದಂತೆ ಇರಿಸಾ.
ಎನ್ನ ಉರದಲ್ಲಿ ಕೂಡಲಸಂಗಯ್ಯನೆಂದು ಬರೆಯಾ. ಹುಬ್ಬಕ್ಕರಿಗೆಗದಂತೆ
ಬಳನೀರನೆರೆಯಾ.

೧೭. ಕಂಡ ಕನಸು ನಿಧಾನವ ಕಂಡೆನಯ್ಯಾ! ಬಿಡಲಾರದ ನಿಧಾ
ನವ ಕಂಡೆನಯ್ಯಾ! ಕೂಡಲಸಂಗಯ್ಯನೆಂಬ ನಿಧಾನವ ಕಂಡು ಬಡ
ಲಾದೆನಯ್ಯಾ.

೧೮. ಹೊನ್ನ ಹಾವಿಗೆಯ ಮೆಟ್ಟಿದವನ, ಮಿಡಿಯ ಮುಟ್ಟದ
ಕೆಂಜಡೆಯವನ, ಮೈಯ್ಯಲ್ಲಿ ವಿಭೂತಿಯ ಧರಿಸಿದವನ, ಕರದಲ್ಲಿ ಕಪಾ
ಲವ ಹಿಡಿದವನ, ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ,
ನಂಬಿಗೆ ಕುಂಟಣಿಯಾದವನ, ಚೋಳಂಗೆ ಹೊಸ್ಮ ಮಳೆಯ ಕರೆದವನ,
ಎನ್ನ ಮನಕ್ಕೆ ಬಂದವನ, ಸದ್ಭಕ್ತರ ಹೃದಯಲ್ಲಿಪ್ಪವನ, ಮಾಡುವ
ಪೂಜೆಯಲಿಪ್ಪವನ, ಕೂಡಲಸಂಗಯ್ಯನೆಂಬುವನ.

೧೯. ಮನಕ್ಕೆ ಮನೋಹರವಲ್ಲದ ಗಂಡರು ಮನಕ್ಕೆ ಬಾರರು
ಕೇಳವ್ವ ಕೆಳದಿ. ಪನ್ನಗಭೂಷಣನಲ್ಲದ ಗಂಡರು ಇನ್ನೆಸಗಾಗದ

ಮೋರೆ ನೋಡವ್ವ! ಕನ್ನೆಯಂದಿನ ಕೂಟ ಚಿಕ್ಕಂದಿನ ಬಾಳುವೆ. ನಿಮ್ಮಾಣೆಯಯ್ಯಾ ಕೂಡಲಸಂಗಮದೇವಾ.

೨೦. ಜಗವೆಲ್ಲವಿಯಲು, ಎನಗೊಬ್ಬ ಗಂಡನುಂಟು. ಆನು ಮುತ್ತೈದೆ. ಆನು ಸೈಷ್ಠಿತೆ. ಕೂಡಲಸಂಗಮದೇವಯ್ಯನಂತಪ್ಪ ಎನಗೊಬ್ಬ ಗಂಡನುಂಟು.

೨೧. ಸಂಸಾರವೆಂಬ ಶ್ವಾನನಟ್ಟಿ ಮೀಸಲ ಬೀಸರವ ಮಾಡದಿರಯ್ಯಾ! ಎನ್ನ ಚಿತ್ತವು ನಿಮ್ಮ ಧಾ.ನವಯ್ಯ! ನೀವಲ್ಲದೆ ಮತ್ತೇನನು ಅರಿಯೆನು. ಕೆನ್ನೆಯಲ್ಲಿ ಕೈವಿಡಿದೆನು. ನಿಮ್ಮಲ್ಲಿ ನೆರೆದೆನು. ಮನ್ನಿಸು ಕಂಡಾ ಮಹಾಲಿಂಗವೆ. ಸತಿಯಾನು ಪತಿ ನೀನಯ್ಯ. ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ ನೀನೆನ್ನ ಮನವ ಕಾಯ್ದಿಪ್ಪ ಗಂಡನು. ನಿನಗೋತ ಮನವನನ್ಯಕ್ಕೆ ಹರಿಸಿದರೆ, ನಿನ್ನಭಿಮಾನ ಹಾನಿ ಕೂಡಲಸಂಗಮದೇವಾ.

ಭಕ್ತನೈಕ್ಯ.

೧. ನೀನೊಲಿಯಿತ್ತೆ ಪುಣ್ಯ, ನೀ ಒಲ್ಲದುದೇ ಪಾಪ, ಕಂಡೆಯ್ಯ. ಸಕಲ ಜಗದೊಳಗೆ ಅನುಶ್ರುತನಾಗಿಪ್ಪೆಯಯ್ಯಾ ನೀನೊಲಿದವನೇ ನಿಮ್ಮ ನವನು. ಶ್ಲೋ॥ ಪ್ರಸಾದಾದ್ದೇವತಾ ಭಕ್ತಿಃ ಪ್ರಸಾದಾತ್ ಭಕ್ತಿಸಂಭವಃ ಯಥಾಂಕುರಸ್ತಥಾ ಬೀಜಂ ಬೀಜತೋ ವಾ ಯಥಾಂಕುರಃ॥ ಎಂದುದಾಗಿ ನೀ ಒಲಿದವನೇ ಧನ್ಯ ಜಗಕ್ಕೆ ಪಾವನ ಕೂಡಲಸಂಗಮದೇವಯ್ಯಾ.

೨. ಅಷ್ಟವಿಧಾರ್ಚನೆ ಷೋಡಶೋಪಚಾರವ ಅಂದಂದಿನ ಕೃತ್ಯವ ಅಂದಂದಿಂಗೆ ಅನು ಮಾಡಿ ಶುದ್ಧನಯ್ಯಾ. ಹಂಗುಹರಿಯಿಲ್ಲದ ಕಾರಣ, ಕೂಡಲಸಂಗಮದೇವ, ನಿಃಫಲದಾಯಕನಾಗಿ, ಅನು ಮಾಡಿ ಶುದ್ಧನಯ್ಯ.

೩. ಮಾಟಕೂಟ ಫಲಪ್ರಾಪ್ತಿ ಎಂಬ ಮಾತ ಕೇಳಲಾಗದು. ಶಿವ ಶಿವ, ನಿಮ್ಮ ಭಕ್ತರಿಗೆ ಮಾಡಿವೆನೆಂದೆನ್ನವರೆಂದು, ಶ್ರೀ ಗುರು ಲಿಂಗವು ಕೃಪೆ ಮಾಡಿವ ಕಾರಣ, ಅಲ್ಲಿ ಮಾಡುವರು ಮಾಡಿಸಿಕೊಂಬುವರು ನೀವೇ ಕೂಡಲಸಂಗಮದೇವಾ.

೪. ಅಯ್ಯ. ನಿಮ್ಮ ಅನುಭಾವದಿಂದ ಎನ್ನ ತನುವು ಹಾಳಾಯಿತ್ತಯ್ಯಾ! ನಿಮ್ಮನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯ! ಅಯ್ಯ ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯಾ! ನಿಮ್ಮ ವರು ಅಡಿಗಡಿಗೆ ಹೇಳಿ ಭಕ್ತಿ ಎಂಬ ಒಡವೆಯನು ದಿಟವಾಡಿ ತೋರಿ ದರು ಕಾಣಾ ಕೂಡಲಸಂಗವದೇವಾ.

೫. ಭಕ್ತನೆಂತೆಂಬೆನಯ್ಯ, ಭವಿಸಂಗ ಬಿಡದನ್ನಕ್ಕ? ಮಾಹೇಶ್ವರನೆಂತೆಂಬೆನಯ್ಯಾ, ಪರಸ್ತ್ರೀ ಪರರರ್ಥದಾಸೆ ಬಿಡದನ್ನಕ್ಕ? ಪ್ರಸಾದಿ ಎಂತೆಂಬೆನಯ್ಯ, ಆಧಿ ವ್ಯಾಧಿ ನಷ್ಟವಾಗದನ್ನಕ್ಕ? ಪ್ರಾಣಲಿಂಗಿ ಎಂತೆಂಬೆನಯ್ಯ. ಪ್ರಾಣಸ್ಥಿರವಾಗದನ್ನಕ್ಕ? ಶರಣನೆಂತೆಂಬೆನಯ್ಯ ಪಂಚೇಂದ್ರಿಯನಾಸ್ತಿಯಾಗದನ್ನಕ್ಕ? ಐಕ್ಯನೆಂತೆಂಬೆನಯ್ಯ, ಜನನಮರಣವಿರಹಿತವಾಗದನ್ನಕ್ಕ? ಇಂತಿಪ್ಪ ಭಾಷೆ ವ್ರತವೇಷಗಳ ನಾನರಿಯೆನಯ್ಯ. ಅಘಟಿತಘಟಿತ ವರ್ತಮಾನವ ನಾನರಿಯೆನಯ್ಯ! ನಿಮ್ಮ ಶರಣರ ಕೃತ್ಯ ಭೃತ್ಯಾಚಾರವ ಮಾಡುವೆ ಕೂಡಲಸಂಗಮದೇವಾ.

೬. ಅಭ್ಯಾಸವೆನ್ನ ವರ್ತಿಸಿತ್ತಯ್ಯಾ! ಭಕ್ತಿ ಸಾಧ್ಯವಾಗದು. ನಾನೇ ವೆನಯ್ಯ! ಆ ನಿಮ್ಮ ಮನಬೊಗುವನ್ನಕ್ಕ, ನೀವೆನ್ನ ಮನಬೊಗುವನ್ನಕ್ಕ, ಕಾಯದ ಗುಣಂಗಳಳಿಯದವರಿಗೆ ಶರಣೆಂಬೆ, ಕೂಡಲಸಂಗಮದೇವಾ.

೭. ತನುಸಾರಾಯರ, ಮನಸಾರಾಯರ, ಜ್ಞಾನಸಾರಾಯರ ತೋರಯ್ಯ ನಿಮ್ಮ ಧರ್ಮ. ಭಾವಸಾರಾಯರ, ಭಕ್ತಿಸಾರಾಯರ, ತೋರಯ್ಯ ನಿಮ್ಮ ಧರ್ಮ. ಕೂಡಲಸಂಗಮದೇವಯ್ಯ, ನಿಮ್ಮನರಿಯದ ಅವಗುಣಿಗಳ ತೋರದಿರಯ್ಯ ನಿಮ್ಮ ಧರ್ಮ.

೮. ಸಂಚಲವಿಲ್ಲದ ಭಕ್ತಿ, ವಂಚನೆ ಇಲ್ಲದ ಮಹಂತನ ತೋರಾ! ತನುಶುಚಿಗಳ, ಮನಶುಚಿಗಳ ತೋರಾ! ಇಂತಪ್ಪ ಶಿವಲಿಂಗೈಕ್ಯರ ತೋರಿ ಬದುಕಿಸು ಕೂಡಲಸಂಗಮದೇವಾ.

೯. ಕಾಮಸಂಗವಳಿದು, ಅನುಭಾವ ಸಂಗದಲುಳಿದವರ ಅಗಲಲಾರೆನು. ಶಿವಂಗೆ ಮಿಗೆ ಒಲಿದವರನು ನಾನು ಅಗಲಲಾರೆನು ಕಾಣಾ ಕೂಡಲಸಂಗಮದೇವಾ.

೧೦. ಭಕ್ತಿರತಿಯ ವಿಕಲತೆಯ ಯುಕ್ತಿಯನೇನ ಬೆಸಗೊಂಬಿರಯ್ಯ? ಕಾಮಿಗೆ ಉಂಟೆ ಲಜ್ಜೆ ನಾಚಿಕೆ? ಕಾಮಿಗೆ ಉಂಟೇ ಮಾನಾ

ಸಮಾನವು? ಕೂಡಲಸಂಗನ ಶರಣರಿಗೊಲಿದ ಮರುಳನನೇನ ಬೆಸ
ಗೊಂಬಿರಯ್ಯಾ?

೧೧. ಇಂದು ಹುಟ್ಟಿದ ಕೂಸಿಂಗೆ ಇಂದೇ ಜವ್ವನವಾಯಿತ್ತಯ್ಯಾ!
ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಾ! ಇದರ ಸಂಗ
ಸುಖದನುಭಾವವನು ಕೂಡಲಸಂಗವದೇವ ತಾನೇ ಬಲ್ಲ.

೧೨. ಸಕ್ಕರೆಯ ಕೊಡನ ತುಂಬಿ ಹೊರಗೆ ಸವಿದರೆ, ರುಚಿ
ಯುಂಟೆ? ತರ್ಕೈಸಿ ಭುಜ ತುಂಬಿ ಲಿಂಗಸ್ಪರ್ಶನವ ಮಾಡದೆ, ಅಕಟ
ಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ! ಅದೇತರ ಭಕ್ತಿ, ಅದೇತರ
ಯುಕ್ತಿ? ಕೂಡಿಕೋ ಕೂಡಲಸಂಗಮದೇವಾ.

೧೩. ಕಾಳಿದಾಸಂಗೆ ಕಣ್ಣಾಸ್ನೆತ್ತೆ. ವಹಿಲಯ್ಯನ ನಿಜಪುರಕೊಯ್ದ.
ನಂಬಿ ಕರೆದಡೋ ಎಂದೆ. ತೆಲುಗು ಜೊವ್ವಯ್ಯಂಗೆ ಒಲಿದೆ ದೇವಾ!
ಕೂಡಲಸಂಗಮದೇವಾ ಎನ್ನನೇ ಕೊಲ್ಲೆಯಯ್ಯಾ?

೧೪. ಪರ ಚಿಂತೆ ಎಮಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ?
ಕೂಡಲಸಂಗಯ್ಯ ಒಲಿವನೋ ಒಲಿಯನೋ ಎಂಬ ಚಿಂತೆ ಹಾಸಲುಂಟು
ಹೊದೆಯಲುಂಟು.

೧೫. ಕಣ್ಣ ಕೋಪಕ್ಕೆ ಮುಂದರಿಯದೆ ನುಡಿದು, ಮನ ಮಚ್ಚಿ
ಮರುಳಾದೆ ನೋಡವ್ವಾ! ಕೇಳು ಕೇಳವ್ವಾ, ಕೆಳದಿ. ಸಖಿಯರಿಲ್ಲದೆ
ಸುಖವ ಬಯಸಿದರೆ ದೊರೆಕೊಂಬುದೇ ಹೇಳಾ? ಎನ್ನ ಮುನಿಸು ಎನ್ನಲ
ಡಗಿತ್ತು. ಇನ್ನು ಬಾರಯ್ಯ, ಕೂಡಲಸಂಗಮದೇವಾ.

೧೬. ಲಜ್ಜೆಗಟ್ಟಿನು, ನಾಣುಗೆಟ್ಟಿನು, ಕುಲಗೆಟ್ಟಿನು, ಛಲಗೆಟ್ಟಿನು,
ಸಂಗಾ ನಿಮ್ಮ ಪೂಜಿಸಿ ಭವಗೆಟ್ಟಿನು. ನಾನಯ್ಯ ಕೂಡಲಸಂಗಮದೇ
ವಯ್ಯಾ ನಿನ್ನ ಮುಟ್ಟಿ ಹುಟ್ಟು ಗೆಟ್ಟಿನು.

೧೭. ಮಾಡುವ ಭಕ್ತನ ಕಾಯ ಬಾಳೆಯ ಕಂಭದಂತಿರಬೇಕು.
ಮೇಲ್ಲ ಮೇಲ್ಲನೆ ಹೊರೆ ಎತ್ತಿ ನೋಡಿದಡೆ, ಒಳಗೆ ಕೆಚ್ಚಿಲ್ಲದಿರಬೇಕು.
ನೀಲಾದ ಫಲವ ನಮ್ಮವರು ಬೀಜ ಸಹಿತ ನುಂಗಿದರು. ಎನಗಿನ್ನಾವ
ಭವವಿಲ್ಲ ಕೂಡಲಸಂಗಮದೇವಾ.

೧೮. ಜಂಗಮವ ಕೂಡಿಕೊಂಡು, ಲಿಂಗಾರ್ಚನೆಯ ಮಾಡುವದು
ಲೇಸಯ್ಯ ಭಕ್ತಂಗೆ. ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡು

ವುದು ಲೇಸಯ್ಯ ಜಂಗಮಕ್ಕೆ. ಆ ಜಂಗಮದ ಕರ್ತವ್ಯವೇ ಭಕ್ತಂಗೆ ದಾಸೋಹ. ಆ ಭಕ್ತನ ಕಿಂಕಲವೇ ಜಂಗಮಕ್ಕೆ ದಾಸೋಹ. ಆ ಭಕ್ತಿ ನೊಳಗೆ ಜಂಗಮವಡಗಿ, ಆ ಜಂಗಮದೊಳಗೆ ಭಕ್ತನಡಗಿ ಇವನೇ ನೆಂದು ಹವಣಿಸುವೆನಯ್ಯಾ? ಎರಡೊಂದಾದ ಘನವ ಇದನೆಂತುಪಮಿ ಸುವೆನಯ್ಯಾ? ತೆರಹಿಲ್ಲದ ಘನವ, ಈ ಎರಡಕ್ಕೆ ಭವವಿಲ್ಲೆಂದು, ಕೂಡಲ ಸಂಗಯ್ಯ, ನಿಮ್ಮ ಶ್ರುತಿಗಳು ಹೇಳಿದವಾಗಿ ನಿಮ್ಮ ಕರುಣವೆನಗಾ ಯಿತ್ತು.

೧೯. ಹರಿವ ನದಿಯ ತೆರನ ಹೋಲಬಲ್ಲರೆ ಭಕ್ತ. ಕೂಡೆ ಸುಯಿ ಧಾನವ ನೀಡಬಲ್ಲರೆ ಭಕ್ತ. ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲರೆ, ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವಾ.

೨೦. ಏನು ಮಾಡುವೆ? ನನ್ನ ಪುಣ್ಯದ ಫಲವು. ಶಾಂತಿಯ ಮಾಡ ಹೋದರೆ ಬೇತಾಳನಾಯಿತ್ತು. ಕೂಡಲಸಂಗಮದೇವನ ಪೂಜಿಸಿಹೆನೆಂದರೆ ಭಕ್ತಿ ಎಂಬ ಮೃಗ ಎನ್ನನಟ್ಟಿ ಬಂದು ನುಂಗಿತ್ತಯ್ಯಾ.

೨೧. ಭಕ್ತಿ ಎಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕು ರಿಸಿ, ಲಿಂಗವೆಂಬ ಎಲೆಯಾಯಿತ್ತು. ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹುವ್ವಾಯಿತ್ತು. ಆಚಾರವೆಂಬ ಕಾಯಾಯಿತ್ತು. ನಿಷ್ಪತ್ತಿ ಎಂಬ ಹಣ್ಣಾಯಿತ್ತು. ನಿಷ್ಪತ್ತಿ ಎಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ, ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಕೊಂಡಾ.

ಮಹೇಶ್ವರ ಜ್ಞಾನಿ.

೬೧. ಸ್ವಾಮಿ ನೀನು, ಶಾಶ್ವತ ನೀನು. ಎತ್ತಿದೆ ಬಿರಿದ ಜಗವೆಲ್ಲರಿಯಲು. ಮಹಾದೇವ ಮಹಾದೇವ ಇಲ್ಲಿಂದ ಮೇಲೆ ಶಬ್ದವಿಲ್ಲ ಪಶುಪತಿ ಜಗಕ್ಕೆ ಏಕೋದೇವ. ಸ್ವರ್ಗ ಮರ್ತ್ಯ ಪಾತಾಳದೊಳಗೆ ಒಬ್ಬನೆ ದೇವ ಕೂಡಲಸಂಗಮದೇವಾ.

೭. ಶ್ರುತಿಗಗವ್ಯ ದ್ವಾದಶಾಂತ್ಯನಪ್ರತಿಮ ಮಹಿಮಂಗೆ ಪ್ರತಿಯುಂಟೇ? "ನೋಮಃಪವತೆ" ಎಂಬ ಶ್ರುತಿಯನರಿದು, ಶಿವನೇಕೋ ದೇವ ರುದ್ರನದ್ವಿತೀಯನೆಂದು ನಂಬುವುದು ಕಾಣಿರಣ್ಣಾ. ಕೂಡಲಸಂಗಮದೇವನಲ್ಲದೆ ಇಲ್ಲವೆಂದು ಎತ್ತಿದೆ ಬಿರಿದ ಜಗವೆಲ್ಲರಿಯಲು.

೩. ಉಪ್ಪರ ಗುಡಿ, ನಂದಿವಾಹನ, ಸದ್ಯೋಜಾತನ ಬಾಗಿಲ ಮುಂದೆ ಸಾರುತ್ತಿದ್ದಾವೆ ನೋಡಾ. ಶ್ರುತಿಗಳು ನಾಲ್ಕುವೇದವು ಹೊಸೆಯದೆ 'ಭರ್ಗೋ ದೇವಸ್ಯ ಧೀಮಹಿ' ಎಂದುದಾಗಿ ಕೂಡಲಸಂಗನಲ್ಲದಿಲ್ಲೆಂದುದು ವೇದ.

೪. ವೇದ ಸ್ವಯಂಭುವೆಂಬ ವಾದಿ ನೀ ಕೇಳಿಲವೋ. ಏಕೋ ದೇವ ರುದ್ರ ನ ದ್ವಿತೀಯನೆಂದು ನಂಬುವುದು ಕಾಣಿರಣ್ಣಾ. ಓಂ ದ್ಯಾವಾ ಭೂಮಿಜನಯಂ ದೇವ, ಏಕವೆವ ರುದ್ರ ನ ದ್ವಿತೀಯನೆಂದು ನಂಬುವುದು ಕಾಣಿರಣ್ಣಾ. ಚಕಿತಮಭಿಧತ್ತೇ ಎಂದು ಶ್ರುತಿ ಸಾರುತಿದ್ದಾವೆ. ಜಗದ ಕರ್ತ ಕೂಡಲಸಂಗದೇವನೊಬ್ಬನೇ ಕಾಣಿರಣ್ಣಾ.

೫. ಶ್ರುತಿ ತತಿ ಶಿರದ ಮೇಲೆ ಅತ್ಯತಿಷ್ಠದ್ದಶಾಂಗುಲವ ನಾನೇನೆಂಬೆನಯ್ಯ? ಘನಕ್ಕೆ ಘನಮಹಿಮನ ಮನಕ್ಕಗೋಚರನ ಅಣೋರಣೀಯಾನ್ ಮಹತೋಮಹಿಯಾನ್ ಮಹಾದಾನಿ ಕೂಡಲಸಂಗಮದೇವ.

೬. ಸಕಲ ನಿಃಕಲವ ಕೂಡಿಕೊಂಡಿಪ್ಪೆಯಾಗಿ, ಸಕಲ ನೀನೇ ನಿಃಕಲ ನೀನೇ ಕಂಡಯ್ಯ. ವಿಶ್ವತೋ ಚಕ್ಷು ನೀನೇ ದೇವಾ, ವಿಶ್ವತೋ ಮುಖ ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ ಕೂಡಲಸಂಗಮದೇವಾ.

೬. ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ. ಸಕಲ ವಿಸ್ತಾರದ ರೂಹು ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ. ವಿಶ್ವತೋ ಚಕ್ಷು ನೀನೇ ದೇವಾ. ವಿಶ್ವತೋ ಮುಖ ನೀನೇ ದೇವಾ. ವಿಶ್ವತೋ ಪಾದ ನೀನೇ ದೇವಾ ಕೂಡಲಸಂಗಮದೇವಾ.

೮. ಜಲ ಕೂರ್ಮ ನಾಗ ಮೇದಿನಿ ಸಪ್ತಸಾಗರ ಅಜಾಂಡ ಖಾಂಡ ಹರಿವಿರಿಂಚಿಗಳು ನಿಮ್ಮ ಉದರದ ಕೊನೆಯ ಪ್ರಾಣಿಗಳಯ್ಯ. ಕೂಡಲಸಂಗನ ಮಹಾಮನೆಯಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ ಇಚ್ಛಾಮಾತ್ರದಿಂದ ಜಗಜ್ಜಗವಯ್ಯ.

೯. ರುದ್ರ ಮುಖದಲ್ಲಿ ವಿಷ್ಣು ಭುಜದಲ್ಲಿ ಜಂಘೆಯಲ್ಲಿ ಅಜನ ಜನನವು. ಇಂದ್ರ ಪಾದದಲ್ಲಿ ಚಂದ್ರ ಮನದಲ್ಲಿ ಚಕ್ಷುವಿನಲ್ಲಿ ಸೂರ್ಯ ಜನನವು. ಮುಖದಲ್ಲಿ ಅಗ್ನಿ, ಪ್ರಾಣದಲ್ಲಿ ವಾಯು, ನಾಭಿಯಲ್ಲಿ ಅಂತರಿಕ್ಷವು. ಶಿರದಲುದಯ ತೈತ್ತೀಸಕೋಟಿ ದೇವರ್ಕಳು. ಪಾದ ತಳದಲ್ಲಿ ಭೂಮಿ ಜನನವು. ಶ್ರೋತ್ರದಲ್ಲಿ ದಶದಿಕ್ಕುವು. ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ. ಅಕ್ಷಯನಗಣಿತನು. ಸಾಸಿರತಲೆ, ಸಾಸಿರಕಣ್ಣು ಸಾಸಿರಕೈ, ಸಾಸಿರಪಾದ, ಸಾಸಿರ ಸನ್ನಿಹಿತ ನಮ್ಮ ಕೂಡಲಸಂಗಯ್ಯ.

೧೦. ವಿಶ್ವಾಧಿಕೋ ರುದ್ರನ ಹೊಗಳುವ ಶ್ರುತಿಗಳು ವಿಶ್ವರೂಪಾಯವೈ ನಮಃ ಪರಮ ರೂಪಿನೇ ನಮೋ ಪರತತ್ವನೆ ನಮೋ ಆದಿಯಾರೂಢ ಭಯಂಕರನೇ ನಮೋ. ಹರಿಯನು ಹರಿಸಿದನೆಂದು ಶ್ರುತಿಯು ಸಾರುತ್ತಿರಲು ಸಂಹಾರ ಕಾರಣನೇ ನಮೋ. ನಮ್ಮ ಕೂಡಲಸಂಗಮದೇವರ ಮಹಾನ್ಮಹಿಮ್ನೇ ನಮಃ

೧೧. ಐದುದೇ ಬ್ರಹ್ಮನ ಕಪಾಲ ಕರದಲ್ಲಿ? ಐದುದೆ ವಿಷ್ಣುವಿನ ನಯನ ಪಾದದಲ್ಲಿ? ಐದುದೆ ಕಾಮನ ಸುಟ್ಟ ಭಸ್ಮ ಮೈಯ್ಯಲ್ಲಿ? ಮುಖ ಮೊದಲೆ ಎಕಯ್ಯ ಕೂಡಲಸಂಗಮದೇವಾ?

೧೨. ಹರನ ಕೊರಳಲ್ಲಿಪ್ಪ ಕರೋಟಿ ಮಾಲೆಯ ಶಿರದ ಲಿಪಿತವ ಕಂಡು ಮರುಳು ತಾಂಡವಗಳು ಓದಿ ನೋಡಲು ಇವನಜ ಇವ ಹರಿ ಇವ ಸುರಪತಿ ಇವ ಧರಣೇಂದ್ರ ಇವನಂತಕನೆಂದು ಹರುಷದಿಂದ ಸರಸವಾಡಿತ್ತ ಕಂಡು, ಹರ ಮುಕುಳಿತನಾಗಿ ನಕ್ಕ ನಮ್ಮ ಕೂಡಲಸಂಗಮದೇವಾ.

೧೩. ಅದರಿತು ಪಾದಘಾತದಿಂದ ಧರೆ. ಬಿದಿರಿದವು ಮುಕುಟ ತಾಗಿ ತಾರಕೆಗಳು. ಉದರಿದವು ಕೈ ತಾಗಿ ಲೋಕಂಗಳೆಲ್ಲ. ॥ಶ್ಲೋ॥ ಮಹೀ ಪಾದಾಘಾತಾದ್ವ್ರಜತಿ ಸಹಸಾ ಸಂಶಯಪದಂ। ಪದಂ ವಿಷ್ಣೋ ಭ್ರಾಮ್ಯದ್ಭುಜಪರಿಘರುಗ್ಣಗ್ರಹಗಣಂ। ಮುಹುರ್ದ್ಯೌರ್ದೌಸ್ಥ್ಯಮಾತ್ಯ ನಿಭೃತ ಜಟಾತಟಿತ ತಟಾ ಜಗದ್ರಕ್ಷಾಯೈ ತ್ವಂ ನಟಸಿ ನನು ವಾ ಯೈವ ವಿಭುತಾಂ॥ ನಮ್ಮ ಕೂಡಲಸಂಗಮದೇವ ನಿಂದು ನಾಟ್ಯವನಾಡೆ.

೧೪. ಆರು ಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣಗೆ ಒಂದು ದಿನವಾಯಿತ್ತು. ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು. ರುದ್ರಾವತಾರ ಹಲವಳೆವಲ್ಲಿ ನಮ್ಮ ಕೂಡಲ ಸಂಗಮದೇವನೇನೆಂದು ಅರಿಯ.

೧೫. ಯುಗಜುಗಪ್ರಳಯವಾದಂದು ಕಾಣೆನಿಂದೂ ಕಾಣೆ. ಧಿಗಿ ಲುಭುಗಿಲೆಂದುರಿವಂದು ಕಾಣೆನಿಂದು ಕಾಣೆ ನಮ್ಮ ಕೂಡಲಸಂಗಮ ದೇವನಲ್ಲದೆ ತಲೆದೋರುವ ದೈವಂಗಳನಂದೂ ಕಾಣೆನಿಂದೂ ಕಾಣೆ.

೧೬. ಒಬ್ಬ ಕೆಂಚ, ಒಬ್ಬ ಕರಿಕ, ಒಬ್ಬ ಶುದ್ಧ ಧವಳಿತನೆಂತಯ್ಯ ಲಿಂಗವೇ? ಒಬ್ಬರಿಗೊಬ್ಬರು ಘನವೆಂಬರು. ಅದೆಂತಯ್ಯ? ಒಬ್ಬರಿಗೊ ಬ್ಬರು ಕಿರಿಯದೆಂಬರು. ಎಂತಯ್ಯ? ಬ್ರಹ್ಮ ಪ್ರಳಯ, ವಿಷ್ಣುವು ಮರಣ ಉಂಟು. ನಮ್ಮ ಕೂಡಲಸಂಗಂಗಿಲ್ಲ.

೧೭. ಹರಿಹರನೊಂದೇ ಎಂದರೆ ಸುರಿಯವೆ ಬಾಯಲ್ಲಿ ಬಾಲಹು ಳುಗಳು? ಹರಿಗೆ ಹತ್ತು ಪ್ರಳಯ, ಬ್ರಹ್ಮಂಗನಂತ ಪ್ರಳಯ. ಹರಂಗೆ ಪ್ರಳಯ ಉಂಟೆಂಬುದ ಬಲ್ಲರೆ, ನೀವು ಹೇಳಿರೀ. ಪ್ರಳಯ ಪ್ರಳಯ ಅಂದಂದಿಂಗೆ ಹಳೆಯ ಕೂಡಲಸಂಗಮದೇವಾ.

೧೮. ವಿಷ್ಣು ಕರ್ಮಿ, ರುದ್ರ ನಿಃಕರ್ಮಿ. ಕ್ರಮುವನರಿಯದೆ ನುಡಿವಿರಿ ಭೋ. ವೇದ ಶ್ರುತಿಗಳ ತಿಳಿಯಲರಿಯದೆ, ವಾದವ ಮಾಡುವರಲ್ಲಾ. ವಿಷ್ಣು ನಾನಾ ಯೋನಿಯಲ್ಲಿ, ಬಾರದ ಭವಂಗಳಲ್ಲಿ ಬರುತಿಪ್ಪ. ರುದ್ರನಾ ವಯೋನಿಯಲ್ಲಿ ಬಂದನೆಂದು ನೀವು ಹೇಳಿರೋ. ಓಂ ವಿಷ್ಣು ಕರ್ಮಾಣಿ ಪಶ್ಯತಿ ಯತೋ ವ್ರತಾನಿ ಪಶ್ಯತೈ ಇಂದ್ರಸ್ಯಯುಜ್ಯ: ಸಂಖ್ಯಾಪ್ತಿಣಿ ಪದ ವಿಚಕ್ರಮೆ। ವಿಷ್ಣೋ ಪಾಲದಾಭ್ಯಃ॥ ಆತೋ ಕರ್ಮಾಣಿ ಧಾರಯನ್ ತದ್ವಿಪ್ರಾಸೋವಿಪನ್ಯವೋಜಾಂ ಗ್ರಹವಾಸಃ ಸಮಿಂಧತೆ ವಿಷ್ಣೋರ್ಯ

ತ್ಪರವಂ ಪದಂ ಎಂಬ ಶ್ರುತಿಯ ವಚನವ ತಿಳಿಯಿ, ಭೋ. ವರ್ಮ ವನ್ನೆತ್ತಿ ನುಡಿದಲ್ಲದೆ ತಿಳ್ಗಿರಿ. ನಿಮ್ಮ ಕರ್ಮವು ಅತ್ಯತಿಷ್ಠದ್ದಶಾಂಗುಲದಿಂ ದತ್ತತ್ತಲೆ ಕೂಡಲಸಂಗವ.ದೇವಾ.

೧೯. ಆವೃತವತಿ ಸೋಮಶಂಭುವಿಂಗೆ ಹುಟ್ಟಿದಾತ ಇಂದ್ರ. ಸತ್ಯಋಷಿ ಜ್ಯೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ. ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು. ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ. ಇವರೆಲ್ಲರು ಯೋನಿಜರೆಂಬುದು ತ್ರೈಜಗ ಬಲ್ಲುದು. ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ ಕೂಡಲಸಂಗಮದೇವಂಗೆ ಮಾತಾಪಿತರುಗಳುಂಟೆ ಹೇಳಿರೋ.

೨೦. ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ. ಒಬ್ಬನೇ ಕಾಣಿರೋ. ಇಬ್ಬರೆಂಬುದು ಹುಸಿ ನೋಡಾ. ಕೂಡಲಸಂಗಮ ದೇವನಲ್ಲದಿಲ್ಲೆಂದಿತ್ತು ವೇದ.

೨೧. ಹುಟ್ಟಿಸುವಾತ ಬ್ರಹ್ಮನೆಂಬರು. ರಕ್ಷಿಸುವಾತ ವಿಷ್ಣುವೆಂಬರು ನೋಡಾ. ಬ್ರಹ್ಮ ತನ್ನ ಶಿರವನ್ನೇಕೆ ಹುಟ್ಟಿಸಲಾರ? ವಿಷ್ಣು ತನ್ನ ಮಗನನ್ನೇಕೆ ರಕ್ಷಿಸಲಾರ? ದುಷ್ಟನಿಗ್ರಹ ಶಿಷ್ಟಪರಿಪಾಲಕ ನಮ್ಮ ಕೂಡಲಸಂಗಮದೇವ.

೨೨. ಕೇಶವನಲ್ಲದೆ ಅತಃಪರ ದೈವವಿಲ್ಲೆಂದು ವೇದವ್ಯಾಸ ಮುನಿ ಭಂಗವಾದುದನರಿಯಿರೇ. ಅಹಂ ಸರ್ವಜಗತ್ಕರ್ತಾ ಮಮ ಕರ್ತಾ ಮಹೇಶ್ವರಃ ಎಂದು ವಿಷ್ಣು ಹೇಳಿದ ವಚನವನರಿಯರಲ್ಲಾ. ಕೂಡಲಸಂಗಮದೇವನು ದಕ್ಷನ ಯಜ್ಞವ ಕೆಡಿಸಿದುದ ಮರೆದಿರಲ್ಲಾ.

೨೩. ನಾರಾಯಣನೆಂಬವನ ಕಾಣೆ. ಗಿರಾಯಣನೆಂಬವನ ಕಾಣೆ. ಬೊಮ್ಮನೆಂಬವನ ಕಾಣೆ. ಬೊಮ್ಮಗನೆಂಬವನ ಕಾಣೆ ವಿಷವಟ್ಟೆ ಸುಡುವಲ್ಲಿ, ವೀರಭದ್ರ ಬಡಿವಲ್ಲಿ, ಕೂಡಲಸಂಗಯ್ಯಂಗೆ ಶರಣೆಂದು ಮೊರೆ ಇಟ್ಟರೆಲ್ಲರು.

೨೪. ಅವೃತವ ಕಡೆವಲ್ಲಿ, ವಿಷವಟ್ಟೆ ಸುಡುವಲ್ಲಿ. ದೇವರೆಂಬುವರೆತ್ತ ಹೋದರೇನಂಭೋ. ಅಂದೊಮ್ಮೆ ಓಡಿಹೋಗಿ, ಆ ಶಿವನ ಮೊರೆಯ ಹೊಗುವಂದು, ದೇವರೆಂಬುವರೆತ್ತ ಹೋದರೇನಂಭೋ. ಕೂಡಲಸಂಗಯ್ಯ. ದೇವರಿಗೆ ದೇವನು ನೀವೆಲ್ಲ ಅಳಿಂಬುದನರಿಯದಿಂಭೋ.

೨೫. ವಿಷ್ಣು ಬಲ್ಲಿದನೆಂಬೆನೆ? ದಶಾವತಾರದಲ್ಲಿ ಭಂಗಬಟ್ಟುದಕ್ಕೆ ಕಡೆ ಇಲ್ಲ. ಬ್ರಹ್ಮ ಬಲ್ಲಿದನೆಂಬೆನೆ? ಶಿರ ಹೋಗಿ ನಾನಾ ವಿಧಿಯಾದ. ವೇದ ಬಲ್ಲಿತ್ತೆಂಬೆನೆ? ನಾನಾ ಮುಖದಲ್ಲಿ ಸ್ತುತಿಯಿಸಿತಲ್ಲದೆ, ಲಿಂಗದ ನಿಲುಕಡೆಯ ಕಾಣದು. ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದ ಕ್ಕೆ. ಪುರಾಣ ಬಲ್ಲಿತ್ತೆಂಬೆನೆ? ಪೂರ್ವ ಕ್ಕೆ. ಆಗಮ ಬಲ್ಲಿತ್ತೆಂಬೆನೆ? ಬಾಯು ಹೊಂದಿಕ್ಕು. ಇದು ಕಾರಣ ಕೂಡಲಸಂಗಮದೇವನೇ ನಿತ್ಯ. ಉಳಿದ ದೈವವೆಲ್ಲ ಅನಿತ್ಯ ಕಾಣಿ ಭೋ.

೨೬. ಮರೆಯಲಾಗದೆ ಹರಿಯ? ಮರೆಯಲಾಗದೆ ಬ್ರಹ್ಮನ? ಮರೆಯಲಾಗದೆ ತೆತ್ತೀಸ ಕೋಟಿ ದೇವರ್ಕಳ? ನಮ್ಮ ಕೂಡಲಸಂಗನು ದೇವರ ಮರೆಯಲಿಹುದು.

೨೭. ಬಿದಿರಿಲೆಯ ಮೆಲಿದರೆ, ಮೆಲಿದಂತಲ್ಲದೆ, ರಸವನು ಹಡೆಯಲು ಬಾರನು. ನೀರ ಕಡೆದರೆ, ಕಡೆದಂತಲ್ಲದೆ, ಬೆಣ್ಣೆಯ ಹಡೆಯಲು ಬಾರದು. ಮಳಲ ಹೊಸೆದರೆ ಹೊಸೆದಂತಲ್ಲದೆ, ಸರಸಿಯ ಹಡೆಯಲು ಬಾರದು. ನಮ್ಮ ಕೂಡಲಸಂಗಮದೇವನಲ್ಲದೆ, ಅನ್ಯದೈವಕ್ಕೆರಗಿದರೆ, ಹೊಳ್ಳ ಕುಟ್ಟ ಕೈ ಹೊಟ್ಟೆಯಾದಂತಾಯಿತ್ತಯ್ಯ.

೨೮. ಆಗಳೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು. ಹೋಗೆಂದರೆ ಹೋಗವು. ನಾಯಿಂದ ಕರ ಕಷ್ಟ. ಕೆಲವು ದೈವಂಗಳು ಲೋಗರ ಬೇಡಿಕೊಡುಂಬ ದೈವಂಗಳು ತಾವೇನ ಕೊಡುವವು ಕೂಡಲಸಂಗಮದೇವಾ?

೨೯. ಗಾಡಿಗ ಡಿಂಬು ಗಂಗೆ ಚಕ್ಕು ಮಟ್ಟಿಗೆ ಹಸುರಂಬರಿ ಮಟ್ಟಿಗೆ ಹುರಿಬುತ್ತಿಯ ಬೇಡಿ ಮನುಷ್ಯರ ಒಡಿದು ಪೀಡಿಸಿ, ತಮ್ಮ ಬಸುರ್ಗೆ ಕಾಣದೆ ಈಡಾಡಿದ ಕೂಳಂಬಲಿಯನಾಯ್ದು ಕುರುಕುವ ಹೇಸಿ ದೈವಂಗಳ ಬೇಡಿ ಬೇಡಿ, ನಿರರ್ಥ ಕೆಡಬೇಡ ಎಲವೋ ಕೂಡಲಸಂಗಮದೇವರ ನೆರೆ ನಂಬುವುದೆಲವೋ.

೩೦. ಹಾಳು ಪೊರಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ ಬಾವಿ ಹೂ ಗಿಡಪುರಂಗಳಲ್ಲಿ, ಗ್ರಾಮದ ಮಧ್ಯಗಳಲ್ಲಿ, ಚೌಪಥ ಪಟ್ಟಣ ಪ್ರದೇಶದಲ್ಲಿ, ಹಿರಿಯಾಲದ ಮರದಲ್ಲಿ, ಮನೆಯ ಮಾಡಿ ಕರಿವೆಮ್ಮೆಯ, ಹಸುಗೂಸು, ಬಸಿರಿ, ಬಾಣಂತಿ, ಕುಮಾರಿ, ಕೊಡಗೂಸೆಂಬವರ ಹಿಡಿ

ದುಂಬ ತಿರಿದುಂಬ ಮಾರಯ್ಯ, ಬೀರಯ್ಯ, ಕೇತರಗಾವಿಲ, ಆಂತರ ಬೆಂತರ, ಕಾಳಯ್ಯ, ಮಾರಯ್ಯ, ಮಾಳಯ್ಯ, ಕೇತಯ್ಯಗಳೆಂಬ ನೂರು ಮಡಿಕೆಗೆ ನಮ್ಮ ಕೂಡಲಸಂಗಮದೇವ ಶರಣೆಂಬುದೊಂದು ದಡಿ ಸಾಲದೇ?

೩೧. ಅರಗು ತಿಂದು ಕರಗುವ ದೈವವ ಉರಿಯ ಕಂಡರೆ ಮುರು ಟುವ ದೈವವನೆಂತು ಸರಿ ಎಂಬೆನಯ್ಯ? ಅವಸರ ಬಂದರೆ ಮಾರುವ ದೈವವನೆಂತು ಸರಿ ಎಂಬೆನಯ್ಯ? ಅಂಜಿಕೆ ಬಂದರೆ ಹೂಳುವ ದೈವವನೆಂತು ಸರಿ ಎಂಬೆನಯ್ಯ? ಸಹಜ ಭಾವ ನಿರ್ಜೈಕ್ಯ ಕೂಡಲ ಸಂಗಮದೇವನೊಬ್ಬನೇ ದೇವ.

೩೨. ಮಾರಿಕವ್ವೆಯನೆಂತು ಕೊರಳಲ್ಲಿ ಕಟ್ಟಿಕೊಂಬರು? ಸಾಲ ಬಟ್ಟರೆ ಮಾರಿಕೊಂಡು ತಿಂಬರು. ಸಾಲಬಟ್ಟರೆ ಅವರು ಒತ್ತೆಯನಿಟ್ಟು ಕೊಂಬರಯ್ಯ. ಮಾರುಹೋಗ, ಒತ್ತೆಹೋಗ ನಮ್ಮ ಕೂಡಲಸಂಗಮ ದೇವ.

೩೩. ಉಣಲುಡಲು ಮಾರಿಯಲ್ಲದೆ ಕೊಲಲು ಕಾಯಲು ಮಾರಿ ಯೆ? ತನ್ನ ಮಗನ ಜವನೊಯ್ದಲ್ಲಿ, ಅದೆತ್ತ ಹೋದಳು ಮಾರಿಕವ್ವೆ? ಇವ ಕಾಯ್ವರೆ, ನಮ್ಮ ಕೂಡಲಸಂಗಯ್ಯನಲ್ಲದೆ ಮತ್ತೊಂದು ದೈವವಿಲ್ಲ.

೩೪. ಮರನ ಗೊಟಿಗೆ ಬಪ್ಪ ಕೆರುಕುಳ ದೈವಕ್ಕೆ ಕುರಿಯನಿಕ್ಕಿ ಹೆನೆಂದು ನಲಿನಲಿದಾಡುವರು. ಕುರಿ ಸತ್ತು ಕಾವುದೆ ಹರ ಮುಳಿ ದವರ? ಕುರಿಬೇಡ ಮರಿಬೇಡ. ಬರಿಯ ಪತ್ರೆಯ ತಂದು ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

೩೫. ಬನ್ನಿರಿ ಅಕ್ಕಗಳು, ಹೋಗಿರಿ ಅಲದ ಮರಕ್ಕೆ. ಕಚ್ಚುವವೇ ನಿಮ್ಮ ಚಿಪ್ಪಿನ ಹಲ್ಲುಗಳು? ಬೆಚ್ಚಿಸುವವೆ ನಿಮ್ಮ ಬಚ್ಚಣಿಯ ರೂಹು ಗಳು? ನಮ್ಮ ಕೂಡಲಸಂಗಮದೇವನಲ್ಲದೆ, ಉಳಿದ ಪರದೈವಂಗಳು ಮನಕ್ಕೆ ಬಂದವೆ ಬಿಕ್ಕನೆ ಬಿರಿವ ದೈವಂಗಳು?

೩೬. ಮಡಿಕೆ ದೈವ, ನೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲ ನಾರಿ ದೈವ, ಕಾಣಿರೋ. ಕೊಳಗ ದೈವ. ದೈವ ವೆಂದು ಕಾಲಿಡಲಿಂಬಿಲ್ಲ. ದೇವನೊಬ್ಬನೇ ನಮ್ಮ ಕೂಡಲಸಂಗಮದೇವ.

೩೭. ಸುಣ ಶಪ್ಪದ ಹೆಂಡಿರಲ್ಲಿ, ಗುಣ ಶಪ್ಪದ ನೆಂಟರಲ್ಲಿ, ಜೀವ ವಿಲ್ಲದ ದೇಹದಲ್ಲಿ ಫಲವೇನು? ಅಳ್ದನೊಲ್ಲದಾಳಿನಲ್ಲಿ, ಸಿರಿ ತೊಲಗಿದ

ರಪಿನಲ್ಲಿ, ವರವಿಲ್ಲದ ದೈವದಲ್ಲಿ, ಫಲವೇನೋ? ಕಳವ ಹೊವಿನಲ್ಲಿ ಕಂಪನುಳಿದ ಸೂಳೆಯಲ್ಲಿ ಪೆಂಪ, ಕೊಳಚಿ ನೀರಿನಲ್ಲಿ ಗುಂಪನರಸು ವಿರಿ ಮರುಳೆ. ವರಗುರು ವಿಶ್ವಕ್ಕೆಲ್ಲ ಗಿರಾಜಾಮನೋವಲ್ಲಭ ಕಾರಿಣಕ ನಮ್ಮ ಕೂಡಲಸಂಗಮದೇವ.

೩೮. ಗುಡಿಯೊಳಗಿರ್ದು, ಗುಡಿಯ ನೇಣ ಕೊಯ್ದರೆ ಗುಡಿಯ ದಡಿ ಬಿದ್ದು ಹಲ್ಲು ಹೋಹುದು ನೋಡಾ. ಪೊಡವಿಗೀಶ್ವರನ ಗರ್ಭ ವಾಸದೊಳಗಿರ್ದು ನುಡಿವರು ಮತ್ತೊಂದು ದೈವ ಉಂಟೆಂದು. ತುಡುಗುಣಿ ನಾಯು ಪಿಡಿತಂದು ಸಾಕಿದರೆ, ತನ್ನೊಡೆಯಂಗೆ ಬೊಗಳುವಂತೆ ಕಾಣಾ ಕೂಡಲಸಂಗಮದೇವ.

೩೯. ಅಸಮಾಕ್ಷ ಲಿಂಗಕ್ಕೆ ಅನ್ಯ ದೈವ ಸರಿ ಎಂಬವನ ಬಾಯಲ್ಲಿ ಮಸೆದ ಕೂರಲಗನಿಕ್ಕದೆ ಮಾಣ್ಬನೇ? ಹುಸಿಯಾಗಿ ನುಡಿವವನ ನಾಯಾಗಿ ಬೊಗಳಿಸನೆ? ಹಿರಿಯರುತ್ತಮರೆನ್ನದವರ ಕುದುರೆಯಾಗಿ ಕಟ್ಟಿಸನೆ? ಗುರುಲಘುವೆನ್ನದವರ ಬಾಯಲ್ಲಿ ವೆಟ್ಟೆ ಹುಡಿಯ ಹೊಯ್ಯದೆ ಮಾಬನೇ? ಪರಸ್ತ್ರೀಗಳುಸಿದವರ ಗಾಣದಲಿಕ್ಕಿ ಹಿಳಿಯನೇ? ಪರಧನಕ್ಕಳುಸಿದವರ ಹಿಡಿಖಂಡವ ಕೊಯ್ಯನೆ? ಎಲೆ ಕೂಡಲಸಂಗಮದೇವ ನಿಮ್ಮ ಹೇಳಿದ ಹೇಳಿಕೆಯಿಂದ ಪಿಂಬೆರ ಸೈಲಾರಗೆ ಮೇಳವಾಡುತ್ತ ಇದ್ದ ಕಾಣಾ ತ್ರಿಜಗದೊಳಗೆ.

೪೦. ಶಿವಮಯ ವಿಷ್ಣುವಲ್ಲ. ವಿಷ್ಣುಮಯ ಶಿವನಲ್ಲ. ನುಡಿಯದಿರಿಂಭೋ. ನಾರಾಯಣ ಹರನಲ್ಲ ನುಡಿಯದಿರಿಂಭೋ. ಶಿವನು ವಿಷ್ಣುವಲ್ಲ ನುಡಿಯದಿರಿಂಭೋ. ನಮ್ಮ ಕೂಡಲಸಂಗಮದೇವಯ್ಯನನರಿಯದ ಸೂನೆಗಾರರೆಲ್ಲ ನುಡಿಯದಿರಿಂಭೋ.

೪೧. ಅನಲಕ್ಷಣ ನಾಯ ನುಡಿಯ ನಾಲಗೆಯ ಸಡಗರ ಡೋವಿಗೆ ವೃತ್ಯವಿನ ನುಡಿಗೊಳಗಾಯಿತ್ತು. ಬೇಡವೋ ಪರವಾದಿಗಳು ಹವಿರಬೇಡವೋ. ದೂಷಕ ಬೊಗುಳದಿರು. ಶಿವಭಕ್ತಿಗೆಯೂ ಬೇಟಕ್ಕೆಯೂ ಜಾತಿ ಸೂತಕ ಉಂಟೇ? ಪರುಷ ಮುಟ್ಟಲು ಕಬ್ಬುನ ಹೊನ್ನಾಯಿತ್ತು ಕಾಣಾ. ನಮ್ಮ ಕೂಡಲಸಂಗನ ಶರಣರನವರಿವರೆಂದಡೆ ಕುಂಭೀಪಾತಕ ನಾಯಕ ನರಕ ತಪ್ಪದು ಕಾಣಾ.

೪೨. ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ. ಜಿನ್ನನ ಪೂಜಿಸಿ ಬತ್ತಲೆ ಇಪ್ಪುದ ಕಂಡೆ. ಸೈಲಾರನ ಪೂಜಿಸಿ

ನಾಯಾಗಿ ಬೊಗಳುವದ ಕಂಡೆ. ನಮ್ಮ ಕೂಡಲಸಂಗನ ಶರಣರ ಪೂಜಿಸಿ ದೇವ ಭಕ್ತನೆನಿಸಿಕೊಂಬುದ ಕಂಡೆ.

೪೩. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಗೌತುಮ ಮುನಿಗೆ ಗೋವಧೆಯಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಬಲಿಗೆ ಬಂಧನವಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಕರ್ಣನ ಕವಚ ಹೋಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ದಕ್ಷಂಗೆ ಕುರಿದಲೆಯಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಪರುಶರಾಮ ಸಮುದ್ರಕ್ಕೆ ಗುರಿಯಾದ. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ನಾಗಾರ್ಜುನನ ತಲೆ ಹೋಯಿತ್ತು. ದೇವಭಕ್ತರೆಂದು ನಂಬಿದ ಕಾರಣ ನಮ್ಮ ಕೂಡಸಂಗನ ಶರಣರು ಕೈಲಾಸವಾಸಿಗಳಾದರು.

೪೪. ಆದಿಪುರಾಣ ಅಸುರರಿಗೆ ಮಾರಿ. ವೇದಪುರಾಣ ಹೋತಿಂಗೆ ಮಾರಿ. ರಾಮಪುರಾಣ ರಕ್ಕಸರಿಗೆ ಮಾರಿ. ಭಾರತಪುರಾಣ ಗೋತ್ರಕ್ಕೆ ಮಾರಿ. ಇವೆಲ್ಲ ಪುರಾಣವು ಕರ್ಮಕ್ಕೆ ಮೊದಲು. ನಿಮ್ಮ ಪುರಾಣಕ್ಕೆ ಪ್ರತಿ ಇಲ್ಲ ಕೂಡಲಸಂಗಮದೇವಾ.

೪೫. ನಿಮ್ಮ ವಚನವೆನ್ನ ಪುಣ್ಯವೆಂಬುದು ಹುಸಿಯಾಯಿತ್ತು ನೋಡಾ. ಶಾಸ್ತ್ರದ ವಚನ ಹೋತಿಂಗೆ ಮಾರಿ. ಎಂತು ನಂಬುವೆ ನಯ್ಯ? ನಾನು ಕೊಲ್ಲೆನು, ನೀನು ಕೊಂದಿತ್ತೆಂಬ ಸೊನೆಗಾರರನೇ ನೆಂಬೆನಯ್ಯ ಕೂಡಲಸಂಗಮದೇವಾ?

೪೬. ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು ಎಲೆ ಹೋತೇ ಅಳು ಕಂಡೆಯಾ. ವೇದವನೋದಿದವರ ಮುಂದೆ ಅಳು ಕಂಡೆಯಾ, ಹೋತೇ ಶಾಸ್ತ್ರವ ಕೇಳಿದವರ ಮುಂದೆ, ಅಳು ಕಂಡೆಯಾ. ನೀನತ್ತು ದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ.

೪೭. ದಕ್ಷ ಯಾಗವ ನಡಿಸಲೆಂದು ಅಜಮುಖ್ಯರಾದ ಸುರರೆಲ್ಲ ನೆರೆದು ಬಂದ ಬಾಯ ನೋಡಾ. ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ. ಉಣದೆ ಉಡದೆ ಹೊಗೆಯ ಕೆಯ್ಯಲ್ಲಿ ಸತ್ತ ಅಣ್ಣಗಳ ಕೇಡ ನೋಡಾ ಕೂಡಲಸಂಗಮದೇವಾ.

೪೮. ಏನಯ್ಯ ವಿಪ್ರರು ನುಡಿದಂತೆ ನಡೆಯರು. ಇದೆಂತಯ್ಯ? ತಮಗೊಂದು ಬಟ್ಟೆ ಶಾಸ್ತ್ರಕೊಂದು ಬಟ್ಟೆ. ಕೂಡಲಸಂಗಮದೇವಯ್ಯ ಹೊಲೆಯರ ಬಸಿರಲ್ಲಿ ವಿಪ್ರರು ಹುಟ್ಟಿ ಗೋಮಾಂಸವ ತಿಂಬರೆಂಬುದಕ್ಕೆ ಇದೇ ದೃಷ್ಟ.

೪೯. ಹೊಲೆಯೊಳಗೆ ಹುಟ್ಟಿ, ಕುಲವನರಸುವೆ ಎಲವೊ ಮಾತಂಗಿಯ ಮಗ ನೀನು. ಸತ್ತುದನೆಳೆವನೆತ್ತಣ ಹೊಲೆಯ? ಹೋತ ತಂದು ನೀವು ಕೊಲುವಿರಿ. ಶಾಸ್ತ್ರವೆಂಬುದು ಹೋತಿಂಗೆ ಮಾರಿ. ವೇದವೆಂಬುದು ನಿಮಗೆ ತಿಳಿಯದು. ನಮ್ಮ ಕೂಡಲಸಂಗಮದೇವನ ಶರಣರು ಕರ್ಮವಿರಹಿತರು, ಶರಣ ಸನ್ನಿಹಿತರು, ಅನುಪಮ ಚರಿತ್ರರು. ಅವರಿಗೆ ತೋರಲು ಪ್ರತಿ ಇಲ್ಲವೋ.

೫೦. ಇಟ್ಟೆಯ ಹಣ್ಣು ನರಿ ತಿಂದು ಸೃಷ್ಟಿ ತಿರುಗಿತೆಂಬಂತೆ, ಮಟ್ಟೆಯನಿಟ್ಟ ದ್ವಿಜರ ಮಾತದೇಕೆ? ಹಗಲು ಕಾಣದ ಗೂಗೆ ಇರುಳಾಯಿತ್ತೆಂದರೆ, ಜಗಕ್ಕೆ ಇರುಳಪ್ಪುದೆ ಮರುಳೆ? ಹೇಮದ ನೆವದಿಂದ ಹೋತನ ಕೊಂದು ತಿಂಬ ಅನಾಮಿಕರೊಡನಾಡಿ ಗೆಲುವುದೇನು ಕೂಡಲಸಂಗಮದೇವ?

೫೧. ಮೀಂಬುಲಿಗನ ಹಕ್ಕೆಯಂತೆ ನೀರ ತಡಿಯಲಿರ್ದು ಮೂಗ ಹಿಡಿದು ಧ್ಯಾನವ ಮಾಡುವರಯ್ಯ. ಬಟ್ಟೆ ಮಂಡೆವೆರಿಸಿ, ಬಾಯ ಬಿಡುಕಿಸುತ ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯ. ನಿಮ್ಮ ಕೆಯ್ಯಲ್ಲಿ ಕಟ್ಟಿದ ದರ್ಭೆಯ ಹುಲ್ಲು ಕೂಡಲಸಂಗನನರಿಯದೆ ಪೊರೆ ಇಡುವಂತೆ.

೫೨. ಮಾಣದೆ ಉರಳೆಯ ತಿಟ್ಟನೆ ತಿರುಗುವ ಗಾಣದೆತ್ತಿನಂತೆ, ಪೂರ್ವಲಿಖಿತ ಮುಂದುಗಾಣಲೀಯ್ಯದು. ನೀವೆಲ್ಲ ವಾಯುಕ್ಕೆ ಕೆಡಬೇಡ. ಮಾಣದೆ ಪೂಜಿಸು ಲಿಂಗವ. ಹೆರರ ಗೋಣ ಕೊಯ್ದೆನೆಂದು ಮಂತ್ರವನೋದುವ ನೇಣುಗಾರರ ಮೆಚ್ಚ ಕೂಡಲಸಂಗಮದೇವ.

೫೩. ನೀರ ಕಂಡಲ್ಲಿ ಮುಳುಗುವರಯ್ಯ. ಮರನ ಕಂಡಲ್ಲಿ ಸುತ್ತುವರಯ್ಯ. ಬತ್ತುವ ಜಲವನೊಣಗುವ ಮರನ ಮಚ್ಚಿದವರು ನಿಮ್ಮ ನೆತ್ತ ಬಲ್ಲರು ಕೂಡಲಸಂಗಮದೇವ?

೫೪. ಕಣ್ಣ ಮುಚ್ಚಿ ಕನ್ನಡಿಯ ತೋರುವಂತೆ, ಇರುಳು ಹಗಲಿನ ನಿದ್ರೆ ಸಾಲದೇ? ಬೆರಳನೆಣಿಸಿ ಪರಮಾರ್ಥವ ಹಡೆವುದು ಚೋದ್ಯ

ವಲ್ಲವೆ ಹೇಳಾ? ಮೂಗ ಮುಚ್ಚಿ ಮುಕ್ತಿಯ ಬಯಸುವ ನಾಚಿಕೆ ಇಲ್ಲ ದವರ ನಾನೇನೆಂಬೆ ಕೂಡಲಸಂಗಮದೇವಾ?

೫೫. ಬ್ರಹ್ಮ ಸಭೆ ನೆರೆದಲ್ಲಿ ಬ್ರಹ್ಮ ವಿತ್ತುಗಳು ಬ್ರಹ್ಮತ್ವವಡೆದು ತಮ್ಮ ವಚನಬ್ರಹ್ಮರೆನಿಸಿಕೊಂಡು ನೆಮ್ಮುವರು ವಿಷ್ಣುವನು. ತಮ್ಮ ದೈವವ ಬಿಡುವುದಾವುದುಚಿತ? ವಿಷ್ಣು ಶಿವಭಕ್ತನಾಗಿ ನಿಷ್ಠೆಯಿಂದ ಕಣ್ಣ ನಿತ್ತು ಪಡೆದನು ಶಿವಭಕ್ತಿಯ. ಕಷ್ಟ ಜಾತಿ ಜೀವಿಗಳಿಗೆ ಮುಟ್ಟ ಎಂತು ಬಂದಿತ್ತೋ? ಮುಟ್ಟರೊಂದುವನು. ಮೂವಿಧ ಬಟ್ಟರು ಹುಸಿ ವನೇ ಹೊಲೆಯನೆಂದು ವಚನ ಉಂಟು. ಲೋಕದಲ್ಲಿ ಹುಸಿದಜನ ಶಿರ ಹೋಯಿತ್ತಾದಿಯಲ್ಲಿ. ಎಸೆವ ಕೆರು ಪಶುವನುಸುರಲೀಯದೆ ವಿಧಾ ವಿಸಿ ತಿಂಬ ಜನ್ಮ ಅದಾವ ಫಲವು? ದಕ್ಷ ಯಾಗವ ಮಾಡಿ ನಿಷ್ಕೇತ್ರ ನೆರೆದ. ಅಕಟಕಟಾ ಕೇಳಿ ಏಕೆ ಮಾಣಿರೋ? ಮಮ ಕರ್ತ ಕೂಡ ಲಸಂಗನ ಶರಣರು ಅಕ್ಷಯರಧಿಕರು. ವಿಸ್ತರು ಕೇಳು ಜಗವೆಲ್ಲರಿಯಲು.

೫೬. ಕುಲದಲ್ಲಿ ಹಾರುವನು ಬ್ರಹ್ಮೇತಿಗೆ ಸಾರುವನು. ಆರು ಮಾಡಿದ ಪಾಪಕ್ಕೆ ತಾನೆ ಕೆಯ್ಯಾನುವನು. ಸರಿಯೇ ದೇವಾ ಭಕ್ತಂಗಿವನು? ಬಡಿಗ ಮಾಚಲದೇವಯ ಕುಲಜೆಯ ಮಾಡಿಹೆವೆಂದು ಹೊನ್ನಕಪಿಲೆಯ ರಾವಣ ಶಾಖದ ಉಚ್ಛಿಷ್ಟದ ಹಾಲಿನಿಂದ ಕೂಳನ ಟ್ಟುಂಬವರನೇನೆಂಬೆ ಕೂಡಲಸಂಗಮದೇವ?

೫೭. ನರಜನ್ಮದಲ್ಲಿ ಹುಟ್ಟಿ, ಲಿಂಗಮುಖವನರಿಯದೆ ಉನ್ಮದ ಸೊಕ್ಕಿ ತಲೆಗೇರಿತ್ತಯ್ಯ. "ಜೀವಂ ಜೀವೇನ ಭಕ್ಷಯೇತ್" ಕರ್ಮ ಕರ್ಮದಲಿಪ್ಪರಯ್ಯ. ಅಂದೊಮ್ಮೆ ದಕ್ಷನು ಹೋತನ ಕೊಂದಲ್ಲಿ ಗೋಳಿಡೆ ಗೋಳಿಡೆ, ತಂದಿಕ್ಕ ಕೇಳಿತ್ತೆ ನಿಮ್ಮ ವೇದಶಾಸ್ತ್ರಂಗಳು? ಮೂರುತಿಗೊಂಡಲ್ಲ ಚತುರ್ವೇದಿಗಳಿಗೊಮ್ಮೆ ಅಕ್ಕಿತ್ತೆ ಅಯ್ಯ? ನಮ್ಮ ಕೂಡಲಸಂಗನನರಿಯದ ಕಾರಣ ನಾಯಕನರಕದಲ್ಲಿಕ್ಕಿತಯ್ಯ.

೫೮. ಕೆಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆ ಯಲು ಕೆಚ್ಚೆದ್ದು ಸುಡುವಾಗ, ಬಚ್ಚಲನೀರ ಬೀದಿಯ ದೂಳವ ಹೊಯ್ದು ಬೊಬ್ಬಿಟ್ಟಿಲ್ಲರ ಕರೆವರಯ್ಯ. ಕೂಡಲಸಂಗಮದೇವ ವಂದನೆಯ ಮರೆದು ನಿಂದಿಸುತಿರ್ದರಯ್ಯಾ.

೫೯. ವೇದವನೋದಿದ ವಿಪ್ರರು ಹೊನಲಲ್ಲಿ ಕೋದ ಕೇಡ ನೋಡಿರೇ. "ಭರ್ಗೋ ದೇವಸ್ಯ ಧೀಮಹಿ" ಎಂಬರು. ಒಬ್ಬರಿಗಾಗಿ ವಿಚಾರವಿಲ್ಲ ನೋಡಿರೇ, ಕೂಡಲಸಂಗಮದೇವಾ.

೬೦. ಎನಿಸನೋದಿದರೇನು, ಎನಿಸಕೇಳಿದರೇನು, ಚತುರ್ವೇದ ಪಾಠ ತೀವ್ರವಾದರೇನು, ಲಿಂಗಾರ್ಚನೆ ಹೀನವಾದರೆ ಶಿವ, ಶಿವಾ ಬ್ರಾಹ್ಮಣನೆಂಬೆನೆ? ಎನ್ನಲಾಗದು. "ಜನ್ಮನಾ ಜಾಯತೇ ಶೂದ್ರಃ। ಕ್ರಿಯಾಣಾಂ ದ್ವಿಜಮುಚ್ಯತೆ॥ ಶ್ರುತಂಚ ಶ್ರೋತ್ರಿಯಂಚೈವ ಬ್ರಹ್ಮಂಚ ರತಿ ಬ್ರಾಹ್ಮಣಃ" ಎಂದುವಾಗಿ "ಬ್ರಹ್ಮನಾಸ್ತಿ ಶ್ವಪಚರನುನೆ" ಎಂದುದಾಗಿ, ಇದು ಕಾರಣ ಕೂಡಲಸಂಗಮದೇವ ವೇದಭಾರಭರಾಕ್ರಾಂತಿಕೋ ಬ್ರಾಹ್ಮಣ ಗಾರ್ದಭನೆಂಬೆನು.

೬೧. ನಿಮ್ಮನರಿಯದ ಕಾರಣ ಕೆಯ್ಯಲ್ಲಿ ಹುಲ್ಲು, ನಿಮಗೆರಗದ ಕಾರಣ ಕೊರಳಲ್ಲಿ ನೇಣು. ಹಿಂಡಲೇಕೋ, ತೊಳೆಯಲೇಕೋ? ಮುಳುಮುಳಿಗಿ ಮೂಗ ಹಿಡಿಯಲೇಕೋ? ಕೂಡಲಸಂಗನ ಶರಣರಲ್ಲಿ ಡೋಹರ ಕಕ್ಕಯ್ಯನಾವ ತೊರೆಯಲ್ಲಿ ವಿಂದ?

೬೨. ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು. ಕುಲವನರಸದಿರಿ, ಭೋ. ಕುಲದಿಂದ ಮುನ್ನೇನಾದಿರಿಂ ಭೋ. ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ ಮೂರು ಭುವನವರಿಯೆ ನಾಯಿದ ಕಾಣಿ ಭೋ. ನಮ್ಮ ಕೂಡಲಸಂಗಮದೇವ ವಚನವಿಂತೆಂದುದು, ಶ್ವಪಚೋಪಿಯಾದರೇನು? ಶಿವಭಕ್ತನೇ ಕುಲಜ ಭೋ.

೬೩. ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರ ಒಂದೇ. ಆಶೆಯಾವಿಷ ಹರುಷ ವಿಷಯಾದಿಗಳೆಲ್ಲ ಒಂದೇ. ಏನನೋದಿ ಏನ ಕೇಳಿ ಏನು ಫಲ? ಕುಲಜನೆಂಬುದಕ್ಕೆ ಆವುದು ದೃಷ್ಟ? "ಸಪ್ತಧಾತು ಸಮಂ ಪಿಂಡಂ। ಸಮಯೋನಿ ಸಮುದ್ಭವಂ॥ ಆತ್ಮ ಜೀವ ಸಮುತ್ಪನ್ನಂ ವರ್ಣಾನಾಂ ಕಿಂ ಪ್ರಯೋಜನಂ॥" ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ. ಕರ್ಣದಲಿ ಜನಿಸಿದವರುಂಟೇ ಜಗದೊಳಗೆ? ಇದು ಕಾರಣ ಕೂಡಲಸಂಗಮದೇವ ಲಿಂಗಸ್ಥಲವನರಿದವನೇ ಕುಲಜನು.

೬೪. ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ. ಕುಲವೇನೋ, ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು.

೬೫. ಹಾರುವನ ಭಕ್ತಿ ಓಡಿನೊಳಗೆ ಅಗಿಯ ಹೊಯ್ದಂತೆ. ಕೆಳಯಿಂಕೆ ಬೇರೂರದು. ಮೇಲೆ ಫಲವಾಗದು. ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂಡು ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ, ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ ಎಂಬ ಕರ್ಮಿಗಳನೇನೆಂಬೆ ಕೂಡಲಸಂಗಮದೇವಾ?

೬೬. ನಾನು ಭಕ್ತ ನಾನು ಪ್ರಸಾದಿ ಎಂದು ವಿಪ್ರ ಕರ್ಮವ ಮಾಡುವೆ ಕರ್ಮಿ. ಲಿಂಗದೇವನ ಮುಟ್ಟಿ ಮಜ್ಜನಕ್ಕೆರೆವ ಕೆಯ್ಯಲು ವಿಪ್ರನ ಕಾಲ ತೊಳೆದರೆ ಲಿಂಗೋದಕ ಹೃದಯದಲ್ಲಿ. ವಿಪ್ರನ ಕಾಲ ತೊಳೆದ ನೀರು ಮಂಡೆಯ ಮೇಲೆ. ಶೃತ್ಯೋತ್ಕಟ ದುರಾಚಾರಿ ಯಜ್ಞಕೂಪ ಸಘಾತ ಕರಿವೊದ್ರಿ ವೈಕವಿಧಿಃ ಶಾಂತೆ ವಿಪ್ರರೂಪೇಣ ರಃಕ್ಷಸಾ ಇದು ಕಾರಣ ಕೂಡಲಸಂಗಮದೇವ ಇಂತಪ್ಪ ದುರಾಚಾರಿಗಳ ಮುಖವ ನೋಡಲಾಗದು.

೬೭. ಹೊನ್ನ ನೇಗಿಲಲುತ್ತು ಎಕ್ಕೆಯ ಬೀಜವ ಬಿತ್ತುವರೇ? ಕರ್ಪೂತದ ಮರನ ಕಡಿದು ಕಳ್ಳಗೆ ಬೇಲಿಯನಿಕ್ಕುವರೇ? ಶ್ರೀಗಂಧದ ಮರನ ಕಡಿದು ಬೇವಿಂಗೆ ಆಡೆಯನಿಕ್ಕುವರೇ? ನಮ್ಮ ಕೂಡಲಸಂಗನ ಶರಣರಿಗಲ್ಲದೆ ಬೇರೆ ಇಚ್ಛಾ ಭೋಜನವನಿಕ್ಕಿದರೆ ಕಿಚ್ಚಿನೊಳಗೆ ಉಚ್ಚಿಯ ಹೊಯಿದು ಹವಿಯ ಬೆಳೆದಂತಾಯಿತ್ತು.

೬೮. ಜಾತಿವಿಡಿದು ಸೂತಕವನರಸುವೆ. ಜ್ಯೋತಿವಿಡಿದು ಕತ್ತಲೆಯನರಸುವೆ. ಇದೇಕೋ ಮರುಳು ಮಾನವಾ? ಜಾತಿಯಲಿ ಅಧಿಕನೆಂಬೆ. ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನು? ಭಕ್ತಶಿಖಾಮಣಿ ಎಂದುದು ವಚನ. ನಮ್ಮ ಕೂಡಲಸಂಗನ ಶರಣರ ಪಾದ ಪುರುಷವ ನಂಬು. ಕೆಡಬೇಡ. ಮಾನವಾ.

೬೯. ಹೊಲೆಯ ಮಾದಿಗ ಭಕ್ತನಾದೊಡೆ ಆತನ ಮನೆಯ ಸೊಣಗಂಗೆ ಪಂಚ ಮಹಾವಾದ್ಯದಲ್ಲಿ ಸನ್ಮಾನವ ಮಾಡನೇ, ನೆಲನನುಳ್ಳಡಿಸಿ, ಉಳೇ ಚಾಂಗು ಫಲಾ ಎಂದು? ಕುಲಕಧಿಕ ಹಾರು

ವಂಗೆ ಸಿದ್ಧಿಗೆಯ್ಯ. ಸಲೆ ನಿಮ್ಮ ಶರಣರ ಮಹಿಮೆ ಘನಕ್ಕೆ ಘನ. ಎಲೇ ಕೂಡಲಸಂಗಮದೇವಾ, ನಿಮ್ಮ ನಂಬದವ ಹೊಲೆಯ.

೭೦. ಕುರಿವಿಂಡು ಕಬ್ಬಿನ ಉಲಿವ ತೋಟವ ಹೊಕ್ಕು ತೆರನನರಿಯದೆ, ತನ್ನಿ ರಸದ ಪೊರಗಣ ಎಲೆಯನೆ ಮೆಲಿದವು. ನಿಮ್ಮವರಿವ ಮದಕರಿಯಲ್ಲದೆ, ಕುರಿ ಬಲ್ಲುದೇ ಕೂಡಲಸಂಗಮದೇವ?

೭೧. ಪ್ರಣಮನುಚ್ಚರಿಸುವ ಅಪ್ರಮಾಣಿಕರೆಲ್ಲರು ಪ್ರಣವ ಮಂತ್ರಾರ್ಥವನೋದಿ, ಮಂತ್ರಾರ್ಥವನರಿಯರು. ಪ್ರಣವ ಓಂ ನಮಃ ಶಿವಾಯ ಪ್ರಣವ ಓಂ ನಮಃ ಶಿವಾಯ, ಪ್ರಣವ ಓಂ ನಮಃ ಶಿವಾಯ ಪ್ರಣವ ಭರ್ಗೋ ದೇವ ಎಂದುವು ಶ್ರುತಿಗಳೆಲ್ಲ. ಕೂಡಲಸಂಗಯ್ಯನ ನರಿಯದ ದ್ವಿಜರೆಲ್ಲ ಭ್ರಮಿತರು.

೭೨. ವೇದವನೋದಿದರೇನು? ಶಾಸ್ತ್ರವ ಕೇಳಿದರೇನಯ್ಯ? ಜಪವ ಮಾಡಿದರೇನು? ತಪವ ಮಾಡಿದರೇನಯ್ಯ? ಏನ ಮಾಡಿದರೇನು, ನಮ್ಮ ಕೂಡಲಸಂಗಯ್ಯನ ಮನ ಮುಟ್ಟಿದನ್ನಕ್ಕ?

೭೩. ನೀವು ಹಿರಿಯರೆಂಬಿರಿ. ಕರ್ಮಿಗಳು ನೀವು ಕೇಳಿರಿ. ನಿಮ್ಮ ವೇದಶಾಸ್ತ್ರಂಗಳು ಆರ ಹೊಗಳುತಿರ್ದವು? "ಓಂ ದ್ಯಾವಾ ಭೂಮಿಜನಯಂ ದೇವ ಏಕೋ ದೇವ" ಎಂದು ಶ್ರುತಿ ಸ್ಮೃತಿಗಳು ಸಾರುತ್ತಿರ್ದವು. "ವರ್ಣಾನಾಂ ಬ್ರಾಹ್ಮಣೋ ಗುರುಃ" ಎಂಬುದು ಹುಸಿ. ವರ್ಣಾನಾಂ ಗುರು ನಮ್ಮ ಕೂಡಲಸಂಗನ ಶರಣರು.

೭೪. ನಿಜಭಾವ ಲಕ್ಷ್ಮೀಪರಸ್ಥಿತಿಯೊಲಿದರೆ ಕುಲವನರಸಲದೇಕೆ? ಆ ದೇವನೊಲಿದ ಭಕ್ತಂಗೆ ಇನ್ನಾವ ಮಂತ್ರವದೇಕೆಯೋ? ಕಾಮಧೇನು ಮನೆಯಲಿರಲು, ಬೇರೆ ಹಯನವನರಸಲದೇಕೆ? ಮೋಹವುಳ್ಳ ಠಾವಿನಲ್ಲಿ ಲಜ್ಜೆಯನು ಅರಸಲೇಕೆಯೋ? ಮಹಾದಾನಿ ಕೂಡಲಸಂಗಯ್ಯನೊಲಿದು ಮಾದಾರ ಚನ್ನಯ್ಯನ ಮನೆಯಲುಂಡ. ವೇದವನೋದಿದವರು ಲಿಂಗವನೊಲಿಸಿದ ತೋರಿರೋ.

೭೫. ಅದ್ಯರಿಗಲ್ಲದೆ ವೇದ್ಯನಾಗದು. ಮಾಣಿ ಭೋ ಮಾಣಿ ಭೋ. ಶಿವಭಕ್ತನೇ ಕುಲಜ. ಕೈವರ್ತತೇ ಗರ್ಭ ಸಂಭಾವನೆ ಮಾರ್ಕಂಡೇಯ ಮಹಾಮುನಿ ತಪಸ್ಸು ಜಾಯತೇ ವಿಪ್ರ ಕುಲೆ, ತಸ್ಮಾತ್

ಜಾತಿಭೇದಂ ನ ಕುರ್ಯಾತ್. ಜಾತನಲ್ಲ, ಅಜಾತನಲ್ಲ. ಕೂಡಲಸಂಗನ ಶರಣರು ನಿಸ್ಸೀಮರಯ್ಯ.

೬೦ ೭೬. ಎಮ್ಮವರಧಿಕರು, ಎಲ್ಲರಿಂದಲು ಅಧಿಕರು. ಪಾಕವ ಮಾಡುವ ಭಾಂಡ ಸೊಣಗನ ಡೋವಿಗೆಯಯ್ಯ. ಕೆರಹಿನಲ್ಲಿ ಮಾಚ್ಚುವದು ಅವಾಗಮವಯ್ಯ? ಕೂಡಲಸಂಗಮದೇವ, ನಿಮ್ಮ ವಚನವಿಂತೆಂದುದು, ಭವಿನೋಡಿದ ಓಗರ ಲಿಂಗಾರ್ಪಿತವಾಗದೆಂದು.

೭೭. ನಿಮ್ಮ ಶರಣರ ಚರಣದ ಚರ್ಮಾವುಗೆಗೆ ಪೃಥ್ವಿ ಸಮಬಾರದು. ಸರಿಯಲ್ಲ ನೋಡಾ, ಕೂಡಲಸಂಗಮದೇವಾ, ನಿಮ್ಮ ಶರಣರ ಚರ್ಮಾವುಗೆಗೆ.

೭೮. ದೇವ ನಿಮ್ಮ ಪೂಜಿಸಿ, ಚನ್ನನ ಕುಲ ಚನ್ನಾಯಿತ್ತು. ದೇವ ನಿಮ್ಮ ಪೂಜಿಸಿ ದಾಸನ ಕುಲ ದೇಸೆವಡೆಯಿತ್ತು. ದೇವ ನಿಮ್ಮಡಿಗೆರಗಿ ಮಡಿವಾಳ ಮಾಚಯ್ಯ ನಿಮ್ಮಡಿಯಾದ. ನೀನೊಲಿದ ಕುಲಕ್ಕೆ ನೀನೊಲ್ಲದ ಹೊಲೆಗೆ ಮೇರೆಯುಂಟೇ ದೇವಾ? "ಶ್ವಪಚೋಪಿ ಮುನಿಶ್ರೇಷ್ಠ। ಯಸ್ತು ಲಿಂಗಾರ್ಚನೆ ರತೇ॥ ಲಿಂಗಾರ್ಚನ ವಿಹೀನೋಪಿ। ಬ್ರಾಹ್ಮಣಃ ಶ್ವಪಚಾಧಮಃ" ಎಂದುದಾಗಿ ಜಾತಿ ವಿಜಾತಿಯಾದರೇನು? ಅಜಾತಂಗೆ ಶರಣೆಂದೆನ್ನದವನು, ಅತನೇ ಹೊಲೆಯ ಕೂಡಲಸಂಗಮದೇವಾ.

೭೯. ಚತುರ್ವೇದಿಯಾದರೇನು? ಲಿಂಗವಿಲ್ಲದವನೇ ಹೊಲೆಯ. ಶ್ವಪಚನಾದರೇನು? ಲಿಂಗವಿದ್ದವನೇ ವಾರಣಾಸಿ. ಅತನ ನುಡಿಗಡಣ ಲೇಸು. ಅತ ಜಗಕ್ಕೆ ಪಾವನ. ಅತನ ಪ್ರಸಾದವೆನಗಮೃತ ಸೇವನೆ. "ನಮಃ ಪ್ರಿಯಾಶ್ಚತುರ್ವೇದೀ। ಮದ್ಭಕ್ತಶ್ವಪಚೋಪಿವಾನ್ ತಸ್ಮಾದ್ದೇವಂ ತಥೋ ಗ್ರಾಹ್ಯಂ। ಸ ಚ ಪೂಜ್ಯೋ ಯಥಾ ಸ್ವಯಂ" ಕೂಡಲಸಂಗಮದೇವನನರಿತು ಪೂಜಿಸಿದಾತ ಪಡುದರ್ಶನಕ್ಕಧಿಕ, ಜಗಕ್ಕೆ ಪಾವನನೋಡಾ.

೮೦. ಭಕ್ತಹೀನನ ದಾಸೋಹವ ಸದ್ಭಕ್ತರು ಸವಿಯರು. ಜೀವಿನ ಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆ ಮೆಲಬಾರದು. ಲಿಂಗ ಸಂಬಂಧವಿಲ್ಲದವರ ನುಡಿ ಕೂಡಲಸಂಗನ ಶರಣರಿಗೆ ಸಮನಿಸದು.

೮೧. ಬಂದು ಬಲ್ಲಹ ಬಿಡಲು ಹೊಲೆಗೇರಿ ಎಂಬ ಹೆಸರೊಳವೇ ಅಯ್ಯ? ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು. ಇದಕ್ಕೆ

ಪ್ರಮಾಣ. "ಚಾಂಡಾಲವಾಟಕಾಯಾಂ ವಾ ಶಿವಭಕ್ತಸ್ತಿತೋ ಯದಿ ತತ್ ಶ್ರೇಣಿ ಶಿವಲೋಕಸ್ಯ ತದ್ಗೃಹಂ ಶಿವಮಂದಿರಂ" ಲೋಕದ ಡಂಭಕರ ಮಾತ ಬೇಡ. ಕೂಡಲಸಂಗಮನಿದ್ದುದೇ ಕೈಲಾಸ.

೮೨. ಲಿಂಗವಿಲ್ಲದೆ ನಡೆದರೆ, ಲಿಂಗವಿಲ್ಲದೆ ನುಡಿದರೆ, ಲಿಂಗವಿಲ್ಲದೆ ಉಗುಳ ನುಂಗಿದರೆ ಅಂದಂದಿಂಗೆ ಕಿಲ್ಬಿಷವಯ್ಯ. ಏನೆಂಬೆನೇನೆಂಬೆನಯ್ಯ? ಲಿಂಗವಿಲ್ಲದೆ ನಡೆವರ ಅಂಗ ಲೌಕಿಕ ಮುಟ್ಟಲಾಗದು. ಲಿಂಗವಿಲ್ಲದೆ ನುಡಿವ ಶಬ್ದಸೂತಕವ ಕೇಳಲಾಗದು. ಲಿಂಗವಿಲ್ಲದೆ ಗಮಿಸಿದಡೆ ಆ ನಡೆನುಡಿಗೊಮ್ಮೆ ವ್ರತಗೇಡಿ ಕೂಡಲಸಂಗಮದೇವ.

೮೩. ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ ಗ್ರಹಣ. ಸಂಕ್ರಾಂತಿಯಿಂದ ವೆಗ್ಗಳ ಏಕಾದಶಿ. ವ್ಯತೀಪಾತದಿಂದ ವೆಗ್ಗಳ ಸೂಕ್ಷ್ಮ. ಶಿವಪಥವನರಿದಂಗೆ ಹೋಮ ನೇಮ ಜಪ ತಪದಿಂದ ವೆಗ್ಗಳ ಕೂಡಲಸಂಗಮದೇವ ನಿಮ್ಮ ಮಾಣದೆ ನೆನೆವಂಗೆ.

೮೪. ಅಶ್ವಮೇಧಯಾಗವಂತಿರಲಿ. ಅಜಪೆಯುಪದೇಶವು ಸಮಾಧಿಯಂತಿರಲಿ. ಹೋಮ ನೇಮ ಗಾಯತ್ರಿಯ ಜಪವಂತಿರಲಿ. ಜನವೋಹನ ಮಂತ್ರವಂತಿರಲಿ. ಕೂಡಲಸಂಗನ ಶರಣರ ನುಡಿಯ ಗಡಣೆ ಎಲ್ಲಕ್ಕಧಿಕ ನೋಡಾ.

೮೫. ವೇದಶಾಸ್ತ್ರದವರ ಹಿರಿಯರೆಂಬೆನೆ? ಮಾಯಾಭ್ರಾಂತಿ. ಕವಿತಜ್ಞರ ಹಿರಿಯರೆಂಬೆನೆ? ಇವರು ಹಿರಿಯರುಗಳೇ ಯಾಗನಟ್ಟುವಿಗೆ ಪ್ರಾಣರು? ಇವರಿಂದಧಿಕ ಸಾಧಿಸುವರೇನು ಕಿರಿಯರೇ? ಇಂತು ವಿದ್ಯಾ ಗುಣ ಜ್ಞಾನ ಧರ್ಮ ವಿಚಾರ ಶೀಲಂಗಳ ನಮ್ಮ ಕೂಡಲಸಂಗಮದೇವನ ಶರಣರು ಸಾಧಿಸಿದ ಸಾಧನೆಯನೆ ಸಾಧಿಸುವುದು.

೮೬. ಹಾರುವರೆಲ್ಲರೂ ನೆರೆದು ಶೂದ್ರನ ಹಾರುವನ ಮಾಡುವಲ್ಲಿ, ನಂದಿಮುಖವಲ್ಲದೆ ಮಾಡಲಾಗದು. ವಿಭೂತಿ ಇಲ್ಲದೆ ಮತ್ತೇನನೂ ಧರಿಸಲಾಗದು. 'ಭರ್ಗೋದೇವ' ಮಂತ್ರವಲ್ಲದೆ, ಮತ್ತೇನನೂ ಜಪಿಸಲಾಗದು. ನಿಮ್ಮಿಂದ ಕುಲಜರಾಗಿ ಮತ್ತನ್ಯ ದೈವಕ್ಕೆರಗುವ ಜಗದ ನ್ಯಾಯಿಗಳನೇನೆಂಬೆ ಕೂಡಲಸಂಗಮದೇವಾ?

೮೭. ದೇವನೊಬ್ಬ, ನಾಮ ಹಲವು. ಪರಮ ಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದರೆ ಕಿವಿ ಮೂಗ ಕೊಯ್ವನು. ಹಲವು ದೈವದ ಎಂಜಲ ತಿಂಬವರನೇನೆಂಬೆ ಕೂಡಲಸಂಗಮದೇವಾ?

೮೮. ಕರ್ತನ ಪೂಜಿಸಿ, ಕುತ್ಸಿತ ದೈವಕ್ಕೆರಗುವವರು ಕತ್ತೆ ಕುದುರೆಗೆ ಹುಟ್ಟಿದ ಹೇಸರನಂತೆ. ಭಕ್ತರೆಂತೆಂಬೆ? ಭೃತ್ಯರೆಂತೆಂಬೆ? ಶರಣರೆಂತೆಪೆನವರ? ಎರಡುಳ್ಳ ಪ್ರಪಂಚಿಗಳ ಮೆಚ್ಚ ಕೂಡಲಸಂಗಮ ದೇವ.

೮೯. ಕಂಡಕಂಡವರನೆಲ್ಲ ಗಂಡರೆಂಬ ದಿಂಡೆಯನವಳ ಪಜ್ಜನೆ ಎನ್ನಬಹುದೆ? ಲಿಂಗಪ್ರಸಾದವನುಂಡು ಅನ್ಯ ದೈವಂಗಳ ಕೊಂಡಾಡುವವರ ನಮ್ಮ ಕೂಡಲಸಂಗಮದೇವನು ಆ ಭಂಡರಿಗೆ ಮಾಡಿದ ಹುಳುಗೊಂಡವನು.

೯೦. ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ. ನಂಬಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ. ಬೇಡ, ಬೇಡ. ಅನ್ಯದೈವದ ಸಂಗ ಹೊಲ್ಲ. ಬೇಡ, ಬೇಡ. ಅನ್ಯದೈವವೆಂಬುದು ಹಾದರ ಕಾಣಿರೋ. ಕೂಡಲ ಸಂಗಮದೇವ ಕಂಡರೆ, ಮೂಗ ಕೊಯ್ವ ಕಾಣಿರೋ.

೯೧. ಉಣಿಸುವ ಉಡಿಸುವ ಗಂಡನಿದ್ದಂತೆ ಜೋಡುಮಿಂಡಂಗೆ ಕಣ್ಣ ಚೆಲ್ಲುವಳ ಕೇಡಿಂಗೆ ಬೆರಗಾದೆ ನಾನು. ಕೂಡಲಸಂಗಮದೇವ ಸಿಂಗಾರದ ಮೂಗ ಬಣ್ಣಿಸಿ ಹಲುಬೋರಿ ಕೊಯ್ವ.

೯೨. ಅಷ್ಟಮೀ ನವಮೀ ಎಂಬ ಕಲ್ಪಿತವೇಕೋ ಶರಣಂಗೆ? ತಪ್ಪಿತ್ತು ಗಣಪದವಿ. ಲಿಂಗಕ್ಕೆ ದೂರ. ಒಬ್ಬರಿಗಾಳಾಗಿ ಒಬ್ಬರನೋಲೈಸುವ ನಿರ್ಬುದ್ಧಿ ಮನುಜರನೇನೆಂಬೆ ಕೂಡಲಸಂಗಮದೇವ?

೯೩. ಎಲವೋ, ಎಲವೋ, ಪಾಪಕರ್ಮವ ಮಾಡಿದವನೇ, ಎಲವೋ, ಎಲವೋ, ಬ್ರಹ್ಮಹತ್ಯವ ಮಾಡಿದವನೇ, ಒಮ್ಮೆ ಶರಣೆನ್ನೆಲವೋ. ಒಮ್ಮೆ ಶರಣೆಂದಡೆ, ಪಾಪಕರ್ಮ ಓಡುವವು. ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೇ ಇದ್ದವು. ಓರ್ವಂಗೆ ಶರಣೆನ್ನು ನಮ್ಮ ಕೂಡಲಸಂಗಮದೇವಂಗೆ.

೯೪. ಹಲವು ಕೊಂಬೆಗೆ ಹಾಯಲು ಬೇಡ. ಬರುಕಾಯಕೆ ನೀಡಲು ಬೇಡ. ಲೋಗರಿಗೆ ಕೊಟ್ಟು, ಭ್ರಮಿತನಾಗಿರಬೇಡ. ಆಚಾರವೆಂಬುದು ಹಾವಸೆಗಲ್ಲು. ಭಾವ ತಪ್ಪಿದ ಬಳಿಕ ಏಗೈದಡಾಗದು. ಅಂಜದಿರು, ಅಳುಕದಿರು. ಪರದೈವಕ್ಕೆರಗದಿರು. ಕೂಡಲಸಂಗನ ಕೆಯ್ಯಲು ಈಸುವುದೆನ್ನಭಾರ.

೯೫. ದ್ವಿಜರಿಗೆ ಕೊಟ್ಟ ಹಲಬರು ಕೆಟ್ಟರು. ಉದ್ಧರಿಸುವನೊಬ್ಬ ಶಿವಶರಣ ಸಾಲದೇ? ನಾರಾಯಣ ವೃದ್ಧ ಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ದಾನವ ಬೇಡಿದ. ಕೊಟ್ಟ ಬಲಿ. ಬಂಧನಕ್ಕೆ ಸಿಕ್ಕಿದ. ಈಶ ಜಂಗಮವಾಗಿ ಬಂದು, ದಾಸನ ವಸ್ತ್ರವ ಬೇಡಿದ. ಕೊಟ್ಟ ದಾಸ. ತವನಿಧಿಯ ಪಡೆದ. ಕಪಟದಿಂದ ನಾರಾಯಣ ಹಾರುವನಾಗಿ ಬಂದು, ಕರ್ಣನ ಕವಚವ ಬೇಡಿದ. ಕೊಟ್ಟ ಕರ್ಣ. ಕಾಳಗದಲ್ಲಿ ಮಡಿದ. ಕಾಮಾರಿ ಜಂಗಮವಾಗಿ ಬಂದು, ಸಿರಿಯಾಳನ ಪ್ರಾಣವ ಬೇಡಿದ. ಕೊಟ್ಟ ಸಿರಿಯಾಳಸೆಟ್ಟಿ. ಕಂಚಿಯಪುರವ ಕೈಲಾಸಕೊಯ್ದ. ನಾರಾಯಣ ಹಾರುವನಾಗಿ ಬಂದು, ನಾಗಾರ್ಜುನನ ಶಿರವ ಬೇಡಿದ. ಕೊಟ್ಟ ನಾಗಾರ್ಜುನನ ಸಿರ ಹೋಯಿತ್ತು. ಶಿವನು ಜಂಗಮವಾಗಿ ಬಂದು, ಸಿಂಧುಬಲ್ಲಾಳನ ವಧುವ ಬೇಡಿದ. ಕೊಟ್ಟ ಸಿಂಧುಬಲ್ಲಾಳ. ಸ್ವಯಲಿಂಗವಾದ. ಇದು ಕಾರಣ ಇಲ್ಲಿಯೂ ಲೇಸು, ಅಲ್ಲಿಯೂ ಲೇಸು. ಕೂಡಿದೇ ನಮ್ಮ ಕೂಡಲಸಂಗನ ಶರಣರಿಗೆ.

೯೬. ಎಚ್ಚ ಬಾಲಿಯ ಕೊಂದ. ಕಟ್ಟಿದ ಶರಧಿಯ. ಹತ್ತು ತಲೆಯ ರಾವಣನ ಒಂದೇ ಅಂಬಿನಲ್ಲಿ ಮಡುಹಿದ. ಛಲದಿ ಲಂಕಾದ್ವೀಪವ ನೆಲವಣ್ಣವ ಮಾಡಿದ. ಕಲಿ ವಿಭೀಷಣಂಗೆ ಪಟ್ಟವ ಕಟ್ಟಿದ. ರಾಮನ ತೋರಾ. ಮಾಯಾ ಸಂಸಾರವ ನಚ್ಚಿ ಕೆಟ್ಟು, ಬರುದೊರೆ ವೋಗಬೇಡ, ಕರ್ತು ಕೂಡಲಸಂಗಂಗೆ ಶರಣೆನ್ನಿರಯ್ಯಾ.

೯೭. ವಿಪ್ರರ ಕರೆದು ನೃಪರುಗಳು ಇಪ್ಪರೇ? ತಮ್ಮ ಶಿಶುವಿನೊಡನೆಂದು ಬೆಸಗೊಂಡರೆ, ಇಪ್ಪರು, ಇಪ್ಪರು. ತಾವು ಬಿತ್ತಿದ ಫಲಂಗಳ ತಾವು ಉಣ್ಣದವರುಂಟೆ, ಎಂದು ಕಣ್ಣ ಕಾಣದೆ ಹೇಳಿದರು ಅಣ್ಣಗಳು ಕರ್ಮದ ಬಟ್ಟೆಯನು ಅಂತೆಂದ ಮಾತ ಶಿಶು ಕೇಳಿ, ಶಿಶು ಕೆಟ್ಟೋಡಿ ಬಂದು, ಲಿಂಗದ ಹೊಟ್ಟೆಯ ಹೊಗಲು, ಆಟ್ಟಿ ಬಂದು, ಖಂಡೆಯವ ಕಳೆದುಕೊಂಡು ಮಂಡೆಯನೊಡೆಯಲು, ಮಂಡೆಯೊಡೆದು, ಭೂಮಂಡಲವರಿಯೆ ನಾಲ್ಕು ಪುರವಾಗಲು, ಘಟಸರ್ಪನ ತುಡುಕಿ, ನಾಗನಾಥನಾಗಿ, ಇಪ್ಪತ್ತೇಳು ಬಸದಿಯನೊಡೆಯನೇ? ಆಗಳಂತೆ ಎನ್ನ ಮಾಡಿದ ಕರ್ಮವ ನಿಮ್ಮ ಕೆಯ್ಯಲು ಕೆಡಿಸುವರು. ಮುನ್ನೊಬ್ಬ ಕೆಡಿಸಿಹನೆಂದು ಬಂದು ಒಂದು ತುತ್ತನಿಟ್ಟು, ಮರಳಿ ಕೈ ಇಡಹೋದರೆ ತುತ್ತು ಹುಳುಗುಪ್ಪೆಯಾಗದೇ? ಶಿವಧರ್ಮವ ಕೆಡಿಸಿದವನು ಅಧರ್ಮ

ಕ್ಕೆಳಿವನು. ಕೂಡಲಸಂಗಮದೇವ ಸಾಕ್ಷಿಯಾಗಿ ಮಕರ ಭೋಜನವಾಗನೇ ವಿನಾಶಕ್ಕೆರಾಯನು?

೯೮. ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ ಮಾನವ. ಕೆಟ್ಟಿತ್ತು, ಕಲ್ಯಾಣ ಹಾಳಾಯಿತ್ತು ನೋಡಾ! ಒಬ್ಬ ಜಂಗಮದ ಅಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು, ಸಂದಿತ್ತು, ಕೂಡಲಸಂಗಮದೇವ, ನಿಮ್ಮ ಕವಳಿಕೆಗೆ.

೯೯. ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟಿಯ ಕಟ್ಟಿ, ಆಕಳ ಹಾಲನೆರೆದು ಜೀನತುಪ್ಪವ ಹೊಯ್ದರೆ, ಸಿಹಿಯಾಗಬಲ್ಲುದೆ ಕಹಿಯ ಹುದಲ್ಲದೆ? ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು ಕೂಡಲಸಂಗಮದೇವ.

೧೦೦. ಕರ್ತನನರಿಯದವನು ವಿಪ್ರನಾದಡೇನು, ಚತುರ್ವೇದಿಯಾದಡೇನು? ಭುಕ್ತಿ ಕಾರಣ ಲೋಕದಿಚ್ಛೆಗೆ ನುಡಿದು ನಡೆವರಯ್ಯ. ಭವಿ ಮಾಡಿದ ಪಾಕವ ತಂದು ಲಿಂಗಕ್ಕರ್ಪಿಸುವ ಕಷ್ಟರ ಕಂಡು ನಾಚಿತ್ತೆನ್ನ ಮನವು. ಕೂಡಲಸಂಗನ ಶರಣರ ಒಕ್ಕುದ ಕೊಂಡು ಅನ್ಯವನಾಚರಿಸಿದಡೆ ತಪ್ಪದು ಸೂಕರ ಶುಚಿರ್ಭೂತತೆಯ ಪ್ರಾಣಿಯಂತೆ.

೧೦೧. ಉಂಬಲ್ಲಿ ಉಡುವಲ್ಲಿ ಕುಲವಳಿಯಿತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು. ಎಂತಯ್ಯ? ಅವರ ಭಕ್ತರೆಂತೆಂಬೆ? ಎಂತಯ್ಯ? ಅವರ ಯುಕ್ತರೆಂತೆಂಬೆ? ಕೂಡಲಸಂಗಮದೇವ ಕೇಳಯ್ಯ ಹೊಲತಿ ಶುದ್ಧ ನೀರ ಮಿಂದಂತಾಯಿತ್ತಯ್ಯ.

೧೦೨. ಭಕ್ತರನಲ್ಲದೆ ಒಲ್ಲೆವೆಂದೆಂಬಿರಿ. ಭಕ್ತರಿಗಲ್ಲದೆ ಕೈಯ್ಯಾನೆವೆಂಬಿರಿ. ಅದೇನ ಮಾಡುವಿರಿ? ಅದೆಲ್ಲಿಗೊಯ್ವಿರಿ? ಪಾವನವಾದುದನು ಲಿಂಗಕ್ಕೆ ಮಾಡುವದೇ ಆಚಾರ. ವಿಷಯಕ್ಕೆ ಇಕ್ಕಿ ಅಸುಗತಿಗಿಳಿಯದಿರಿ ಕೂಡಲಸಂಗನ ಶರಣರ ಒಡವೆಯ.

೧೦೩. ಮಾರಿ ಮಸಣಿ ಎಂಬವು ಬೇರಿಲ್ಲ ಕಾಣಿರೋ. ಮಾರಿ ಎಂಬುದೇನು? ಕಂಗಳು ತಪ್ಪಿ ನೋಡಿದರೆ, ಮಾರಿ. ನಾಲಿಗೆ ತಪ್ಪಿ ನುಡಿದರೆ ಮಾರಿ. ನಮ್ಮ ಕೂಡಲಸಂಗಯ್ಯನ ನೆನಹ ಮರೆದರೆ ಮಾರಿ.

೧೦೪. ಆಯುಧವಿಕ್ಕಿದವಂಗೆ ವೀರದ ಮಾತೇಕೆ? ಲಿಂಗವು ಅಂತರಿಸಿದವಂಗೆ ಒಳನುಡಿ ಏಕೆ? ಐದೆಳೆ ಅಣಚು ಇಲ್ಲದವಳಿಗೆ ಸೌಭಾ

ಗ್ಯದ ಹೂವಿನ ಬೊಟ್ಟೇಕೆ? ಸತ್ಯನಲ್ಲದವಂಗೆ ನಿತ್ಯ ನೇಮವೇಕೆ? ಕರ್ತಾರ ನಿನ್ನ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇಕೆ? ಕೂಡಲ ಸಂಗಮದೇವಯ್ಯ, ನೀವಿಲ್ಲದವಂಗೆ ಶಿವಾಚಾರವ ಮಾತೇಕೆ?

೧೦೫. ಇರುಳೆಂದೇನೋ ಕುರುಡಂಗೆ? ಹಗಲೆಂದೇನೋ ಕುರುಡಂಗೆ? ತಾಳ ಬಾರಿಸಿದರೇನಯ್ಯ? ಪಂಚ ಮಹಾ ಶಬ್ದವ ಬಾರಿಸಿದರೇನೋ ಕಿವುಡಂಗೆ, ಕೂಡಲಸಂಗಮದೇವಯ್ಯನ ಪಥವಿನ್ನಾವುದೆಂದರಿಯದವಂಗೆ?

೧೦೬. ಸಿಂಗದ ಸಡು ಮುರಿಯಲಾ ಸಿಂಗವೇನು ಬಾತೆ? ಸೊಂಡಿಲ ಮುರಿದರೆ ಗಜವೇನು ಬಾತೆ? ಸಂಗ್ರಾಮದಲ್ಲಿ ವೀರನುಳಿಯಲದೇನು ಬಾತೆ? ಶೃಂಗಾರದ ಮೂಗು ಹೋದರೆ ಶೃಂಗಾರವೇನು ಬಾತೆ? ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ ಕೂಡಲಸಂಗಮದೇವ?

೧೦೭. ಮುನ್ನಿನ ಆದ್ಯರ ಪಥಂಗಳು ಇನ್ನಾರಿಗೆಯೂ ಅಳವಡದು ನೋಡಾ. ಬಲ್ಲೆನಾಗಿ ಒಲ್ಲೆನವರು ಸಲ್ಲರು ಶಿವಪಥಕ್ಕೆ. ಒಳ್ಳಿಹ ಮೈಲಾರನ ಸಿಂಗಾರದಂತೆ, ವೇಶಿಯ ಬಾಯ ಎಂಜಲನುಂಬ ದಾಸಿಯ ಸಂಸಾರದಂತೆ, ಕೂಡಲಸಂಗನ ಶರಣರನರಿಯದೆ ಉಳಿದ ಭಂಗಿತರ.

೧೦೮. ಗೀಜಗನ ಗೂಡು, ಕೋಡಗದಣಲ ಸಂಚೆ, ಬಾದುಮನ ಮದುವೆ, ಬಾವಲ ಬಿದ್ದಿನಂತೆ, ಜೂಜುಗಾರನ ಮಾತು, ಬೀದಿ ಗುಂಡನ ಸೊಬಗು, ಓಡಿನೊಳಗೆ ಅಗಿಯ ಹೊಯಿದಂತೆ ಕಾಣಿರೋ. ಶಿವನಾದಿಯಂತುವನರಿಯದವನ ಭಕ್ತಿ ಸುಖ ಶೋಧನೆಗೆ ಮದ್ದ ಕೊಂಡಂತೆ ಕೂಡಲಸಂಗಮದೇವಾ.

೧೦೯. ತೊತ್ತಿನ ಕೊರಳಲ್ಲಿ ಹಿತ್ತಾಳೆಯ ಸಿಂಗಾರವ ಮಾಡಿದಂತೆ ಕುಚಿತರ ಸಂಗ ಸುಸಂಗಿಗೆ ಸಂಗಡವಲ್ಲ. ಗುರುಗುಂಜಿ ಮಾಣಿಕಕ್ಕೆ ಸರಿಯಪ್ಪುದೆ ಕೂಡಲಸಂಗಮದೇವ?

೧೧೦. ಕೆಂಚ ಕರಿಕನ ನೆನೆದಡೆ, ಕರಿಕನಾಗಬಲ್ಲನೆ? ಕರಿಕ ಕೆಂಚನ ನೆನೆದಡೆ, ಕೆಂಚನಾಗಬಲ್ಲನೆ? ದರಿದ್ರ ಸಿರಿವಂತನ ನೆನೆದಡೆ, ಸಿರಿವಂತನಾಗಬಲ್ಲನೆ? ಸಿರಿವಂತ ದರಿದ್ರನ ನೆನೆದಡೆ, ದರಿದ್ರನಾಗಬಲ್ಲನೆ? ಮುನ್ನಿನ ಪುರಾತನರ ನೆನೆದು ಧನ್ಯನಾದಿಹೆನೆಂಬ ಮಾತಿನ ರಂಜಕರ ನೇನೆಂಬೆ ಕೂಡಲಸಂಗಮದೇವ?

೧೧೧. ಅನೆಯನೇರಿಕೊಂಡು ಹೋದಿರಿ ನೀವು. ಕುದುರೆಯನೇರಿ ಕೊಂಡು ಹೋದಿರಿ ನೀವು. ಕುಂಕುಮ ಕಸ್ತುರಿಯ ಪೂಸಿಕೊಂಡು ಹೋದಿರಿ ಅಣ್ಣಾ. ಸತ್ಯದ ನಿಲವನರಿಯದೆ ಹೋದಿರಲ್ಲಾ! ಸದ್ಗುಣ ವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ! ಅಹಂಕಾರವೆಂಬ ಮದಗಜವನೇರಿ, ವಿಧಿಗೆ ಗುರಿಯಾಗಿ ನೀವು ಕೆಟ್ಟು ಹೋದಿರಲ್ಲಾ! ನಮ್ಮ ಕೂಡಲಸಂಗಮದೇವರನರಿಯದೆ ನರಕಕ್ಕೆ ಭಾಜನವಾದಿರಲ್ಲಾ!

೧೧೨. ಇಂದ್ರಿಯ ನಿಗ್ರಹವ ಮಾಡಿದರೆ, ಹೊಂದುವವು ದೋಷಂಗಳು. ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು. ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳಚಂಗಳೆಯವರು? ಸತಿಪತಿರತಿಸುಖಭೋಗೋಪಭೋಗವಿಳಾಸವ ಬಿಟ್ಟರೆ ಸಿಂಧು ಬಲ್ಲಾಳನು? ನಿಮ್ಮ ಮುಟ್ಟಿ ಪರಧನ ಪರಸತಿಯರಿಗೆಳಸಿದರೆ, ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವ.

೧೧೩. ಲಿಂಗ ಜಂಗಮ ಒಂದೇ ಎಂದು ನಂಬಿದ ಬಳಿಕ, ಅವರಂಗನೆಯರು ಲಿಂಗದ ರಾಣಿವಾಸ. ಅಲ್ಲಿಯೂ ಮೇಳ, ಇಲ್ಲಿಯೂ ಮೇಳ, ಚೌಡೇಶ್ವರಿಯಲ್ಲಿ ಮೇಳ. ಮಾತೆ ಎಂಬ ಭಾವ ತಪ್ಪಿ ಅಪ್ಪಿದವರ ತಲೆಯ ಕೊಂಬ ಕೂಡಲಸಂಗಮದೇವ.

೧೧೪. ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದರೆ, ತುಡುಗುಣಿತನದಲ್ಲಿ ಪರವಧುವ ನೋಡುವ ಸರಸ ಬೇಡ ಕಾಣಿರಣ್ಣಾ. ಒಡೆಯ ನರಸಿಯ ಸರಸ ಬೇಡ. ಕೂಳಸೊಕ್ಕು ತಲೆಗೇರಿ, ರಾಣಿವಾಸದೊಡನೆ ಸರಸ ಬೇಡ. ಕೂಡಲಸಂಗಮದೇವ ಕರೆಯಿಸಿ ತಗನಯ್ಯಾ.

೧೧೫. ನೋಡಲಾಗದು, ನುಡಿಸಲಾದು, ಪರಸ್ತ್ರೀಯರ ಬೇಡ ಕಾಣಿರೋ. ತಗರ ಬೆನ್ನಲ್ಲಿ ಹರಿವ ಸೊಣಗನಂತೆ ಬೇಡ ಕಾಣಿರೋ. ಒಂದಾಸೆಗೆ ಸಾಸಿರ ವರುಷ ನರಕದಲ್ಲದ್ದುವ ಕೂಡಲಸಂಗಮದೇವಾ.

೧೧೬. ತೊರೆಯ ಮಿಂವ ಅಣ್ಣಗಳಿರಾ, ತೊರೆಯ ಮಿಂವ ಸ್ವಾಮಿಗಳಿರಾ, ತೊರೆಯಿಂ ಭೋ, ತೊರೆಯಿಂ ಭೋ, ಪರನಾರಿಯ ಸಂಗವ ತೊರೆಯಿಂ ಭೋ. ಪರಧನದಾಮಿಷವ ತೊರೆಯಿಂ ಭೋ. ಇವ ತೊರೆಯದೆ ಹೋಗಿ, ತೊರೆಯ ಮಿಂದರೆ, ಬರುದೊರೆ ಹೋಹುದು ಕೂಡಲಸಂಗಮದೇವ.

೧೧೭. ಸತ್ಯ ಶೌಚವ ನಿತ್ಯ ನೇಮವ ತಪ್ಪದೆ ಮಾಡಬಲ್ಲರೆ, ಅದು ಲೇಸು. ಮತ್ಸ್ಯ ಕೂರ್ಮ ಮಂಡುಕ ಜಲದೊಳಗಿದ್ದಲ್ಲಿ ಫಲವೇನು?" "ಚಿತ್ತ ಮಂತರ್ಗತಂ ದೃಷ್ಟ್ವಾ ತೀರ್ಥ ಸ್ನಾನೇನ ಶುದ್ಧತೆ ಶತ ಕುಂಭಜಲೇ ಶೌಚಂ ಸುರಾಭಾಂಡಮಿವಾಶುಚಿಃ" ಅಗಡವ ಮಾಡಿ ಮಾಗಧವ ಮಿಂದರೆ, ತಾ ಕೊಡಬಲ್ಲನೇ ಕೂಡಲಸಂಗಮದೇವ?

೧೧೮. ಕುಳ್ಳಿದ್ದು ಲಿಂಗವ ಪೂಜಿಸಿ, ಅಲ್ಲದಾಟವನಾಡುವರಯ್ಯ. ಬೆಳ್ಳಿತ್ತಿನ ಮರೆಯಲ್ಲಿದ್ದು, ಹುಲ್ಲಿಗಂಬ ತೊಡುವಂತೆ ಕಳ್ಳ ಹಾದರಿಗರ ಕೆಯ್ಯಲು ಪೂಜೆಯ ಕೊಳ್ಳ ನಮ್ಮ ಕೂಡಲಸಂಗಮದೇವ.

೧೧೯. ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ, ಹಿಡಿದಿರ್ದ ಲಿಂಗವು ಘಟಸರ್ಪನಯ್ಯ. ನುಡಿಯಲು ಬಾರದು, ನಡೆಯಲು ಬಾರದು. ಲಿಂಗದೇವನೇ ದಿಬ್ಯವೋ. ಅಯ್ಯ ಬಡವನ ಕೋಪ ಅವುಡೆಗೆ ಮೃತ್ಯು ವಾದಂತೆ ಕಡೆಗೆ ದಾಂಟದು ಕಾಣಾ ಕೂಡಲಸಂಗಮದೇವಾ.

೧೨೦ ತನು ಶುಚಿ ಇಲ್ಲದವನ ದೇಹಾರವೇಕೆ? ದೇವರು ಕೊಡ ನೆಂಬ ಭ್ರಾಂತಿಯದೇಕೆ? ಮನಕ್ಕೆ ಮನವೇ ಸಾಕ್ಷಿ ಸಾಲದೇ? ಲಿಂಗ ತಂದೆ? ಹೇಗೆ ಮನ, ಹಾಗೆ ಫನ ತಪ್ಪದು ಕೂಡಲಸಂಗಮದೇವಾ.

೧೨೧. ನಿಚ್ಚ ನಿಚ್ಚ ಪೂಜಿಸುವ ಶರಣಂಗೆ ಅದಕ್ಕೆ ಇದೆ ದಿಟ ದೀವಿಗೆ. ಪಾದೋದಕ ಕೋಶ ಪಾವನವಲ್ಲದೆ ಏನೂ ಇಲ್ಲವಯ್ಯ. ಮಜ್ಜನಕ್ಕೆರೆವುದು ಲಿಂಗ ಕರಸ್ಥಲ ದಿಬ್ಯ ಗುರು ವಚನ ಭಾಷಾ ಪತ್ರ ಶಿವನ ಕರದಲ್ಲಿ ಸತ್ಯದಿಂದ ನಡೆವಂಗೆ ನಿತ್ಯ ನೇಮವ ಸಲಿಸುವನಲ್ಲದೆ ಹುಸಿವಂಗೆ ಮಡಿಲ ಕಿಚ್ಚಾಗಿ ಸುಡುವ ಲಿಂಗವ ಪೂಜಿಸಿ ಮರಳಿ ಅನ್ಯಕ್ಕೆರಗಿದರೆ ಕೂಡಲಸಂಗಮದೇವನವರ ಹಲ್ಲ ಕಳೆವ.

೧೨೨. ಪಾಪಿಗೆ ಕೋಪಿಗೆ ಭಕ್ತಿಯಾಗೆಂದಡೆ ಅಪ್ಪುದೆ? ನಾರಿ ವಾಳವಕ್ಕುದೆ ನಾಯಿಗೆ? ಕೂಡಲಸಂಗಮದೇವ ನಿಮ್ಮ ನಂಬಿಯೂ ನಂಬದ ಡಂಭಕಂಗೆ?

೧೨೩. ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ. ಪಾಪಿ ಹೂವನೇರಿಸಲು, ಮಸೆದಾಯುಧದ ಗಾಯ. ಕೂಪರನಾರನೂ ಕಾಣೆನು, ಮಾದಾರ ಚನ್ನಯ್ಯನಲ್ಲದೆ. ಕೂಪರನಾರನೂ ಕಾಣೆನು, ಡೋಹರ ಕಕ್ಕಯ್ಯನಲ್ಲದೆ. ವ್ಯಾಪ್ತಿಯುಳ್ಳವ ನಮ್ಮ ಮಡಿವಾಳ ಮಾಚಯ್ಯ. ನಿನ್ನ ಪತ್ತಿಗರಿವರಯ್ಯ ಕೂಡಲಸಂಗಯ್ಯ.

೧೬೪. ಸದಾಚಾರ ಸದ್ಭಕ್ತಿ ಇಲ್ಲದವರನೊಲ್ಲನಯ್ಯ. ಅವರಾ ರಾಧನೆ ದಂಡ. ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ, ಕೂಡಲಸಂಗಮದೇವ ಭೂಭಾರಕರನು.

೧೬೫. ನೂರನೋದಿ, ನೂರ ಕೇಳಿದರೇನು? ಆಸೆ [illegible]ಯದು, ರೋಷ ಬಿಡದು. ಮಜ್ಜನಕ್ಕೆರೆದು ಫಲವೇನು? ಮನಸಿನಂತೆ ಮನವಿ ಲ್ಲದ ಜಾತಿ ಡೊಂಬರ ನೋಡಿ ನಗುವ ನಮ್ಮ [illegible]ಸಂಗಮದೇವ.

೧೬೬. ತಂದೆ ಮಕ್ಕಳಿಗೆ ಬುದ್ಧಿ ಹೇಳುವಲ್ಲಿ ತಪ್ಪಿಂಗೆ ಮುನಿವ ನಲ್ಲದೆ ಪ್ರಾಣಕ್ಕೆ ಮುನಿಯ. ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ, ಅವರ ಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ. ಲಿಂಗಭಕ್ತನು ಲಿಂಗಸಥವ ಹೇಳಿದರೆ, ಮಚ್ಚರಿಸುವರ ಮೆಚ್ಚ ಕೂಡಲ ಸಂಗಮದೇವ.

೧೬೭. ಗುರು ಉಪದೇಶ ಮಂತ್ರ ವೈದ್ಯ. ಜಂಗಮ ಉಪದೇಶ ಶಸ್ತ್ರ ವೈದ್ಯ ನೋಡಾ. ಭವರೋಗವ ಕಳೆವ ಪರಿಯ ನೋಡಾ. ಕೂಡಲಸಂಗನ ಶರಣರ ಅನುಭಾವ ಮಾಡಿವಾಳನ ಕಾಯಕದಂತೆ.

೧೬೮. ಕೇಳಿರೇ ಕೇಳಿರೇ ಹಿರಿಯರು ಗುರುವಿನ ಉಪದೇಶವನು. ಒಂದು ಗೀಜಗನ ಉಪದೇಶದಿಂದ ಪೌಲಸ್ತ್ಯನೆಂದು ಹಡೆಯನೇ ದಶ ಮುಖನ? ಶಿರವ ಹರಿದಿಕ್ಕಿ ಪರಮನಿದ್ದೆಡೆಯ ಕಾಣದೆ ನಿಳೆಯಲಿ ಕರುಳ ತಂತಿಯ ಉಪದೇಶದಿಂದ ಅಸುರನೆಂದು ಹಡೆಯನೆ ಸುರಪದವ? ತರುಣಿ ಹರಿಣಿಯ ಉಪದೇಶದಿಂದ ಗತಿ ಮುಕ್ತಿಯ ಪಡೆದು ಬಟ್ಟೆಯ ಹತ್ತನೇ ವಿನಾಶಕ್ತಿರಾಯನು? ರಂಭೆಯ ಉಪದೇಶದಿಂದ ಶಂಭುವಿನೋ ಲಗದೊಳಗೆ ಕುಳ್ಳಿರನೇ ಶ್ವೇತನು? ನಮ್ಮ ಕೂಡಲಸಂಗನ ಶರಣರ ಉಪದೇಶವ ಕೇಳಿದವರಿಗೆ ದುರಿತ ಪಾಪಂಗಳು ಬಿಟ್ಟು ಹೋಗಿ ಮನ ನಿರತರಾಗಿಪ್ಪರಾ ಲಿಂಗದಲ್ಲಿ.

೧೬೯. ಶಿವಚಿಂತೆ ಶಿವಜ್ಞಾನ ಭ್ರಮೆ ತಿಳಿದವಂಗಲ್ಲದೆ, ಆಚಾರ ಶಿವಾಚಾರ ತಮತಮಗೆ ಸೂರೆಯೇ, ಕೂಡಲಸಂಗನ ಪೂಜಿಸಿದವಂ ಗಲ್ಲದೆ?

೧೭೦. ಶ್ವಪಚನಾದರೇನು? ಲಿಂಗ ಭಕ್ತನೇ ಕುಲಜನು. ನಂಬಿ ನಂಬದಿದ್ದರೆ, ಸಂದೇಹಿ ನೋಡಾ. ಕಟ್ಟಿದರೇನು, ಮುಟ್ಟಿದರೇನು, ಹೂಸಿ

ದರೇನು, ಮನ ಮುಟ್ಟದನ್ನಕ್ಕ? ಭಾವ ಶುದ್ಧವಿಲ್ಲದವಂಗೆ, ಭಕ್ತಿ ನೆಲೆಗೊಳ್ಳದು, ಕೂಡಲಸಂಗಮದೇವನೊಲಿದವಂಗಲ್ಲದೆ.

೧೩೧. ಅವರ ನಡೆಯೊಂದು ನುಡಿಯೊಂದಾದರೆ, ಶಿವಾಚಾರಕ್ಕವರು ಸಲ್ಲರಯ್ಯ. ಬಲ್ಲನು. ಸಾತ್ವಿಕರಲ್ಲದವರ ನೊಲ್ಲನು. ಶಿವಾಚಾರವ ಬಲ್ಲನು. ಅಲ್ಲಿ ನಿಲ್ಲನು. ಪ್ರಪಂಚಿಯ ಮನವನೊಲ್ಲನು ಕೂಡಲಸಂಗಮದೇವನು.

೧೩೨. ನಿಧಾನವನರಸಿಹೆನೆಂದು ಹೋದರೆ, ವಿಘ್ನ ಬಪ್ಪುದು ಮಾಬುದೇ? ಸದಾಶಿವನೆಂದರೆ, ಬೆರದಟ್ಟಿ ಸುಡುವುದು ಮಾಬುದೇ? ಹದುಳಿಗನಾಗಿ ಉಳಿದರೆ, ಪದವನೀವ ಕಾಣಾ ಕೂಡಲಸಂಗಮದೇವಾ.

೧೩೩. ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ, ಅಡಿಗಡಿಗೆ ಗುರುವಿನಾಣೆ ಎಂಬ ವಚನವೇ ಹೊಲ್ಲ. ಮುಂದೆ ಪಥಕ್ಕೆ ಸಲ್ಲರು. ಆದಿಯಿಂದ ಬಂದ ವಚನವೆಂದು, ಶರಣರ ಕೂಡೆ ಸರಸವಾಡಿದರೆ, ನಗು ತಲಿಂದುಕೊಂಡರೆ, ಅಲಗು ನಡದಿಹುದೇ ಕೂಡಲಸಂಗಮದೇವ?

೧೩೪. ಆರಗಿನ ಪುತ್ಥಳಿಯ ಉರಿಯ ನಾಲಿಗೆ ಹೊಯಿದು, ಮಾತಾಡುವ ಸರಸಬೇಡ. ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯ ಮಾಡಿ. ಚಲ್ಲವಾಡಿದರೆ ಹಲ್ಲು ಹೋಹುದು. ಕೂಡಲಸಂಗನ ಶರಣರೊಡನೆ ಸರಸವಾಡಿದರೆ, ಅದು ವಿರಸ ಕಾಣಿರಯ್ಯ.

೧೩೫. ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸಿಕೊಂಬಂತೆ, ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ, ಹುಲಿಯ ಮೀಸೆಯ ಹಿಡಿದುಕೊಂಡು ಒಲೆದುಯ್ಯಲು ನಾಡುವಂತೆ, ಕೂಡಲಸಂಗನಶರಣರೊಡನೆ ಮರೆದು ಸರಸವಾಡಿದರೆ, ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ.

೧೩೬. ಉರಿವ ಕೊಳ್ಳಿಯ ಮಂಡೆಯಲಿಕ್ಕಿದಡುರಿವುದು ಮಾಬುದೇ? ಕಲ್ಲ ಗುಗ್ಗರಿಯ ಮೆಲಿದರೆ, ಹಲ್ಲು ಹೋಹುದು ಮಾಬುದೇ? ಶರಣರೊಡನೆ ಸರಸವಾಡಿದರೆ, ನರಕ ತಪ್ಪದು ಕಾಣಾ ಕೂಡಲಸಂಗಮದೇವ.

೧೩೭. ಕೋಣದ ಹೇರಿಂಗೆ ಕುನ್ನಿ ಬಸುಗುತ್ತ ಬಾಲವ ಬಡಿವಂತೆ, ತಾವು ನಂಬರು. ನಂಬುವರನು ನಂಬಲೀಯರು. ತಾವು ಮಾಡರು.

ಮಾಡುವವರನು ಮಾಡಲೀಯರು. ಮಾಡುವ ಭಕ್ತರ ಕಂಡು ಸೈರಿಸಲಾರದವರ ಕೂಗಿಡೆ ಕೂಗಿಡೆ ನರಕದಲ್ಲಿಕ್ಕುವ ಕೂಡಲಸಂಗಮದೇವ.

೧೩೮. ಚೇಳಿಂಗೆ ಬಸುರಾಯಿತ್ತೆ ಕಡೆ. ಬಾಳೆಗೆ ಫಲವಾಯಿತ್ತೆ ಕಡೆ ನೋಡಾ. ರಣರಂಗದಲ್ಲಿ ಕಾದುವ ಓಲೆಯಕಾರಂಗೆ ಓಸರಿಸಿತ್ತೆ ಕಡೆ. ಮಾಡುವ ಭಕ್ತಂಗೆ ಮನಹೀನವಾದರೆ ಅನೇ ಕಡೆ ಕೂಡಲಸಂಗನು ದೇವಾ.

೧೩೯. ಹುಲಿಯ ಹಾಲು ಹುಲಿಗಲ್ಲದೆ, ಹೊಲದ ಹುಲ್ಲಿಗೆ ಉಣಬಾರದು. ಕಲಿಯ ಕಾಲ ತೊಡರು ಛಲದಾಳಿಂಗಲ್ಲದೆ, ಇಕ್ಕಬಾರದು. ಅಳಮನದಾಸೆಯವರ ಮೂಗ ಹಲ್ಲು ದೋರ ಕೊಯ್ವ ಕೂಟಲಸಂಗಮದೇವ.

೧೪೦. ಆರ್ಥಪ್ರಾಣಾಭಿಮಾನ ನಿಮ್ಮದೆಂಬಿರಿ. ಒತ್ತಿ ನೋಡಿದರೆ, ಮುಟ್ಟಲೀಯರಿ. ಮುಟ್ಟಿ ಬಂದಲ್ಲಿ, ಕಠಾರಿಯ ಕಾಳಗವ ನಿವಾರಿಸುವಿರಲ್ಲದೆ ಲಿಂಗಜಂಗಮವಂತನಾಗಬಾರದು. ಕೂಡಲಸಂಗಮದೇವ ವೇಷ ಡಂಭಕರಿಗೆ ಭಕ್ತಿ ಎಂತಪ್ಪುದಯ್ಯ?

೧೪೧. ಅಲಗಲಗು ಮೋಹಿಸಿವಲ್ಲದೆ, ಕಲಿತನವ ಕಾಣಬಾರದು. ನುಡಿದ ನುಡಿ ಜಾರಿದಡೆ ಮನಕ್ಕೆ ಮನ ನಾಚಬೇಕು. ಶಬ್ದ ಗಟ್ಟಿಯ ತನದಲ್ಲಿ ಎಂತಪ್ಪುದಯ್ಯ ಭಕ್ತಿ? ಪಾಪಿಯ ಕೂಸನೆತ್ತಿದಂತೆ. ಕೂಡಲಸಂಗಮದೇವರ ಭಕ್ತಿ ಅಳಮನದವರಿಗೆ ಅಳವಡದಯ್ಯ.

೧೪೨. ಹರಬೀಜವಪ್ಪರೆ ಹಂದೆ ತಾನಪ್ಪನೆ? ಒಲೆಗಟ್ಟ, ಇರಿಯದವರ ಲೋಕ ಮೆಚ್ಚುವದೇ? ಉಟ್ಟ ಚಲ್ಲಣ ಕೆಯ್ಯ ಪಟ್ಟೆಯವಿಡಿದು ಗರುಡಿಯ ಕಟ್ಟ, ಶ್ರಮವ ಮಾಡುವಂತೆ ತನ್ನ ತಪ್ಪಿಸಿಕೊಂಡರೆ, ಶಿವ ಮೆಚ್ಚುವನೆ? ಆರಿಯದವರಿಗೆ ಒಳ್ಳೆ ಹೆಡೆ ಎತ್ತಿ, ಆಡುವಂತೆ ಬೊಳ್ಳಿಗನ ಭಕ್ತಿ ಕೂಡಲಸಂಗಮದೇವ.

೧೪೩. ನೊನೆ ತಪ್ಪಿದ ಬಳಿಕ, ಅಲಗೇನ ಮಾಡುವದು? ವಿಷ ತಪ್ಪಿದ ಬಳಿಕ ಹಾವೇನ ಮಾಡುವುದು? ಭಾಷೆ ತಪ್ಪಿದ ಬಳಿಕ, ಬಲ್ಲಿದ ಭಕ್ತನೇನ ಮಾಡುವನಯ್ಯ? ಭಾಷೆ ತಪ್ಪಿದ ಬಳಿಕ, ಪ್ರಾಣದಾಸೆಯನು ಹಾರಿದರೆ, ವಿಾಳಲನು ಸೊಣಗ ಮುಟ್ಟಿದಂತೆ ಕೂಡಲಸಂಗಮದೇವಾ.

೧೪೪. ಶರಣ ಸಂಬಂಧವನರಿತ ಬಳಿಕ ಮರಳಿ ಭವಿಯ ಬೆರಿಸಲಾಗದು. ಬ್ರಹ್ಮಹತ್ಯ, ಭ್ರೂಣಹತ್ಯ. ವೈತರಣಿ, ದುರ್ಗತಿ ಪಂಚ ಮಹಾ ಪಾತಕದಿಂದಧಿಕ ನೋಡಾ. ಅಳುಪಿ ಭವಿಯೊಡನುಂಡರೆ, ಭಕ್ತನಲ್ಲ ಕೂಡಲಸಂಗಮದೇವಾ.

೧೪೫. ವೀರವ್ರತಿ ಭಕ್ತನೆಂದು ಹೊಗಳಿಕೊಂಬಿರಿ ಹೇಳಿರಯ್ಯ. ವೀರನಾದರೆ, ವೈರಿಗಳು ಮೆಚ್ಚಬೇಕು. ವ್ರತಿಯಾದರೆ ಅಂಗನೆಯರು ಮೆಚ್ಚಬೇಕು. ಭಕ್ತನಾದರೆ, ಜಂಗಮ ಮೆಚ್ಚಬೇಕು. ಈ ನುಡಿಯೊಳಗೆ ತನ್ನ ಬಗೆ ಇರೆ ಬೇಡಿದ ಪದವಿಯನೀವ ಕೂಡಲಸಂಗಮದೇವ.

೧೪೬. ಕಲಿತನ ತನಗುಳ್ಳರೆ, ಸೂಜಿಬಾಳು ಮೊದಲಾಗಿ ಕಾದಲೆ ಬೇಕು. ಶರಣ ಪಥ ತನಗುಳ್ಳರೆ, ಶಿವಭಕ್ತರ ಮನೆಯ ಶಿವರಸವ ಪಂಚಾಮೃತವ ಮಾಡಿಕೊಳ್ಳಬೇಕು. ಭ್ರಾಂತುವಿಡಿದು ಲಿಂಗಕೋಗರವನರ ಸುವ ಪಾತಕರ ಮೆಚ್ಚ ಕೂಡಲಸಂಗಮದೇವ.

೧೪೭. ಕಟ್ಟ ಬಿಡುವನೇ ಶರಣನು? ಬಿಟ್ಟು ಹಿಡಿವನೇ ಶರಣನು? ನಡೆದ: ತಪ್ಪುವನೇ ಶರಣನು? ನುಡಿದು ಹುಸಿವನೆ ಶರಣನು? ಸಜ್ಜನಿಕೆ ತಪ್ಪಿದರೆ ಕೂಡಲಸಂಗಯ್ಯ ಮೂಗ ಹಲ್ಲು ದೋರಿ ಕೊಯ್ವ.

೧೪೮. ಹುಟ್ಟುವಲ್ಲಿ ಭವಿ, ಮರಳಿ ಭಕ್ತನ ಮಾಡಿ, ಪೂರ್ವಾಶ್ರಯವ ಕಳೆದು, ಹೊಂದುವಲ್ಲಿ ಭವಿಯಾಗಿ ಹೋಹರ ಮುಟ್ಟಲಾಗದು. ಅವನ ಮುಟ್ಟಿದವ ಮುನ್ನವೇ ವ್ರತಗೇಡಿ. ಅವನ ಶ್ರಾದ್ಧಕಾಲವೇ ಶ್ವಾನಮಾಂಸ. ಕ್ರಿಯಾಕಾಲವೇ ಕ್ರಿಮಿಗಳು ತದ್ದಿನವೇ ಮದ್ಯ ಮಾಂಸ. ಇದು ಕಾರಣ ಕೂಡಲಸಂಗಮದೇವ ಅವನ ಮನೆಯ ವಿಚಾರಿಸದೆ ಹೊಕ್ಕವಂಗೆ ನಾಯಕ ನರಕ.

೧೪೯. ಒಡನೆ ಹುಟ್ಟದುದಲ್ಲ. ಒಡನೆ ಬೆಳೆದುದಲ್ಲ. ಎಡೆಯಲಾದ ಒಂದು ಉಡುಗೆಯನುಟ್ಟು ಸಡಲಿದರೆ, ಲಜ್ಜೆ ನಾಚಿಕೆಯಾಯಿತ್ತೆಂಬ ನುಡಿ ದಿಟವಾಯಿತ್ತು. ಲೌಕಿಕದಲ್ಲಿ ಪಡೆದ ಗುರುಕರುಣದ ಒಡನೆ ಹುಟ್ಟಿದ ನೇಮವನು ಬಿಡದಿರೆಲೆವೋ. ಬಿಟ್ಟರೆ ಕಷ್ಟ. ಕೂಡಲಸಂಗಮದೇವನಡಿಸಿ ಕೆಡಹುವ ನಾಯಕನರಕದಲ್ಲಿ.

೧೫೦. ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ. ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ. ಛಲಬೇಕು ಶರಣಂಗೆ ಪರ

ದೈವನನೊಲ್ಲೆನೆಂಬ. ಛಲ ಬೇಕು ಶರಣಂಗೆ ಲಿಂಗಜಂಗಮ ಒಂದೆಂಬ. ಛಲ ಬೇಕು ಶರಣಂಗೆ ಪರವಾದಿನಿಗ್ರಹದಲ್ಲಿ. ಛಲ ಬೇಕು ಶರಣಂಗೆ ಪ್ರಸಾದ ದಿಟವೆಂಬ. ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ.

೧೫೧. ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯ ಎರಡಾಳಿನ ಭಾಷೆಯ. ಕೊಲುವೆನೆಂಬ ಭಾಷೆ ದೇವನದು. ಗೆಲುವೆನೆಂಬ ಭಾಷೆ ಭಕ್ತನದು. ಸತ್ಯವೆಂಬ ಕೂರಲಗನೆ ಕಳೆದುಕೊಂಡು ಸದ್ಭಕ್ತರು ಗೆದ್ದರು ಕಾಣಾ ಕೂಡಲಸಂಗಮದೇವ.

೧೫೨. ಮುನ್ನಿನ ಕಲಿವೀರಧೀರರು ಕಾದಿದ ರಣಗಳನು ಪರಿಪರಿಯಲಿ ಬಣ್ಣಿಸಿ ಹೇಳಬಹುದಲ್ಲದೆ, ಆ ದಳವಿದಿರಾದಲ್ಲಿ, ಬಿರಿದ ಪಜಾರಿಸಿ, ಕಾದಿ ತೋರಲು ಬಾರದು. ಮುನ್ನಿನ ಪುರಾತನರು ಪುರುಷಬ್ರತಿಯರು ಒಲಿಸಿದ ಆಯತವ ಪರಿಪರಿಯಲು ಬಣ್ಣಿಸಬಹುದಲ್ಲದೆ, ಪುರುಷನಿರ್ವಾಣಕ್ಯರಿವಗ್ನಿಯ ಬಂದು ಹೊಕ್ಕು ತೋರಲು ಬಾರದು. ಮುನ್ನಿನ ಪುರಾತರೆಲ್ಲರು ತನುಮನಧನವನಿತ್ತು ಮಾಡಿ ನೀಡಿ ಲಿಂಗವ ಕೂಡಿದ ಪರಿಗಳನು ಅನುಭಾವದಲಭೈ್ಯಸಿ ಹೇಳಲುಬಹುದಲ್ಲದೆ, ಮಾಡಿ ನೀಡಿ ತೋರಲು ಬಾರದು. ಇಂತೀ ಆರೆಬಿರಿದಿನ ಬಂಟಂತೆ ಪುರುಷವ್ರತಿಯರು ಪುರಾತನರು ಬರಿಯ ಮಾತನಾಡಿ ಹೊರಗೆ ಮೆರೆವರಲ್ಲ. ಪರೀಕ್ಷೆಯಂಟಾಗಿ ಇದ್ದರೆ, ಒಳಗಣವರ ಹೆಸರ ಹಿಡಿದು ಪರಿಪರಿಯಲು ಹೊಗಳುವರು. ಶರೀರಮರ್ಥ ಪ್ರಾಣ ಗುರುಲಿಂಗ ಜಂಗಮಕ್ಕೆ ಪರೀಕ್ಷೆಯುಂಟಾಗಿಯೇ ಆತ ಮಹೇಶ್ವರ, ಪುರಾತ ವಳಿ ಎಂಬೆ. ಪರಮಬಂಧುಗಳಾತನ ನೆನೆನೆನೆದು ಬದುಕುವರು. ಇಂತೀ ಅನುಭಾವದ ಓದಿನ ಆಕ್ಷರಾಭ್ಯಾಸವ ಸಾಧಿಸಿ ತರ್ಕಿಸಿ ನಿಂದಿಸಲಾಗದು. ಕೂಡಲಸಂಗನ ಶರಣಂಗಲ್ಲದನುಭಾವವಿಲ್ಲ.

೧೫೩. ಕಬ್ಬಿನ ಹಣಿದವನಾಡುವರಲ್ಲದೆ ಕಾಯದ ಹಣಿದವನಾಡುವರೇ? ಮೇಲೊಡ್ಡಾಯಿತ್ತೆಂದು. ಕೂಡಲಸಂಗಮದೇವ ನೀನಿಕ್ಕಿದ ಜೂಜಿಂಗೆ ಹೊಯ್ದು ಗೆದ್ದ ಸಿರಿಯಾಳ.

೧೫೪. ಆರ್ಥಪ್ರಾಣಾಭಿಮಾನವ ಕೊಟ್ಟನೆಂಬವರಲ್ಲದೆ, ಕೊಟ್ಟ ಭಕ್ತರನಾರನೂ ಕಂಡುದಿಲ್ಲ. ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ. ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ. ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ, ತನ್ನ ಕೊಟ್ಟುದಿಲ್ಲ.

ಇವೆಲ್ಲ ಹೊರಗಣ ಮಾತು. ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮುರಾಳ.

೧೫೫. ಒಂದು ಮಾತೆನ್ನಬಹುದೇ ಶಬ್ದ ಸಾರಾಯವನು? ಒಂದು ಮಾತೆನ್ನ ಬಹುದೆ ಶರಣ ಸಂಬಂಧವನು? ಕೂಡಲಸಂಗಮದೇವರು ನಂಬಿಗೆ 'ಓ, ಎಂದುದನೊಂದು ಮಾತೆನ್ನಬಹುದೆ?

೧೫೬. ಭಕ್ತರೇ ಸಮರ್ಥರು. ಅಸಮರ್ಥರೆನಲುಂಟೇ? ಚನ್ನನೆತ್ತ? ಚೋಳನೆತ್ತ? ಚನ್ನನೋಡನುಂಡ ಶಿವ. ಆಹಾ ಆಯ್ಯ! ಚನ್ನ ಚೋಳನ ಮನೆಯ ಕಂಪಣಿಗನಯ್ಯ. ಕೂಡಲಸಂಗಮದೇವ ಭಕ್ತಿಲಂಪಟನಯ್ಯ.

೧೫೭. ನಿಸ್ಪೀಮ ಗುಗ್ಗಳವನಿಕ್ಕಿದನೊಬ್ಬ ಶರಣ. ಉಘೇ, ಚಾಂಗು ಭಲಾ, ಎಂಬ ಹೊಗೆ ಗಗನವ ತೀವಿ ಓಹಿಲಯ್ಯ ಮೆರೆದ ಸೌರಾಷ್ಟ್ರ ಮಂಡಲದಲ್ಲಿ ಕೂಡಲಸಂಗಮದೇವ ಭಕ್ತವತ್ಸಲನಾಗಿ.

೧೫೮. ಲಿಂಗವಶದಿಂ ಬಂದ ನಡೆಗಳು ಲಿಂಗವಶದಿಂ ಬಂದ ನುಡಿಗಳು ಲಿಂಗವಂತರು ತಾವು ಅಂಜಲೇಕೆ, ಲಿಂಗವಿರಿಸಿದಂತೆ ಇಪ್ಪು ದಲ್ಲದೆ ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ?

೧೫೯. ಶಿವಭಕ್ತನಾಗಿ ತನ್ನ ಹಿಡಿದಿಹೆನೆಂದು ಹೋದರೆ ನುಗ್ಗು ಮಾಡುವ, ನುಸಿಯ ಮಾಡುವ, ಮಣ್ಣ ಮಾಡುವ, ಮಸಿಯ ಮಾಡುವ. ಕೂಡಲಸಂಗಮದೇವರ ನೆರೆ ನಂಬಿದನಾದರೆ, ಕಡೆಗೆ ತನ್ನಂತೆ ಮಾಡುವ.

೧೬೦. ಆರೆವನಯ್ಯ ಸಣ್ಣನಹನ್ನಕ್ಕ. ಬರೆವನಯ್ಯ ಬಣ್ಣಗಾಬ ನಕ್ಕ. ಆರೆದರೆ ಸಣ್ಣನಾಗಿ, ಒರೆದರೆ ಬಣ್ಣವಾದರೆ, ಕೂಡಲಸಂಗಮ ದೇವನೊಲಿದು ಸಲಹುವನು.

೧೬೧. ಅಂಜಿದರಾಗದು. ಅಳುಕಿತರಾಗದು. ವಜ್ರಪಂಜರದೊಳ ಗಿದ್ದರೆ ಆಗದು. ತಪ್ಪದೆಲವೋ ಲಲಾಟ ಲಿಖಿತ. ಕಕ್ಕುಲಿತೆ ಬಟ್ಟರೆ ಆಗದು ನೋಡಾ. ಧೃತಿಗೆಟ್ಟು ಮನ ಧಾತುಗೆಟ್ಟರೆ, ಆಪ್ಪುದು ತಪ್ಪದು ಕೂಡಲಸಂಗಮದೇವಾ.

೧೬೨. ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದರೆ, ತಪ್ಪದು ನೋಡಯ್ಯ. ಎನಗಿನ್ನೆಂತೋ, ಎನಗಿನ್ನೆಂತೋ ಎಂದೆನ್ನಬೇಡ. "ನಾ ಭುಕ್ತಂ ಕ್ರೀಯತೆ ಕರ್ಮ" ಎಂಬ ಶ್ರುತಿ ತಪ್ಪದು ಕೂಡಲ ಸಂಗಮದೇವ.

೧೮೩. ಆಯುಷ್ಯ ತೀರಿದಲ್ಲದೆ, ಮರಣವಿಲ್ಲ. ಭಾಷೆ ತೀರಿದಲ್ಲದೆ, ದಾರಿದ್ರ್ಯವಿಲ್ಲ. ಅಂಜಲೇಕೋ ಲೋಕ ವಿಗರ್ಭಣೆಗೆ? ಅಂಜಲೇಕೋ, ಕೂಡಲಸಂಗಮದೇವ, ನಿಮ್ಮಾಳಾಗಿ?

೧೮೪. ಮನಕ್ಕೆ ಮನ ಒಂದಾಗಿ ಧನಕ್ಕೆ ಧನ ಒಂದಾಗಿ ನಚ್ಚಿದ ಮಚ್ಚು ಅಜ್ಜೊತ್ತಿದಂತಿರಬೇಕು. ಪ್ರಾಣಕ್ಕೆ ಪ್ರಾಣ ಒಂದಾಗಿ ಶುಭ ಸೂಚನೆ ಒಂದಾಗಿರದ ನಚ್ಚು ಮಚ್ಚು ಪಾರಮೈದುವೇ? ಶಿರ ಹರಿದರೇನು? ಕರುಳು ಕುಪ್ಪಳಿಸಿದರೇನು? ಇಂತಪ್ಪ ಸಮಸ್ತ ಸುವಸ್ತುವೆಲ್ಲವೂ ಹೋದರೇನು? ಚಿತ್ತಮನ ಬುದ್ಧಿಯೊಂದಾದ ಮಚ್ಚು ಬಿಚ್ಚಿ ಬೇರಾಗದಿದ್ದರೆ ಮಚ್ಚುವ ನಮ್ಮ ಕೂಡಲಸಂಗಮದೇವ.

ಮಹೇಶ್ವರನ ಮಾಹೇಶ.

೧. ಎನಿಸೆನಿಸೆಂದರೆ ನಾ ಧೃತಿಗೆಡೆನಯ್ಯ. ಎಲುದೋರಿದರೆ, ನರ ಹರಿದರೆ, ಕರುಳು ಕುಪ್ಪಳಿಸಿದರೆ, ನಾ ಧೃತಿಗೆಡೆನಯ್ಯ. ಸಿರ ಹರಿದು ಅಟ್ಟಿ ನೆಲಕ್ಕೆ ಬಿದ್ದರೆ, ನಾಲಿಗೆ ಕೂಡಲಸಂಗ ಶರಣೆನುತಿದ್ದಿತಯ್ಯ.

೨. ಒಣಗಿಸಿ ಎನ್ನ ಗಣಘಣಲನೆ ಮಾಡಿದಡೆಯೂ, ಹರಣವು ಬಂದೆನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ. ಮಾಣೆ. ಶರಣೆಂಬುದ ಮಾಣೆ ಮಾಣೆ. ಕೂಡಲಸಂಗಮದೇವಯ್ಯ ಎನ್ನ ಹೆಣನ ಮೇಲೆ ಕಂಚಿ ಟ್ಟುಂಡಡೆಯೂ ಮಾಣೆ ಮಾಣೆ.

೩. ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆದೊಡೆ ತಲೆದಂಡ, ತಲೆದಂಡ. ಹುಸಿಯಾದೊಡೆ ದೇವಾ ತಲೆದಂಡ. ಕೂಡಲಸಂಗಮದೇವ, ನೀವಲ್ಲದೆ ಅನ್ಯವ ನೆನೆದೊಡೆ ತಲೆದಂಡ ತಲೆದಂಡ.

೪. ಸುಖ ಬಂದರೆ ಪುಣ್ಯವ ಫಲವೆನ್ನೆನು. ದುಃಖ ಬಂದರೆ ಪಾಪದ ಫಲವೆನ್ನೆನು. ನೀ ಮಾಡಿದೊಡಾಯಿತ್ತೆಂದೆನ್ನೆನು. ಕರ್ಮಕ್ಕೆ ಕರ್ತೃವೇ ಕಡೆ ಎಂದೆನ್ನೆನು. ಉದಾಸೀನವಿಡಿದು ಶರಣೆನ್ನೆನು. ಕೂಡಲಸಂಗಮದೇವ ನೀ ಮಾಡಿದುಪದೇಶವು. ಎನಗೀ ಪರಿಯಲಿ ಸಂಸಾರದ ಸವಿಯ ಬಳಸುವೆನು.

೫. ಕಾಯದ ಕಳವಳಕಂಜಿ ಕಾಯಯ್ಯ ಎನ್ನೆನು. ಜೀವನೋ ಪಾಯಕ್ಕಂಜಿ ಈಯಯ್ಯ ಎನ್ನೆನು. ಯದ್ಭಾವಂ ತದ್ಭವತಿ. ಉರಿ ಬರಲಿ,

ಸಿರಿ ಬರಲಿ, ಬೇಕು ಬೇಡೆನ್ನೆನು. ಆನು ನಿಮ್ಮ ಹಾರೆನು. ಮಾನವ
ಬೇಡೆನು. ಆಸೆ ನಿಮ್ಮಾಣೆ ಕೂಡಲಸಂಗಮದೇವ.

೬. ನಾಳೆ ಬಪ್ಪುದು ನಮಗಿಂದೇ ಬರಲಿ. ಇಂದು ಬಪ್ಪುದು ನವ
ಗೀಗಲೆ ಬರಲಿ. ಇದಕಾರಂಜುವರು? ಇದಕಾರಳುಕುವರು? "ಜಾತಸ್ಯ
ಮರಣಂ ಧ್ರುವಂ" ಎಂದುದಾಗಿ ನಮ್ಮ ಕೂಡಲಸಂಗಮದೇವ ಬರೆದ
ಬರಹ ತಪ್ಪಿಸುವರೆ, ಹರಿಬ್ರಹ್ಮಾದಿಗಳವಲ್ಲ.

೭. ಕಳಹೋದರೆ, ಕನ್ನದುಳಿಯ ಹಿಡಿವೆ. ಬಂದಿವಿಡಿದರೆ
ನಿಮ್ಮಿಂದ ಮುಂದೆ ನಡೆವೆ. ಮನಭೀತಿ ಮನ ಶಂಕೆಗೊಂಡೆನಾದರೆ ನಿ
ಮ್ಮಾಣೆ, ನಿಮ್ಮ ಪುರಾತರಾಣೆ. ಆಳ್ದರ ನಡೆ ಸದಾಚಾರವೆನ್ನದಿದ್ದರೆ
ಕಟ್ಟಾಳು ಶಿಷ್ಟತನಕ್ಕೆ ಹೋಹ ಕಷ್ಟವ ನೋಡಾ ಕೂಡಲಸಂಗಮದೇವ.

೮. ಜೋಳವಾಳಿಯವ ನಾನಲ್ಲಯ್ಯ. ವೇಳೆಯಾಳಿಯವ ನಾನ
ಲ್ಲಯ್ಯ. ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ. ಕೇಳು ಕೂಡಲಸಂಗಮ
ದೇವಾ ಮರಣವೇ ಮಹಾನವಮಿ.

೯. ಕರ್ಮವೆಂಬ ಅಂಕದೊಡನೆ ತೊಡರಿದೆ. ಬಿನ್ನಪವ ಅವ
ಧಾರು. ನಿಮ್ಮಾಳಿನ ಭಾಷೆಯ. ಕಡೆಗಳಕ್ಕೆ ನೂಕುವೆ. ಕೆಡಹುವೆನೆಂಕವ.
ಕರೆದಡೋಸರಿಸಿದರೆ ನಿಮ್ಮಾಳಲ್ಲ. ಶಿವಶರಣೆಂಬ ದಂಡೆಯ ಹೂಡಿ
ಗಣಸೇಳಾಪವೆಂಬ ಅಲಗಿನಿಂದಿರಿವೆ ಕೂಡಲಸಂಗಮದೇವ.

೧೦. ಕಟ್ಟಿದೆನೊರೆಯ ಬಿಟ್ಟು ಜನ್ನಿಗೆಯರ. ಮುಟ್ಟಿ ಬಂದಿರಿದರೆ
ಓಸರಿಸುವನಲ್ಲ. ಓಡದಿರು, ಓಡದಿರು. ನಿಮ್ಮ ಶರಣರ ಮನೆಯ ಬಿರು
ದಿನ ಅಂಕಕಾರ ಓಡದಿರು, ಓಡದಿರು, ಎಲೆ ಎಲೆ ದೇವಾ, ಎಲೆ ಎಲೆ
ಸ್ವಾಮಿ, ಎಲೆ ಎಲೆ ಹಂದೆ, ಕೂಡಲಸಂಗಮದೇವಾ.

೧೧. ಗರುಡಿಯ ಕಟ್ಟಿ, ಆರವತ್ತುನಾಲ್ಕು ಕೋಲಿನ ಅಭ್ಯಾಸವ
ಮಾಡಿದೆನಯ್ಯ. ಇರಿವ ಗಾಯ ಕಂಡೆಯ ಭೇದವಿನ್ನು ತಿಳಿಯದು. ಪ್ರತಿ
ಗರುಡಿಕಾರ ಬಿರಿದ ಪಾಡಿಂಗೆ ಒದಗಲು, ವೀರಪಟ್ಟಿಯ ಕಟ್ಟಿ, ತಿಗುರನೇ
ರಿಸಿಕೊಂಬೆ. ಗುರು ಕಳನನೇರಿ ಕಠಾರಿಯ ಕೊಂಡಲ್ಲಿ ಹೋಯಿತ್ತಾಗಳೆ
ಎಂದಡೆ, ಎನ್ನ ನಿನ್ನಲ್ಲಿ ನೋಡು ಕೂಡಲಸಂಗಮದೇವ.

೧೨. ಶರಣರೊಡನೆ ಶ್ರವವ ಮಾಡಿ ಮಾರುಗೋಲ ಬಿಡುವೆನಯ್ಯ. ತಾಕಲಿ, ತಪ್ಪಲಿ. ಗೆಲವೆನ್ನದೆಂಬೆನಯ್ಯ. ಕಳದಿಂದ ಕಡೆಗಳ ಕ್ಕೋಡಿಸುವೆ ಕೂಡಲಸಂಗಯ್ಯ.

೧೩. ಎಲೆ ಗಂಡುಸೇ, ನೀ ಕೇಳಾ. ಎನಗೊಬ್ಬ ಗಂಡನುಂಟೆಂದು ಗುಂಗಂಡುಡಿಗೆಯನುಟ್ಟೆ. ಮತ್ತೊಮ್ಮೆ ಆನು ಗಂಡಪ್ಪೆನಯ್ಯ. ಮತ್ತೊಮ್ಮೆ ಆನು ಹೆಣ್ಣಪ್ಪೆನಯ್ಯ. ಕೂಡಲಸಂಗಮದೇವ ನಿನಗೆ ವೀರನಪ್ಪೆ. ನಿಮ್ಮ ಶರಣರಿಗೆ ವಧುವಪ್ಪೆ.

ಮಹೇಶ್ವರನ ಭಕ್ತ.

೧. ಕಟ್ಟುವೆನುಪ್ಪರ ಗುಡಿಯ, ಜಗವರಿಯೆ. ಮಾಡುವೆನೆನ್ನ ಕಾಯ ಕೆಡುವನ್ನಕ್ಕ. ಬೇಡುವುದೆನ್ನ ತನುಮನಧನವ. ಬೇಡಲಾರದ ಹಂದೆ ನೀ ಕೇಳಾ. ಈ ಬಿರಿದು ಸಂದಿತ್ತು ಕೂಡಲಸಂಗಮದೇವ.

೨. ಹುಟ್ಟುತ್ತ ದ್ರವ್ಯವನರಿಯದವಂಗೆ ವಶ್ಯರ್ಯವಂತ ಮಗನಾದರೆ, ಲಕ್ಷ ಸಂಖ್ಯೆಯ ಹಿರಣ್ಯವ ತಂದು ಸಂತೋಷಪಡಿಸುವಂತೆ, ಕಾಳಗದ ಮುಖವಾವುದೆಂದರಿಯದ ಹಂದೆ ನೃಪಂಗೆ ಒಬ್ಬ ಕ್ಷತ್ರಿಯನಹ ಕುಮಾರ ಹುಟ್ಟಿ, ಕೆಗ್ಗಡಲ ರಕ್ತದ ಹೊನಲಲ್ಲಿ ಕಡಿದು ಮುಳುಗಾಡುವ ಕೊಳಗುಳವ ಕಂಡು ಪರಿಣಾಮಿಸುವಂತೆ, ಆನು ಪರಿಣಾಮಿಸುವೆನಯ್ಯ ಕೂಡಲಸಂಗಮದೇವಾ ನೀವು ಬಂದೆನ್ನ ಬೇಡಿದರೆ.

೩. ಅರ್ಥವನರ್ಥವ ಮಾಡಿ ಕೋಳಾಹಳಂಗೈವುತ್ತಿರಲಿ. ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿವುತ್ತಿರಲಿ. ಮುಟ್ಟಿದ ಸ್ತ್ರೀಯ, ಕಣ್ಣ ಮುಂದೆ ಅಭಿಮಾನಂಗೊಂಡು, ನೆರೆವುತ್ತಿರಲಿ. ಇಂತೀ ತ್ರಿವಿಧವು ಹೊರಗಣವು, ಇನ್ನೆನ್ನಂಗದ ಮೇಲೆ ಬರಲಿ. ಹಿಡಿಖಂಡವ ಕೊಯ್ಯಲಿ. ಇಕ್ಕುವ ಶೂಲ ಪ್ರಾಪ್ತಿಸಲಿ. ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತಿರಲಿ. ಮತ್ತೆಯೂ ಲಿಂಗಾರಾಧನೆಯ ಮಾಡುವೆ. ಜಂಗಮಾರಾಧನೆಯ ಮಾಡುವೆ. ಪ್ರಸಾದಕ್ಕೆ ತಪ್ಪೆ. ಇಂತಪ್ಪ ಭಾಷೆ ಕಿಂಚಿತು ಹುಸಿಯಾದರೆ ನೀನಂದೇ ಮೂಗ ಕೊಯ್ಯ ಕೂಡಲಸಂಗಮದೇವ.

೪. ತನುವ ಬೇಡಿದಡೀವೆ. ಮನವ ಬೇಡಿದಡೀವೆ. ಧನವ ಬೇಡಿದಡೀವೆ. ಬೇಡು ಬೇಡಲೇ ಹಂದೇ. ಕಣ್ಣ ಬೇಡಿದಡೀವೆ. ತಲೆಯ ಬೇಡಿ

ದಡೀವೆ. ಕೂಡಲಸಂಗಮದೇವ ನಿಮಗಿತ್ತು ಶುದ್ಧನಾಗಿಪ್ಪೆ ನಿ
ಪುರಾತರ ಮನೆಯಲ್ಲಿ.

೫. ನಾನು ಆರಂಬವ ಮಾಡುವೆನಯ್ಯ ಗುರುಪೂಜೆಗೆಂದು. ನಾ
ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು. ನಾನು ಪರಸೇವೆ
ಮಾಡುವೆನಯ್ಯ ಜಂಗಮದಾಸೋಹಕ್ಕೆಂದು. ನಾನಾವಾವ ಕರ್ಮಂ
ಮಾಡಿದಡೆಯೂ, ಆ ಕರ್ಮ ಫಲಭೋಗವ ನೀ ಕೊಡುವೆ ಎಂಬ
ನಾನು ಬಲ್ಲೆನು. ನೀ ಕೊಟ್ಟ ದ್ರವ್ಯವ ನಿಮಗಲ್ಲದೆ, ಮತ್ತೊಂದು ಕ್ರಿ
ಮಾಡೆನು. ನಿಮ್ಮ ಸೊಮ್ಮು ನಿಮಗೆ ಸಲಿಸುವೆನು ನಿಮ್ಮಾಣೆ ಕೂಡ
ಸಂಗಮದೇವ.

೬. ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತ, ಎನ್ನ ಒಡಲಿಂಗೆ ಎ
ಒಡವೆಗೆ ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದರೆ, ಎನ್ನ ಮನ
ವನವೇ ಸಾಕ್ಷಿ. ಆಶನೇ ಶಯನೇ ಯಾನೆ ಸಂಪರ್ಕೇ ಸಹಭೋಜನೆ
ಸಂಚರಂತಿ ಮಹಾ ಘೋರೆ ನರಕೇ ಕಾಲಮುಕ್ಷಯಂ॥ ಎಂಬ ಶ್ರುತಿ
ಬಸವಣ್ಣನೋದುವನು. ಭವಿಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿದ
ಒಲ್ಪೆಸಿಹನೆಂದು ನುಡಿವರಯ್ಯ ಪ್ರಮಥರು. ಕೊಡುವೆನುತ್ತರವನವರಿ
ಕೂಡಲಮ್ಮ. ಹೂಲೆಹೊಲಿಯರ ಮನೆಯ ಹೊಕ್ಕಾದರೆಯೂ ಸಲಿ
ಕೂಲಿಯ ಮಾಡಿಯಾದರೆಯೂ, ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒ
ಲವಸಂಕ್ಕೆ ಕುದಿದೆನಾದರೆ, ತಲೆದಂಡ ಕೂಡಲಸಂಗಮದೇವಾ.

೭. ದೇವದೇವ, ಬಿನ್ನಪವ ಅನಧಾರು. ವಿಪ್ರ ಮೊದಲು ಅಂ
ಜಕಡೆಯಾಗಿ ಶಿವಭಕ್ತರಾದವರೆನ್ನೆಲ್ಲರನೊಂದೇ ಎಂಬೆ. ಹಾರುವ ಮೊದ
ಶ್ವಪಚ ಕಡೆಯಾಗಿ, ಭವಿಯಾದವರನೊಂದೇ ಎಂಬೆ. ಈ ಹೀಗೆಂ
ನಂಬುವುದೆನ್ನ ಮನವು. ಈ ನುಡಿವ ನುಡಿಯೊಳಗೆಳ್ಳ ಮೊನೆಯಷ್ಟ
ಸಂದೇಹವುಳ್ಳರೆ, ಹಲ್ಲುದೋರ ಮೂಗ ಕೊಯ್ಯಿ ಕೂಡಲಸಂಗಮದೇ

೮. ಒಲ್ಲೆನಯ್ಯಾ ಒಲ್ಲೆನಯ್ಯಾ ನಿಮ್ಮವರಲ್ಲದವರ ಒಲ್ಲೆನಯ
ಜಗವೆಲ್ಲರಿಯಲು ಒಲ್ಲೆನಯ್ಯ ಒಲ್ಲೆನಯ್ಯ. ನೀ ಮುನಿದರೆ, ಮುನಿ. ಕೂ
ಲಸಂಗಮದೇವ, ನಿಮ್ಮಾಣೆ ನಿಮ್ಮ ಪ್ರಮಥರಾಣೆ.

೯. ಆದಿಯಲಾಗಲಿ, ವೇದದಲಾಗಲಿ, ಶಾಸ್ತ್ರದಲಾಗಲಿ, ಸ
ಯದಲಾಗಲಿ, ಎನ್ನವರೆನ್ನನು, ಎನ್ನವರೆನ್ನನು. ಎನ್ನವರೆಂದರೆ ಸಂ

ನಿಮ್ಮಲ್ಲಿಗೆ ದೂರ. ಎನ್ನವರಾದರೆ ಜನ್ಮಕ್ಕೆ ನಡೆವರೆ? ಎನ್ನವರಲ್ಲ ಕೂಡಲ ಸಂಗಮದೇವ ನಿಮ್ಮಾಣೆ.

೧೦. ಅಣ್ಣ ತಮ್ಮ ಹೆತ್ತಪ್ಪ ಗೋತ್ರವಾದಡೇನು? ಲಿಂಗಸಾಹತ್ಯ ವಿಲ್ಲದವರ ಎನ್ನವರೆನ್ನೆನಯ್ಯಾ. ನಂಟು ಭಕ್ತಿ ನಾಯಕ ನರಕ ಕೂಡಲ ಸಂಗಮದೇವ.

೧೧. ಒಡೆಯರಿಲ್ಲದ ಮನೆಯ ತಡುಗುಣಿ ನಾಯಿ ಹೊಗುವಂತೆ, ನೀನಿಲ್ಲದವರ ಮನೆಯನು ಹೊಗೆನು. ಸಂಗಯ್ಯ ಶ್ವಪಚೋಪಿಗಳಾಗಲಿ, ಕೂಡಲಸಂಗಯ್ಯ ನೀನಿದ್ದವನೇ ಕುಲಜನು.

೧೨. ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ ನ್ರಥಾ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ. ಹಾರುವೆನಯ್ಯ ಭಕ್ತರ ಬರವ ಗುಡಿಗಟ್ಟಿ. ಹಾರುವೆನಯ್ಯ ಶರಣರ ಬರವ ಗುಡಿಗಟ್ಟಿ. ಕೂಡಲಸಂಗಮದೇವನು ವಿಪ್ರ ಕರ್ಮವ ಬಿಡಿಸಿ ಅಶುದ್ಧನ ಶುದ್ಧನ ಮಾಡಿದನಾಗಿ.

೧೩. ವೇದಕ್ಕೆ ಒರೆಯ ಕಟ್ಟುವೆ. ಶಾಸ್ತ್ರಕ್ಕೆ ನಿಗಳವನಿಕ್ಕುವೆ. ತರ್ಕದ ಬೆನ್ನ ಬಾರನೆತ್ತುವೆ. ಆಗಮದ ಮೂಗ ಕೊಯ್ವ ನೋಡಯ್ಯ. ಮಹಾದಾನಿ ಕೂಡಲಸಂಗಮದೇವ, ಮಾದರ ಚನ್ನಯ್ಯನ ಮನೆಯ ಮಗ ನಾನಯ್ಯ.

೧೪. ಆವ ಕುಲವಾದರೇನು, ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೇ ಶರಣರಲ್ಲಿ ಜಾತಿಸಂಕರನಾಬಳಿಕ? ಶಿವೇಜಾತ ಕುಲೇ ಧರ್ಮ ಪೂರ್ವಜನ್ಮ ವಿವರ್ಜಿತಂ। ಉಮಾ ಮಾತಾಪಿತಾ ರುದ್ರ ಈಶ್ವರಃ ಕುಲಮೇವಚ ॥ ಎಂದುದಾಗಿ, ಒಕ್ಕುದ ಕೊಂಬೆನವರಲ್ಲಿ ಕೂಸ ಕೊಡುವೆ. ಕೂಡಲಸಂಗಮದೇವ ನಂಬುವೆ ನಿಮ್ಮ ಶರಣರನು.

೧೫ ಕಳ್ಳ, ಬಂದಿಕಾರ, ಹಾವಡಿಗ, ಹಾದರಿಗ, ಬಂಟನೋಲೆ ಯಕಾರನೆಂದೆನಾದರೆ, ನೀ ಮುಂತಾಗಿ ಬಂದ ಭಕ್ತರ ನೀನೆಂದೆನ್ನದಿರ್ದಿರೆ, ಅದೇ ದ್ರೋಹ. ನಡೆನುಡಿ ಹುಸಿಯುಂಟಾದರೆ, ಕೂಡಲಸಂಗನ ತೋರಿದ ಚನ್ನಬಸವಣ್ಣನಾಣೆ.

೧೬. ಎಡದ ಕಯ್ಯಲಿ ಕತ್ತಿ, ಬಲದ ಕಯ್ಯಲಿ ಮಾಂಸ, ಬಾಯಲಿ ಸುರೆಯ ಗಡಿಗೆ, ಕೊರಳಲಿ ದೇವರಿರಲು ಅವರ ಲಿಂಗವೆಂಬೆ, ಸಂಗ ವೆಂಬೆ. ಕೂಡಲಸಂಗಮದೇವ ಅವರ ಮುಖಲಿಂಗಿಗಳೆಂಬೆನು.

೧೭. ಗುಮ್ಮಡಿಯಂತಪ್ಪ ತಾಯಿ ನೋಡೆನಗೆ. ಕಲಕೇತನಂತಪ್ಪ ತಂದೆ ನೋಡೆನಗೆ. ಮೋಟನಂತಪ್ಪ ಗಂಡ ನೋಡೆನಗೆ. ಮರಗಾಲಲ ಟ್ಟಟ್ಟ ಸದೆದು ನೋಡಯ್ಯ. ಇಂದೆನ್ನ ಒಗತನ ಹೋದರೆ, ಹೋಗಲಿ. ಮರಗಾಲ ಬಿಟ್ಟರೆ, ಕೂಡಲಸಂಗಾ ನಿಮ್ಮಾಣೆ.

೧೮. ತನುವ ಬಂದಲಿವರಯ್ಯ. ಎನ್ನ ಮನವ ಬಂದು ನೋಡುವ ರಯ್ಯ. ಎನ್ನ ಧನವ ಬಂದು ಸೂರೆಗೊಂಬರಯ್ಯ. ಜಂಗಮ ಅನವರತ. ಕೂಡಲಸಂಗಮದೇವ, ನಿಮ್ಮ ಬಯಕೆಯ ಭಂಡಾರಕ್ಕೆ ನಾನು ಶುದ್ಧನಯ್ಯ.

೧೯. ಒಡೆಯರೊಡನೆಯ ಕೊಂಡರೆ ಕಳ್ಳಂಗಳಲಾಯಿತ್ತೆಂಬ ಗಾದೆ ಎನಗಾಯಿತ್ತಯ್ಯ. ಇಂದೆನ್ನ ಪಧುವ ನಾಳೆನ್ನ ಧನವ ನಾಡಿದೆನ್ನ ತನುವ ಬೇಡಿದೇಕಯ್ಯ? ಕೂಡಲಸಂಗಮದೇವ ಅನು ಮಾಡಿದುದಲ್ಲದೆ ಬಯಸಿದ ಬಯಕೆ ಸಲುವುದೇ ಅಯ್ಯ?

೨೦. ಕಲಿ ತರುಳ ತಕ್ಕೈಸಿ, ಹರಿಯ ಬಲ್ಲನಲ್ಲದೆ, ಸಾಯಕಾದಿಸುವರೇ? ಎಡೆಗೋಲನಿಕ್ಕುವರೆ? ದಾತಾರನಧೀನವಲ್ಲದೆ ಕೂಡಲಸಂಗಮದೇವ, ನೀ ಮಾಡಿದಂತಹುದಯ್ಯ. ತನುಮನಧನದಲ್ಲಿ ವಂಚನೆಯನು ಬಯಿಸಿದರೆಂತಹುದಯ್ಯ?

೨೧. ಬಾಲಭ್ಯಸವ ಮಾಡಹೋದರೆ, ಎನ್ನ ಸುರಿಗಿ ಎನ್ನ ನಟ್ಟತ್ತು ಎಂತಯ್ಯ. ಕಲಿಯೊಡನೆ ಶ್ರವವ ಮಾಡುವೆನು. ರಾಯರಾಜ ಗುರು ಜಗದ ಬಿನ್ನಾಣಿಯ ತೊಡಕ ಬಿಡಿಸಬಾರದು. ಸರಸದ ಮೇಲೆ ಹಿಡಿಯ ಹೋದರೆ ಚದುರಂಗದ ಮೇಲೆ ಮಸಿಯ ತೋರಿದ ಕೂಡಲಸಂಗಮದೇವಾ.

೨೨. ಸಮಚಿತ್ತವೆಂಬ ನೇಮದ ಹಲಿಗೆಯ ಹಿಡಿದು ಶಿವಚಿತ್ತವೆಂಬ ಕೂರಲಗ ಕೊಂಡು ಶರಣಾರ್ಥಿಯೆಂಬ ಶ್ರವಗಲಿತಡೆ, ಆಳುತನಕ್ಕೆ ದಿಸೆಯಪ್ಪೆ ನೋಡಾ. ಮಾರಾಂಕ ಜಂಗಮ ಮನೆಗೆ ಬಂದಲ್ಲಿ ಇದಿರಿದ್ದು ನಡೆವುದು. ಕೂಡಲಸಂಗಮದೇವನನೊಲಿಸುವೋಡಿದು ಚನ್ನ.

೨೩. ಅಟ್ಟಾಟಿಕೆಯ ಮಾತನಾಡಲದೇಕೋ? ಮುಟ್ಟಿ ಬಂದುದ ಕ್ಕಂಜಲದೇಕೋ? ಕಾದಿದಲ್ಲದೆ ಮಾಣೆನು. ಓಡಿದರೆ ಭಂಗ ಹಿಂಗದಾಗಿ ಕೂಡಲಸಂಗಮದೇವ, ಎನ್ನ ಭಂಗ ನಿಮ್ಮದಾಗಿ.

೨೪. ಲಿಂಗಕ್ಕಲ್ಲದೆ ಮಾಡಿನೀ ಮನವನು. ಜಂಗಮಕ್ಕಲ್ಲದೆ ಮಾಡಿನೀ ಧನವನು. ಪ್ರಸಾದಕ್ಕಲ್ಲದೆ ಮಾಡಿನೀ ತನುವನು. ಲಿಂಗಜಂಗಮದ ಪ್ರಸಾದಕ್ಕಲ್ಲದೆ ಬಾಯ್ದೆರೆಯದೆಂಬುದೆನ್ನ ಭಾಷೆ. ಅನರ್ಪಿತವಾದರೆ ತಪ್ಪೆನ್ನದು ವೂಗ ಕೊಯಿ ಕೂಡಲಸಂಗಮದೇವ.

ಮಾಹೇಶ್ವರನ ಪ್ರಸಾದಿ.

೧. ಅಂಕ ಕಂಡ ಕೋಲಾಸೆ ಮತ್ತೇಕಯ್ಯ? ಲಿಂಕ ಕಂಡ ಪ್ರಾಣದಾಸೆ ಮತ್ತೇಕಯ್ಯ? ಭಕ್ತ ಕಂಡ ತನುಮನದಾಸೆ ಮತ್ತೇಕಯ್ಯ? ನಿಮ್ಮಂಕೆಗೆ ಝಂಕೆಗೆ ಶಂಕಿತನಾದರೆ, ಎನ್ನ ಲಿಂಕತನಕ್ಕೆ ಹಾನಿ ಕೂಡಲಸಂಗಮದೇವ.

೨. ನೀನಿರಿಸಿದ ಮನದಲ್ಲಿ ನಾನಂಜೆನಯ್ಯ, ಮನವು ಮಹಾ ಘನಕ್ಕೆ ಶರಣುಗತಿಪೊಕ್ಕುದಾಗಿ. ನೀನಿರಿಸಿದ ಧನದಲ್ಲಿ ನಾನಂಜೆನಯ್ಯ ಧನವು ಸತಿಸುತ ಮಾತಾಪಿತರಿಗೆ ಹೋಗದಾಗಿ. ನೀನಿರಿಸಿದ ತನುವಿನಲ್ಲಿ ನಾನಂಜೆನಯ್ಯಾ, ತನುವು ಸರ್ವಾರ್ಪಿತದಲ್ಲಿ, ನಿಯತ ಪ್ರಸಾದ ಭೋಗಿಯಾಗಿ. ಇದು ಕಾರಣ ವೀರಧೀರ ಸಮಗ್ರನಾಗಿ, ನಿಮಗಾನಂಜೆ ಕೂಡಲಸಂಗಮದೇವ.

೩. ಹೆಲ್ಲು ಹೆತ್ತಿ ನಾಲಿಗೆ ಹೊರಳದಿದ್ದಲ್ಲಿ ಮನವೆರಡಾದರೆ ಆಣೆ ನಿಮ್ಮಾಣೆ ಮಾತುವ ನೇಮಕ್ಕೆ ಛಲವಿಲ್ಲದಿದ್ದರೆ ಆಣೆ ನಿಮ್ಮಾಣೆ. ಕೂಡಲಸಂಗಮದೇವ ಎನ್ನ ವಚನವ ನೋಡಲೆಂದಟ್ಟದರೆ, ಪ್ರಸಾದವಲ್ಲದೆ ಕೊಂಡರೆ ಆಣೆ ನಿಮ್ಮಾಣೆ.

೪. ಹೊಕ್ಕಲ್ಲಿ ಹೊಕ್ಕು, ನಿಮ್ಮೊಕ್ಕುದನುಂಬುವನ ಕುಲವೇನೋ ದೇವ? ನೀನೊಲಿದವನ, ಸ್ವಾಮಿ, ನೀ ಹಿಡಿದವನ ಕುಲವೇನೋ? ಕುಲಕ್ಕೆ ತಿಲಕ ನಮ್ಮ ಮಾದರ ಚನ್ನಯ್ಯ ನಿಮ್ಮಿಂದಧಿಕ ಕೂಡಲಸಂಗಮದೇವ.

೫. ಹುಟ್ಟದ ಮಕ್ಕಳೆಲ್ಲ ಅರ್ಥಪ್ರಾಣಾಭಿಮಾನಕ್ಕೆ ಒಡೆಯರಾದ ಪರಿಯ ನೋಡಾ. ಅಟ್ಟಡಿಗೆಯ ವಿಷವನು ನಿಮಗೆ ಕೊಟ್ಟಲ್ಲದೆ ಉಣ್ಣೆನೆಂಬ ಭಾಷೆ. ಕೂಡಲಸಂಗಮದೇವಯ್ಯ ನಿನಗೆಂದು ಅಟ್ಟ ಅಡಿಗೆಯ ನೀಡ ಕಲಿಸಿದಾತ ಕೆಂಭಾವಿಯ ಭೋಗಯ್ಯ.

೧೦. ಈಶ್ವರ ಸದ್ಭಾವೇ ಕಿಂ ಪ್ರಮಾಣಮೆಂಬ ಮೀಮಾಂಸಕನ ಮೂಗಿನ ಕೊನೆಯನು ವಿಶ್ವತೋ ಚಕ್ಷುರುತ, ವಿಶ್ವತೋ ಮುಖ, ವಿಶ್ವತೋ ಬಾಹುರುತ, ವಿಶ್ವತಃ ಸ್ಯಾತ್ ಸ ಬಾಹುಭ್ಯಾಂ ದಮತಿ ಸಂಪದ ದ್ಯಾವಾ ಭೂಮಿಜನಯಂ ದೇವ ಏಕ ಏವ ಎಂಬ ಸುರಿಗೆಯಲಿ ಅರಿದು, ವೈಶೇಷಿಕನೆಂಬ ಇಟ್ಟಗೆಯಲೊರಿಸಿ, ಕೂಡಲಸಂಗಯ್ಯನೆಂಬ ಕನ್ನಡಿಯ ತೋರುವೆನು.

೧೧. ಪಂಚ ಬ್ರಹ್ಮವ ಕೆಡಿಸಿತ್ತು. ಪ್ರಣವ ಮಂತ್ರವನೀಡಾಡಿತ್ತಲ್ಲಾ. ಕರ್ಮಂಗಳನೆ ಕಳೆಯಿತ್ತು. ಕ್ರಿಯೆಗಳನೆ ಮೀರಿತ್ತಲ್ಲಾ. ಅಗಮದ ಹಲ್ಲನೆ ಕಳೆಯಿತ್ತು ಕೂಡಲಸಂಗಯ್ಯನ ಭಕ್ತಿಗಜ ಹೋ.

೧೨. ವೇದ ನಡನಡುಗಿತ್ತು ಶಾಸ್ತ್ರವಗಲಿ ಕೆಲಕ್ಕೆ ಸಾರಿದುದಯ್ಯ. ತರ್ಕ ತರ್ಕಿಸಲರಿಯದೆ ಮೂಗವಟ್ಟಿದ್ದಿತಯ್ಯ. ಆಗಮ ಹೊರತೊಲಗಿ ಅಗಲಿದ್ದಿತಯ್ಯ, ನಮ್ಮ ಕೂಡಲಸಂಗಯ್ಯನು ಚನ್ನಯ್ಯನ ಮನೆಯ ಲುಂಡ ಕಾರಣ.

೧೩. ಚಿಕ್ಕದೊಂದು ಹೊತ್ತಿಗೆ ಬೆನಕನ ಕರಡಿಗೆಯಯ್ಯ! ನೀಡುಂಡುಟ್ಟ ಗೊರವನಯ್ಯ! ಪುಣ್ಯವೇನಾದಂಗಲಿ, ಫಕ್ಕೆಯ ಮೇಲೆ ಅಕ್ಕಿಯ ತಳೆದನು. ನಮ್ಮ ಕೂಡಲಸಂಗಮದೇವನಲ್ಲದೆ ಅನ್ಯ ದೈವ ಉಂಟೆನ ದಿರು ಕಂಡೆಯಾ.

೧೪. ನೀನಲ್ಲದನ್ಯ ದೈವ ಉಂಟೆಂಬವನ ಬಾಯ ಕೆನ್ನೆವಾರೆ ಬೀಳದಲ್ಲದೆ, ಎನ್ನ ಮುನಿಸು ಹೋಗದಯ್ಯ. ಎನ್ನ ಕೋಪವಡಗದಯ್ಯ. ಎನ್ನ ಬಿನ್ನಪವನವಧರಿಸು ಕೂಡಲಸಂಗಮದೇವ.

೧೫. ಆರು ಮುನಿದು ಎಮ್ಮನೇನ ಮಾಡುವರು? ಊರು ಮುನಿದು ಎಮ್ಮನೆಂತು ಮಾಡುವರು? ನಮ್ಮ ಕುನ್ನಿಗೆ ಕೂಸ ಕೊಡಬೇಡ. ನಮ್ಮ ಸೊಣಗಂಗೆ ತಳಿಗೆಯಲಿಕ್ಕ ಬೇಡ. ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ, ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?

೧೬. ನ್ಯಾಯ ನಿಷ್ಠುರ, ದಾಕ್ಷಿಣ್ಯಪರ ನಾನಲ್ಲ. ಲೋಕವಿರೋಧಿ ಶರಣನಾರಿಗಂಜುವನಲ್ಲ ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ.

೧೭. ಊರ ಮುಂದೆ ಹಾಲಹಳ್ಳ ಹರಿಯುತ್ತಿರಲಿ. ವಾಳಿಯೂವಿನ ಬೆನ್ನ ಹರಿಯಲದೇಕಯ್ಯ? ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ಕೂಡಲಸಂಗಮದೇವಯ್ಯನುಳ್ಳನ್ನಕ್ಕ ಬಿಜ್ಜಳನ ಭಂಡಾರವೆನಗೇಕಯ್ಯ?

೧೮. ಹೋಗ ಬಿಟ್ಟು, ಮರಳಿ ಹಿಂದೆ ನೋಡಿ, ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ, ಅದೇ ಪರದಾರ. ನಾಯಕ ನರಕ ತಪ್ಪದು. ಅನ್ಯ ವಧುವೆಂಬುದು ನಿಮ್ಮ ರಾಣಿವಾಸ. ಇದೇ ದಿಟ್ಯ ಕೂಡಲಸಂಗಮದೇವ.

೧೯. ಕಂಡುದಕ್ಕೆಳಸೆನೆನ್ನ ಮನದಲ್ಲಿ. ನೋಡಿ ಸೋಲೆನೆನ್ನ ಕಂಗಳಲ್ಲಿ. ಆಡಿ ಹಸಿಯೆನೆನ್ನ ಜಿಹ್ವೆಯಲ್ಲಿ. ಕೂಡಲಸಂಗಮದೇವ ನಿಮ್ಮ ಶರಣನ ಪರಿ ಇಂತುಟಯ್ಯ.

೨೦ ಆಪ್ಯಾಯನಕ್ಕೆ ನೀಡುವೆ. ಲಾಂಛನಕ್ಕೆ ಶರಣೆಂಬೆ. ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ, ಕೂಡಲಸಂಗಮದೇವ ನೀ ಸಾಕ್ಷಿಯಾಗಿ ಛೇ ಎಂಬೆ.

೨೧. ಮಾಡುವ ನೀಡುವ ಭಕ್ತನ ಕಂಡರೆ, ನಿಧಿನಿಧಾನವ ಕಂಡಂತಾಯಿತ್ತು. ಪಾದೋದಕ ಪ್ರಸಾದ ಜಿಹ್ವೆಯ ಕಂಡರೆ, ಹೋದ ಪ್ರಾಣ ಬಂದಂತಾಯಿತ್ತು. ಅನ್ಯರ ಮನೆಗೆ ಹೋಗಿ, ತನ್ನ ಉದರವ ಹೊರೆಯದ ಅಚ್ಚ ಶರಣರ ಕಂಡರೆ, ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆ.

೨೨. ಗುರು ಭಕ್ತಿಯ ಮಾಡಬಹುದಲ್ಲದೆ, ಲಿಂಗ ಭಕ್ತಿಯ ಮಾಡಬಾರದು. ಲಿಂಗ ಭಕ್ತಿಯ ಮಾಡಬಹುದಲ್ಲದೆ, ಜಂಗಮಭಕ್ತಿಯ ಮಾಡಬಾರದು. ಜಂಗಮ ಭಕ್ತಿಯ ಮಾಡಬಹುದಲ್ಲದೆ, ಸಮಯ ಭಕ್ತಿಯ ಮಾಡಬಾರದು. ಸಮಯ ಭಕ್ತಿಯ ಮಾಡಬಹುದಲ್ಲದೆ, ಸಮಯಸಂತೋಷವ ಮಾಡಬಾರದು. ಇವೆಲ್ಲವ ಮಾಡಬಹುದಲ್ಲದೆ, ತನ್ನ ತಾನರಿಯಬಾರದು. ತನ್ನ ತಾನರಿದೆನೆಂಬ ಅಹಂಕಾರವುಳ್ಳರೆ, ನಿಮ್ಮವರಿಗೆ ದೂರ. ಎಲೆ ದೇವಾ ಅನ್ಯಕ್ಕೆ ಆಸೆಮಾಡಿದೆನಾದರೆ ನಿಮ್ಮಾಣೆ, ನಿಮ್ಮ ಪುರಾತರಾಣೆ ಕೂಡಲಸಂಗಮದೇವ.

೨೩. ದಾಸನಂತೆ ತವ ನಿಧಿಯ ಬೇಡುವನಲ್ಲ. ಚೋಳನಂತೆ ಹೊನ್ನ ಮಳೆಯ ಕರಸೆಂಬುವನಲ್ಲ. ಅಂಜದಿರು, ಅಂಜದಿರು. ಅವರಂದವ ನಾನಲ್ಲ. ಎನ್ನ ತಂದೆ ಕೂಡಲಸಂಗಮದೇವ ಸದ್ಭಕ್ತಿಯನೆ ಕರುಣಿಸೆನಗೆ.

೨೪. ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸಮರ್ಥರು. ಲಿಂಗದಲ್ಲಿ ಸೊಮ್ಮು ಸಂಬಂಧವನರಿತ ಸ್ವಾಮಿ ಭೃತ್ಯರೆಲ್ಲರು ನಿಮ್ಮ ಬೇಡನಂಜದಿರಿ. ಎನಗೆ ಮರ್ತ್ಯಲೋಕದ ಮಹಾಗಣಂಗಳಂಟು. ಇದು ಕಾರಣ ಕೂಡಲಸಂಗಮದೇವರ ಲೋಕವ ಹಂಚಿಕೊಳ್ಳಿ ನಿಮಗೆನಿಮಗೆ.

ಮಹೇಶ್ವರನ ಐಕ್ಯ.

೧. ಅಂದಂದಿನ ಹೊಂದಿಗೆಯ ಬಿಂದುಮಾತ್ರದಲಾದ ಅಂದವ ಕೆಡಿಸಲರಿಯದ ಅಂಧಕರ ನೋಡಾ. ಸಮರಸವಿಲ್ಲದೆ ನೆಂಹಿ ಮಾಡಿ ಭಕ್ತರಾದಿಹೆವೆಂಬವರನೇನೆಂಬೆ? ಆಚಾರ ವಂಚಕರ ಎನಗೆ ತೋರದಿರಾ. ಕೂಡಲಸಂಗಮದೇವ ನಿಮ್ಮ ಧರ್ಮ.

೨. ಕಲಿಯು ಕಯ್ಯ ಕೈದುವಿನಂತಿರಬೇಕಯ್ಯ. ಎಲುದೋರ ಸರ ಸವಾಡಿದರೆ ಸೈರಿಸಬೇಕಯ್ಯ. ರಣದಲ್ಲಿ ತಲೆ ಹರಿದು ನೆಲಕ್ಕೆ ಬಿದ್ದು ಬೊಬ್ಬಿಡಲನಕ್ಕೆ ಒಲಿವ ಕೂಡಲಸಂಗಮದೇವ.

೩. ಆಸೆ ರೋಷ ಹರುಷಾದಿಗಳೆಂಬ ಕರಣೇಂದ್ರಿಯವ ಮುಟ್ಟಲೀಯದೆ, ಆಚಾರವ ಶಿವಾಚಾರವ ನೂಡುವೆ. ಭಯಭಕ್ತಿಯಿಂದ ತೋರುವೆ ಮನದಲ್ಲಿ ವಂಚನೆ ಇಲ್ಲವೆ ಭಾವಶುದ್ಧ ಪೂಜೆಯ ಮಾಡುವೆ. ಎನ್ನ ಪ್ರಾಣಶಕ್ತಿಯಿಂದ ಕೂಡುವೆ ಕೂಡಲಸಂಗಮದೇವರ.

೪. ಪೂರ್ವಬೀಜ ವಾಯು ಪ್ರಾಣಿಯಲ್ಲ. ಲಿಂಗಪ್ರಾಣಿ ಶರಣನು. ಏಕೋಗ್ರಾಹಿ. ಭಾವ ಭೇದವಿಲ್ಲಾಗಿ ಮನ ಪ್ರವೇಶಿಯಾದ ಶರಣನು ನಿಮ್ಮನ ಪೂಜಿಸಿ, ತನುಧರ್ಮವ ನುರೆದು, ನಿಮ್ಮ ಪ್ರತಿಬಿಂಬದಂತಿಪ್ಪ, ಕೂಡಲಸಂಗಮದೇವ, ನಿಮ್ಮ ಶರಣನು.

ಪ್ರಸಾದಿಯ ಜ್ಞಾನ.

೧. ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯ. ತೃಪೆಯಾಯಿತ್ತೆಂದು ಮಜ್ಜನಕ್ಕೆರೆವರಯ್ಯ. ಹಸಿವು ತೃಷೆ ವಿಷಯಕ್ಕೆ ಬಳಲುವರಯ್ಯ. ಹಸಿವಾಯಿತ್ತೆಂದು ಅರ್ಪಿತವ ಮಾಡಲಿಲ್ಲ. ತೃಪೆಯಾಯಿತ್ತೆಂದು ಮಜ್ಜನಕ್ಕೆರೆಯಲಿಲ್ಲ. ಇದು ಕಾರಣ ಕೂಡಲಸಂಗಮದೇವರ ಪೂಜಿಸಿ ಪ್ರಸಾದವ ಹಡೆವರೊಬ್ಬರೂ ಇಲ್ಲ.

೨. ಮುತ್ತು ನೀರಲಿ ಹುಟ್ಟಿ ಮತ್ತೆ ನೀರಪ್ಪುದೆ? ಗುರು ಕಾರುಣ್ಯವ ಹಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದರೆ, ಗುರು ದ್ರೋಹ, ಲಿಂಗದ್ರೋಹ, ಜಂಗಮದ್ರೋಹ, ಆಚಾರದ್ರೋಹ, ಪ್ರಸಾದ ದ್ರೋಹ. ಇಂತೀ ಪಂಚಮಹಾ ಪಾತಕಂಗಳು ಭಕ್ತಂಗಲ್ಲದೆ ಭವಿಗೆಲ್ಲಿಯದೊ? ಗುರುವಿದು, ಲಿಂಗವಿದು, ಜಂಗಮವಿದು. ಆಚಾರವಿದು, ಪ್ರಸಾದವಿದು ಎಂದರಿಯದಿದ್ದರೆ ಕುಂಭೀ ಪಾಕ ನಾಯಕ ನರಕದಲ್ಲಿಕ್ಕುವ ಕೂಡಲಸಂಗಮದೇವ.

೩. ಸೂಳೆಗೆ ಮೆಚ್ಚಿ ಸೂಳೆಯ ಬಂಟರೆಂಜಲ ತಿಂಬುದೀ ಲೋಕ. ಆತಗ ಮೆಚ್ಚಿ ಸೊಣಗನೆಂಜಲ ತಿಂಬುದೀ ಲೋಕವೆಲ್ಲ. ಲಿಂಗವ ಮೆಚ್ಚಿ ಜಂಗಮ ಪ್ರಸಾದವ ಕೊಂಬುವರ ನೋಡಿ ನಗುವವರ ಕುಂಭೀಪಾತಕನಾಯಕ ನರಕದಲ್ಲಿಕ್ಕುವ ಕೂಡಲಸಂಗಮದೇವ.

೪. ಹೊಲೆಯುಂಟೀ ಲಿಂಗವಿದ್ದೆಡೆಯಲ್ಲಿ? ಕುಲವುಂಟೀ ಜಂಗಮವಿದ್ದೆಡೆಯಲ್ಲಿ? ಎಂಜಲುಂಟೀ ಪ್ರಸಾದವಿದ್ದೆಡೆಯಲ್ಲಿ? ಅಪವಿತ್ರದ ನುಡಿಯನುಡಿವ ಸೂತಕವೆ ಪಾತಕ. ನಿಷ್ಕಳಂಕ, ನಿಜೈಕ್ಯ, ತ್ರಿವಿಧ ನಿರ್ಣಯ ಕೂಡಲಸಂಗಮದೇವ ನಿಮ್ಮಶರಣರಿಗಿಲ್ಲದಿಲ್ಲ.

೫. ಬಾರದು ಬಾರದು ಭಕ್ತಂಗೆ ಪರಧನ, ಪರಸತಿ. ಬಾರದು ಬಾರದು ವಿಷಯಿಗೆ ಪಶುಪತಿ ವ್ರತವು. ಬಾರದು ಬಾರದು. ಭವಭಾರಿಗೆ ಕೂಡಲಸಂಗಮದೇವನ ಒಕ್ಕುದ ಕೊಳ್ಳಬಾರದು.

೬. ಹುತ್ತದ ಮೇಣ ರಜ್ಜು ಮುಟ್ಟಿದರೆ, ಸಾವರು ಶಂಕಿತರಾದವರು. ಸರ್ಪ ದಷ್ಟವಾದರೆಯೂ, ಸಾಯರು ನಿಶ್ಶಂಕಿತರಾದವರು. ಕೂಡಲಸಂಗಮದೇವಯ್ಯ ಶಂಕಿತಂಗೆ ಪ್ರಸಾದ ಸಿಂಗಿಕಾಳಕೂಟ ವಿಷವು.

೭. ನಂಬಿದರೆ ಪ್ರಸಾದ. ನಂಬದಿದ್ದರೆ ವಿಷವು. ತುಡುಕಬಾರದು ನೋಡಾ ಲಿಂಗನ ಪ್ರಸಾದ, ಸಂಗನ ಪ್ರಸಾದ. ಕೂಡಲಸಂಗನ ಪ್ರಸಾದ ಸಿಂಗಿ ಕಾಳಕೂಟ ವಿಷವು.

೮. ಪಂಡಿತನಾಗಲಿ ಮೂರ್ಖನಾಗಲಿ ಸಂಚಿತಕರ್ಮ ಉಂಡಲ್ಲದೆ ಬಿಡದು. ಪ್ರಾರಬ್ಧಕರ್ಮ ಭೋಗಿಸಿದಲ್ಲದೆ ಹೋಗವೆಂದು ಶ್ರುತಿ ಸಾರುತ್ತಿದ್ದಾವೆ ನೋಡಾ. ತಾನಾವಾವ ಲೋಕದೊಳಗಿದ್ದರೆಯೂ, ಬಿಡದು. ಕರ್ಮಫಲಗೂಡಿ ಕೂಡಲಸಂಗಮದೇವಂಗೆ ಆತ್ಮನೈವೇದ್ಯವ ಮಾಡಿದವನೇ ಧನ್ಯನು.

೯ ಒಲ್ಲೆನೆಂಬುದು ವೈರಾಗ್ಯ. ಒಲಿವೆನೆಂಬುದು ಕಾಯಗುಣ ಅವ ಪದಾರ್ಥವಾದರೇನು? ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೇ ಆಚಾರ. ಕೂಡಲಸಂಗಮದೇವನನೊಲಿಸ ಬಂದ ಪ್ರಸಾದಕಾಯವ ಕೆಡಿಸಲಾಗದು.

೧೦ ಒಪ್ಪವ ನುಡಿವಿರಯ್ಯ, ತುಪ್ಪವ ತೊಡೆದಂತೆ. ಶರಣ ತನ್ನ ಮರೆವನೇ ಬೆನ್ನಾಣಿಯಂತೆ? ಕೂಡಲಸಂಗನ ಪ್ರಸಾದದಿಂದ ಬದುಕುವನಲ್ಲದೆ, ತನ್ನ ಮೆರೆವನೇ?

೧೧ ಅರ್ಪಿತ ಅರ್ಪಿತವೆನುತಿಹಿರಿ. ಗುರುವಿಂಗೆ ಕೊಡುವುದು ಅರ್ಪಿತವೇ, ಸವಿ ಸವಿದು ಕೊಡಬೇಕಲ್ಲದೆ? ಅರ್ಪಿತ ಅರ್ಪಿತವೆನುತಿಹಿರಿ. ಲಿಂಗಕ್ಕೆ ಕೊಡುವುದು ಅರ್ಪಿತವೇ, ಸವಿ ಸವಿದು ಕೊಡಬೇಕಲ್ಲದೆ? ಅರ್ಪಿತ ಅರ್ಪಿತವೆನುತಿಹರೆಲ್ಲರು ಅರ್ಪಿತ ಮುಖವನರಿಯಿರಿ ನೋಡಾ. ಜಂಗಮಕ್ಕೆ ನೀಡಿ, ಜಂಗಮದ ಪ್ರಸಾದವ ಕೊಂಡರೆ, ನಿಮಗರ್ಪಿತ ಕಾಣಾ ಕೂಡಲಸಂಗಮದೇವ.

ಪ್ರಸಾದಿಯ ಪ್ರಸಾದಿ.

೧. ಗುರುಲಿಂಗಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು. ಆ ಭಾವವೇ ಮಹಾನುಭಾವವಾಗಿ, ಎನಗೆ ಬೇರೆ ಪ್ರಸಾದವೆಂಬುದಿಲ್ಲ ಕೂಡಲಸಂಗಮದೇವ.

೨. ದಾಸೋಹವೆಂಬ ಸೋಹಗೊಂಡು ಹೋಗಿ, ಗುರುವ ಕಂಡೆ, ಲಿಂಗವ ಕಂಡೆ, ಜಂಗಮವ ಕಂಡೆ, ಪ್ರಸಾದವ ಕಂಡೆ. ಇಂತೀ ಚತುರ್ವಿಧ ಸಂಪನ್ನನಾದೆ ಕಾಣಾ ಕೂಡಲಸಂಗಮದೇವಾ.

ಪ್ರಸಾದಿಯ ಭಕ್ತ.

೧. ಸಜ್ಜನ ಶರಣರ ಕಂಡು ಎನ್ನ ಮನ ಉಬ್ಬಿತ್ತು ನೋಡಿರಯ್ಯ. ಶ್ರೀಗುರುಪಾದವ ಹಿಡಿದು ಪಾವನವಾದೆನಯ್ಯ. ಪಾದೋದಕ ಪ್ರಸಾದದಿಂದ ಭವಗೆಟ್ಟೆನು ಕೂಡಲಸಂಗಮದೇವಾ.

೨. ಕವಿಯ ಸೂತಕ ಹೋಯಿತ್ತು, ಸದ್ಗುರುವಿನ ವಚನದಿಂದ. ಕಂಗಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ. ಕಾಯದ ಸೂತಕ ಹೋಯಿತ್ತು ನಿಮ್ಮ ಚರಣವ ಮುಟ್ಟಿದೆನಾಗಿ. ಬಾಯಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ. ನಾನಾ ಸೂತಕ ಹೋಯಿತ್ತು ನಿಮ್ಮ ಶರಣರನುಭಾವಿಯಾಗಿ ಕೂಡಲಸಂಗಮದೇವ ಕೇಳಯ್ಯ ಎನ್ನ ಮನದ ಸೂತಕ ಹೋಯಿತ್ತು ನೀವಲ್ಲದಲ್ಲೆಂದರಿದೆನಾಗಿ.

೩. ಲಿಂಗಪ್ರಸಾದಿಗಳಲ್ಲದವರ ಸಂಗ ಭಂಗವೆಂದುದು ಗುರುವಚನ. ಲಿಂಗಪ್ರಸಾದಿಗಳಲ್ಲದವರ ಸಂಗ ಪಂಚ ಮಹಾಪಾತಕವೆಂದುದು ಲಿಂಗವಚನ. ಅಶನೇ ಶಯನೇ ಯಾನೆ ಸಂಪರ್ಕೇ ಸಹಭೋಜನೇ। ಸಂಚರಂತಿ ಮಹಾ ಘೋರೇ ನರಕೇ ಕಾಲಮಕ್ಷಯಂ"॥ ಇಂತೆಂದುದಾಗಿ ಕೂಡಲಸಂಗಮದೇವ ನಿಮ್ಮ ಶರಣರಿಗೆ ಶರಣೆಂದು ಶುದ್ಧನಯ್ಯ.

೪. ಸುಯಿಧಾನವ ತಂಗು ನೀಡುವೆನಲ್ಲದೆ, ಸಂಬಂಧಿ ನಾನಲ್ಲಯ್ಯ. ಕರ್ತೃಂಗೆ ಭೃತ್ಯಾಚಾರವ ಮಾಡಿ ಒಕ್ಕುದ ಕೊಂಡಿಪ್ಪೆನಯ್ಯ. ಭೋಗಾದಿಭೋಗವ ಸಮನಾಗಿ ಭೋಗಿಸಲು ಅಘೋರ ನರಕದಲ್ಲಿಕ್ಕುವ ಕೂಡಲಸಂಗಮದೇವ.

೫. ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯ ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತ್ತೆಂಬೆನಯ್ಯ. ಪ್ರಸಿದ್ಧವ ಜಂಗಮಕ್ಕೆ ಕೊಟ್ಟು ಪ್ರಸಿದ್ಧವಾಯಿತ್ತೆಂಬೆನಯ್ಯ. ಗುರುಲಿಂಗ ಜಂಗಮವನೆ ಕರ್ತೃವನಾಗಿ ಕಾಣಲರಿಯದಿದ್ದರೆ, ಶುದ್ಧ ಸಿದ್ಧ ಪ್ರಸಿದ್ಧ ಒಡನೆ ನರಗತ್ತಿದ್ದಾವೆ. ತನುಮನಧನವ ನಿವೇದಿಸಲರಿಯರಾಗಿ, ಕೂಡಲಸಂಗನ ದೇವ ಒಲಿ ಎಂದೊಡೆಂತೊಲಿವ?

ಪ್ರಸಾದಿಯ ಮಹೇಶ.

೧. ಒಡಲ ಕಳವಳಕ್ಕೆ ಬಾಯ ಸವಿಗೆ ಬಯಸಿ ಉಂಡೆನಾದರೆ, ನಿಮ್ಮ ತೊತ್ತಿನ ಮಗನಲ್ಲ. ಬಿಡೆ ಬಿಡೆ ನಿಮ್ಮ ನಂಬಿದ ಸದ್ಭಕ್ತರ. ಅವರಿಕ್ಕುದನುಂಬೆ. ಅವರೆಂದಂತೆ ನಡೆವೆ. ಎನ್ನೊಡೆಯ ಕೂಡಲಸಂಗನ ದೇವನೊಲ್ಲದವರ ಹಿಡಿದೆನಾದರೆ ನಿಮ್ಮ ಪಾದದಾಣೆ.

೨. ಲಿಂಗಮುಖದಿಂದ ಬಂದ ಪ್ರಸಾದವನಲ್ಲದೆ ಕೊಂಡೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಲಿಂಗಾರ್ಪಿತವಲ್ಲದೆ ಉದಕನ ಮುಕಳಿಸಿದರೆ, ಸಲ್ಲೆನು ನಿಮ್ಮ ಗಣಾಚಾರಕಯ್ಯ ಲಿಂಗಾರ್ಪಿತವಲ್ಲದೆ ಹಸ್ತ ಕಡ್ಡಿಯ ಕೊಂಡರೆ ಬಲ್ಲೆ ಮುಂದೆ ಭವ ಘೋರ ನರಕವೆಂಬುದ. ನಿಮ್ಮ ಗೆತ್ತಿದ ಕರದಲ್ಲಿ ಮತೆತ್ತಿಂದಕ್ಕೆ ಕೆಯ್ಯಾನೆನು. ಅಳವರಿಯದೆ ನುಡಿದೆನ ಕಡೆಮುಟ್ಟಸಲೀಸದಿದ್ದಡೆ, ತಲೆದಂಡ ಕೂಡಲಸಂಗಮದೇವ.

ಪ್ರಸಾದಿಯ ಪ್ರಾಣಲಿಂಗಿ.

೧. ಮೌನದಲುಂಬುದು ಆಚಾರವಲ್ಲ. ಲಿಂಗಾರ್ಪಿತವ ಮಾಡಿ ಬಳಿಕ, ತುತ್ತಿಗೊಮ್ಮೆ ಶಿವಶರಣೆನುತ್ತಿರಬೇಕು. ಕರಣವೃತ್ತಿಗಳಡಗುವನ ಕೂಡಲಸಂಗನ ನೆನೆವುತ್ತ ಉಂಡರೆ.

೨. ಕಾಯದ ಕಯ್ಯಲು ಕರಣದ ಕಯ್ಯಲು ಪದಾರ್ಥವ ಹಿಡಿದು ನಿಮಗೆ ಕೊಡುವ ಭರದ ಭೀತಿಯಿಂದ ಆನರಿಯದಿಪ್ಪೆನಾಗಿ ಎನ್ನನು ಸರಿದು ಸಲಹುತಿಪ್ಪೆಯಯ್ಯ ಕೂಡಲಸಂಗಮದೇವ.

೩. ಆಳಕಾರನೆನಗೊಬ್ಬ ವಾಗ ಹುಟ್ಟಿದನೆಂದು ಆಳಿಕೆ ಕೆಡಿಸದೆ ನಡಿಸುವನವ್ವಯ್ಯ. ಪಂಚಭೂತ ಕಾಯವ ಭವಿ ಎಂದೆನಲೀಯ ಪ್ರಸಾದ ಕಾಯವ ಮಾಡಿ ಸಲಹುವನೆವ್ವಯ್ಯ ಆಳಿ ಸಾವಲ್ಲಿ ಆವನಿಯಾಗಿದ್ದರೆ ಆಳ್ದನು ನನ್ನ ಕೂಡಲಸಂಗಮದೇವ.

೪. ಶಿವಾಚಾರವೆಂಬುದೊಂದು ಬಾಳಬಾಯಿಧಾರೆ. ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು. ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು. ಬಿಚ್ಚಿ ಬೇರಾದರೆ, ಮೆಚ್ಚ ನಮ್ಮ ಕೂಡಸಂಗಮದೇವ.

ಪ್ರಸಾದಿಯ ಶರಣ.

೧. ತ್ರಿವಿಧ ಪ್ರಸಾದವೆಂದೆಂಬರು. ಅದೆಂತಹುದೋ? ಶುದ್ಧಪ್ರಸಾದ ಲಿಂಗದದು. ಸಿದ್ಧ ಪ್ರಸಾದ ಜಂಗಮದದು. ಪ್ರಸಿದ್ಧ ಪ್ರಸಾದ ಗುರುವಿನದು. ಇಂತೀ ತ್ರಿವಿಧ ಒಂದಾದವರ ತೋರಾ ಕೂಡಲಸಂಗಮದೇವ.

೨. ಆವಾವ ಭಾವದಲ್ಲಿ ಶಿವನ ನಂಬಿದ ಶರಣರು ಎಂತಿದ್ದರೇನಯ್ಯ? ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು ಎಂತಿದ್ದರೇನಯ್ಯ? ಸುಚರಿತ್ರರೆಂತಿದ್ದರೇನಯ್ಯ? ಅವಲೋಹವ ಕಳೆವ ಪರುಷವೆಂತಿದ್ದರೇನಯ್ಯ? ಕೂಡಲಸಂಗನ ಶರಣರು ರಸದ ವಾರುಧಿಗಳು ಎಂತಿದ್ದರೇನಯ್ಯ?

೩. ಉರೆ ತಾಗಿದ ವೃಗವು ಒಂದಡಿಯನಿಡುವುದೇ ಅಯ್ಯ? ತನುವ ತಾಗಿವ ಸುಖವು ಅಗಲುವದೇ ಆಯ್ಯ? ಕೂಡಲಸಂಗನ ಶರಣರ ಅನುಭಾವವರಿದವರ ಮರಳಿ ಮರ್ತ್ಯರೆಂದೆನಬಹುದೆ?

೪. ನಿಮ್ಮ ಶ್ರೀಪಾದವ ಮುಟ್ಟಿ ಕರ್ಮ ಹರಿಯಿತ್ತು. ನಿಮ್ಮ ಪ್ರಸಾದದಿಂದ ಭವಗಟ್ಟಿ ನೋಡಯ್ಯ. ಮನ ಪರುಷ, ದೃಷ್ಟಿ ಪರುಷ, ಭಾವ ಪರುಷ, ಲಿಂಗ ಗಣಂಗಳು. ಕೂಡಲಸಂಗಮದೇವ ನಿಮ್ಮ ಶರಣರನುಭಾವದಿಂದ ನಾನು ಸುಖಿಯಾದೆನು.

ಪ್ರಸಾದಿಯ ಐಕ್ಯ.

೧. ನಡೆ ಚನ್ನ, ನುಡಿ, ಚನ್ನ, ಎಲ್ಲಿ ನೋಡಿದಡೆ ಚನ್ನ, ಪ್ರಮಥರೊಳಗೆ ಚನ್ನ ಪುರಾತರೊಳಗೆ ಚನ್ನ. ಸವಿದು ನೋಡಿ ಅಂಬಲಿರುಚಿಯಾಯಿತ್ತೆಂದು ಕೂಡಲಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚನ್ನ.

೨. ಲಿಂಗ ವಿಕಾರಿಗೆ ಅಂಗ ವಿಕಾರವೆಂಬುದಿಲ್ಲ. ಜಂಗಮ ವಿಕಾರಿಗೆ ಧನವಿಕಾರವೆಂಬುದಿಲ್ಲ. ಪ್ರಸಾದ ವಿಕಾರಿಗೆ ಮನ ವಿಕಾರವೆಂಬುದಿಲ್ಲ. ಇಂತೀ ತ್ರಿವಿಧಗುಣವನರಿವಾತನು ಅಚ್ಚ ಲಿಂಗೈಕ್ಯನು ಕೂಡಲಸಂಗಮದೇವಾ.

ಪ್ರಾಣಲಿಂಗಿಯ ಜ್ಞಾನಿ.

೧. ಪ್ರಾಣಲಿಂಗ ಪ್ರತಿಗ್ರಾಹಕನಾದ ಬಳಿಕ ಲಿಂಗವಿರಹಿತವಾಗಿ ನಡೆವ ಪರಿ ಇನ್ನೆಂತೋ? ಲಿಂಗವಿರಹಿತನಾಗಿ ನುಡಿವ ಪರಿ ಇನ್ನೆಂತೋ? ಪಂಚೇಂದ್ರಿಯ ಸುಖವನು ಲಿಂಗವಿರಹಿತವಾಗಿ ಭುಂಜಿಸಲಾಗದು. ಲಿಂಗವಿರಹಿತವಾಗಿ ಉಗುಳ ನುಂಗಲಾಗದು. ಇಂತೆಂದುದು ಕೂಡಲ ಸಂಗನ ವಚನ.

೨. ಹತ್ತು ಸಾವಿರ ಗೀತವ ಹಾಡಿ ಆರ್ಥವಿಟ್ಟಲ್ಲಿ ಫಲವೇನು, ಮುಟ್ಟುವ ತೆರನನರಿಯದನ್ನಕ್ಕ? ಕಟ್ಟಿದರೇನು, ಬಿಟ್ಟರೇನು, ಮನವು ಲಿಂಗದಲ್ಲಿ ಮುಟ್ಟದನ್ನಕ್ಕ? ಮಾತಿನಲ್ಲಿ ಒಲಿಸಿ ಮಹತ್ತಪ್ಪ ಲಿಂಗವ ಕಂಡೆಹೆನೆಂಬ ಪಾತಕರ ಮೆಚ್ಚ ಕೂಡಲಸಂಗಮದೇವ.

೩. ಶ್ರೌತಜ್ಞಾನ ಗಜಜ್ಞಾನ ಕುಕ್ಕುಟಜ್ಞಾನವೆಂಬ ಜ್ಞಾನತ್ರಯ ಗಳೇನಾದವು? ಕೂಡಲಸಂಗಮದೇವಾ ನಿಮ್ಮನರಿಯದ ಜ್ಞಾನವೆಲ್ಲ ಅಜ್ಞಾನ.

೪. ಗುರು ತೋರಿದ ಲಿಂಗವು ಮನಸ್ಥಲವಾಗಿರಲು, ಪವನ ಭೇದ ದಿಂದ ಅರಿದಿಹೆನೆಂದರೆ, ಅದೇ ದ್ರೋಹ. ಈಡಾ ಪಿಂಗಳ ಸುಷುಮ್ನನಾಳ ವಿಡಿದು ಅರಿದಿಹೆನೆಂದರೆ, ಕೂಡಲಸಂಗನುದೇವ ಮೂಗ ಕೊಯ್ಯುದೆ ಮಾಬನೇ?

೫. ಕಬ್ಬುನ ಪರುಷ ವೇದಿಯಾದರೇನು? ಕಬ್ಬುನ ಹೊನ್ನಾಗ· ದೊಡೆ, ಪರುಷವದೇಕೋ? ಮನೆಯೊಳಗೆ ಕತ್ತಲೆಯ ಹರಿಯದೊಡೆ, ಆ ಜ್ಯೋತಿಯದೇಕೋ? ಕೂಡಲಸಂಗನುದೇವರ ಮನಮುಟ್ಟ ಪೂಜಿಸ ಕರ್ಮ ಹರಿಯದೊಡೆ, ಆ ಪೂಜೆಯದೇಕೋ?

೬. ಅಹಂಕಾರ ಮನವನಿಂಬುಗೊಂಡಲ್ಲಿ, ಲಿಂಗ ತಾನೆಲ್ಲಿಪ್ಪುದೋ? ಅಹಂಕಾರಕ್ಕೆ ಎಡೆಗುಡದೆ, ಲಿಂಗ ತನುವಾಗಿರಬೇಕು. ಅಹಂಕಾರ ರಹಿ ತನಾದಲ್ಲಿ ಸನ್ನಿಹಿತ ಕಾಣಾ ಕೂಡಲಸಂಗಮದೇವಾ.

೭. ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. ನುಡಿ

ದರೆ ಲಿಂಗ ಮೆಚ್ಚಿ ಅಹುದೆನಬೇಕು. ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ?

೮. ಮನದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿ ಕೊಂಡಿಪ್ಪನೊಬ್ಬ ದಾಸೋಹಿ. ಆದಿವಿಡಿದು ಬಂದಾತನೇ ಭಕ್ತನ. ಅನಾದಿ ವಿಡಿದು ಬಂದಾತನೇ ಜಂಗಮವು. ಆದಿಗುರು ಅನಾದಿಶಿಷ್ಯ. ಈ ಉಭಯ ಕುಳಸ್ಥಳವಬಲ್ಲರೆ, ಆತ ಲಿಂಗಸಂಬಂಧಿ ಕೂಡಲಸಂಗಮದೇವ.

೯. ಅರಿದರಿದು ಸಮಗಾಣಿಸಬಾರದು. ತ್ರಾಸಿನ ಕಟ್ಟಳೆಯಂತಿನಿತು ನಿತು ವೆಗ್ಗಳವಾದರೆ, ಈಶ್ವರನು ಒರೆಯಹಾಕದೆ ಮಾಣುವನೇ? ಪಾತ್ರೆ ಪಾತ್ರನೆಂದು ಕಂಡರೆ, ಶಿವನೆಂತು ಮೆಚ್ಚುವನು? ಜೀವಜೀವಾತ್ಮನ ಸರಿ ಎಂದು ಕಂಡರೆ, ಸಮವೇದಿಸದಿಪ್ಪನೇ ಶಿವನು? ತನ್ನ ಮನದಲ್ಲಿ ಯತ್ರ ಜೀವ ಸ್ತತ್ರ ಶಿವನೆಂದು, ಸರ್ವ ಜೀವದಯಾಪರಿಯಾದರೆ, ಕೂಡಲ ಸಂಗಮದೇವನು ಕೈಲಾಸದಿಂದ ಬಂದು ಎತ್ತಿಕೊಳ್ಳದಿಪ್ಪನೇ?

೧೦. ಸ್ಥಾವರ ಜಂಗಮವೆಂಬುಭಯ ಪಕ್ಷ ಒಂದೇ. ಆವ ಮುಖ ದಲು ಬಂದರೂ ತೃಪ್ತಿಯೊಂದೇ. ಕೂಡಲಸಂಗಮದೇವರ ಆಪ್ಯಾಯನ ಒಂದೇ.

೧೧. ಮುತ್ತು ಉದುಕದಲಾಗದು ಉದುಕ ಮುತ್ತಿನಲಾಗದು. ತತ್ವ ಘಟಿಸಿದ ಸುಮುಹೂರ್ತದಲಲ್ಲದೆ. ಚಿತ್ತವೇದ್ಯವಾಗದು ಸದ್ಗುರುವಿನ ಕರುಣಕಲ್ಲದೆ, ಕರ್ತು ಕೂಡಲಸಂಗಮದೇವರ ಒಲವಿನ ದಯದ ಚಿತ್ತ ವಿಡಿದಂಗಲ್ಲದೆ ಶಿವತತ್ವ ಸಾಹಿತ್ಯವಾಗದು.

೧೨. ಕಾಯದ ಗಡಣ ಕೆಲಬರಿಗುಂಟು. ಜೀವದ ಗಡಣ ಕೆಲಬರಿಗುಂಟು. ಭಾವದ ಗಡಣ ಕೆಲಬರಿಗುಂಟು. ವಚನದ ಗಡಣ ಕೆಲಬರಿಗುಂಟು. ಪ್ರಾಣಲಿಂಗದ ಗಡಣ ಅರಿಗೂ ಇಲ್ಲ ಕೂಡಲಸಂಗನ ಶರಣರೊಳಗೆ ತಂಗಟೂರ ಮಾರಯ್ಯಂಗಲ್ಲದೆ.

೧೩. ಚಂದ್ರಕಾಂತದ ಶಿಲೆಯಲ್ಲಿ ಜಲವಿಲ್ಲದನ್ನಕ್ಕ ಶೈತವ ತೋರುವ ಪರಿ ಎಂತೋ? ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಇಲ್ಲವನ್ನಕ್ಕ ಉಷ್ಣವ ತೋರುವ ಪರಿ ಎಂತೋ? ಶರಣಂಗೆ ಭಕ್ತಿಕಾಯ ವಿಲ್ಲವನ್ನಕ್ಕ, ಕೂಡಲಸಂಗನನರಿವ ಪರಿ ಎಂತೋ?

೧೪. ಮುನ್ನೂರರುವತ್ತು ನಕ್ಷತ್ರಕ್ಕೆ ಬಾಯ ಬಿಟ್ಟು ಕೊಂಡಿಪ್ಪುದೇ ಸಿಪ್ಪು? ಅದು ಸ್ವಾತಿಗಲ್ಲದೆ, ಬಾಯ್ದೆರೆಯದು ಕೇಳಾ ಕೇಳು ತಾಯೆ.

ಎಲ್ಲವಕ್ಕೆ ಬಾಯ ಬಿಟ್ಟಿರಿ, ತಾನೆಲ್ಲಿಯ ಮುತ್ತಪ್ಪದು? ಪರವಂಗ ಲ್ಲದೆ ಹರುಷವಿಲ್ಲೆಂದು ಕರಣಾದಿ ಗುಣಂಗಳ ಮರೆದರು. ಇದು ಕಾರಣ ಕೂಡಲಸಂಗನ ಶರಣರು ಸಪ್ತ ವ್ಯಸನಿಗಳಲ್ಲಾಗಿ.

ಪ್ರಾಣಲಿಂಗಿಯ ಪ್ರಾಣಲಿಂಗಿ.

೧. ಮೆಯಿಗೆ ಕಾಹ ಹೇಳುವರಲ್ಲದೆ, ಮನಕ್ಕೆ ಕಾಹ ಹೇಳುವರೆ? ಆಣಕದ ಗಂಡನ ಹೊಸ ಪರಿಯ ನೋಡಾ! ಕೂಡಲಸಂಗಮದೇವನೆನ್ನ ಮನವ ನಂಬದೆ ತನ್ನಲ್ಲಿರ್ದ ಲೇಸ ಕಾಹ ಹೇಳಿದನು!

೨. ಮನ ವಂಚನೆಯೆ ಅನ್ಯ ಲಿಂಗಾರ್ಚನೆ. ಆದು ನಿಜವಲ್ಲ ನಿಜವಲ್ಲ, ಕೂಡಲಸಂಗಮದೇವನು ಮನದಂತರಿಯಾಮಿ ತಾನಾಗಿ.

೩. ಸರ್ಪನ ಸಂಯೋಗ, ಜ್ಯೋತಿಯ ಪತಂಗನ ಬೆಸನದಂತೆ, ಮನದ ಮದವರಿಯದೆ, ನಿನ್ನ ಕೃಪೆಯಿಂದ ನಿನ್ನ ನೆನೆವೆ. ಎನ್ನ ಭಾವದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿಪ್ಪೆಯಯ್ಯ, ಕೂಡಲಸಂಗಮದೇವ ನೀನೆನ್ನ ಪ್ರಾಣನಾಥನಾಗಿ.

೪. ಪೃಥ್ವಿಯಪ್ಪ ತೇಜ ವಾಯುವಾಕಾಶ ನಿರಂಜನದೇವಾ, ನಿಮ್ಮ ಮಹಿಮೆಯ ಪ್ರಣವರೂಪಂಗಳ್ಳಿವೆ ಕಾಣಲಾರಿಗೆಯೂ ಬಾರದಯ್ಯ. ಜ್ಞಾನಜ್ಯೋತಿಯ ಧ್ಯಾನದಿಂದ ನಾಳ ಶುದ್ಧ ದ್ವಾರನಾಗಿ, ಆರಾಧಿಸಿ ಕಂಡೆ ನಿಮ್ಮ ಕೂಡಲಸಂಗಮದೇವನ.

೫. ಪಶ್ಚಿಮ ಪದ್ಮಾಸನದಲ್ಲಿ ಕುಳ್ಳಿತ್ತು, ನೆಟ್ಟಿಲುವ ಮುರಿದು ತುಟಿ ಮಿಡುಕದೆ ಆಟ್ಟಿಯೂಡಿತ್ತಲ್ಲಾ. ಬಟ್ಟ ಕಣ್ಣಾ, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ, ಕೂಡಲಸಂಗಮದೇವ ಹಿಡಿವಡೆದ.

೬. ಸುನಾದ ಬಿಂದು ಪ್ರಣವ ಮಂತ್ರ ಅಗ್ರದ ಕೊನೆಯಲ್ಲಿದ್ದುದೆ ಸೋಹಂ ಸೋಹಂವೆಂದೆನುತಿದ್ದಿತು. ಕೋಹಂ ಬ್ರಹ್ಮರಂಧ್ರದೊಳಗೆ ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ ಆನಂದ ಬ್ರಹ್ಮಣಾ ವಿದ್ವಾನ್ ನ ಬಿಭೇತಿ ಕುತಶ್ಚನ ಇಂತೆಂದುದಾಗಿ ಅಗಮ್ಯ ಕೂಡಲಸಂಗಮದೇವನಲ್ಲದೆ ಮತ್ತಾರೂ ಇಲ್ಲ

೭. ಬೆಳಗಿನೊಳಗಣ ಮಹಾಬೆಳಗು. ಶಿವಶಿವ ಪರಮಾಶ್ರಯವೇ ತಾನಾಗಿ ಶತಪತ್ರಕಮಳ ಕರ್ಣಿಕಾಮಧ್ಯದಲ್ಲಿ ಸ್ವತಃ ಸಿದ್ಧನಾಗಿಪ್ಪ ನಮ್ಮ ಕೂಡಲಸಂಗಮದೇವ.

೮. ಆಚಾರ ಶಿವಾಚಾರವೆಂದರಿದ ಕಾರಣ, ಷಡುದರ್ಶನಂಗಳೆಲ್ಲ ತಮ ತಮಗೆ ಶರಣೆನುತಿರ್ದವು. ಮಹತ್ವದ ಸಮಯಾದಿ ತ್ರೈವಂಗಳೆಂಬ ವೆಲ್ಲ ಶರಣು ಶರಣು ಎನುತಿರ್ದವು. ನಮ್ಮ ಕೂಡಲಸಂಗನ ಶರಣರು ಮಾಡಿದ ವಿನಿಯೋಗ ಬಹಿರಂಗದಲ್ಲಿ ವರ್ತಿಸುವವರಿಗೆಲ್ಲಿಯದೋ?

೯. ತಮ ತಮಗೆಲ್ಲ ನೊಸಲ ಕಣ್ಣಾವರು. ತಮ ತಮಗೆಲ್ಲ ನಂದಿ ವಾಹನರು. ತಮತಮಗೆಲ್ಲ ಖಟ್ವಾಂಗ ಕಪಾಲತ್ರಿಶೂಲಧರರು. ದೇವರಾರು, ಭಕ್ತರಾರು ಹೇಳಿರಯ್ಯ. ನಮ್ಮ ಕೂಡಸಂಗಮದೇವ, ನಿಮ್ಮ ಶರಣರು ಸ್ವತಂತ್ರರು. ಎನ್ನ ಬಚ್ಚ ಬರಿಯ ಬಸವನೆನಿಸಯ್ಯ.

೧೦. ಗುರುವಿನಲ್ಲಿ ಸದಾಚಾರ, ಲಿಂಗದಲನುದಿನ ನೇಳೆ, ಜಂಗಮದಲ್ಲನುಭಾವ, ಸಮಯಾಚಾರ ಲಿಂಗದಲನುದಿನನೇಳೆ. ಈ ಉಭಯಾಚಾರದಿಂದ ತಿಳಿದ ತಿಳಿವು ಲಿಂಗದಲನುದಿನನೇಳೆ. ಬೇರೆ ತೋರಲಿಲ್ಲ. ಲಿಂಗ ಜಂಗಮದಲ್ಲಿ ಲೀಯ್ಯವಾದ ಸಮಯಾಚಾರ, ಇದುಕಾರಣ ಕೂಡಲಸಂಗದೇವ ಲಿಂಗದಲನುದಿನನೇಳೆ.

೧೧. ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡುವೆ? ಬಡವನಯ್ಯ! ಎನ್ನ ಕಾಲೇ ಕಂಭ, ದೇಹವೇ ದೇಗುಲ, ಸಿರವೇ ಹೊನ್ನ ಕಳಶವಯ್ಯ! ಕೂಡಲಸಂಗಮದೇವ ಕೇಳಯ್ಯ! ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಪ್ರಾಣಲಿಂಗಿಯ ಭಕ್ತ.

೧. ಅಷ್ಟದಳ ಕಮಲಾತ್ಮದೊಳಗೆ ನೆಟ್ಟನೆ ಮನಃಸ್ಥಿರಕ ನಾ ನಿಮ್ಮ ನಂಬಿದೆ, ಮಾತೆಂತೆಂದನರಿಯದೆ, ಮಾತೆಂತೆಂದ ಕೇಳದೆ. ನಿತ್ಯ ಸ್ವತಂತ್ರನು ನೀನೇ. ದೃಷ್ಟ ಲಿಂಗಜಂಗಮ ಒಂದೇ ಎಂದಿಪ್ಪೆನು ಪರಮ ಪ್ರಭುವೇ ಕೂಡಲ ಸಂಗಮದೇವ.

೨. ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ? ಎನ್ನೊಳಗಿದ್ದು, ನಿನ್ನ ತೋರಲಿಕ್ಕೆ ನೀನೇ ರೂಪಾದೆ. ಇನ್ನು ಜಂಗಮವೇ ಲಿಂಗವೆಂದು ನಂಬಿದೆ ಕೂಡಲಸಂಗಮದೇವ.

೩. ಗುರು ಮುನಿದರೆ, ಒಂದು ದಿನ ತಾಳುವೆ. ಲಿಂಗ ಮುನಿದರೆ, ದಿನವರೆ ತಾಳುವೆ. ಜಂಗಮ ಮುನಿದರೆ, ಕ್ಷಣ ಮಾತ್ರ ತಾಳಿದೆನಾದರೆ, ಎನ್ನ ಪ್ರಾಣದ ಹೋಕು ಕೂಡಲಸಂಗಮದೇವ.

೪. ಅರಸು ಮುನಿದರೆ, ನಾಡೊಳಗಿರಬಾರದಯ್ಯ. ಗಂಡ ಮುನಿದರೆ, ಹೆಂಡತಿಯಾಗಿರಬಾರದಯ್ಯ. ಕೂಡಲಸಂಗಮದೇವ, ಜಂಗಮ ಮುನಿದರೆ ನಾನೆಂತು ಬದುಕುವೆನು?

೫. ರಚ್ಚೆಯ ನೆರವಿಗೆ ನಾಡನುಡಿ ಇಲ್ಲದಿಹುದೇ? ಅದರಂತೆನ ಬಹುದೇ ಸಜ್ಜನ ಸ್ತ್ರೀಯ? ಅದರಂತೆನಬಹುದೇ ಭಕ್ತಿರತಿಯ? ಕರುಳ ಕಲೆ ಪ್ರಕಟಿತ ಉಂಟೇ ಕೂಡಲಸಂಗಮದೇವ?

೬. ಭೂತ ಒಲಿದಾತ್ಮನ ಸೋಂಕಿದ ಬಳಿಕ, ಭೂತದ ಗುಣವಲ್ಲದೆ, ಆತ್ಮನ ಗುಣ ಉಂಟೇ? ಗುರು ಕಾರುಣ್ಯವಾಗಿ, ಹಸ್ತ ಮಸ್ತಕ ಸಂಯೋಗವಾದ ಬಳಿಕ, ಗುರುಲಿಂಗಜಂಗಮವೇ ಗತಿಯಾಗಿರ್ದೆ ಕೂಡಲ ಸಂಗಮದೇವ.

೭. ಹಸಿವು ತೃಷೆ ನಿದ್ರೆ ವಿಷಯಂಗಳ ಮರೆದೆ. ಇದು ಕಾರಣ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳ ಮರೆದೆ. ಇನ್ನು ಕಾರಣ, ಪಂಚೇಂದ್ರಿಯ ಸಪ್ತಧಾತು ಅಷ್ಟಮದಂಗಳ ಮರೆದೆ. ಇಂತಿ ಕಾರಣ, ಕೂಡಲಸಂಗಮದೇವಯ್ಯ, ನಿಮ್ಮ ಶರಣರಿಗೆ ಅಪ್ಯಾಯನವಾದರೆ, ಎನಗೆ ತೃಪ್ತಿಯಾಯಿತ್ತು.

೮. ತನು ನಿಮ್ಮದೆಂದ ಬಳಿಕ, ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕ, ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ, ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ, ಎನಗೆ ಬೇರೆ ವಿಚಾರ ಉಂಟೇ ಕೂಡಲಸಂಗಮದೇವ?

ಪ್ರಾಣಲಿಂಗಿಯ ಮಾಪೇಶ್ವರ.

೧. ಅಕಳ ಕಳ್ಳರು ಕೊಂಡೊಯ್ದರೆನ್ನದಿರಿಂಭೋ! ನಿಮ್ಮ ಧರ್ಮ. ಬೊಬ್ಬಿಡದಿರಿಂಭೋ! ನಿಮ್ಮ ಧರ್ಮ. ಅಂಸದಿರಿಂಭೋ! ನಿಮ್ಮ ಧರ್ಮ. ಅಲ್ಲಿ ಉಂಬರೆ ಸಂಗ. ಇಲ್ಲಿ ಉಂಬರೆ ಸಂಗ. ಕೂಡಲಸಂಗಮದೇವ ಏಕೋಭಾವ.

೨. ಅರ್ಧಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೇ? ಅಲ್ಲ. ಆದಿರುದ್ರನ ಮಗಳು ಆದಿಶಕ್ತಿ. ಆದಿಶಕ್ತಿಯ ಮಗ ವಿಷ್ಣು. ಆ ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲ ಭಕ್ತನಪ್ಪನೇ? ಅಲ್ಲ. ಎನ್ನ ಮನದೊಡೆಯ ಮಹಾದೇವ ನಿಮ್ಮ ಮನವ ನಿಮಗೊಪ್ಪಿಸಿ ನಾನು ಶುದ್ಧ ಕಾಣಾ ಕೂಡಲಸಂಗಮದೇವಾ.

೩. ಮಾಡುವಾತ ನಾನಲ್ಲಯ್ಯ, ನೀಡುವಾತ ನಾನಲ್ಲಯ್ಯ, ಬೇಡುವಾತ ನಾನಲ್ಲಯ್ಯ, ನಿಮ್ಮ ಕಾರುಣ್ಯವಲ್ಲದೆ. ಎಲೇ ದೇವಾ, ಮನೆಯ ತೊತ್ತಲಸಿದರೆ ಒಡತಿ ಮಾಡಿಕೊಂಬಂತೆ, ನಿನಗೆ ನೀ ಮಾಡಿಕೋ ಕೂಡಲಸಂಗಮದೇವಾ.

೪. ಮುನ್ನಿನ ಜನ್ಮದಲ್ಲಿ ಗುರುಲಿಂಗಜಂಗಮವ ಪೂಜಿಸಲರಿಯದ ಕಾರಣ, ಬಹು ಜನ್ಮಕ್ಕೆ ತಂದಿಕ್ಕಿದೆಯಯ್ಯ ಎನ್ನನು. ಎನಗೆ ಗುರುಪಥವ ತೋರಿದವರಾರು? ಲಿಂಗಪಥವ ತೋರಿದವರಾರು? ಜಂಗಮಪಥವ ತೋರಿದವರಾರು? ಪಾದೋದಕ ಪ್ರಸಾದವ ತೋರಿದವರಾರು? ತೋರುವ ಮನವೇ ನೀನೆಂದರಿತೆ. ಎನಗಿನ್ನಾವ ಭವವೂ ಇಲ್ಲ ಕೂಡಲಸಂಗಮದೇವಾ.

ಪ್ರಾಣಲಿಂಗಿಯ ಪ್ರಸಾದಿ.

೧. ಜನ್ಮಜನ್ಮಕ್ಕೆ ಹೋಗಲೀಯ್ಯದೆ, ಸೋಹಂವೆಂದೆನಿಸದೆ, ದಾಸೋಹಂವೆಂದೆನಿಸಯ್ಯ. ಲಿಂಗಜಂಗಮದ ಪ್ರಸಾದದ ಸಿಲವ ತೋರಿ ಬದುಕಿಸಯ್ಯ ಕೂಡಲಸಂಗಮದೇವಾ.

೨. ಆಶೆಯಾಮಿಷ ತಾಮಸದಿಂದ ಭವ ಬಂಧನವಾದುದನರಿಯಾ! ತ್ರಿವಿಧ ತ್ರಿವಿಧಾವಸ್ಥೆಯ ಮರೆಯಾ! ಓಂ ನಮಶ್ಶಿವಾಯ ಶರಣೆಂಬುದ ಬಿಡದೆ ನೆನೆ ಮನವೇ. ಮಹಂತ ಶಿವಲಿಂಗಸ್ಥ। ಮಹಂತೋ ಜಂಗಮಸ್ತಥಾ। ಕೂಡಲಸಂಗಮದೇವನ ಪ್ರಸಾದ ಸಾನ್ನಿಧ್ಯದಿಂದ ಭವಜನ್ಮ ಕರ್ಮ ಪಂಚ ಭೂತ ಪೂರ್ವ ನಾಸ್ತಿ.

೩. ಜೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯಾ. ಪಾಪದ ಬಲೆಯ ತಂದು ಮುಂದೆ ಒಡ್ಡಿರಯ್ಯ. ಬೇಟೆಕಾರನು ವೃಗವನಟ್ಟಿ, ವೃಗವು ಗೋರಿ

ಗೊಳಗಾಗದಯ್ಯ. ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು ಕೂಡಲ ಸಂಗಮದೇವಂಗೆ ಓಗರವಾಯಿತ್ತು.

೪. ಪರಿಯಾಣವೇ ಭಾಜನವೆಂಬರು. ಪರಿಯಾಣ ಭಾಜನವಲ್ಲ. ಲಿಂಗಕ್ಕೆ ತನ್ನ ಮನವೇ ಭಾಜನ. ಪ್ರಾಣವನು ಬೀಸರವೋಗದೆ ಮೀಸ ಲಾಗಿಸಬಲ್ಲರೆ, ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.

೫. ಆತ್ಮ ಲಿಂಗ, ಪರಮಾತ್ಮ ಜಂಗಮ ತನು ಮಧ್ಯಪ್ರಸಾದ ವಾಯಿತ್ತು. ನಿಶ್ಚಿಂತ ನಿವಾಸವಾಯಿತ್ತು. ಕೂಡಲಸಂಗನ ಶರಣರ ಸಂಗದಿಂದ ನಿಶ್ಚಿಂತ ನಿವಾಸವಾಯಿತ್ತು.

೬. ಲೋಹ ಪರುಷವ ಮುಟ್ಟುವದಲ್ಲದೆ, ಪರುಷ ಪರುಷವ ಮುಟ್ಟುವುದೇ ಅಯ್ಯ? ಅಂಗವಿಡಿದಂಗೆ ಪ್ರಸಾದವಲ್ಲದೆ, ಲಿಂಗವಿಡಿದಂಗೆ ಪ್ರಸಾದವೆಲ್ಲಿಯದೋ? "ಅಣೋರಣೀಯಾನ್ ಮಹತೋ ಮಹೀಯಾನ್" ಹಿರಿದಕ್ಕೆ ಹಿರಿದು ಕಿರಿದಕ್ಕೆ ಕಿರಿದು ವಾಙ್ಮನಕ್ಕೆ ಅಗೋಚರ. ಕೂಡಲ ಸಂಗಮದೇವಾ ಸ್ವರೂಪು ಪ್ರಸಾದ ನಿರೂಪು ಲಿಂಗೈಕ್ಯ.

೭. ಜಂಗಮವೇ ಲಿಂಗವೆನಗೆ. ಜಂಗಮವೇ ಪ್ರಾಣವೆನಗೆ. ಕೂಡಲ ಸಂಗಮದೇವಯ್ಯ ನಿನಗೆಯೂ ನಿನಗೆಯೂ ಜಂಗಮದ ಪ್ರಸಾದವೇ ಪ್ರಾಣ.

೮. ಅಯ್ಯಾ ನೀನೆಂದರೆ ಎಂಬೆನು. ನಿನ್ನ ಹಂಗೇನೂ ಹರಿ ಯೆನು. ನಿನ್ನ ಮುಖದಲ್ಲಿ ಒಂದಗಳು ಸನೆಯದು. ನಿನ್ನ ಪ್ರಸಾದವ ಕೊಂಡೆನ್ನ ಭವಕ್ಕೆ ಬೀಜವಾಯಿತ್ತು. ಜಂಗಮವೇ ಲಿಂಗವೆಂಬೊಕ್ಕುದ ಕೊಂಡರೆ ಎನ್ನ ಭವಂ ನಾಸ್ತಿಯಾಯಿತ್ತು ಕೂಡಲಸಂಗಮದೇವಾ.

೯. ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ ಜ್ಯೋತಿಯ ಬಲದಿಂದ ತಮ್ಮಂಧದ ಕೇಡು ನೋಡಯ್ಯ. ಸತ್ಯದ ಬಲ ದಿಂದ ಅಸತ್ಯದ ಕೇಡು ನೋಡಯ್ಯ. ಪರುಷದ ಬಲದಿಂದ ಅವಲೋ ಹದ ಕೇಡು ನೋಡಯ್ಯ. ಕೂಡಲಸಂಗನ ಶರಣರನುಭಾವದಿಂದ ಎನ್ನ ಭವದ ಕೇಡು ನೋಡಯ್ಯಾ.

೧೦. ಆಚ್ಯರ ವಚನ ಆಚ್ಯರಿಗಾಯಿತ್ತು. ವೇಸ್ಯರಿಗಲ್ಲದೆ ಸಾಧ್ಯ ವಾಗದು. ಕೂಡಲಸಂಗಮದೇವ, ನಿಮ್ಮನುಭಾವದಿಂದೆನ್ನ ಭವಂ ನಾಸ್ತಿ ಯಾಯಿತ್ತು.

೧೧. ಅಸಂಬಂಧ ಸಂಬಂಧವಾಯಿತ್ತು ಲಿಂಗಸಾಂಖ್ಯರ ಸನು ಮತದಿಂದ. ಉತ್ತಮ ಮಧ್ಯಮವ ಕೆಡಿಸಿತ್ತು. ಏಕೋ ಸತಿಪತಿಗುಣದಿಂದ ಗರುವರ ಗರುವತನ ಕೂಡಸಂಗಯ್ಯನಸುಧಾವದಿಂದ.

ಪ್ರಾಣಲಿಂಗಿಯ ಶರಣ.

೧. ಶರಣ ಸನ್ನಿಹಿತ ವಿಷ್ಯವಹಲ್ಲಿ, ಹರಿ ಬ್ರಹ್ಮಾದಿಗಳು ಮೊದಲಾದ ತೆತ್ತೀಸಾದಿ ದೇವರ್ಕಗಳು ಉಳಿ, ಉಳಿಯೇ ಎನುತಿರಲು, ವಿಶ್ವ ಬಸವಣ್ಣಂಗೆ ಠಾವಾವುದಯ್ಯ ಎಂದಡೆ, ಅಂಗದ ಕಳೆಯಲ್ಲಿ ಬಲದಲ್ಲಿ ಬ್ರಹ್ಮನ ಸ್ಥಾನ, ಎಡದಲ್ಲಿ ನಾರಾಯಣನ ಸ್ಥಾನ ಒಲ್ಲೆನಯ್ಯಾ. ಕೊರಳು ಗರಳಸ್ಥಾನ, ಬಾಯಿ ಅಪ್ಪುವಿನ ಸ್ಥಾನ, ನಾಸಿಕ ವಾಯುವಿನ ಸ್ಥಾನ ಕಂಗಳು ಅಗ್ನಿಯ ಸ್ಥಾನ, ಜಡೆ ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ, ಹಿಂದು ಸೂರ್ಯನ ಸ್ಥಾನ, ಚರಣಂಗಳು ಅಷ್ಟ ದಿಕ್ಪಾಲಕರ ಸ್ಥಾನ, ಗುಹ್ಯ ಕಾಮನ ಸ್ಥಾನ, ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗ ಸ್ಥಾನ, ದೇಹ ರುಂಡ ಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ, ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ. ಹೃದಯ ಮಧ್ಯ ಅಂತರಾಳದ ಏಕ ಪೀಠದ ಸಿಂಹಾಸನದ ತೆರಪುಗೊಡು ಕೂಡಲಸಂಗಮದೇವಾ.

೨. ನೀನೊಲಿದರೆ ಒಲಿ. ಒಲೆಯದಿದ್ದರೆ ಸಮಾಧಿಸಿಕೊಳ್ಳಯ್ಯಾ. ಲಿಂಗದ ಬೆಳಗನೊಳಕೊಂಡು ಸಮಾಧಿಸಿಕೊಳ್ಳಯ್ಯಾ. ಕೂಡಲ ಸಂಗಮದೇವರಲ್ಲಿ ತಗ್ಗತವಾದೆನಯ್ಯಾ.

೩. ಮಾಡುವರಿಲ್ಲ ನೀ ಮಾಡದೆ, ನೀಡುವರಿಲ್ಲ ನೀ ನೀಡದೆ ನಿಲಸಾಲೆ. ಬೇಡುವರಿಲ್ಲ, ನೀ ಬೇಡದೆ, ನಿಲಸಾಲೆ. ಕೂಡುವರಿಲ್ಲ, ನೀ ಕೂಡದೆ, ನಿಲಸಾಲೆ. ಕೊಡುವರಿಲ್ಲ ನೀ ಕೊಡದೆ, ನಿಲಸಾಲೆ. ಕೂಡಲ ಸಂಗಮದೇವ ತಾನು ತಾನಾಗಿ ನೀ ನೋಡದೆ ನಿಲಸಾಲೆ.

೪. ಅಲಿಕಲ್ಲ ಹರಳಿನಂತೆ, ಅರಗಿನ ಪುತ್ಥಳಿಯಂತೆ, ತನು ಕರಗಿ ನೆರೆವ ಸುಖವ ನಾನೇನೆಂಬೆ? ಕಡೆಗೋಡಿವರಿದವೆನಗಯ್ಯ ನಯನದ ಸುಖ ಜಲಂಗಳು. ನಮ್ಮ ಕೂಡಲಸಂಗಮದೇವರ ಮುಟ್ಟ್ಯೆ ನೆರೆವ ಸುಖವ ನಾರಿಗೇನೆಂಬೆ?

೫. ನಾಲಿಗೆ ತಾಗಿದ ರುಚಿಗೆ ಮನ ಮನವೇ ಸಾಕ್ಷಿ ಸಾಲದೆ ಅಯ್ಯ? ಮೂಲೆಗಾರನ ಕೇಳಿ, ನನೆಯರಳುವದೆ? ಅಗಮವನಿದಿರಿಂಗೆ ತೋರುವುದು ಆಚಾರವೇ ಅಯ್ಯ? ಕೂಡಲಸಂಗನ ಕೂಡಿದ ಕೂಟದ ಕರುಳ ಕಲೆಯ ನಿದಿರಿಂಗೆ ತೋರುವುದು ಆಚಾರವೇ ಅಯ್ಯಾ?

ಪ್ರಾಣಲಿಂಗಿಯ ಐಕ್ಯ.

೧. ಎಲ್ಲರ ಗಂಡರ ಪರಿಯಂತಲ್ಲ ನೋಡವ್ವ. ನಮ್ಮ ನಲ್ಲನು ಸುಳಿಯಲಿಲ್ಲ. ಸುಳಿದು ಸಿಂಗಾರವ ಮಾಡಲಿಲ್ಲ. ಕೂಡಲಸಂಗಮದೇವನು ತನ್ನೊಳಗೆ ಬೈಚಿಟ್ಟನಾಗಿ.

೨. ಜ್ಞಾನದ ಗಮನದ ಸಹಜದ ಉಪಯವಲ್ಲಿ ಏನೆಂದರಿಯೆನು. ಲಿಂಗದ ಬೆಳಗು ಒಳಕೊಂಡುದಾಗಿ ಏನೆಂದರಿಯೆನು. ಕೂಡಲ ಸಂಗಮದೇವನ ಧ್ಯಾನದಿಂದ ಏನೆಂದರಿಯೆನು.

೩. ಕಾಯವೆಂಬ ಘಟಕ್ಕೆ ಚೈತನ್ಯವೇ ಸುಯಿಧಾನ. ಸಮತೆ ಎಂಬ ಜಲ. ಕರಣಾದಿಗಳೇ ಶ್ರವಣ. ಜ್ಞಾನವೆಂಬ ಅಗ್ನಿಯನಿಕ್ಕಿ, ಮತಿ ಎಂಬ ಸಟ್ಟುಗದಲ್ಲಿ ಘಟ್ಟಿಸಿ, ಪಾಕಕ್ಕೆ ತಂದು, ಭಾವದಲ್ಲಿ ಕುಳ್ಳಿರಿಸಿ, ಪರಿಣಾಮ ದೋಗರವ ನೀಡಿದರೆ, ಕೂಡಲ ಸಂಗಮದೇವಂಗಾರೋಗಣೆಯಾಯಿತ್ತು.

೪. ಕಂಗಳು ತುಂಬಿದ ಬಳಿಕ ನೋಡಲಿಲ್ಲ. ಕಿವಿ ತುಂಬಿದ ಬಳಿಕ ಕೇಳಲಿಲ್ಲ. ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ. ಮನ ತುಂಬಿದ ಬಳಿಕ ನೆನೆಯಲಿಲ್ಲ ಮಹಾಂತ ಕೂಡಲಸಂಗಮದೇವನ.

೫. ಅಡಿಗಡಿಗೆ ಸ್ಥಾನನಿಧಿ, ಅಡಿಗಡಿಗೆ ದಿವ್ಯ ಕ್ಷೇತ್ರ, ಅಡಿಗಡಿಗೆ ನಿಧಿ ನಿಧಾನ ನೋಡಾ. ಆತನಿರವೇ ಅವಿಮುಕ್ತೆ ಕ್ಷೇತ್ರ. ಕೂಡಲ ಸಂಗನ ಶರಣ ಸ್ವತಂತ್ರನಾಗಿ.

ಶರಣನ ಜ್ಞಾನ.

೧. ಧನದಲ್ಲಿ ಶುಚಿ, ಪ್ರಾಣವಲ್ಲಿ ನಿರ್ಭಯ, ಇದಾವಂಗಳವಡಬೇಕೆಂದಯ್ಯಾ? ನಿಧಾನ ತಪ್ಪಿ ಬಂದರೆ, ಒಲ್ಲೆನೆಂಬುವರಿಲ್ಲ. ಪ್ರೇಮದ ವಶ ಬಂದರೆ, ಹುಸಿ ಎಂಬುವರಿಲ್ಲ. ನಿರಾಶೆ ನಿರ್ಭಯ ಕೂಡಲಸಂಗಮದೇವ ನೀನೊಲಿದ ಶರಣಂಗಲ್ಲದಿಲ್ಲ.

೨. ಶರಣ ಸನುಮತವಪ್ಪ ನಿಜಗುಣ ಭರಿತನಹಡೆ, ಸತ್ವ, ರಜ, ತಮ, ಕ್ರೋಧ, ಬಿಡದನ್ನಕ್ಕ, ಅನುಭಾವವೆಲ್ಲೆಯದೋ? ಆತ್ಮಸ್ತುತಿ ಪರನಿಂದೆ ಬಿಡದನ್ನಕ್ಕ, ಅರಿಷಡ್ವರ್ಗ ದಶವಾಯು ಬೆರಿಸಿಪ್ಪ ಕಳಂಕವಪ್ಪ ತನು ಬಿಡದನ್ನಕ್ಕ, ಸಂಸಾರ ಮಾದಲ್ಲದೆ, ಶರಣ ಸಜ್ಜನಿಕೆ ಸಮಯಾಚಾರ ನಿಜವ್ರತವು ದುರಾಚಾರಿಗಳಿಗಳವಡದು ನಮ್ಮ ಕೂಡಲಸಂಗನ ಶರಣರಿಗಲ್ಲದೆ.

೩. ಹಲಬರ ನುಂಗಿದ ಹಾವಿಂಗೆ ತಲೆ ಬಾಲವಿಲ್ಲ ನೋಡಾ. ಕೊಲುವುದು ತ್ರೈಜಗವೆಲ್ಲವ. ತನಗೆ ಬೇರೆ ಪ್ರಳಯವಿಲ್ಲ. ನಾಲ್ಕಡಿಯ ನೈದುದು. ಲೋಕದ ಕಥೆಯನೇ ಕಾಂಬುದು. ಸೂಕ್ಷ್ಮಪಥದಲ್ಲಿ ನಡೆವುದು. ತನಗೆ ಬೇರೆ ಒಡಲಿಲ್ಲ. ಅಹಮೆಂಬ ಗಾರುಡಿಗನ ನುಂಗಿತ್ತು. ಕೂಡಲಸಂಗನ ಶರಣರಲ್ಲದುಳಿದವರ.

೪. ಆದಿತ್ಯ ಸೋಮರು ಆಗಿಹೋಗುತ್ತಿದ್ದಾರು. ಬ್ರಹ್ಮಪ್ರಳಯಕ್ಕೊಳಗಾದ. ಹರಿ ಸಿಂಹಾಸನವಡಗಿತ್ತು. ಅಂತೋ ನಾಸ್ತಿ, ಇಂತೋ ನಾಸ್ತಿ. ರೋಮಜರೆಂಬುವರು ಸಿಟ್ಟುಗುಟ್ಟಿ ತರುಮರನಡಿಯಲ್ಲಿದ್ದರು. ಮಾರ್ಕಂಡೇಯ ಮಹಾಮುನಿ ಸ್ವೇಚ್ಛಾಮರಣಿ ಎನಿಸಿಕೊಂಡನಲ್ಲದೆ, ಲಿಂಗದ ನಿಜವನರಿಯನು. ಇದ. ಕಾರಣ ಕೂಡಲಸಂಗಮದೇವಾ ನೀವು ಮಾಡಿದ ಬಯಲು ಭಕ್ಷಿಸಿತ್ತು ಅನಂತ ಹಿರಿಯರನು.

೫. ಆದಿಯಲ್ಲಿ ಶಿವಬೀಜವಲ್ಲದವರಿಗೆ ವೇದ್ಯವಾಗದು. ಶಿವಜ್ಞಾನ, ಶಿವಭಕ್ತಿ, ಲಿಂಗಸ್ಥಲ ವಳವಡದು, ಜಂಗಮಸ್ಥಲವಳವಡದು, ಪಾದೋದಕ ಪ್ರಸಾದಸ್ಥಲವಳವಡದು, ನರಕದಲ್ಲಿ ಬೀಳುವ ಕರ್ಮಿಗಳಿಗೆ ಕೂಡಲಸಂಗನ ಶರಣರನುಭಾವ ನೆಲೆಗೊಳ್ಳದು.

೬. ಮರುಳ ಕಂಡ ಕನಸಿನ ಪರಿಯಂತೆ ಶಿವಾಚಾರ. ಕರಿಯು ಕನ್ನಡಿಯೊಳಡಗಿದಂತಯ್ಯ ಗುಣಿಯವಗುಣಿಯೊಡನಾಡಿದರೆ, ಅದೇ ಅತನ ಕರ್ಮದ ಫಲ ನೋಡಾ. ಕೂಡಲಸಂಗಮದೇವನ ಶರಣರನು ಭಾವ ಭವದುಃಖಿಗಳಿಗೆ ವೇದ್ಯವಾಗದು.

೭. ಉಂಬ ಬಟ್ಟಲು ಬೇರೆ ಕಂಚಿಲ್ಲ. ನೋಡುವ ದರ್ಪಣ ಬೇರೆ ಕಂಚಿಲ್ಲ. ಭಾಂಡ ಭಾಜನ ಒಂದೇ. ಬೆಳ್ಳಗೆ ಕನ್ನಡಿ ಎನಿಸಿತ್ತಯ್ಯ. ಅರಿದರೆ ಶರಣ, ಮರೆದರೆ ಮಾನವ. ಮರೆಯದೆ ಪೂಜಿಸು ಕೂಡಲಸಂಗನ.

೮. ಕೆರೆ ಹಳ್ಳ ಬಾವಿಗಳು ಮೈದೆಗೆದರೆ, ಗುಳ್ಳೆ, ಗೊರಜೆ, ಚಿಪ್ಪು ಕಾಣಬಹುದು. ವಾರುಧಿ ಮೈದೆಗೆದರೆ, ರತ್ನಂಗಳ ಕಾಣಬಹುದು. ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ, ಲಿಂಗವ ಕಾಣಬಹುದು.

೯. ಪುಣ್ಯ ಪಾಪವೆಂಬುಭಯ ಕರ್ಮವನಾರು ಬಲ್ಲರಯ್ಯ? ಇವನಾರುಂಬರು? ಕಾಯ ತಾನುಂಬರೆ, ಕಾಯ ಪುಣ್ಣು. ಜೀವ ತಾನುಂಬರೆ, ಜೀವ ಬಯಲು. ಈಯುಭಯ ನಿರ್ಣಯವ ಕೂಡಲ ಸಂಗಮದೇವ ನಿಮ್ಮ ಶರಣ ಬಲ್ಲ.

೧೦. ನಾರುಳಿಯ ಹಣಿದವನಂತಾದಡೆಯೂ ಆದರೆ ನಾರುಳಿದರೆ ಮುಂದೆ ಅಂಕುರಿತ ಫಲ ತಪ್ಪದು. ಮಾಡುವನ್ನಕ್ಕ ಫಲದಾಯಕ ಮಾಟವರತು, ನಿಮ್ಮಲ್ಲಿ ಸಯವಾದರೆ ಅತನೇ ಅಚ್ಚ ಶರಣನಯ್ಯ ಕೂಡಲಸಂಗಮದೇವಾ.

೧೧. ಭಕ್ತನ ಮಠಕೆಂದು ಜಂಗಮ ನಡೆದು ಬಂದಲ್ಲಿ, ಆ ಭಕ್ತನು ಕಾಣುತ್ತ ಅಸನ ತ್ಯಜತೆಯ ಮಾಡುತ್ತ, ಕೊಂಕುತ್ತ, ಕೈ ಮುಗಿದು ನಿಂದಿದ್ದು, ಬಾಗಿ ಒಳುಕುತ, ಬಿಜಯ ಮಾಡಿ ದೇವಾ ಎಂದು ಕರೆದು ಕುಳ್ಳಿರಿಸಿ, ಪಾದಾರ್ಚನೆಯ ಮಾಡಿ, ಪಾದೋದಕವ ಕೊಂಡು, ವಿಭೂತಿ ವೀಳೆಯಮಂ ಕೊಟ್ಟು, ಕಂಗಳ ತುಂಬಿ ನಿರೀಕ್ಷಿಸಿ, ಶ್ರೋತ್ರ ತುಂಬಿ ಹಾರೈಸಿ, ಬಾಯ ತುಂಬಿ ಮಾತಾಡಿ, ಎಗ್ಗೂದು ಬೆಸನೆಂದು ತನು ಕರಗಿ ಮನಕರಗಿ ನೋಡಿ ಮಾಡುವುದು ಭಕ್ತಸ್ಥಲ. ಒಡವನಾಗಲಿ, ಬಲ್ಲಿದನಾಗಲಿ, ಇನಿತು ಮುಖ್ಯವಾಗಿ ಮಾಡಿಸಿಕೊಂಬುದು ಜಂಗಮ ಸ್ಥಲ. ಈ ಎರಡೊಂದಾದ ಘನವನಂತಿಂತೆಂದುಪಮಿಸಬಾರದು. ಅದಂ

ತಿರಲಿ. ಇನಿತಲ್ಲದೆ ಮಾಡಿದ ಮಾಟ ಭಕ್ತಸ್ಥಲಕ್ಕೆ ಸಲ್ಲದು. ಫಲದಾಯಕ ನೈಸೆ. ಇನಿತಿಲ್ಲದೆ ಮಾಡಿಸಿಕೊಂಬುದು ಜಂಗಮಸ್ಥಲಕ್ಕೆ ಸಲ್ಲದು. ಉಪ ಜೀವಿತನೈಸೆ. ಈ ಎರಡಕ್ಕೆಯೂ ಭವ ಹಿಂಗದು ಕಾಣಾ ಕೂಡಲ ಸಂಗಮದೇವಾ.

೧೨. ಲಿಂಗ ನಿಷ್ಠೆ ಪೂಜೆಯಲ್ಲಿ ಬೀಯ್ಯವಾಯಿತ್ತು. ಭಕ್ತಿ ನಿಷ್ಠೆ ಆಚರಣೆಯಲ್ಲಿ ಬೀಯ್ಯವಾಯಿತ್ತು. ಪ್ರಸಾದ ನಿಷ್ಠೆ ಬೆರಿಕೆಯಲ್ಲಿ ಬೀಯ್ಯ ವಾಯಿತ್ತು. ಒಂದೊಂದರ ನಿಷ್ಠೆ ಅಂದಂದಿಗೆ ಬೀಯ್ಯವಾಯಿತ್ತು. ಕೂಡಲಸಂಗಮದೇವಾ ತ್ರಿಜಗವನಾಳಿಗೊಂಡಿತ್ತು.

೧೩. ತೆರನನರಿವುದು ಅಪೂರ್ವ. ಅರಿದು ಮರೆವುದು ಅಪೂರ್ವ. ಕೂಡಿ ಶರಣೆಂಬುದು ಅಪೂರ್ವ. ಕೂಡಲಸಂಗಮದೇವನ ಭಕ್ತಿ ಅಭಿ ಮಾನಿಯ ಜನ್ವನದಂತೆ.

೧೪. ಐದು ಮಾನವ ಕುಟ್ಟಿ, ಒಂದು ಮಾನವ ಮಾಡು ಕಂಡೆಯಾ ಮದವಳಿಗೆ ಇದು ನಮ್ಮ ಬಾಳುವೆ. ಮದವಳಿಗೆ ಇದು ನಿಮ್ಮ ವಿಸ್ತಾರ. ಮದವಳಿಗೆ ಮದವಳಿದು ನಿಜವುಳಿದ ಬಳಿಕ, ಅದು ಸತ್ಯ ಕಾಣಾ ಕೂಡಲಸಂಗಮದೇವ.

೧೫. ಕುಲ ಮದವಳಿಯದನ್ನಕ್ಕ ಶರಣನಾಗಲೇಕೆ? ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ? ಹವ್ಯಾಸ ಸೊವ್ಯಾಸ ಸಂಬಂಧ ಬಿಟ್ಟು, ಕಿಂಕರರ ಕಿಂಕರನಾಗಬೇಕು. ಹೆಪ್ಪನೆರೆದ ಹಾಲು ಕೆಟ್ಟು, ತುಪ್ಪವ ಪ್ಪಂತೆ ಇಪ್ಪರು ಕೂಡಲಸಂಗಮದೇವಾ ನಿಮ್ಮ ಶರಣರು.

೧೬. ಮಣ್ಣು ಮಡಿಕೆ ಮಣ್ಣಾಗದು, ಕ್ರಿಯೆಳಿದು. ಬೆಣ್ಣೆ ಕರಗಿ ತುಪ್ಪವಾಗಿ, ಮರಳಿ ಬೆಣ್ಣೆಯಾಗದು ಕ್ರಿಯೆಳಿದು. ಹೊನ್ನು ಕಬ್ಬಣ ವಾಗದು ಕ್ರಿಯೆಳಿದು. ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಾಗದು ಕ್ರಿಯೆಳಿದು. ಕೂಡಲಸಂಗನ ಶರಣನಾಗಿ, ಮರಳಿ ಮಾನವನಾಗನು ಕ್ರಿಯೆಳಿದು.

೧೭. ಪೂರ್ವಜನ್ಮ ನಿವೃತ್ತಿಯಾಗಿ, ಗುರುಕರುಣವಿಡಿದಂಗೆ ಬಂಧ ನವೆಲ್ಲಿಯದೋ? ಭವಬಂಧನವೆಲ್ಲಿಯದೋ, ಸಂಕಲ್ಪ ವಿಕಲ್ಪವೆಂಬ ಸಂದೇಹವ ಕಳೆದುಳಿದವಂಗೆ ಕೂಡಲಸಂಗಮದೇವರ ತ್ರಿಸಂಧ್ಯಾಕಾಲದಲ್ಲಿ ಮಾಣದೇ ನೆನೆವಂಗೆ?

೧೮. ಲಗ್ನವೆಲ್ಲಿಯದೋ, ವಿಘ್ನವೆಲ್ಲಿಯದೋ ಸಂಗಯ್ಯ? ದೋಷವೆಲ್ಲಿಯದೋ, ದುರಿತವೆಲ್ಲಿಯದೋ ಸಂಗಯ್ಯ? ನಿಮ್ಮ ಮಾಣದ ನೆನೆವಂಗೆ ಭವಕರ್ಮವೆಲ್ಲಿಯದೋ ಕೂಡಲಸಂಗಮದೇವಾ?

ಶರಣನ ಶರಣ.

೧ ೧. ಶರಣ ನಿದ್ರೆಗೈದಡೆ ಜಪ ಕಾಣೆರೋ. ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣೆರೋ. ಶರಣ ನಡೆದುದೇ ಪಾವನ ಕಾಣೆರೋ. ಶರಣ ನುಡಿದುದೇ ಶಿವತತ್ವ ಕಾಣೆರೋ. ಕೂಡಲಸಂಗನ ಶರಣನ ಕಾಯವೇ ಕೈಲಾಸ ಕಾಣೆರೋ.

೨. ಉಪಮಿಸಬಾರದ ಉಪಮಾತೀತರು ಕಾಲ ಕರ್ಮರಹಿತರು ಭವ ರಹಿತರು ಕೂಡಲಸಂಗಮದೇವ, ನಿಮ್ಮ ಶರಣರು.

೧೩. ಭವಕ್ಕೆ ಹುಟ್ಟದವನಲ್ಲ. ಸಂದೇಹಿ ಸೂತಕಿಯಲ್ಲ. ಆಕಾರ ನಿರಾಕಾರನಲ್ಲ ನೋಡಯ್ಯಾ. ಕಾಯ ವಂಚಕನಲ್ಲ, ಜೀವ ವಂಚಕನಲ್ಲ, ಶಂಕೆ ಇಲ್ಲದ ಮಹಾಮಹಿಮನು ನೋಡಯ್ಯ. ಕೂಡಲಸಂಗನ ಶರಣನುಪಮಾತೀತ ನೋಡಯ್ಯ.

೪. ಬ್ರಹ್ಮಂಗೆ ವಾಕ್ಪುರುಷ, ವಿಷ್ಣುವಿಂಗೆ ನಯನಪುರುಷ, ರುದ್ರಂಗೆ ಹಸ್ತಪುರುಷ, ನಮ್ಮ ಕೂಡಲಸಂಗನ ಶರಣಂಗೆ ಪಾದವೇ ಪುರುಷ.

೫. ಸಮುದ್ರ ಘನವೆಂಬೆನೇ? ಧರೆಯುಮೇಲಡಗಿತ್ತು. ಧರೆ ಘನವೆಂಬೆನೇ? ನಾಗೇಂದ್ರನ ಫಣಾಮಣಿಯ ಮೇಲೆ ಅಡಗಿತ್ತು. ನಾಗೇಂದ್ರ ಘನವೆಂಬೆನೇ? ಪಾರ್ವತಿಯ ಕಿರುಗುಣಿಯ ಮುದ್ರಿಕೆಯಾಯಿತ್ತು. ಅಂಥ ಪಾರ್ವತಿ ಘನವೆಂಬೆನೇ? ಪರಮೇಶ್ವರನ ಅರ್ಧಾಂಗಿಯಾದಳು. ಅಂಥ ಪರಮೇಶ್ವರ ಘನವೆಂಬೆನೇ? ನಮ್ಮ ಕೂಡಲ ಸಂಗನ ಶರಣರ ಮನದ ಕೊನೆಯ ಮೊನೆಯ ಮೇಲಡಗಿದನು.

೬. ಆಚಾರ ಲಿಂಗವಿಡಿದು ಅನುಭಾವ ಲಿಂಗ ಸಿದ್ಧಿ. ಅನುಭಾವ ಲಿಂಗವಿಡಿದು ಮಾರ್ಗಕ್ರಿಲಿಂಗ ಸಿದ್ಧಿ. ಮಾರ್ಗಕ್ರಿಲಿಂಗವಿಡಿದು ಮೀರಿದ ಕ್ರಿಲಿಂಗ ಸಿದ್ಧಿ. ಮೀರಿದ ಕ್ರಿಲಿಂಗವಿಡಿದು ಕ್ರಿಯಾನಿಷ್ಪತ್ತಿ ಲಿಂಗಸಿದ್ಧಿ. ಇದು ಕಾರಣ ಕೂಡಲಸಂಗಮದೇವಾ, ಲಿಂಗವಿಡಿದು ಲಿಂಗಸಿದ್ಧಿ.

೭. ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ. ಜಲ ಒಂದೇ ಶೌಚಾಚಮನಕ್ಕೆ. ಕುಲ ಒಂದೇ ತನ್ನ ತಾನರಿದವಂಗೆ. ಫಲ ಒಂದೇ ಸಡುದರ್ಶನ ಮುಕ್ತಿಗೆ. ನಿಲವು ಒಂದೇ-ಕೂಡಲಸಂಗಮದೇವಾ ನಿಮ್ಮ ನರಿದಂಗೆ.

ಶರಣನ ಭಕ್ತ.

೧. ಮಧ್ಯ ಪಿಂಡಗಳೆಲ್ಲವು ಶಿವನಿದ್ದೆಡೆಯನರಿಯವು. ಪೂರ್ವ ಪಿಂಡಗಳೆಲ್ಲವು ಶಿವನಾದ್ಯಂತವನರಿಯವು. ಕಾಲ ಪಿಂಡಗಳೆಲ್ಲವು ಶಿವನ ನೆಲುಕಡೆಯನರಿಯದೆ, ಕಾಲ ಚಕ್ರದೊಳಗಾದವೆಲ್ಲವು. ಸಂಶಯ ಪಿಂಡಗ ಳೆಲ್ಲವ ಮರೆದು ನಿಮ್ಮ ಶರಣ ಸೇನೆಯಲ್ಲಿರಿಸಯ್ಯ ಕೂಡಲಸಂಗಮದೇವಾ.

೨. ಪರಮ ತತ್ವದ ನಿಜ ಸಂಯುಕ್ತರ ಅನು ನೀನೆಂಬ ಶಬ್ದ ಸುಖಿಗಳ ತೋರಾ ಎನಗೆ. ಮಹಾನುಭಾವರ ತೋರಾ ಎನಗೆ. ಲಿಂಗೈ ಕ್ಯರ ಲಿಂಗ ಸುಖಿಗಳ ಲಿಂಗ ಗೂಡಾಗಿಪ್ಪರ ಲಿಂಗಾಭಿಮಾನಿಗಳ ತೋರಾ ಎನಗೆ. ಅಹೋರಾತ್ರಿ ನಿಮ್ಮ ಶರಣರ ಸೇವೆಯಲ್ಲಿರಿಸು ಕೂಡ ಲಸಂಗಮದೇವಾ.

೩. ಅಯ್ಯಾ, ಸಜ್ಜನ ಸದ್ಭಕ್ತರ ಸಂಗದಿಂದ ಮಹಾನುಭಾವರ ಕಾಣಬಹುದಯ್ಯ. ಮಹಾನುಭಾವರ ಸಂಗದಿಂದ ಶ್ರೀಗುರುವನರಿಯ ಬಹುದು. ಲಿಂಗವನರಿಯಬಹುದು. ಜಂಗಮವನರಿಯಬಹುದು. ಪ್ರಸಾ ದವನರಿಯಬಹುದು. ತನ್ನ ತಾನರಿಯಬಹುದು. ಇದು ಕಾರಣ ಸದ್ಭ ಕ್ತರ ಸಂಗವನೆ ಕರುಣಿಸು. ಕೂಡಲಸಂಗಮದೇವಾ ನಿಮ್ಮ ಧರ್ಮ.

೪. ಮರ ಮರ ಮಥನದಿಂದ ಅಗ್ನಿ ಹುಟ್ಟಿ, ಆ ಮರನೆಲ್ಲವ ಸುಡದಿಪ್ಪುದೆ? ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ, ಎನ್ನ ತನುಗುಣವೆಲ್ಲವ ಸುಡದಿಪ್ಪುದೆ? ಇದು ಕಾರಣ ಮಹಾನುಭಾ ವರ ತೋರಿಸು ಕೂಡಲಸಂಗಮದೇವಾ.

೫. ಅರಿದುದನರಿಯಲೊಲ್ಲದು. ಅದೆಂತಯ್ಯ? ಮರೆದುದ ಮರೆ ಯಲೊಲ್ಲದು. ಅದೆಂತಯ್ಯ? ಅರಿದು ಮರೆದ ಮನವ ಕೂಡಲಸಂ ಗಯ್ಯ ತಾನೆ ಬಲ್ಲ.

೬. ಮಿಸಲು ಬೀಸರವಾದ ಪರಿಯ ನೋಡಾ! ಕಾಲು ತಾಗಿದ ಅಗ್ನಿಯಣಿ, ಕೈಮುಟ್ಟಿನ ಅರ್ಪಿತ, ಮನ ಮುಟ್ಟಿದ ಆರೋಗಣೆಯನೆಂತು ಘನವೆಂಬೆನಯ್ಯ? ಬಂದ ಪರಿಯಲ್ಲಿ ಪರಿಣಾಮಿಸಿ, ನಿಂದ ಪರಿಯಲ್ಲಿ ನಿಜವ ಮಾಡಿ, ಆನಂದ ಪರಿಯಲ್ಲಿ ಕೈಕೋ ಕೂಡಲಸಂಗಮದೇವಾ.

೭. ಹಾಲೆಂಜಿಲು ವತ್ಸನ, ಉದಕವೆಂಜಲು ಮತ್ಸ್ಯನ, ಪುಷ್ಪ ವೆಂಜಲು ತುಂಬಿಯ. ಎಂತು ಪೂಜಿಸುವೆನಯ್ಯ? ಶಿವಶಿವಾ ಎಂತು ಪೂಜಿಸುವೆ? ಈ ಎಂಜಲನತಿಗಳವಡೆ ಎನ್ನಳವಲ್ಲ. ಒಂದುದ ಕೈಕೋ ಕೂಡಲಸಂಗಮದೇವಾ.

೮. ಶುದ್ಧವಾಯಿತ್ತೆಂಬೆನೇ? ಸುಯಿಧಾನಿ ನಾನಲ್ಲ. ಅನುವಾಯಿತ್ತೆಂಬೆನೇ? ಅವಧಾನಿ ನಾನಲ್ಲ. ಸುಯಿಧಾನ ಅವಧಾನ ಅರ್ಪಿತವ ನಾನರಿಯೆ. ಇದ್ದ ಪರಿಯಲಿ ನೀಡಿದರೆ, ಬಂದ ಪರಿಯಲಿ ಕೈಕೋ ಕೂಡಲಸಂಗಮದೇವಾ.

೯. ಪಾದಾರ್ಚನೆಯ ಮಾಡುವೆನಯ್ಯಾ ಪಾದೋದಕದ ಹಂಗಿಂಗೆ. ಶರಣಾರ್ಥಿ ಎಂಬೆನಯ್ಯ ಒಕ್ಕುದ ಕೊಂಬ ಹಂಗಿಂಗೆ. ಎಡೆಯಾಟ ಕಡಬಡ್ಡಿಯ ಕೊಟ್ಟು ಕೆಟ್ಟಿತ್ತು ನೋಡಾ ಭಕ್ತಿ. ಕೂಡಲಸಂಗನ ಶರಣರ ನಿಲವನರಿಯದೆ ಮುಯ್ಯಿಗೆ ಮುಯ್ಯಾಗಿ ಕೆಟ್ಟಿತ್ತಯ್ಯ ಎನ್ನ ಭಕ್ತಿ.

೧೦. "ಯಸ್ಯ ಕ್ರೀತಸ್ಯ ಭವತಿ" ಎಂದು ಕಟ್ಟಾಚಾರದಲು ಇದ್ದು ಅನು ಅನುಸರಿಸಿಕೊಂಡು ನಡೆವನ್ನಕ್ಕ ಕರ್ಮ ಕಾಂಡಿಯಲ್ಲ. ಉತ್ಪತ್ತಿ ಸ್ಥಿತಿ ಭೋಗ ಭುಕ್ತಿಕಾಯವುಳ್ಳನ್ನಕ್ಕ ಭಕ್ತಿಕಾಂಡಿಯಲ್ಲ. ಪರವು ಸಾಧ್ಯವಾಯಿತ್ತೆಂದು ಕ್ರಿಯೆಲ್ಲವ ಮೀರಿ ನಡೆವೆನು. ಪರತತ್ವವನರಿವಿಹೆನೆಂಬನ್ನಕ್ಕ ಜ್ಞಾನ ಕಾಂಡಿಯಲ್ಲ. ಇನ್ನು ಕರ್ಮಕಾಂಡಿ, ಭಕ್ತಿ ಕಾಂಡಿ, ಜ್ಞಾನಕಾಂಡಿ, ಈ ತ್ರಿವಿಧದಲ್ಲಿ ವಂಚಕನಾದರೆ ಈಸು ವಿಧದೊಳಗೆ ಅಂಗವಿಲ್ಲ. ಮೇಲೆ ಸತ್ಪುರುಷರ ಸಂಗವಿಲ್ಲ. ಯುಕ್ತಿ ಇಲ್ಲ. ಎನಗೆ ಭಕ್ತಿ ಎಂತಹುದಯ್ಯ? ಬಲ್ಲವರ ಬೆಸಗೊಂಡರೆ ಎನ್ನ ಬಿಮ್ಮು ಕೆಟ್ಟಿಹುದೆಂದು, ಮೆಲ್ಲನೆ ಪ್ರಸಂಗದಿಂದ ತಿಳಿದು ನೋಡುವೆ. ಕೂಡಲಸಂಗಮದೇವಾ ಎನ್ನ ಗುಣವ ನೋಡದೆ ಶಿವರಾತ್ರಿಯ ಸಂಕಣ್ಣಗಳಿಗೆ ಕರುಣಿಸಿದಂತೆ ಎನಗೆ ಕೃಪೆಯ ಮಾಡಯ್ಯಾ.

೧೧. ಕಳಾ ಬಿಂದು ವಟಾ ಮುಖಿ ಎಂಬ ಹೆಂಗುಸಿನ ಕಯ್ಯಲು ಜಲಾಕಾರವೆಂಬ ಗಡಿಗೆ ಇದ್ದಿತ್ತು. ಆ ಗಡಿಗೆಯಲ್ಲಿ ಚನ್ನಬಸವಣ್ಣ ನೀರ ತಂದ. ಮಡಿವಾಳಯ್ಯ ಸುಯಿಧಾನವ ತಂದ. ಇಬರೊಲೆಯ ನುರುಹಿಕೊಡಾ ಕೂಡಲಸಂಗಮದೇವಾ.

೧೨. ದಿಟ ಮಾಡಿ ಪೂಜಿಸಿದಡೆ, ಸಟೆ ಮಾಡಿ ಕಳೆವೆ. ಸಟೆ ಮಾಡಿ ಪೂಜಿಸಿದಡೆ, ದಿಟ ಮಾಡಿ ಕಳೆವೆ. ಏನೆಂಬೆನೆಂತೆಂಬೆ? ಸುಖಕ್ಕೆ ತುಂಬಿದ ದೀವಿಗೆ ಮನೆ ಎಲ್ಲವ ಸುಟ್ಟಂತೆ, ಆನು ಮಾಡಿದ ಭಕ್ತಿ ಎನಗಿಂತಾಯಿತ್ತು ಕೂಡಲಸಂಗಮದೇವಾ.

೧೩. ಎಂಬತ್ತೆಂಟು ಪವಾಡವ ಮೆರೆದು, ಹಗರಣದ ಜೋಹದಂತಾಯಿತ್ತೆನ್ನ ಭಕ್ತಿ. ತನುವಿನೊಳಗೆ ಮನ ಸಿಲುಕದೆ, ಮನದೊಳಗೆ ತನು ಸಿಲುಕದೆ, ತನು ಅಲ್ಲಮನಲ್ಲಿ ಸಿಲುಕಿತ್ತು. ಮನ ಚನ್ನಬಸವಣ್ಣನಲ್ಲಿ ಸಿಲುಕಿತ್ತು. ನಾನೇತರಲ್ಲಿ ನೆನೆವೆನಯ್ಯ ಕೂಡಲಸಂಗಮದೇವಾ?

೧೪. ಭಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ. ಯುಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ. ಸಾರಿ ಶರಣನೆನಿಸುವೆನಯ್ಯ ಮೆಲ್ಲಮೆಲ್ಲನೆ. ಎಡಹು ಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯ. ಕೂಡಲಸಂಗಮದೇವಾ ನಿಮ್ಮಿಂದಧಿಕನೆನಿಸುವೆನಯ್ಯಾ.

೧೫. ಬಸವ ಬಾರಯ್ಯ. ಮರ್ತ್ಯಲೋಕದೊಳಗೆ ಭಕ್ತರುಂಟೆ ಹೇಳಯ್ಯ. ಮತ್ತಾರೂ ಇಲ್ಲಯ್ಯ ಮತ್ತಾರೂ ಇಲ್ಲಯ್ಯ. ನಾನೊಬ್ಬನೇ ಭಕ್ತನು. ಮರ್ತ್ಯಲೋಕದೊಳಗಣ ಭಕ್ತರೆಲ್ಲರು ಜಂಗಮಲಿಂಗ ನೀನೇ ಆಯ್ಯ ಕೂಡಲಸಂಗಮದೇವಾ.

ಶರಣನ ಮಾಹೇಶ್ವರ.

೧. ಪರಮ ಪ್ರಭವೆ ನೀ ಮುನಿದೆನ್ನ ಮರ್ತ್ಯಲೋಕದೊಗರಿಸಿದರೆ ಆನು ಸೈರಿಸಿದೆನಯ್ಯ. ಕುಲಮದ ಛಲಮದವಿದೇನಯ್ಯ? ದರುಶನ ಭ್ರಾಂತಿ ಇದೇನಯ್ಯ? ಕ್ರಿಯಾ ಕರ್ಮ ಸೂತಕವಿದೇನಯ್ಯ? ॥ಶ್ಲೋಕ॥ ಯದ್ಯಪಿ ಸ್ಯಾತ್ ತ್ರಿಕಾಲಜ್ಞಶ್ಚ। ತ್ರೈಲೋಕ್ಯಾಕರ್ಷಣಕ್ಷಮಃ॥ ತಥಾಪಿ ಲೌಕಿಕಾಚಾರಂ। ಮನಸಾಪಿ ನ ಲಂಘಯೆತ್ ॥ ಇಂತೆಂಬುದ ವಿಾರಿದೆನಾಗಿ, ಲಿಂಗಯ್ಯ ನಿಮ್ಮ ನಂಬಿದೆನಯ್ಯ. ಇನ್ನು ಕಲಿಯುಗದಲ್ಲಿ ಬಳಸಿದರೆ, ಕೂಡಲಸಂಗಮದೇವಾ ನಿಮ್ಮ ರಾಣಿವಾಸದಾಣೆ.

೧. ತನುಮನಧನವೆಂಬ ಕನ್ನಡಿಯ ನೋಡಯ್ಯ. ಎನ್ನದು ಅಲ್ಲ, ನಿನ್ನದು ಅಲ್ಲ. ಬರಿಯ ಭ್ರಮೆಯ ಮಾತು. ಆ ಭ್ರಮೆಗೊಳಗಾಗದೆ, ನಿಮ್ಮ ಶ್ರೀಚರಣವ ಬಿಡೆ ಕೂಡಲಸಂಗಮದೇವಾ.

೩. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯನು ಮೆಲ್ಲಮೆಲ್ಲನೆ ಆದೆನೆಂಬೆನ್ನಬರ ನಾನು ವಜ್ರದೇಹಿಯೇ? ನಾನೇನು ಅಮೃತವ ಸೇವಿಸಿದೆನೇ? ಆನು ಮರುಜೀವಣಿಯ ಕೊಂಡೆನೇ? ನುಡಿದ ನುಡಿಯೊಳಗೆ ಷಟ್‌ಸ್ಥಲಬಂದು, ಎನ್ನ ಮನವನಿಂಬುಗೊಳ್ಳದಿದ್ದರೆ, ಸುಡುವೆನೀ ತನುವನು ಕೂಡಲಸಂಗಮದೇವಾ.

೪. ಕುಲಗೆಟ್ಟಡೆ ಕೆಡಬಹುದಲ್ಲದೆ, ಛಲಗೆಡ ಬಾರದಯ್ಯ. ಛಲಗೆಟ್ಟರೆ ಕೆಡಬಹುದಲ್ಲದೆ, ಭಕ್ತಿಯ ಆನು ಕೆಡಬಾರದಯ್ಯ. ಭಕ್ತಿಯು ಆನು ಕೆಟ್ಟರೆ, ಕೆಡಬಹುದಲ್ಲದೆ ಆಯತ ಕೆಡಬಾರದು. ಆಯತ ಕೆಟ್ಟರೆ ಕೆಡಬಹುದಲ್ಲದೆ, ಸ್ವಾಯತ ಕೆಡಬಾರದಯ್ಯ. ಎಲೆ ಕೂಡಲ ಸಂಗಮದೇವ ಮುನ್ನ ಮುಟ್ಟತ್ತ ಮುಟ್ಟಿತ್ತು. ಇನ್ನು ಮುಟ್ಟಿದೆನಾದರೆ ನಿಮ್ಮ ಆಣಿವಾಸದಾಣೆ.

೫. ಅಷ್ಟ ವಿಧಾರ್ಚನೆ ಷೋಡಶೋಪಚಾರವಲ್ಲದೆ, ನಿಮ್ಮ ಮುಟ್ಟಲರಿಯದವರ ಕಂಡಡೆ, ಅಯ್ಯ ಎಂತೆಂಬೆನವರ? ಆವ ಭಾವದಲ್ಲಿ ಆವ ಜ್ಞಾನದಲ್ಲಿ ಆವ ಮುಖದಲ್ಲಿ ಅರಿವವರದಾರಯ್ಯ? ಏನೆಂಬೆ? ನಿಮ್ಮಲ್ಲಿ ಸಮ್ಯಕ್ಕಾರಾದ ಸತ್ಯ ಶರಣರ ಕಂಡು, ಕೂಡಲಸಂಗಮದೇವನವರನಯ್ಯ ಎಂಬೆನು.

೬. ಮರನ ಹೂವ ಕೊಯ್ದು, ಮರಕ್ಕೇರಿಸಿ, ನದಿಯುನಕವ ನದಿಗರ್ಪಿತವ ಮಾಡಿ ಕರುವನಗಲಿಸಿ ತಾಯಮೊಲೆವಾಲ ಮರುಗಿಸಿ ಕರದುಣ ಬೇಡವೋ. ಕೂಡಲಸಂಗಮದೇವ ಮಾಡಿದ ಮಾಯೆ ಹಲಬರ ಬಾಯ ಟೊಣೆದು ಹೋಯಿತ್ತು.

೭. ತಾಪತ್ರಯವೆಂದರೆ ರೂಪ ಕಾಣುತ್ತ ಕನಲಿದ. ಕೋಪದಲ್ಲಿ ತಿವಕಳೆಯದ ಕರಡಿಗೆಯನೆ ಮುರಿದ. ಧೂಪಗುಂಡಿಗೆಯನೊಡೆದ. ದೀಪಾರತಿಯ ನಂದಿಸಿದ. ಬಹು ಪರಿಯಾಣದೋಗರವ ತುಡುಕಿದ. ಪಾಪ ಕರ್ಮ ಕೂಡಲಸಂಗಮದೇವಾ ನಿಮ್ಮ ಶರಣ.

೮. ಈ ಲೋಕದ ಭೀತರು ಆ ಲೋಕದ ಕಲಿಗಳು. ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯರೆಲ್ಲರು ಅಜನಿತಂಗೆ ಸರಿಯೇ? ಮೂಜಗದಲ್ಲಿ ನಿರುತರು ಕೂಡಲಸಂಗನ ಶರಣರು ತ್ರಿವಿಧವನರಿಯರು.

೯. ತಾಗು ನಿರೋಧದ ಅಗು ಹೋಗನರಿಯದ ಶರಣನ ಚಿತ್ರವ ನೋಡಿ ನೋಡಿ ಬೆರಗಾದೆನಯ್ಯಾ, ಕೂಡಲಸಂಗಮದೇವನಲ್ಲಿ ತಾನೇ ಸುಯಿಧಾನಿಯಾಗಿ.

೧೦. ಜಗವ ಸುತ್ತಿಸ್ಪುದು ನಿನ್ನ ಮಾಯೆಯಯ್ಯಾ. ನಿನ್ನ ಸುತ್ತಿಸ್ಪುದು ಎನ್ನ ಮನ ನೋಡಯ್ಯಾ. ಜಗಕ್ಕೆ ಬಲ್ಲಿದ ನೀನು. ಅನು ನಿನಗೆ ಬಲ್ಲಿದನು. ಕಂಡಯ್ಯಾ, ಕಂಯು ಕನ್ನಡಿಯೊಳಡಗಿದಂತಯ್ಯ. ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ.

ಶರಣನ ಪ್ರಸಾದಿ.

೧. ಎನಗೆ ಗುರುವಿನ ಪ್ರಸಾದ. ನಿನಗೆ ಚೆನ್ನನ ಪ್ರಸಾದ. ಎನಗೆಯೂ ನಿನಗೆಯೂ ಸಮಯಾಚಾರ ಸರಿ. ಕೂಡಲಸಂಗಮದೇವಾ, ನೀನೆನಗೆ ಚಿಕ್ಕ ತಮ್ಮ.

೨. ಶುದ್ಧಾತ್ಮ ಪರಮಾತ್ಮರಿಬ್ಬರು ಒಂದು ರತ್ನಕ್ಕೆ ಹೆಣಗಾಟವ ನಾಡಿಹರು. ಅವರ ಹೆಣಗಾಟವ ನೋಡಿ, ಆ ರತ್ನವ ಸೆಳೆದುಕೊಂಡರೆ, ಕೂಡಲಸಂಗಮದೇವಂಗಾರೋಗಣೆಯಾಯಿತ್ತು.

೩. ಆ ರತ್ನ ಪ್ರಸಾದವನಾರಾಧಿಸುತ್ತಿರಲು, ಆ ಪ್ರಸಾದದಲ್ಲಿ ಬೀಳುತ್ತ ಆಳುತ್ತಿದ್ದಿತ್ತು ನೋಡಾ. ಅದ ಹಲಬರು ನೋಡಿ ನೋಡಿ, ಹೋಗುತ್ತಿದ್ದರು. ಆ ಪ್ರಸಾದ ತಾನೇ ಬಂದು ಎನ್ನ ಸುತ್ತಿಕೊಂಡಿತ್ತು. ಇದ ಪದಾರ್ಥವ ಮಾಡಿಕೊಡೈ ಕೂಡಲಸಂಗಮದೇವಾ.

೪. ಎಲ್ಲರ ಗಂಡರು ಬೇಂಟೆಯ ಹೋದರು. ನೀನೇಕೆ ಹೋಗೆ ಎಲೆ ಗಂಡನೆ? ಸತ್ತುದ ತಾರದಿರು. ಕೈಮುಟ್ಟಿ ಕೊಲ್ಲದಿರು. ಅಡಗಿಲ್ಲದೆ ಮನೆಗೆ ಬಾರದಿರು. ದೇವರ ಧರ್ಮದಲೊಂದು ಬೇಂಟೆ ದೊರೆಕೊಂಡರೆ, ಕೂಡಲಸಂಗಮದೇವಂಗರ್ಪಿತವ ಮಾಡುವೆ ಎಲೆ ಗಂಡನೇ.

ಶರಣನ ಪ್ರಾಣಲಿಂಗಿ.

೧. ಕಣ್ಣೊಳಗೆ ಕಣ್ಣಿರ್ದು ಕಾಣಲೇಕರಿಯಿರಯ್ಯ? ಕಿವಿಯೊಳಗೆ ಕಿವಿ ಇರ್ದು ಕೇಳಲೇಕರಿಯಿರಯ್ಯ; ಘ್ರಾಣದೊಳಗೆ ಘ್ರಾಣವಿರ್ದು ವಾಸಿಸಲೇಕರಿಯಿರಯ್ಯ? ಜಿಹ್ವೆಯೊಳಗೆ ಜಿಹ್ವೆ ಇರ್ದು ರುಚಿಸಲೇಕರಿ

ಯಿರಯ್ಯ? ಸ್ಪರ್ಶನದೊಳಗೆ ಸ್ಪರ್ಶನವಿರ್ದು, ಮುಟ್ಟಲೇಕರಿಯಿರಯ್ಯ? ಪ್ರಾಣದೊಳಗೆ ಪ್ರಾಣವಿರ್ದುದನೇಕರಿಯಿರಯ್ಯ? ಕಾಯದೊಳಗೆ ಕಾಯವಿರ್ದು, ಬಿಡದು ಬೇರಾಗದು. ಕೂಡಲಸಂಗಮದೇವ ನೀನಿಕ್ಕಿದ ಅಣಕದ ಭೇದವ ಭೇದಿಸಬಾರದಯ್ಯಾ.

೨. ಗ್ರಹ ಬಂದು ಆವರಿಸಲೊಡನೆ, ತನ್ನ ಮರಿಸುವದು. ಮತ್ತೊಂದಕ್ಕಿಂಬುಗೊಡಲೀಯದಯ್ಯ. ಕೂಡಲಸಂಗಮದೇವನ ಅರಿವು ಅನುಪಮವಾಗಲೊಡನೆ, ಜೀವಹಾರದೊಳಗಿರಲೀಯದಯ್ಯ.

೩. ಭೂತಿಗನ ಸೀರೆಯ ಸಾತ್ವಿಕ ನೆರೆಯುಟ್ಟರೆ, ಭೂತಿಗ ಸಾತ್ವಿಕನಾದ. ಸಾತ್ವಿಕ ಭೂತಿಗನಾದ. ಈ ಮಾತು ಬಿದ್ದುದು ನೋಡಾ. ರಾಜಬೀದಿಯಲಿ ಅಯ್ಯ ಭೂತ ಕೆಣಕಿದರಿಲ್ಲ. ಮಾತ, ಮುಚ್ಚಿದರಿಲ್ಲ. ಓತು ಕೂಡುವ ಅನುವ ಕೂಡಲಸಂಗಮದೇವ ತಾನೇ ಬಲ್ಲ.

ಶರಣನ ಐಕ್ಯ.

೧. ಮನೆಯ ಗಂಡನ ಮನೆವಾರ್ತೆಯನೇನ ಹೇಳುನೆನವ್ವ? ಅಂಗವಿದ್ಯೆಯನೊಲ್ಲ. ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ್ಯ. ಕೆಯ್ಯ ತೊಳೆದಲ್ಲದೆ ಮುಟ್ಟಲೀಯ್ಯ. ಕಾಲ ತೊಳೆದಲ್ಲದೆ, ಹೊಂದಲೀಯ್ಯ. ಇಂತೀ ಸರ್ವಾಂಗ ತಲೆದೊಳೆದ ಕಾರಣ ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ.

೨. ಅಳಿಯನ ಕಂಡರೆ ನಾಚೆಂಬೆ ಮಗಳೇ. ಅಳಿಯನ ಕಂಡರೆ, ತೊಲಗೆಂಬೆ ಮಗಳೇ. ನಾಚುವರೆ ಮರೆ ಇಲ್ಲ. ತೊಲಗುವರೆ ನೆಲಸಿಲ್ಲ. ಇಬ್ಬರಿಗೊಬ್ಬ ಗಂಡನಾದ ಬಳಿಕ, ಇನ್ನೆಲ್ಲಿಯ ಮರೆ ಮಗಳೇ? ಕೂಡಲಸಂಗಮದೇವಯ್ಯನೆಂಬ ಗಂಡನಾದ ಬಳಿಕ, ಇನ್ನೆಲ್ಲಿಯ ಮರೆ ಮಗಳೇ?

೩. ಸತ್ಯವಿದೆ, ಸಮಾಧಾನವಿದೆ. ಮನಕ್ಕೆ ಬಾರದಿದೇನಯ್ಯ? ಸರ್ವ ಸನುಮತವೆಂಬ ಸುಖವಿದೆ. ಮನಕ್ಕೆ ಸೋಂಕದಿದೇನಯ್ಯ? ಆ ನೀನೆಂಬುದೊಂದು ಘನವಿದೆ ಕೂಡಲಸಂಗಮದೇವಾ, ಭ್ರಮೆಯೂ.

೪. ಸಿನೆ ಬಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ, ಅವನೆನ್ನ ಋಣಕ್ಕೊಡೆಯನಾದ ಅವನೆನ್ನ ಧನಕ್ಕೊಡೆಯನಾದ. ಅನು ಗಳಿಸಿದ ಒಮ್ಮ

ವಕ್ಕೆ ಆಗಲದೆ ಮೋಹಿತನಾದ. ಕೂಡಲಸಂಗಮದೇವನಂತಪ್ಪ ಮಗ ಹುಟ್ಟಿದರೆ, ಇದ್ದೆನಯ್ಯ ಕಾಯ ಮಾತೆಯಾಗಿ ಜೀವ ಪಿತನಾಗಿ, ನೀನಿರಿಸಿದಂತೆ.

೫. ಪೂಜೆಯುಳ್ಳವರ, ಲಿಂಗವ ಹಾಡಿದೆ. ಮಾಟವುಳ್ಳವರ ಜಂಗಮವ ಹಾಡಿದೆ. ಜಿಹ್ವೆಯುಳ್ಳವರ, ಪ್ರಸಾದವ ಹಾಡಿದೆ. ಈ ತ್ರಿವಿಧ ನಾಸ್ತಿಯಾದ ಬಳಿಕ ಎನ್ನ ನಾ ಹಾಡಿಕೊಂಡೆ ಕಾಣಾ ಕೂಡಲಸಂಗಮದೇವಾ.

೬. ಅನಾಯಾಸದಿಂದ ಮನೆಯ ಮಾಡಿ, ನಿರಾಯಾಸದಿಂದ ಪರಮ ಸುಖಿ. ರೂಪಿಸುವಲ್ಲಿ ರೂಪಾಧಿಕ. ನೋಡುವಲ್ಲಿ ನೋಟ ಫಲ. ಇಂತಹ ಸಹಜ ಸಂಗಿಯ ನಿಲವಿನ ಪರಿ. ಉದಕದೊಳಗಣ ಬಿಂದು ಉದಯ ರತ್ನದಂತೆ ಕೂಡಲಸಂಗನ ಶರಣನ ನಿಲವು.

೭. ಮರುಳು ತಲೆ ಹುರುಳು ತಲೆ ನೀನೇ ದೇವಾ. ಹೆಂಗುಸು, ಗಂಡುಗೂಸು ನೀನೇ ದೇವಾ. ಎಮ್ಮಕ್ಕನ ಗಂಡ ನೀನೇ ದೇವಾ. ಕೂಡಲಸಂಗಮದೇವಾ, ಭ್ರಾಂತಳಿದು ಭಾವನಿಂದುದಾಗಿ.

೮. ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ, ತೆರಹಿಲ್ಲದ ಸಂಭಾಷಣೆಯ ಸುಖವು. ತೆರಹಿಲ್ಲದೆ ನಂಬುಗೆ, ಸ್ವಾನುಭಾವಸುಖ. ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ ಕೂಡಲಸಂಗಮದೇವಾ, ನಿಮ್ಮ ಶರಣಂಗೆ.

ಐಕ್ಯನ ಜ್ಞಾನ.

೧. ಮೂರರಾಪ್ಯಾಯನ ಐದು ಬೆಟ್ಟವನಿಂಬುಗೊಂಡು, ಅಕ್ಕಟ ಕ್ಕಟಾ! ಮಾಡಿ ಕೆಟ್ಟರು, ಮಾಡದೇ ಕೆಟ್ಟರು. ನೀಡಿ ಕೆಟ್ಟರು, ನೀಡದೇ ಕೆಟ್ಟರು. ಕೂಡಲಸಂಗಮದೇವನ ಬಸಿರ ಮಧ್ಯದ ಬಯಲ ಸಮಾಧಿಯಲಿಕ್ಕದೆ ಕೆಟ್ಟರು.

೨. ಉಮಾದಿನಾಥರು ಕೋಟಿ, ಪಂಚವಕ್ತ್ರರು ಕೋಟಿ, ನಂದಿವಾಹನರೊಂದು ಕೋಟಿ ನೋಡಯ್ಯ. ಸದಾಶಿವರೊಂದು ಕೋಟಿ, ಗಂಗೆವಾಳುಕ ಸಮುದ್ರರು ಇವರೆಲ್ಲರು ಕೂಡಲಸಂಗನ ಸಾನಿಧ್ಯರಲ್ಲದೆ, ಸಮರಸವೇದ್ಯರೊಬ್ಬರೂ ಇಲ್ಲ.

೩. ರಕ್ಕಸಿಯ ಮನೆಯಲು ಭೋಜನವನುಂಡು ತೃಪ್ತಿಯಾಯಿತ್ತೆಂದು ಬೆಸಗೊಂಡರೆ ಹೇಳಿಹೆನು. ನೀರ ಕೆಯ್ಯಲು, ಕಿಚ್ಚು ಬಯಕೆಯ ಕೊಟ್ಟಂತೆ. ಸಾಯುಜ್ಯಪದವಿಯನವರೆತ್ತ ಬಲ್ಲರು? ಮಹಾದಾನಿ ಕೂಡಲಸಂಗನ ಸಮರಸ ಸುಖವನವರೆತ್ತಬಲ್ಲರು?

೪. ಬಯಲರೂಪ ಮಾಡಬಲ್ಲಾತನೇ ಶರಣನು. ಆ ರೂಪ ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ. ಈ ಉಭಯ ಒಂದಾದರೆ ನಿಮ್ಮಲ್ಲಿ ತೆರಹುಂಟೇ ಕೂಡಲಸಂಗಮದೇವಾ?

೫. ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯೆ. ಸತ್ತು ಬೆರಿಸಿಹೆನೆಂದರೆ, ಕಬ್ಬಿನ ತುದಿಯ ಮೆಲಿದಂತೆ ಕೂಡಲಸಂಗಮದೇವ.

೬. ಮಾತಿಲ್ಲ, ನುಡಿ ಇಲ್ಲ. ಏತಕ್ಕೆ ಮುನಿವಿರಿ? ಮಾತನಾಡಿದರೀಕಯ್ಯ? ಬೆಳಸೆಂಬುದನರಿಯಿರಿ ಅಯ್ಯ. ಮಾತು ಕೆಟ್ಟಲ್ಲದೆ, ತಾನಾಗಬಾರದು. ಕೂಡಲಸಂಗಮದೇವಾ ಮಾತಿಂದ ಬಕ್ಕು, ಭವಭಾರ ಘೋರ.

೭. ಏನನಾದರೆಯೂ ಸಾಧಿಸಬಹುದು. ಮತ್ತೇನನಾದರೆಯೂ ಸಾಧಿಸಬಹುದಯ್ಯ. ತಾನಾರೆಂಬುದ ಸಾಧಿಸಬಾರದಯ್ಯ ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ.

೮. ಜೀವಾತ್ಮ ಅಂತರಾತ್ಮನ ಸುದ್ದಿಯ ಬೆಸಗೊಂಬರೆ, ಹೇಳಿಹೆ ಕೇಳಿ ಭೋ. ಹುಸಿಯ ಸಂಕೊಲೆಯಾಗಿರ್ದಲ್ಲಿ, ಕಾದುಕೊಂಡಿರ್ದನೊಬ್ಬ. ಕಥೆ ಕನಸ ಮಾಡಿ ಹೇಳುತ್ತಿರ್ದನೊಬ್ಬ. ಪರಾಪರಕ್ಕೆ ಹೋಗಿ, ಪರ ಮನ ಸುದ್ದಿಯ ಕೊಂಡು ಬರುತಿಪ್ಪನೊಬ್ಬ. ಅವರಿಬ್ಬರನು ಕೆಡೆ ಮೆಟ್ಟಿ ಹೋಹಾಗ, ಲೋಕ ನಿರ್ಬುದ್ಧಿಗೊಂಡಿತ್ತು ಕೂಡಲಸಂಗಮದೇವಾ.

೯. ಸಮರತಿ, ಸಮಕಳೆ, ಸಮಸುಖ, ಸ್ವಾನುಭಾವವ ಹಿರಿದು ಕಿರಿದಾದುದನಾರು ಅರಿಯರು? ಪಾಷಾಣ ಪರೀಕ್ಷವಂತನಂತೆ, ಗುರು ವಿಲ್ಲದವರಂತಿರಲಿ. ಕೂಡಲಸಂಗಮದೇವಯ್ಯ, ಗುರುವುಳ್ಳವರ ನಿಜವಿಂತುಟು.

೧೦. ಗುರುಶಿಷ್ಯಸಂಬಂಧವಾದುದಕ್ಕೆ ಇದು ಚಿನ್ಹ. ಹಿಂದ ಬಿಟ್ಟು ಮುಂದೆ ಹಿಡಿಯಲೀ ಬೇಕು. ಕೂಡಲಸಂಗಮದೇವ ಕೇಳಯ್ಯ ಕಿಚ್ಚಿನೊಳಗೆ ಕೋಲ ಬೈಚಿಟ್ಟಂತಿರಬೇಕು.

೧೧. ಲಿಂಗ ಪೂಜಿಸಿ ಫಲವೇನಯ್ಯ? ಸಮರತಿ ಸಮಕಳೆ ಸಮ ಸುಖವನರಿಯದನ್ನಕ್ಕ ಲಿಂಗವ ಪೂಜಿಸಿ ಫಲವೇನಯ್ಯ? ಕೂಡಲಸಂಗ ಮದೇವರ ಪೂಜಿಸಿ ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?

ಏಕೈನೈಕ್ಯ.

೧. ಒಲೆಯಡಿಯನುರುಹಿದಡೆ, ಹೊಗೆ ಗೋಳಕನಾಥನ ಕೊರಳ ಸುತ್ತಿತ್ತು. ಮಹೀತಳನ ಜಡೆ ಸೀಯಿತ್ತು. ಮರೀಚಿಕನ ಸಿರ ಬೆಂದಿತ್ತು. ರುದ್ರನ ಹಾವುಗ ಉರಿಯಿತ್ತು. ದೇವಗಣಂಗಳು ನಿವಾಟವಾದರು. ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರು. ಕೂಡಲ ಸಂಗಮದೇವ ಭಸ್ಮಧಾರಿಯಾದ.

೨. ಆ ಭಸ್ಮ ತಾಗಿ, ಬ್ರಹ್ಮ ತನ್ನ ಕಪಾಲವಿಡಿದನು. ಗಣನಾಥನ ಐವತ್ತೆರಡು ಸರ ಹರಿದು ಬಿದ್ದವು. ಆ ಭಸ್ಮ ತಾಗಿ ಅಂಡಜ ಮುಗ್ಧೆಯ ಮೂರು ಮೊಲೆ ಹರಿದು ಬಿದ್ದವು. ನಾದಪ್ರಿಯ ನಂದಿಯ ನೇರಿಕೊಂಡು, ಅತೀತನ ಮೇಲೆ ಆನಂದ ಸಿಂಹಾಸನವನಿಕ್ಕಿ ಕುಳಿತು ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು.

೩. ನಾನೊಮ್ಮೆ ಬೇಂಟೆಯ ಹೋದರೆ ಭಸಿತಕ್ಕಾಹುತಿಯನಿಕ್ಕಿ ಹೆನೆಂದು ಸಾಸಿರದೇಳುನೂರು ವರುಷ ಒಬ್ಬ ರಾಜನ ಕೊಂದೆನು.

ಅವನ ಹೆಂಡತಿ ಅಯಿವತ್ತೆರಡು ಕಣ್ಣವಳು. ಅವಳು ತನ್ನ ಹೊಮ್ಮುಡಿಯ ಬಿಟ್ಟು ಅತ್ತಳು. ಅವಳ ಬಾಯಲ್ಲಿ ಅಜ ಬಿದ್ದ. ಕಂಗಳಲಿ ಧೂಮಕೇತು ಬಿದ್ದ. ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು.

೪. ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರು ಸಲುಗೆವಂತರಾಗಿ, ಒಳಗೈದಾರೆ. ಅನು ದೇವ ಹೊರಗಣವನು. ಸಂಭೋಳಿ, ಸಂಭೋಳಿ ಎನುತ್ತ, ಇಂಬಿನಲ್ಲಿ ಇದ್ದೇನೆ. ಕೂಡಲಸಂಗಮದೇವ, ನಿಮ್ಮ ನಾಮವಿಡಿದ ಅನಾಮಿಕ ನಾನು.

೫. ಶಿವ ಶಿವಾ, ಮೂತಿಗೆ ಸತ್ಯ ಶುದ್ಧ ಉಂಟೆಂಬಿರಿ. ಸತ್ಯ ಶುದ್ಧವುಳ್ಳವಂಗೆ ಗುರುವಿಲ್ಲ. ಸತ್ಯ ಶುದ್ಧವುಳ್ಳವಂಗೆ ಲಿಂಗವಿಲ್ಲ. ಸತ್ಯ ಶುದ್ಧವುಳ್ಳವಂಗೆ ಜಂಗಮವಿಲ್ಲ. ಸತ್ಯ ಶುದ್ಧವುಳ್ಳವಂಗೆ ಪ್ರಸಾದವಿಲ್ಲ. ಸತ್ಯ ಶುದ್ಧವುಳ್ಳವಂಗೆ ಗಣತ್ವವಿಲ್ಲ. ಕೇಳಿರೇ, ಸತ್ಯ ಶುದ್ಧ ದೇವರಿಗೆ ಉಪಚಾರ ಉಂಟು. ಸತ್ಯ ಶುದ್ಧ ದೇವರಿಗೆ ಧ್ಯಾನ ಮೌನ ಅನುಷ್ಠಾನ ಉಂಟು. ಸತ್ಯ ಶುದ್ಧ ಉಪದೇಶಕ್ಕೆ ಜಪ ತಪ ಸಂಧ್ಯಾ ಸಮಾಧಿ ಹೋಮ ನೇಮ ನಿತ್ಯ ಅಷ್ಟ ವಿಧಾರ್ಚನೆ ಷೋಡಶೋಪಚಾರ ಉಂಟು. ಸತ್ಯ ಶುದ್ಧ ದೇವರಿಗೆ ಉಪಚಾರ ಉಂಟಾದ ಕಾರಣ ಇಂತಪ್ಪ ಸತ್ಯ ಶುದ್ಧ ಗುರುವಿಂಗೆ ಶರಣೆನ್ನೆ. ಇಂತಪ್ಪ ಸತ್ಯ ಶುದ್ಧ ಲಿಂಗಕ್ಕೆ ಶರಣೆನ್ನೆ. ಜಂಗಮಕ್ಕೆ ಶರಣೆನ್ನೆ. ಇಂತಪ್ಪ ಸತ್ಯ ಶುದ್ಧ ಪ್ರಸಾದಕ್ಕೆ ಕೈಯ್ಯಾನೆ. ಇವರೆಲ್ಲರು ಬ್ರಹ್ಮನ ಮಕ್ಕಳು. ಎನಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ. ಆವ ಸಹಜವಿಲ್ಲದ ಲಿಂಗೈಕ್ಯ ಕಾಣಾ ಕೂಡಲಸಂಗಮದೇವಾ.

ಐಕ್ಯನ ಭಕ್ತ.

೧. ಭಕ್ತನಾಯಿತ್ತೇ ಭಕ್ತಿದಾಸೋಹ. ಯುಕ್ತನಾಯಿತ್ತೇ ಯುಕ್ತಿದಾಸೋಹ. ಐಕ್ಯನಾಯಿತ್ತೇ ಮಮಕಾರದ ದಾಸೋಹ. ಸರ್ವದಲೂ ದಾಸೋಹ ಬೇಕು. ದಾಸೋಹದ ಅನುವ ಕೂಡಲಸಂಗಯ್ಯ ತಾನೇ ಬಲ್ಲ.

೨. ಜಲವ ನುಂಗಿತ್ತಯ್ಯ ಎನ್ನ ಕರವು. ಪತ್ರೆಯ ನುಂಗಿತ್ತಯ್ಯ ಎನ್ನ ಶಿಖಿ. ಏನಯ್ಯ? ಮಂತ್ರ ಭಿನ್ನವಾಯಿತ್ತು. ಇಂತೀ ದ್ವಿವಿಧ ಒಂದಾಗದ ಮುನ್ನ ಕೂಡಲಸಂಗಮದೇವರು ಪೂಜೆಗೊಂಡರು.

೩. ಎಲ್ಲವ ಬೇಡಿದರೆಮ್ಮವರು. ಒಂದ ಬೇಡ ಮರೆದರಯ್ಯ. ಮರ್ತ್ಯಲೋಕದ ಗಣಂಗಳು ಒಂದ ಬೇಡವರೆದರು. ಕೂಡಲಸಂಗ ಮದೇವ, ಎನ್ನ ಬೇಡ ಮರೆದರು.

೪. ಭಿತ್ತಿ ಇಲ್ಲದ ಚಿತ್ತಾರದಂತೆ, ಭಕ್ತಿ ಇಲ್ಲದ ಪ್ರಮಥನಾಗಿ ಎಂದಿಪ್ಪೆನಯ್ಯಾ? ಸತ್ಯವಿಲ್ಲದ ಶರಣನಾಗಿ ಎಂದಿಪ್ಪೆನಯ್ಯಾ? ಗೆರೆ ಇಲ್ಲದ ಕೋಲಲ್ಲಿ ಉದ್ದರೆಯನಿಕ್ಕಿದ ಭಂಡದ ಹರದನಂತಾದೆನಯ್ಯಾ ಕೂಡಲಸಂಗಮದೇವಾ.

೫. ಅಯತ ಒಂದೆಡೆಯಲಿ ತೆರನನರಿಯರಾಗಿ ನೋಡಬಾರದು, ನಡಿಸಬಾರದು. ಅದು ತಿದ್ದಬಾರದ ಡೊಂಕು ಕೂಡಲಸಂಗನಭಕ್ತಿ.

ಐಕ್ಯನ ಮಾಹೇಶ್ವರ.

೧. ಸತ್ತು ಹುಟ್ಟುವನಲ್ಲ, ಸಂದೇಹಿ ಸೂತಕಿಯಲ್ಲ. ಆಕಾರ ನಿರಾಕಾರನಲ್ಲ ನೋಡಯ್ಯ. ಕಾಯವಂಚಕನಲ್ಲ, ಜೀವವಂಚಕನಲ್ಲ, ನಿರಂತರ ಸಹಜ ನೋಡಯ್ಯ. ಶಂಕೆ ಇಲ್ಲದ ಮಹಾಮಹಿಮ ನೋಡಯ್ಯ. ಕೂಡಲಸಂಗನ ಶರಣನು ಉಪಮಾತೀತ ನೋಡಯ್ಯ.

೨. ದಶ ದಿಕ್ಕು ಧರೆ ಗಗನವೆಂಬುದ ನಾನರಿಯೆನಯ್ಯಾ. "ಲಿಂಗ ಮಧ್ಯೇ ಜಗತ್ಸರ್ವಂ" ಎಂಬುದನರಿಯೆನಯ್ಯಾ. ಲಿಂಗ ಸೋಂಕಿನ ಸುಖದೊಳಗೆ, ಕೂಡಲಸಂಗಮದೇವಯ್ಯ, ಅಂಬುಧಿಯೊಳಗೆ ಬಿದ್ದ ವಾರಿಕಲ್ಲಿನಂತೆ ಭಿನ್ನ ಭಾವವನರಿಯದೆ "ಶಿವ, ಶಿವಾ" ಎನುತಿದ್ದೆನಾನು.

ಐಕ್ಯನ ಪ್ರಸಾದಿ.

೧. ಹುಸಿಯಿಂದ ಜನಿಸಿದೆನಯ್ಯ, ಮರ್ತ್ಯಲೋಕದೊಳಯಿಂಕೆ. ಹುಸಿಯಿಂದ ಲಿಂಗವ ಹೆಸರುಗೊಂಡು ಕರೆದೆನಯ್ಯ. ಅದು ಎನಗೆ ಭಾವವೂ ಅಲ್ಲ. ನಿರ್ಭಾವವೂ ಅಲ್ಲದೆ ನಿಂದಿತಯ್ಯ. ಅದರ ಅವಯವಂಗಳೆಲ್ಲವು ಜಂಗಮವಯ್ಯ. ಅದಕ್ಕೆ ಎನ್ನಲ್ಲಿ ಉಳ್ಳ ಸುಯಿಧಾನವ

ಪುರುಷನು. ವಿರಾಟ ಪುರುಷನೊಬ್ಬ ಪುರುಷನು. ಆದಿಪುರುಷನೊಬ್ಬ ಪುರುಷನು. ವಿಯತ್ಪುರುಷನೊಬ್ಬ ಪುರುಷನು. ತದ್ವಿಯತ್ಪುರುಷಾತ್ ಪುರುಷರಿಲ್ಲದ ಪ್ರಭೆಯ ಬೆಳಗಿದೆ ನೋಡಿರೇ. ವೇದನಾದಾತೀತ ತುರೀಯ ಪರಮಾನಂದ ನಿರವಯ ಷಟ್‌ತ್ರಿಂಶತ್ ಪ್ರಭಾ ಪಟಲದ ಪ್ರಭೆಯ ಬೆಳಗಿದೆ ನೋಡಿರೇ. ಬೆಳಗಿನೊಳಗಣ ಮಹಾ ಬೆಳಗಿನ ಬೆಳಗು ನಮ್ಮ ಕೂಡಲಸಂಗಯ್ಯ.

೮. ಘನ ಗಂಭೀರ ಮಹಾಘನದೊಳಗೆ ಘನಕ್ಕೆ ಘನನಾಗಿದ್ದೆನಯ್ಯ. ಕೂಡಲಸಂಗಯ್ಯನೆಂಬ ಮಹಾಬೆಳಗಿನ ಬೆಳಗಿನೊಳಗಿರ್ದೆನೆಂಬ ಶಬ್ದ ಮುಗ್ಧವಾದುದನೇನೆಂಬೆನಯ್ಯ?

೯. ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇರವ ನೋಡಾ. ಬೆಳಗಿಂಗೆ ಬೆಳಗು ಸಿಂಹಾಸನವಾಗಿ, ಬೆಳಗು ಬೆಳಗ ಕೂಡಿದ ಕೂಟದ ಸುಖವ ಕೂಡಲಸಂಗಯ್ಯ ತಾನೇ ಬಲ್ಲ.

೧೦. ಆಂತರಂಗ, ಬಹಿರಂಗ, ಆತ್ಮಸಂಗ ಒಂದೇ ಅಯ್ಯಾ. ನಾದ ಬಿಂದು ಕಳಾತೀತ ಆದಿಯಾಧಾರ ನೀನೇ ಅಯ್ಯ. ಆರೂಢದ ಕೂಟದ ಸುಖವ ಕೂಡಲಸಂಗಯ್ಯ ತಾನೇ ಬಲ್ಲ.

ಹೆಚ್ಚಿನ ವಚನಗಳು.

[ಕೆಳಗೆ ಕಾಣಿಸಿದ ವಚನಗಳು ಹಸ್ತಲಿಖಿತ ಗ್ರಂಥ ನಂಬರು ೩ ಇದರಲ್ಲಿ ಹೆಚ್ಚಿಗೆ ಇವೆ. ಅದರೆ ಅವು ನಂಬರು ಗ್ರಂಥ ೧-೨ ಇವುಗಳಲ್ಲಿ ಇರುವದಿಲ್ಲ.]

ರುದ್ರಾಕ್ಷಿ ಸ್ಥಲ.

(ಪುಟ ೧೨—ವಿಭೂತಿಸ್ಥಲದ ತರುವಾಯ ಈ ಸ್ಥಲವು ಕೊಡಲ್ಪಟ್ಟಿದೆ.)

೧. ಅಯ್ಯ ಎನಗೆ ರುದ್ರಾಕ್ಷಿಯೇ ಸರ್ವ ಪಾವನ. ಅಯ್ಯ ಎನಗೆ ರುದ್ರಾಕ್ಷಿಯೇ ಸರ್ವ ಸಿದ್ಧಿ. ಅಯ್ಯ ನಿಮ್ಮ ಪಂಚ ವಕ್ತ್ರಗಳೇ ಪಂಚ ಮುಖದ ರುದ್ರಾಕ್ಷಿಗಳಾದವಾಗಿ, ಅಯ್ಯ ಕೂಡಲಸಂಗಮದೇವಾ ಎನ್ನ ಮುಕ್ತಿಪಥಕ್ಕೆ ಈ ರುದ್ರಾಕ್ಷಿ ಸಾಧನವಯ್ಯಾ.

೨. ಶ್ರೀರುದ್ರಾಕ್ಷಿಯ ಧರಿಸಿದಾತನ ಲಿಂಗವೆಂಬೆ. ಶ್ರೀರುದ್ರಾಕ್ಷಿಯ ಧರಿಸದ ಅಧಮರನೆ ಭವಿ ಎಂಬೆ. ಕೂಡಲಸಂಗಮದೇವಯ್ಯ ಶ್ರೀರುದ್ರಾಕ್ಷಿಯ ಧರಿಸುವ ಭಕ್ತರ ನೀನೆಂಬೆ.

೩. ಹಸ್ತ ಕಡಗ ಕೈಗಧಿಕ ನೋಡಾ. ಕೊಡಲಹುದು ಕೊಳಲಹುದು. ಬಾಹುಬಳೆ ತೋಳಿಂದಧಿಕ ನೋಡಾ. ಪರವಧುವನಪ್ಪಲಾಗದು. ಕರ್ಣಕ್ಕೆ ರುದ್ರಾಕ್ಷಿಯೇ ಅಧಿಕ ನೋಡಾ. ಶಿವನಿಂದೆಯು ಕೇಳಲಾಗದು. ಕಂಠಮಾಲೆ ಕೊರಳಿಂದಧಿಕ ನೋಡಾ. ಅನ್ಯ ದೈವಕ್ಕೆ ತಲೆ ಬಾಗಲಾಗದು. ಅವಾಗಳೂ ನಿಮ್ಮನನೆ ನೆನೆದು ನಿಮ್ಮುವ ಪೂಜಿಸಿ ಕೂಡಲಸಂಗಯ್ಯನ ಪದ ಸನ್ನಿಹಿತನಾಗಿಪ್ಪಡೆ ಅಂಗ ಶಿಖಾಮಣಿಯಯ್ಯ.

(ಪುಟ ೪೪-೩೭ ನೇ ವಚನದ ತರುವಾಯ ಇರತಕ್ಕದ್ದು. ತಪ್ಪಿ ಉಳಿದಿದೆ.)

೪. ಲಿಂಗ ಶಿವಾಲಯದ ಮುಂದೆ ಸಿಂಹ ಶೂದ್ರಿಕನಲ್ಲದಿಲ್ಲ. ನಂದಿಕೇಶ್ವರ ಭೃಂಗಿ ನಾಂಟ್ಯ ನಮ್ಮ ಲಿಂಗನ ಮುಂದೆ. ಇದಕ್ಕೆ ದಿಟ ದೀವುಗೆ ನಮ್ಮ ಲಿಂಗನ ಮುಂದೆ. ಅನ್ಯ ದೈವವೆಂಬುದು ತೋರಿಯೂ